ಭಾನುವಾರ, ಸೆಪ್ಟೆಂಬರ್ 21, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 262 | ಪುಟ 16

• www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮೋಹನ್‌ಲಾಲ್ 'ಫಾಲ್ಕೆ' ಪ್ರಶಸ್ತಿ
ಮಲಯಾಳ ಚಿತ್ರ ನಟ ಮೋಹನ್‌ಲಾಲ್ ಅವರು ಭಾರತೀಯ ಸಿನಿಮಾ ಕ್ಷೇತ್ರದ ಅತ್ಯುನ್ನತ ಗೌರವ ಎನಿಸಿರುವ 'ದಾದಾ ಸಾಹೇಬ್ ಫಾಲ್ಕೆ' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ

ಪ್ರತಿಷ್ಠಾಪನೆಗೆ ತಯಾರಿ
ನವರಾತ್ರಿ ಹಬ್ಬದ ಅಂಗವಾಗಿ ಕೊಪ್ಪಳದಲ್ಲಿ ಪ್ರತಿಷ್ಠಾಪನೆಗೊಳ್ಳಲಿರುವ ದುರ್ಗಾದೇವಿ ಮೂರ್ತಿಗೆ ಕಲಾವಿದ ಗಾಳೆಪ್ಪ ಅಂತಿಮ ಸ್ಪರ್ಶ ನೀಡಿದರು

ನಂದಿನಿ: 20 ಉತ್ಪನ್ನಗಳ ದರ ಇಳಿಕೆ 8

ಎಸ್‌ಐಟಿಗೆ ಸ್ಥಳೀಯರಿಂದ ದೂರು 7

ಮತಕಳವು ದೂರು ತನಿಖೆಗೆ ಎಸ್‌ಐಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನಡೆದಿದೆ ಎನ್ನಲಾದ ಮತ ಕಳವು ಪ್ರಕರಣಗಳ ಕುರಿತು ರಾಜ್ಯದಾದ್ಯಂತ ದಾಖಲಾಗಿರುವ ಮತ್ತು ಮುಂದೆ ದಾಖಲಾಗಲಿರುವ ಎಲ್ಲ ದೂರುಗಳ ತನಿಖೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದೆ.

ಆಳಂದ ವಿಧಾನಸಭಾ ಕ್ಷೇತ್ರದಲ್ಲಿ 5,994 ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲು ಯತ್ನಿಸಲಾಗಿತ್ತು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ ಬೆನ್ನಲ್ಲೇ ರಾಜ್ಯ ಸರ್ಕಾರವು ಎಸ್‌ಐಟಿ ರಚಿಸಿದೆ.

ಅಪರಾಧ ತನಿಖಾ ದಳದ (ಸಿಐಡಿ) ಎಡಿಜಿಪಿ ಬಿ.ಕೆ.ಸಿಂಗ್ ಎಸ್‌ಐಟಿಯ ಮುಖ್ಯಸ್ಥರಾಗಿದ್ದು, ಸಿಐಡಿಯ ಎಸ್‌ಪಿಗಳಾದ ಸೈದುಲ್ ಅದಾವತ್ ಮತ್ತು ಶುಭಾನ್ವಿತ ಅವರನ್ನು ಸದಸ್ಯರನ್ನಾಗಿ ನೇಮಿಸಿ ಒಳಾಡಳಿತ ಇಲಾಖೆ ಆದೇಶಿಸಿದೆ. ಸಿಐಡಿ ಪೊಲೀಸ್ ಮಹಾ ನಿರ್ದೇಶಕರ ಮೇಲ್ವಿಚಾರಣೆಯಲ್ಲಿ ಎಸ್‌ಐಟಿ ಕಾರ್ಯನಿರ್ವಹಿಸಲಿದೆ.

ಎಸ್‌ಐಟಿಗೆ ಪೊಲೀಸ್ ಠಾಣೆಯ ಸ್ಥಾನ ನೀಡಿ, ಇಡೀ ರಾಜ್ಯದ ವ್ಯಾಪ್ತಿಯಲ್ಲಿ ತನಿಖೆ ನಡೆಸುವ ಅಧಿಕಾರ ನೀಡಲಾಗಿದೆ. ಆಳಂದ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ (26/2023) ಅನ್ನು ಎಸ್‌ಐಟಿಗೆ ವರ್ಗಾಯಿಸಲಾಗಿದೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಶುಲ್ಕ ಹೆಚ್ಚಳ: ಹಗಲು ದರೋಡೆ

ಶಿಕ್ಷಣ ಸಂಸ್ಥೆಗಳ ಹಣ ದಾಹ; ಪಾಲಕರಿಗೆ ಪೆಡಂಭೂತವಾಗಿ ಕಾಡುತ್ತಿರುವ 'ಪಿಡುಗು'

• ಜಿ.ಶಿವಕುಮಾರ

ಒಳನೋಟ

ದಾವಣಗೆರೆ: ನಮಗೆ ಇಬ್ಬರು ಮಕ್ಕಳು. ಭವಿಷ್ಯ ಉಜ್ವಲವಾಗಿರಲೆಂಬ ಆಸೆಯಿಂದ ಅವರನ್ನು ಖಾಸಗಿ ಶಾಲೆಯಲ್ಲಿ ಓದಿಸುತ್ತಿದ್ದೇವೆ. ಎರಡು ವರ್ಷಗಳ ಹಿಂದೆ ದೊಡ್ಡ ಮಗನನ್ನು 1ನೇ ತರಗತಿಗೆ ದಾಖಲು ಮಾಡಿದಾಗ ₹22,000 ಶುಲ್ಕ ಇತ್ತು. ಈ ವರ್ಷ ₹45,000 ಪಾವತಿಸಿದ್ದೇವೆ. ಕಿರಿಯ ಮಗನನ್ನು ಹೋದ ವರ್ಷ ಎಲ್‌ಕೆಜಿಗೆ ಸೇರಿಸಿದಾಗ ಶಾಲೆಯವರು ₹18,000 ಪಡೆದಿದ್ದರು. ಯುಕೆಜಿಗೆ ₹23,000 ಕಟ್ಟಿಸಿಕೊಂಡಿದ್ದಾರೆ. ಹೀಗೆ ವರ್ಷದಿಂದ ವರ್ಷಕ್ಕೆ ಶುಲ್ಕ ಏರಿಸುತ್ತಲೇ ಇರುವುದರಿಂದ ದುಡಿದದ್ದನ್ನೆಲ್ಲಾ ಮಕ್ಕಳ ಶಿಕ್ಷಣಕ್ಕೇ ಮೀಸಲಿಟ್ಟು, ಜೀವನ ನಿರ್ವಹಣೆಗೆ ಅವರಿವರ ಬಳಿ ಸಾಲ ಮಾಡಬೇಕಾದ ಸ್ಥಿತಿ ಎದುರಾಗಿದೆ....

ದಾವಣಗೆರೆಯ ಎಂಸಿಸಿ 'ಎ' ಬ್ಲಾಕ್‌ನಲ್ಲಿ ನೆಲೆಸಿರುವ ಶ್ರೀಧರ್ ಮತ್ತು ಮಮತಾ ದಂಪತಿಯ ಮಾತುಗಳಿವು. ಇವರಂತೆ ಮಕ್ಕಳ ಶಾಲೆ, ಕಾಲೇಜು ಶುಲ್ಕ ಕಟ್ಟಲು ಪಡಿಪಾಟಲು ಪಡುತ್ತಿರುವ ಅದೆಷ್ಟೋ ಪಾಲಕರು ನಮ್ಮ ನಡುವೆ ಇದ್ದಾರೆ. ನಿಯಂತ್ರಣವೇ ಇಲ್ಲದ ಶುಲ್ಕ ಹೆಚ್ಚಳವೆಂಬ ಪಿಡುಗು ಪಾಲಕರನ್ನು ಪೆಡಂಭೂತವಾಗಿ ಕಾಡುತ್ತಿದ್ದು, 'ಕೆ.ಜಿ'ಯಿಂದ 'ಪಿ.ಜಿ'ವರೆಗೂ ತನ್ನ ಕಬಂಧ ಬಾಹುಗಳನ್ನು ಚಾಚಿಕೊಂಡಿದೆ.

'ಪ್ರತಿಷ್ಠಿತ' ಎಂಬ ಹಣೆಪಟ್ಟಿ ಹೊಂದಿರುವ ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿಗೇ ಕನಿಷ್ಠ ₹52,000 ಶುಲ್ಕ ಪಡೆಯಲಾಗುತ್ತಿದೆ. ಪಿಯುಸಿಗೆ ₹1.5 ಲಕ್ಷದಿಂದ ₹ 5 ಲಕ್ಷ, ಎಂಜಿನಿಯರಿಂಗ್‌ಗೆ ₹7 ಲಕ್ಷದಿಂದ ₹30 ಲಕ್ಷ, ಎಂಬಿಬಿಎಸ್‌ಗೆ ₹25 ಲಕ್ಷದಿಂದ ಕೋಟಿವರೆಗೂ 'ದರ' ನಿಗದಿಪಡಿಸಲಾಗಿದೆ. ಬೇರೆ ಬೇರೆ ನಗರಗಳಲ್ಲಿ ಶಾಖೆ ಹೊಂದಿರುವ ಕೆಲ ಶಿಕ್ಷಣ ಸಂಸ್ಥೆಗಳು ಆಯಾ ಪ್ರದೇಶಕ್ಕೆ ಅನುಗುಣವಾಗಿ ಶುಲ್ಕ ನಿಗದಿ ಮಾಡುತ್ತಿವೆ.

ಖಾಸಗಿ ಕಾಲೇಜುಗಳು ಪ್ರಥಮ ಮತ್ತು ದ್ವಿತೀಯ ಪಿಯುಸಿಗೆ ಪ್ರತಿ ವಿದ್ಯಾರ್ಥಿಯಿಂದ ಕ್ರಮವಾಗಿ ₹2,126 ಮತ್ತು ₹3,132 ಶುಲ್ಕ ಪಡೆಯಬೇಕು. ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವ ಬೋಧನಾ ಶುಲ್ಕದಲ್ಲಿ ಅರ್ಧದಷ್ಟು ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಬೇಕು. ಪಾಲಕರ ಸಮ್ಮತಿ ಮೇರೆಗೆ ಆಯಾ ಸಂಸ್ಥೆಗಳು ಕಾಲೇಜು ಅಭಿವೃದ್ಧಿ ಶುಲ್ಕ ಪಡೆಯಲು ನಿಯಮಗಳಲ್ಲೇ ಅವಕಾಶ ಇದೆ. ಇದನ್ನೇ 'ಅಸ್ತ್ರ' ಮಾಡಿಕೊಂಡಿರುವ ರಾಜ್ಯದ ಬಹುಪಾಲು ಪ್ರತಿಷ್ಠಿತ ಪದವಿಪೂರ್ವ ಕಾಲೇಜುಗಳು ವಿಜ್ಞಾನ ಹಾಗೂ ಕಾನೂನು ವಿದ್ಯಾರ್ಥಿಗಳಿಂದ ವರ್ಷಕ್ಕೆ ₹1 ಲಕ್ಷದಿಂದ ₹3 ಲಕ್ಷದವರೆಗೂ ಶುಲ್ಕ ವಸೂಲಿ ಮಾಡುತ್ತಿವೆ. ಕಲಾ ಹಾಗೂ ವಾಣಿಜ್ಯ ಕಾಲೇಜುಗಳಲ್ಲಿ ಈ ಮೊತ್ತ ₹40,000ದಿಂದ ₹1.5 ಲಕ್ಷದವರೆಗೂ ಇದೆ ಎಂಬುದು ಹಲವು ಪೋಷಕರ ದೂರು.



6

> ಶಿಕ್ಷಣ ಹಕ್ಕು ಕಾಯ್ದೆಯ ಆಧಾರದಲ್ಲಿ ಕ್ರಿಯಾ ಯೋಜನೆ ರೂಪಿಸಬೇಕು. ಸೆಕ್ಷನ್- 34ರ ಪ್ರಕಾರ ಶಾಲಾ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯ ಶಿಕ್ಷಣ ಮಂಡಳಿ ರಚಿಸಿ ಶಿಕ್ಷಣ ಕಾಯ್ದೆಯ ಅನುಷ್ಠಾನ ಪರಾಮರ್ಶಿಸಬೇಕು
> **ವಿ.ಪಿ.ನಿರಂಜನಾರಾಧ್ಯ,** ಶಿಕ್ಷಣ ತಜ್ಞ

ವೆಂಕಟೇಶ್ ಕುಮಾರ್‌ಗೆ 'ಸಂಗೀತ ವಿದ್ವಾನ್' ಗರಿ

ಬೆಂಗಳೂರು: ಮೈಸೂರು ದಸರಾ ಸಂದರ್ಭದಲ್ಲಿ ನೀಡುವ 'ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ'ಗೆ ಹಿಂದೂಸ್ತಾನಿ ಗಾಯಕ ಎಂ. ವೆಂಕಟೇಶ್ ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ.

ವಿವರ 7

ಸಮೀಕ್ಷೆ ಮುಂದೂಡಿ: ಒಕ್ಕಲಿಗರ ನಿರ್ಣಯಕ್ಕೆ ಸಚಿವರ ಸಹಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಮುಂದೂಡಬೇಕು ಎಂದು ಒಕ್ಕಲಿಗ ಸಮುದಾಯದ ಸ್ವಾಮೀಜಿಗಳು ಮತ್ತು ಪಕ್ಷಾತೀತವಾಗಿ ಪಾಲ್ಗೊಂಡ ರಾಜಕೀಯ ನಾಯಕರ ಸಭೆ ನಿರ್ಣಯ ಕೈಗೊಂಡಿದೆ.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಸಭೆಯಲ್ಲಿ ಸಮುದಾಯದ ರಾಜಕೀಯ ನಾಯಕರು ಪಾಲ್ಗೊಂಡು ಒಗ್ಗಟ್ಟು ಪ್ರದರ್ಶಿಸಿದರು.

'ಸಚಿವ ಸಂಪುಟ ಸಭೆಯಲ್ಲಿ ಸಮೀಕ್ಷೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿರೋಧ ವ್ಯಕ್ತಪಡಿಸಿದ್ದಾರೆ ಎಂಬ ಮಾಹಿತಿ ಕೇಳಿ ಸಂತೋಷವಾಯಿತು' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತು ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಹೇಳಿದರು ಎಂದು ಗೊತ್ತಾಗಿದೆ. ಸಚಿವರಾದ ಎನ್. ಚಲುವರಾಯ ಸ್ವಾಮಿ, ಎಂ.ಸಿ. ಸುಧಾಕರ್ ಸಹ ಸಭೆಯಲ್ಲಿದ್ದರು.

'ಸಮೀಕ್ಷೆ ಮುಂದೂಡುವ ಕುರಿತು ಪ್ರಯತ್ನ ನಡೆಸಲಾಗುವುದು. ಸ್ವಾಮೀಜಿಗಳು, ನಾಯಕರು ಬೆಂಬಲ ನೀಡಬೇಕು. ಎಲ್ಲಾ ಸಮುದಾಯಗಳಿಗೆ ನ್ಯಾಯ ಸಿಗಬೇಕು. ಎಲ್ಲರೂ ಒಟ್ಟಿಗೆ ಸಾಗುವ ಮೂಲಕ ಸಮಾಜವನ್ನು ಉಳಿಸೋಣ. ಸ್ವಾಮೀಜಿಯವರಿಗೆ ನಾನೇ ಒತ್ತಾಯ ಮಾಡಿ ಸಭೆಯ ದಿನಾಂಕ ನಿಗದಿಮಾಡಿಸಿದೆ' ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾಗಿ ಮೂಲಗಳು ತಿಳಿಸಿವೆ.

6

ಎಚ್‌-1ಬಿ ವೀಸಾ ಶುಲ್ಕ 1 ಲಕ್ಷ ಡಾಲರ್‌ಗೆ ಹೆಚ್ಚಳ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ವಿವಿಧ ದೇಶಗಳ ಜನರನ್ನು ನೇಮಕ ಮಾಡಿಕೊಳ್ಳುವ ಅಮೆರಿಕದ ಕಂಪನಿಗಳು ತಮ್ಮ ಉದ್ಯೋಗಿಗಳಿಗಾಗಿ ಪಡೆಯುವ ಎಚ್‌-1ಬಿ ವೀಸಾ ಅರ್ಜಿಗೆ ಸಂಬಂಧಿಸಿದ ವಾರ್ಷಿಕ ಶುಲ್ಕವನ್ನು 1 ಲಕ್ಷ ಡಾಲರ್‌ಗೆ (ಅಂದಾಜು ₹88 ಲಕ್ಷ) ಹೆಚ್ಚಿಸುವ ಆದೇಶಕ್ಕೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಸಹಿ ಹಾಕಿದ್ದಾರೆ.

ಈ ಆದೇಶವು, ಭಾರತೀಯ ಕಾಲಮಾನದಂತೆ ಸೋಮವಾರ ಬೆಳಿಗ್ಗೆ 9.31ರಿಂದ ಜಾರಿಗೆ ಬರಲಿದೆ.

ಚಾಲ್ತಿಯಲ್ಲಿ ಇರುವವರಿಗೆ ಅನ್ವಯಿಸದು: 'ಪರಿಷ್ಕೃತ ನಿಯಮವು ಮಾನ್ಯತೆ ಹೊಂದಿದ ಎಚ್‌-1ಬಿ ವೀಸಾ ಹೊಂದಿರುವವರಿಗೆ ಅನ್ವಯ ಆಗುವುದಿಲ್ಲ' ಎಂದು ಶ್ವೇತಭವನ ಸ್ಪಷ್ಟಪಡಿಸಿರುವುದಾಗಿ 'ಅಕ್ಸಿಯೊಸ್' ಶನಿವಾರ ವರದಿ ಮಾಡಿದೆ.

ಹೊಸ ಶುಲ್ಕವು ಈಗಾಗಲೇ ಎಚ್‌-1ಬಿ ವೀಸಾ ಹೊಂದಿರುವವರ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ವರದಿಯಲ್ಲಿ ಅದು ತಿಳಿಸಿದೆ.

> ಐ.ಟಿ ಕಂಪನಿಗಳು ಎಚ್‌-1ಬಿ ವೀಸಾ ಸೌಲಭ್ಯವನ್ನು ವ್ಯಾಪಕವಾಗಿ ದುರ್ಬಳಕೆ ಮಾಡಿಕೊಂಡಿವೆ. ಇದು, ಕಂಪ್ಯೂಟರ್ ಆಧಾರಿತ ಕ್ಷೇತ್ರಗಳಲ್ಲಿ ದುಡಿಯುವ ಅಮೆರಿಕದ ಪ್ರಜೆಗಳಿಗೆ ಗಣನೀಯ ಹಾನಿ ಉಂಟುಮಾಡಿದೆ
> **ಡೊನಾಲ್ಡ್ ಟ್ರಂಪ್,** ಅಮೆರಿಕ ಅಧ್ಯಕ್ಷ

8

ಪುಣ್ಯಸ್ಮರಣೆ

ಶ್ರೀ. ಎ. ಸಿ. ವೆಂಕಟಾಚಲಪತಿ

ಸಂಸ್ಥಾಪಕರು - ಸ್ವಸ್ತಿಕ್ಸ್ ಸಂಸ್ಥೆಗಳ ಸಮೂಹ

ಪೂಜ್ಯಭಾವದಿಂದ ಅವರ ಸವಿನೆನಪುಗಳನ್ನು ಮೆಲಕುಹಾಕುತ್ತಾ, ಅವರ ಭವ್ಯವಾದ ದೂರದೃಷ್ಟಿಯೆಡೆಗೆ ಇನ್ನಷ್ಟು ಚೈತನ್ಯದೊಂದಿಗೆ ಸಾಗುತ್ತಿದ್ದೇವೆ

ನಮ್ಮ ದಾರ್ಶನಿಕ ಸಂಸ್ಥಾಪಕರನ್ನು ಅಭಿನಂದನಾ ಪೂರ್ವಕವಾಗಿ ನೆನಪಿಸಿಕೊಳ್ಳುತ್ತೇವೆ. ಅವರ ಉದಾತ್ತ ತತ್ವಗಳು ನಮಗೆ ಉನ್ನತ ಗುರಿಗಳನ್ನು ಸಾಧಿಸಲು ದಾರಿದೀಪವಾಗಿವೆ.

ಸದಾ ನಿಮ್ಮನ್ನು ನೆನೆಸುವ :

ಶ್ರೀಮತಿ. ಎ. ಸಿ. ರಾಜಲಕ್ಷ್ಮಿ | ಎ. ವಿ. ಶ್ರೀಧರ್ | ಎ. ವಿ. ದ್ವಾರಕಾನಾಥ್

ಸಿಬ್ಬಂದಿ ಮತ್ತು ಕುಟುಂಬದ ಸದಸ್ಯರು : swastiks® MASALAS | PICKLES | FOOD PRODUCTS SINCE 1973 — Rala Pure Spices FINE MASALAS SINCE 1973

ಸೂರ್ಯೋದಯ: 6:09 ಸೂರ್ಯಾಸ್ತ : 6:18 ಚಂದ್ರೋದಯ: ರಾ. 4:46 ಚಂದ್ರಾಸ್ತ: ಬೆ. 5:23 | ಶನಿವಾರದ ಉಷ್ಣಾಂಶ : ಗರಿಷ್ಠ 28° ಕನಿಷ್ಠ 21°

ಭಾನುವಾರದ ಉಷ್ಣಾಂಶ 28° ಗರಿಷ್ಠ 22° ಕನಿಷ್ಠ | ಸೋಮವಾರ 28° : 20° | ಮಂಗಳವಾರ 28° : 21° | ಬುಧವಾರ 28° : 20°

ಭಾನುವಾರ • ಸೆಪ್ಟೆಂಬರ್ 21, 2025

ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗಲಿದೆ.

24ರಿಂದ ತ್ಯಾಜ್ಯ ವಿಲೇವಾರಿ ಸ್ಥಗಿತ!

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳು–ತ್ಯಾಜ್ಯ ಗುತ್ತಿಗೆದಾರರ ನಡುವೆ ಸಂಘರ್ಷ ತಾರಕಕ್ಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನ್ಯಾಯಾಲಯದಲ್ಲಿ ಪ್ರಶ್ನಿಸಿ, ಹೋರಾಟ
- ಬೇಡಿಕೆ ಈಡೇರಿಸುವ ವರೆಗೂ ಕಸ ತೆಗೆಯಲ್ಲ

ಬೆಂಗಳೂರು: ತ್ಯಾಜ್ಯ ಗುತ್ತಿಗೆದಾರರು ಹಾಗೂ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳ ನಡುವಿನ ಸಂಘರ್ಷ ಹೆಚ್ಚಾಗಿದ್ದು, ಇದೇ 24ರಿಂದ (ಬುಧವಾರ) ನಗರದಲ್ಲಿ ಕಸ ಸಂಗ್ರಹ, ವಿಲೇವಾರಿ ಬಹುತೇಕ ಸ್ಥಗಿತಗೊಳ್ಳುವ ಸಾಧ್ಯತೆ ಇದೆ.

'4ಜಿ ವಿನಾಯಿತಿ ಕಡಿತ, ಬಿಲ್ ಸಲ್ಲಿಸಲು ಮೂರು ತಿಂಗಳಿಗೊಮ್ಮೆ ನಿಯಮ ಬದಲು, ಮಾಸಿಕ ಬಿಲ್ ಪಾವತಿಗೆ ಟೇಬಲ್‌ಗಳು ಹೆಚ್ಚಾಗುತ್ತಿವೆ' ಎಂದು ತ್ಯಾಜ್ಯ ಗುತ್ತಿಗೆದಾರರು ದೂರುತ್ತಿದ್ದಾರೆ. 'ಏಪ್ರಿಲ್‌ನಿಂದ ದಾಖಲೆ ಸಹಿತ ಬಿಲ್‌ಗಳನ್ನು ಸಲ್ಲಿಸಿಲ್ಲ ಎಂದು' ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳು ಆರೋಪಿಸುತ್ತಿದ್ದಾರೆ. ಪರಸ್ಪರ ಕುಳಿತು ಚರ್ಚಿಸಿ, ವಿಷಯ ಬಗೆಹರಿಸಿಕೊಳ್ಳದೇ ಇರುವುದರಿಂದ ಸಮಸ್ಯೆ ತಾರಕಕ್ಕೇರಿದೆ. ಹೀಗಾಗಿ, ತಮ್ಮ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಬೆಂಗಳೂರು ತ್ಯಾಜ್ಯ ಗುತ್ತಿಗೆದಾರರು ಬುಧವಾರದಿಂದ ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ.

'ಬಿಬಿಎಂಪಿಯಿದ್ದಾಗ ತ್ಯಾಜ್ಯ ಸಂಗ್ರಹ, ವಿಲೇವಾರಿಯ ಗುತ್ತಿಗೆ ಪಡೆದಿದ್ದ ಗುತ್ತಿಗೆದಾರರಿಗೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ- (ಕೆಟಿಪಿಪಿ) 1999ರ ಕಲಂ 4(ಜಿ) ಅಡಿಯಲ್ಲಿ ವಿನಾಯಿತಿ ನೀಡಲಾಗಿತ್ತು. ಇದೀಗ, ಬಿಎಸ್‌ಡಬ್ಲ್ಯು-ಎಂಎಲ್‌ನಿಂದ ಬಿಲ್ ಪಾವತಿಸಿದರೆ, ಗುತ್ತಿಗೆದಾರರಿಗೆ ಕಾನೂನು ಸಮಸ್ಯೆ ಉಂಟಾಗುತ್ತದೆ. ಈ ಕಂಪನಿಗೆ 4ಜಿ ವಿನಾಯಿತಿ ಇಲ್ಲ. ಅವರಿಗೆ ಬಿಲ್ ಕೊಟ್ಟು ಹಣ ಪಡೆದರೆ ನಮಗೆ ಸಮಸ್ಯೆಯಾಗುತ್ತದೆ. ಇದನ್ನು ಪರಿಹರಿಸಿ ಎಂದರೆ, ಮಾತನಾಡಲೂ ಸಭೆ ಕರೆಯುತ್ತಿಲ್ಲ. ಹೀಗಾಗಿ, ತ್ಯಾಜ್ಯ ಸಂಗ್ರಹ, ವಿಲೇವಾರಿಯನ್ನು ಸ್ಥಗಿತಗೊಳಿಸಲು ನಿರ್ಧರಿಸಲಾಗಿದೆ' ಎಂದು ಬೆಂಗಳೂರು ನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು–ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ತಿಳಿಸಿದರು.

'ಬಿಎಸ್‌ಡಬ್ಲ್ಯುಎಂಎಲ್‌ಗೆ ಹೊಸ ಅಧಿಕಾರಿಗಳು ಬಂದಾಗ ಹೊಸ ಪ್ರಮಾಣಿತ ಕಾರ್ಯಾಚರಣಾ ವಿಧಾನವನ್ನು (ಎಸ್‌ಒಪಿ) ಬದಲಿಸುತ್ತಾರೆ. ಇದರಿಂದ ಹಲವು ತೊಂದರೆಯಾಗುತ್ತಿದೆ. ಏಪ್ರಿಲ್‌ನಿಂದ ಮಾಸಿಕ ಬಿಲ್ ಪಾವತಿಯಲ್ಲಿ ವಿಳಂಬವಾಗುತ್ತಿದೆ. ಮಾಸಿಕ ಬಿಲ್ ಪಾವತಿಸಲು ಟೇಬಲ್‌ಗಳು ಹೆಚ್ಚುವರಿಯಾಗಿವೆ. ಇವರು ಬಿಲ್ ಪಾವತಿಸದಿದ್ದರೂ, ನಾವು ಇಎಸ್‌ಐ, ಇಪಿಎಫ್ ಕಟ್ಟಬೇಕು. ಇಲ್ಲದಿದ್ದರೆ ದಂಡ ಮತ್ತು ಬಡ್ಡಿ ಬೀಳುತ್ತದೆ. 2025ರ ಜನವರಿಗೂ ಹಿಂದಿನ ಬಿಲ್ ಇನ್ನೂ ಪಾವತಿಯಾಗಿಲ್ಲ. ನೌಕರರು ಬೆಳಿಗ್ಗೆ 5.30ಕ್ಕೆ ಕೆಲಸಕ್ಕೆ ಹಾಜರಾಗಲು ಅವಶ್ಯವಿರುವ ಸಾರ್ವಜನಿಕರ ಸಾರಿಗೆ ವ್ಯವಸ್ಥೆ ಬಗ್ಗೆ ಚರ್ಚೆ ನಡೆಸಿ, ಪರಿಹಾರ ಕಲ್ಪಿಸಲು ಕೋರಲಾಗಿದೆ. ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ' ಎಂದು ಹೇಳಿದರು.

ಬೇಜವಾಬ್ದಾರಿ ಅಧಿಕಾರಿಗಳು: ಸಂಘ

'ಬಿಎಸ್‌ಡಬ್ಲ್ಯುಎಂಎಲ್ ವ್ಯವಸ್ಥಾಪಕರೂ ಆಗಿರುವ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ಮನವಿ ನೀಡಿ, ನಮ್ಮ ಸಮಸ್ಯೆಗಳನ್ನು ಪರಿಹರಿಸಲು ಕೋರಲಾಗಿತ್ತು. ಸಿಇಒ ಕರೀಗೌಡ ಅವರಿಗೆ ಸಭೆ ನಡೆಸಲು, ಇಂತಹ ಅಗತ್ಯ ಸೇವೆಯಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಿ ಎಂದೂ ಅವರು ಸೂಚಿಸಿದ್ದರು. ಎರಡು ಬಾರಿ ಮನವಿ ನೀಡಲಾಗಿದೆ. ಆದರೂ, ಬಿಎಸ್‌ಡಬ್ಲ್ಯುಎಂಎಲ್ ಸಿಇಒ, ಇಒಒ ತಮಗೆ ಇಷ್ಟಬಂದಂತೆ ನಡೆದುಕೊಳ್ಳುತ್ತಿದ್ದು, ನಮ್ಮ ಸಮಸ್ಯೆಗಳನ್ನು ಕೇಳಿಸಿಕೊಳ್ಳದೆ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ನಮ್ಮ ಬೇಡಿಕೆ ಈಡೇರಿಸಲು ಕೆಲಸ ನಿಲ್ಲಿಸುವುದೊಂದೇ ದಾರಿಯಾಗಿದೆ. ಅವರು ಎಸ್ಮಾ ಜಾರಿ ಮಾಡಿದ್ದಾರೆ. ನ್ಯಾಯಾಲಯಕ್ಕೆ ನಮ್ಮ ಮನವಿ ಸಲ್ಲಿಸಿ, ಹೋರಾಟ ನಡೆಸುತ್ತೇವೆ' ಎಂದು ಬೆಂಗಳೂರು ನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು–ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ತಿಳಿಸಿದರು.

ಮುಷ್ಕರ ನಿಷೇಧಿಸಿ ಎಸ್ಮಾ ಜಾರಿ

ಕರ್ನಾಟಕ ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆ–(ಎಸ್ಮಾ) 2013ರ ಕಲಂ 3ರಂತೆ, ಜಿಬಿಎ ವ್ಯಾಪ್ತಿಯಲ್ಲಿ ಸರಬರಾಜುದಾರರು/ಗುತ್ತಿಗೆದಾರರ ಅಧೀನದಲ್ಲಿರುವ ಎಲ್ಲ ಪೌರ ಕಾರ್ಮಿಕರು, ಆಟೊ ಸಹಾಯಕರು, ಕಾಂಪ್ಯಾಕ್ಟರ್ ಲೋಡರ್‌ಗಳು, ಚಾಲಕರು ಮುಂದಿನ ಒಂದು ವರ್ಷ ಮುಷ್ಕರ ಹೂಡುವುದನ್ನು ನಿಷೇಧಿಸಿ, ನಗರಾಭಿವೃದ್ಧಿ ಇಲಾಖೆ ಸೆ.19ರಂದು ಅಧಿಸೂಚನೆ ಹೊರಡಿಸಿದೆ.

ಮಂಗಳವಾರ ಸಭೆ: ಕರೀಗೌಡ

'ತ್ಯಾಜ್ಯ ವಿಲೇವಾರಿಯ ಬಿಲ್‌ಗಳನ್ನು ಸಲ್ಲಿಸುವಾಗ ಅಗತ್ಯ ದಾಖಲೆಗಳನ್ನು ಸಲ್ಲಿಸಿದರೆ ಯಾವುದೇ ರೀತಿಯ ತಡೆ, ಗೊಂದಲವಿಲ್ಲದೆ ಪಾವತಿ ಮಾಡಲಾಗುತ್ತದೆ. ಆದರೆ, ಅವರು ಹಾಜರಾತಿ, ಪಿಎಫ್–ಇಪಿಎಫ್ ಪಾವತಿಯ ವಿವರಗಳನ್ನು ನೀಡುತ್ತಿಲ್ಲ. ಅವರು ಬಿಲ್ ಸಲ್ಲಿಸದೆ ಹಣ ಪಾವತಿ ಸಾಧ್ಯವಿಲ್ಲ. ಹೊಸ ಎಸ್‌ಒಪಿಯಂತೆಯೇ ಬಿಲ್ ನೀಡಬೇಕು. ತ್ಯಾಜ್ಯ ಗುತ್ತಿಗೆದಾರರು ಸಭೆ ನಡೆಸಲು ಮನವಿ ಸಲ್ಲಿಸಿದ್ದಾರೆ. ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಸಭೆ ನಡೆಸಲಾಗುವುದು' ಎಂದು ಬಿಎಸ್‌ಡಬ್ಲ್ಯುಎಂಎಲ್ ಸಿಇಒ ಕರೀಗೌಡ ತಿಳಿಸಿದರು.

ಚಟಿಕೆ ಸುದ್ದಿ

ಸಾಕು ನಾಯಿಗೆ ಪಿತೃಪಕ್ಷ

ಕದರಪ್ಪ ಅವರು ಮೃತ ನಾಯಿಗೆ ಪಿತೃಪಕ್ಷ ಆಚರಿಸಿದರು

ರಾಜರಾಜೇಶ್ವರಿ ನಗರ: ಇಲ್ಲಿನ ಶ್ವಾನ ಪ್ರಿಯರೊಬ್ಬರು ತನ್ನ ಸಾಕು ನಾಯಿಗೆ ಪಿತೃಪಕ್ಷವನ್ನು ಭಕ್ತಿಯಿಂದ ಆಚರಿಸಿದ್ದಾರೆ.

ಜ್ಞಾನಭಾರತಿ ಬಡಾವಣೆಯ ಎರಡನೇ ಹಂತದ ನಿವಾಸಿ ಎನ್.ಕದರಪ್ಪ ಅವರ ಮನೆಯಲ್ಲಿ ಸಾಕಿದ್ದ 10 ವರ್ಷದ ನಾಯಿ ಮೃತಪಟ್ಟಿತ್ತು. ಮೃತ ನಾಯಿಯ ಭಾವಚಿತ್ರಕ್ಕೆ ಅರಿಸಿನ, ಕುಂಕುಮ, ಹೂವುಗಳನ್ನು ಮುಡಿಸಿ, ಹಣ್ಣು–ಹಂಪಲು, ಆಹಾರ ಪದಾರ್ಥಗಳನ್ನು ಎಡೆ ಇಟ್ಟು ಪೂಜೆ ಮಾಡಿದರು.

ಎನ್.ಕದರಪ್ಪ ಮಾತನಾಡಿ, 'ನಾಯಿಯನ್ನು ಮನೆ ಮಗನಂತೆ ಸಾಕಿದ್ದೆವು. ಕುಟುಂಬದವರು ಹೊರಗೆ ಹೋಗಿ ಮನೆಗೆ ವಾಪಸ್ ಬಂದಾಗ ಪ್ರೀತಿ ತೋರಿಸುತ್ತಿತ್ತು. ನೆನಪು ಸದಾ ಇರುವುದರಿಂದ ಶ್ರಾದ್ಧ (ಪಿತೃಪಕ್ಷ) ಮಾಡಲಾಗಿದೆ' ಎಂದು ಹೇಳಿದರು.

ವಿದ್ಯುತ್ ವ್ಯತ್ಯಯ ಇದೇ 23ಕ್ಕೆ

ಬೆಂಗಳೂರು: ಯಲ್ಲಾರ್ ಬಂಡೆ 66/11ಕೆ.ವಿ. ಉಪಕೇಂದ್ರ (ಉತ್ತರ) ತುರ್ತು ನಿರ್ವಹಣಾ ಕಾಮಗಾರಿಯನ್ನು ಕೈಗೊಂಡಿರುವುದರಿಂದ, ಸೆಪ್ಟೆಂಬರ್ 23ರಂದು (ಮಂಗಳವಾರ) ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ ಕೆಲವು ಸ್ಥಳಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಕಾವಲ್ ಬೈರಸಂದ್ರ, ಎಲ್.ಆರ್. ಬಂಡೆ ಮುಖ್ಯರಸ್ತೆ, ಗಾಂಧಿನಗರ, ಚಿನ್ನಣ್ಣ ಲೇಔಟ್, ಅಂಬೇಡ್ಕರ್ ಲೇಔಟ್, ಅನ್ವರ್ ಲೇಔಟ್, ಕಾವೇರಿ ನಗರ, ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಸುಲ್ತಾನ್ ಪಾಳ್ಯ, ರಂಕಾನಗರ, ಕನಕನಗರ, ಕೆಎಚ್‌ಬಿ ಮುಖ್ಯರಸ್ತೆ, ಭುವನೇಶ್ವರಿ ನಗರ, ವಿ. ನಾಗೇನಹಳ್ಳಿ, ಪೆರಿಯಾರ್ ನಗರ, ಕುಶಾಲ್‌ನಗರ, ಮೋದಿ ರಸ್ತೆ, ಮೋದಿ ಉದ್ಯಾನ, ದೊಡ್ಡಣ್ಣ ನಗರ, ಮುನಿವೀರಪ್ಪ ಲೇಔಟ್, ಸಕ್ಕರೆ ಮಂಡಿ, ಉಪ್ಪಿನ ಮಂಡಿ, ಮುನೇಶ್ವರ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಸುದ್ದಿ 2 ನಿಮಿಷ

ತಿರುಮಲ ತಿರುಪತಿಯಲ್ಲಿ 24ರಿಂದ ಬ್ರಹ್ಮೋತ್ಸವ: ಸಕಲ ಸಿದ್ಧತೆ

ಬೆಂಗಳೂರು: 'ಇದೇ 24ರಿಂದ ಅಕ್ಟೋಬರ್ 2ರವರೆಗೆ ತಿರುಮಲ ತಿರುಪತಿಯಲ್ಲಿ ಸಾಲಕಟ್ಲ ಬ್ರಹ್ಮೋತ್ಸವನ್ನು ಆಯೋಜಿಸಲಾಗಿದೆ. ಪ್ರತಿದಿನ 2–3 ಲಕ್ಷ ಭಕ್ತರು ಭೇಟಿ ನೀಡುವ ನಿರೀಕ್ಷೆ ಇದ್ದು, ಭದ್ರತೆಗೆ ಧಕ್ಕೆಯಾಗದ ರೀತಿಯಲ್ಲಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ' ಎಂದು ಟಿಟಿಡಿ ಆಡಳಿತ ಮಂಡಳಿ ಸದಸ್ಯ ನರೇಶ್ ಕುಮಾರ್ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '24ರಂದು ಧ್ವಜಾರೋಹಣ, 28ರಂದು ಗರುಡ ಸೇವೆ, ಅಕ್ಟೋಬರ್ 1ರಂದು ರಥೋತ್ಸವ, ಅಕ್ಟೋಬರ್ 2ರಂದು ಚಕ್ರ ಸ್ನಾನ ಮತ್ತು ಧ್ವಜಾವರೋಹಣ ವಿಧಿಗಳು ನಡೆಯಲಿವೆ. ಬ್ರಹ್ಮರಥೋತ್ಸವ ನಡೆಯಲಿರುವ ಅಷ್ಟೂ ದಿನ ಆನ್‌ಲೈನ್‌ನಲ್ಲಿ 1.16 ಲಕ್ಷ ಟಿಕೆಟ್‌ಗಳು ಮತ್ತು 25,000 ಎಸ್‌ಎಸ್‌ಡಿ ಟೋಕನ್‌ಗಳನ್ನು ವಿತರಿಸಲಾಗುತ್ತದೆ' ಎಂದು ತಿಳಿಸಿದರು.

'ವಿಐಪಿ ಟಿಕೆಟ್, ವಿಐಪಿ ಪಾಸುಗಳು ಇರುವುದಿಲ್ಲ. ದೇವಾಲಯಕ್ಕೆ ಭೇಟಿ ನೀಡುವ ಸರ್ಕಾರದ ಉನ್ನತ ಪ್ರತಿನಿಧಿಗಳಿಗೆ ಮಾತ್ರವೇ ಶಿಷ್ಟಾಚಾರದ ವ್ಯವಸ್ಥೆ ಮಾಡಲಾಗುತ್ತದೆ. ಬ್ರಹ್ಮರಥೋತ್ಸವದ ವೇಳೆ ನೂಕುನುಗ್ಗಲು ತಪ್ಪಿಸಲು ಹಲವೆಡೆ ಎಲ್‌ಇಡಿ ಪರದೆಗಳನ್ನು ಅಳವಡಿಸಿ, ರಥೋತ್ಸವ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗುತ್ತದೆ' ಎಂದು ಹೇಳಿದರು.

'ತಿರುಪತಿ ಟೋಲ್ ಬಳಿಯಲ್ಲಿಯೇ ವಿಶಾಲವಾದ ವಾಹನ ನಿಲುಗಡೆ ಪ್ರದೇಶವನ್ನು ಸಜ್ಜುಗೊಳಿಸಲಾಗಿದೆ. ಏಕಕಾಲದಲ್ಲಿ 4,000 ಕಾರುಗಳು, 2,500ರಿಂದ 4,000 ದ್ವಿಚಕ್ರ ವಾಹನಗಳನ್ನು ಅಲ್ಲಿ ನಿಲ್ಲಿಸಬಹುದಾಗಿದೆ. ಅಲ್ಲಿಂದ ಬೆಟ್ಟಕ್ಕೆ ಪ್ರತಿದಿನ 3,200 ಟ್ರಿಪ್‌ಗಳಷ್ಟು ಬಸ್ ವ್ಯವಸ್ಥೆ ಇರಲಿದೆ' ಎಂದು ವಿವರಿಸಿದರು.

'ಅತಿಥಿ ಶಿಕ್ಷಕರ ವೇತನ ಹೆಚ್ಚಿಸಿ'

ಬೆಂಗಳೂರು: ಅತಿಥಿ ಶಿಕ್ಷಕರ ವೇತನ ಹೆಚ್ಚಿಸಬೇಕು ಎಂದು ಶಾಸಕ ಕೆ. ಗೋಪಾಲಯ್ಯ ಹೇಳಿದರು.

ಮಹಾಲಕ್ಷ್ಮೀ ಎಜುಕೇಷನಲ್ ಟ್ರಸ್ಟ್ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಅತಿಥಿ ಶಿಕ್ಷಕರಿಗೆ ಒಂದು ತಿಂಗಳಿಗೆ ₹12 ಸಾವಿರ ವೇತನ ನೀಡಲಾಗುತ್ತಿದೆ. ಇದರಿಂದ ಜೀವನ ನಿರ್ವಹಿಸಲು ಕಷ್ಟವಾಗುತ್ತಿದ್ದು, ಕನಿಷ್ಠ ₹18 ಸಾವಿರ ವೇತನ ನೀಡುವಂತೆ ವಿಧಾನಸಭೆ ಅಧಿವೇಶನದಲ್ಲಿ ಆಗ್ರಹಿಸಿದ್ದೇನೆ. ಶಾಲೆಗಳಲ್ಲಿ ಶಿಕ್ಷಕರ ಕೊರತೆ ಹೆಚ್ಚಿದ್ದು, ಕೂಡಲೇ ಸರ್ಕಾರ ಶಿಕ್ಷಕರನ್ನು ನೇಮಿಸಬೇಕು. ಇಲ್ಲದಿದ್ದರೆ ಸರ್ಕಾರಿ ಶಾಲೆಗಳಲ್ಲಿ ಪಾಠ ಮಾಡಲು ಶಿಕ್ಷಕರೇ ಸಿಗುವುದಿಲ್ಲ' ಎಂದು ಹೇಳಿದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಅತ್ಯುತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ರಾಜ್ಯ ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ, ಬೆಂಗಳೂರು ಉತ್ತರ ಜಿಲ್ಲೆ ಬಿಜೆಪಿ ಅಧ್ಯಕ್ಷ ಎಸ್. ಹರೀಶ್, ಟ್ರಸ್ಟ್ ಅಧ್ಯಕ್ಷ ಎನ್. ಜಯರಾಮ್, ಬಿಬಿಎಂಪಿ ಮಾಜಿ ಸದಸ್ಯ ಕೆ.ವಿ. ರಾಜೇಂದ್ರ ಕುಮಾರ್, ಬಿಜೆಪಿ ಮಂಡಲದ ಅಧ್ಯಕ್ಷ ರಾಘವೇಂದ್ರ ಶೆಟ್ಟಿ, ಡಿಡಿಪಿಐ ಅಂಜನಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ತಾರಾನಾಥ್, ಬಿಜೆಪಿ ಮುಖಂಡರಾದ ಎನ್. ವೆಂಕಟೇಶ್, ಶಿವಾನಂದ ಮೂರ್ತಿ, ವೆಂಕಟೇಶ್ ಮೂರ್ತಿ, ಪದ್ಮಾವತಿ ಶ್ರೀನಿವಾಸ್, ನಾಗರತ್ನ ಲೋಕೇಶ್, ಯಶೋಧ ನಾರಾಯಣ ಉಪಸ್ಥಿತರಿದ್ದರು.

'ಮನೆಯಂಗಳದಲ್ಲಿ ಮಾತುಕತೆ'ಯಲ್ಲಿ ಪ್ರೊ.ಮಾಲತಿ ಪಟ್ಟಣಶೆಟ್ಟಿ ಮನದಾಳ

'ಸಂಕಷ್ಟದ ದಿನಗಳಲ್ಲಿ ಕೈಹಿಡಿದ ಕವಿತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದುಕಿನ ಸಂಕಷ್ಟದ ದಿನಗಳಲ್ಲಿ ಕವಿತೆಗಳು ಕೈಹಿಡಿದು, ಬದುಕಿಗೆ ಬೆಳಕಾದವು' ಎಂದು ಲೇಖಕಿ ಪ್ರೊ. ಮಾಲತಿ ಪಟ್ಟಣಶೆಟ್ಟಿ ಮನದಾಳ ಹಂಚಿಕೊಂಡರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಭಾಗವಹಿಸಿದ ಅವರು, ಬದುಕಿನ ವಿವಿಧ ಘಟನೆಗಳನ್ನು ಸ್ಮರಿಸಿಕೊಂಡರು.

'ಮದುವೆಯಾಗಿ ಐದು ವರ್ಷಗಳು ಕಳೆಯುವಷ್ಟರಲ್ಲಿಯೇ ನನ್ನ ಬಾಳಿನಲ್ಲಿ ಬಿರುಗಾಳಿ ಎದ್ದು, ದಾಂಪತ್ಯ ಜೀವನ ಕೊನೆಗೊಂಡಿತು. ಆ ವೇಳೆ ಆಘಾತಕ್ಕೆ ಒಳಗಾಗಿದ್ದೆ. ಆದರೆ, ಎದೆಗುಂದಲಿಲ್ಲ. ಕೋರ್ಟ್, ಕಚೇರಿಗೆ ಅಲೆಯದೆ ಎರಡೂ ಮಕ್ಕಳನ್ನು ಸಾಕಿದೆ. ದುಃಖದಿಂದ ಹೊರಬರಲು ಕವಿತೆ ರಚನೆ ಮಾಡಿದೆ. ಹೀಗಾಗಿ, 32ನೇ ವಯಸ್ಸಿಗೆ ಕವಿತೆ ರಚನೆ ಮಾಡಲು ಪ್ರಾರಂಭಿಸಿದೆ. ಸಾಹಿತ್ಯ ರಚನೆ ನನ್ನ ಕೈಹಿಡಿದು ಬೆಳೆಸಿತು' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರೊ.ಮಾಲತಿ ಪಟ್ಟಣಶೆಟ್ಟಿ ಅವರನ್ನು ಗೌರವಿಸಲಾಯಿತು. ಬಲವಂತರಾವ್ ಪಾಟೀಲ, ಬನಶಂಕರಿ ವಿ. ಅಂಗಡಿ ಉಪಸ್ಥಿತರಿದ್ದರು

'ನನ್ನ ಬಾಲ್ಯ ಕೂಡ ಕಷ್ಟದಿಂದ ಕೂಡಿತ್ತು. ನಮ್ಮವ್ವ ನನಗೆ ಮೂರು ವರ್ಷಗಳು ಇದ್ದಾಗ ತೀರಿ ಹೋದರು. ತಂದೆ ಮತ್ತೊಂದು ಮದುವೆ ಆದರು. ನಾವು ಒಂಬತ್ತು ಜನ ಮಕ್ಕಳು. ನಾನು ಅಜ್ಜಿಯ ಆಸರೆಯಲ್ಲಿ ಬೆಳೆದೆ. ಚಂದಮಾಮ ಪುಸ್ತಕಗಳು ಓದಿನ ಆಸಕ್ತಿ ಬೆಳೆಸಿದವು' ಎಂದು ಹೇಳಿದರು.

'ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಹುದ್ದೆಗೆ ಸರ್ಕಾರ ನನ್ನನ್ನು ನೇಮಕ ಮಾಡಿದಾಗ ಹಲವು ಪುರುಷ ಸಾಹಿತಿಗಳು ಇವಳು ಹೆಣ್ಣು, ಇವಳಿಂದ ಏನು ಸಾಧ್ಯ ಎಂಬ ರೀತಿಯಲ್ಲಿ ಮಾತನಾಡಿದ್ದರು. ಆದರೆ, ಎದೆಗುಂದದೆ ಇಡೀ ರಾಜ್ಯ ಸುತ್ತಿ ಕಾರ್ಯಕ್ರಮ ರೂಪಿಸಿದೆ' ಎಂದು ಸ್ಮರಿಸಿಕೊಂಡರು.

'ಮೋಸ, ದುಃಖಗಳನ್ನ ಮೀರಿ ಬೆಳೆದು ನಿಂತಿದ್ದೇನೆ. ಇದಕ್ಕೆ ನನ್ನಲ್ಲಿರುವ ಜೀವನೋತ್ಸಾಹ ಕಾರಣ. ಸಾಹಿತ್ಯ ರಚನೆ ಮಾಡಿದರೂ ಪುಸ್ತಕ ಪ್ರಕಾಶಕರು ಸಿಗುತ್ತಿರಲಿಲ್ಲ. ಹೀಗಾಗಿ, ಓದುಗರಿಗೆ ನಾನು ಹೆಚ್ಚು ತಲುಪಲು ಸಾಧ್ಯವಾಗಲಿಲ್ಲ' ಎಂದು ಬೇಸರಪಟ್ಟರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕರಾದ ಬಲವಂತರಾವ್ ಪಾಟೀಲ, ಬನಶಂಕರಿ ವಿ. ಅಂಗಡಿ ಉಪಸ್ಥಿತರಿದ್ದರು.

₹153 ಕೋಟಿ ಮೌಲ್ಯದ ಆಸ್ತಿ ವಶ

ಬೆಂಗಳೂರು: ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಜ್ಞಾನಭಾರತಿ ಬಡಾವಣೆಯಲ್ಲಿ ₹153 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿ ಕೊಂಡಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ವಳಗೇರಹಳ್ಳಿ ಗ್ರಾಮದ ಸರ್ವೆ ನಂ. 26/3ರಲ್ಲಿನ 1 ಎಕರೆ 16 ಗುಂಟೆ ಪ್ರದೇಶದಲ್ಲಿ ಅನಧಿಕೃತ ನಿರ್ಮಾಣವನ್ನು ತೆರವುಗೊಳಿಸಿ, ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಪ್ರದೇಶವನ್ನು ವಶಪಡಿಸಿಕೊಂಡಿತು. ಸುತ್ತಲೂ ಬೇಲಿ ಹಾಕಿ, ಎಚ್ಚರಿಕೆ ಫಲಕ ಅಳವಡಿಸಿದೆ.

ಪ್ರಾಧಿಕಾರದ ಅಭಿಯಂತರ ಸದಸ್ಯ, ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕ ಮತ್ತಿತರರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ನೀಟ್: ತಾತ್ಕಾಲಿಕ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ದಂತ ವೈದ್ಯಕೀಯ ಪದವಿ ಕೋರ್ಸ್‌ಗಳ ಎರಡನೇ ಸುತ್ತು ಹಾಗೂ ಆಯುಷ್ ಕೋರ್ಸ್‌ಗಳ ಮೂರನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶನಿವಾರ ಪ್ರಕಟಿಸಿದೆ.

ಫಲಿತಾಂಶ ಕುರಿತು ಆಕ್ಷೇಪಣೆಗಳು ಇದ್ದಲ್ಲಿ ಇದೇ 21ರಂದು ಸಂಜೆ 5 ಗಂಟೆ ಒಳಗೆ ಇ-ಮೇಲ್ (keauthority-ka@nic.in) ಮೂಲಕ ಸಲ್ಲಿಸಬಹುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಅಂತಿಮ ಫಲಿತಾಂಶ ಪ್ರಕಟಿಸಲಾಗುತ್ತದೆ. ಹಾಗೆಯೇ ಅಖಿಲ ಭಾರತ ಮಟ್ಟದಲ್ಲಿ ಸೀಟು ಹಂಚಿಕೆಯಾಗಿದ್ದರೆ ಅಂತಹವರಿಗೂ ಹೊರ ಹೋಗುವುದಕ್ಕೆ ಅವಕಾಶ ನೀಡಲಾಗುವುದು ಎಂದು ಅವರು ಮಾಹಿತಿ ನೀಡಿದ್ದಾರೆ.

'ಮಕ್ಕಳಲ್ಲಿ ಕ್ಯಾನ್ಸರ್ ಪ್ರಕರಣ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳಲ್ಲಿ ಕ್ಯಾನ್ಸರ್ ಪ್ರಕರಣಗಳೂ ಹೆಚ್ಚಳವಾಗುತ್ತಿದ್ದು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನೋಂದಣಿ ಪ್ರಕಾರ ಕಳೆದ ವರ್ಷ 601 ಮಕ್ಕಳಲ್ಲಿ ಕ್ಯಾನ್ಸರ್ ಪ್ರಕರಣಗಳು ವರದಿಯಾಗಿವೆ. ಇವು ಒಟ್ಟು ಕ್ಯಾನ್ಸರ್ ಪ್ರಕರಣಗಳ ಶೇ 4.6 ರಷ್ಟಾಗಿವೆ' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಟಿ.ನವೀನ್ ಹೇಳಿದರು.

'ಬಾಲ್ಯ ಕ್ಯಾನ್ಸರ್ ಜಾಗೃತಿ ಮಾಸಾಚರಣೆ' ಪ್ರಯುಕ್ತ ಸಂಸ್ಥೆಯು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಯಾವುದೇ ಶಂಕಿತ ಕ್ಯಾನ್ಸರ್ ಗೆಡ್ಡೆ ಹಾಗೂ ರೋಗ ಲಕ್ಷಣಗಳಿದ್ದರೆ ಮಕ್ಕಳನ್ನು ತಪಾಸಣೆಗೆ ಒಳಪಡಿಸಬೇಕು. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿದರೆ ಬೇಗ ಗುಣಪಡಿಸಲು ಸಾಧ್ಯ. ತಡವಾಗಿ ತಪಾಸಣೆಗೆ ಒಳಪಡಿಸಿ, ಚಿಕಿತ್ಸೆ ನೀಡಿದಲ್ಲಿ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಳ್ಳಲಿದೆ' ಎಂದರು.

'ಕರ್ನಾಟಕ ಮಾತ್ರವಲ್ಲದೆ, ತಮಿಳುನಾಡು, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ ಹಾಗೂ ಈಶಾನ್ಯ ರಾಜ್ಯಗಳಿಂದ ಇಲ್ಲಿಗೆ ಚಿಕಿತ್ಸೆಗೆ ಜನರು ಬರುತ್ತಿದ್ದಾರೆ. ಸಂಸ್ಥೆಯಲ್ಲಿ 16 ಬೆಡ್‌ಗಳ ಮಕ್ಕಳ ತೀವ್ರನಿಗಾ ಘಟಕವಿದೆ. 75 ಬೆಡ್‌ಗಳ ಕಪೂರ್ ವಾರ್ಡ್ ಮಕ್ಕಳ ಚಿಕಿತ್ಸೆಗೆ ಸಹಕಾರಿಯಾಗಿದೆ. ಸಂಸ್ಥೆಯಲ್ಲಿ 'ಅಟೋಲೋಗಸ್' ಮತ್ತು 'ಅಲೋಜೆನಿಕ್' ಕಸಿಯನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

ಸಂಸ್ಥೆಯ ಮಕ್ಕಳ ಗಂಥಿಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಅರುಣ್ ಕುಮಾರ್, 'ಕ್ಯಾನ್ಸರ್ ಅನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡುವುದು, ತಡೆಗಟ್ಟುವಿಕೆ ಮತ್ತು ಚಿಕಿತ್ಸೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕಿದೆ. ಕ್ಯಾನ್ಸರ್ ಪತ್ತೆಯಾದ ಬಳಿಕ ವಿಶೇಷ ಕ್ಯಾನ್ಸರ್ ಚಿಕಿತ್ಸಾ ಕೇಂದ್ರಕ್ಕೆ ದಾಖಲಾಗುವುದು ಮುಖ್ಯ' ಎಂದರು.

'ಚಿಕಿತ್ಸೆಗೆ ಒಳಗಾದ ಮೇಲೆ ವಯಸ್ಕರಿಗಿಂತಲೂ ಮಕ್ಕಳು ಬಹಳ ಬೇಗ ಚೇತರಿಸಿಕೊಳ್ಳುತ್ತಾರೆ. ವಯಸ್ಕರಿಗೆ ಹಾಗೂ ಚಿಕ್ಕ ಮಕ್ಕಳಿಗೆ ಬೇರೆ ಬೇರೆ ಚಿಕಿತ್ಸೆ ಅಗತ್ಯವಿದ್ದು, ಕ್ಯಾನ್ಸರ್ ಬಗೆಗೆ ಸಮಾಜದಲ್ಲಿರುವ ಮೂಢನಂಬಿಕೆಗಳನ್ನು ಹೋಗಲಾಡಿಸಬೇಕು' ಎಂದರು.

'ಹಿಂದೂ ಕ್ರೈಸ್ತ ಜಾತಿ: ಮರು ಪರಿಶೀಲಿಸಿ'

ಬೆಂಗಳೂರು: ಹಿಂದೂ ಉಪಜಾತಿಗಳ ಜೊತೆ ಕ್ರಿಶ್ಚಿಯನ್ ಪದ ಸೇರ್ಪಡೆ ಕುರಿತಂತೆ ಮರು ಪರಿಶೀಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಪತ್ರ ಬರೆದಿದ್ದಾರೆ.

ಬ್ರಾಹ್ಮಣ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್, ಕುರುಬ ಕ್ರಿಶ್ಚಿಯನ್ ಹೀಗೆ ಹಿಂದೂ ಉಪಜಾತಿಗಳ ಜೊತೆ ಕ್ರಿಶ್ಚಿಯನ್ ಪದ ಸೇರಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿ ರಾಜ್ಯ ಬಿಜೆಪಿ ನಾಯಕರ ನಿಯೋಗವು ಇತ್ತೀಚೆಗೆ ರಾಜ್ಯಪಾಲರಿಗೆ ದೂರು ನೀಡಿತ್ತು.

ಈ ಪತ್ರವನ್ನು ಉಲ್ಲೇಖಿಸಿ ಮುಖ್ಯಮಂತ್ರಿಗೆ ಪತ್ರ ಬರೆದಿರುವ ರಾಜ್ಯಪಾಲರು, 'ನನ್ನ ಅರಿವಿನ ಪ್ರಕಾರ ರಾಜ್ಯದ ಜಾತಿ ಪಟ್ಟಿಯಲ್ಲಿ ಬ್ರಾಹ್ಮಣ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್, ಕುರುಬ ಕ್ರಿಶ್ಚಿಯನ್, ಕುಂಬಾರ ಕ್ರಿಶ್ಚಿಯನ್ ಜಾತಿಗಳ ಹೆಸರು ಇಲ್ಲ. ಅಲ್ಲದೆ, ಕ್ರೈಸ್ತ ಧರ್ಮದಲ್ಲೂ ಇಂತಹ ಜಾತಿಗಳು ಗುರುತಿಸಿಕೊಂಡಿಲ್ಲ. ಹಿಂದೂ ಉಪಜಾತಿಗಳ ಜೊತೆ ಕ್ರಿಶ್ಚಿಯನ್ ಧರ್ಮ ಸೇರ್ಪಡೆಯಿಂದ ಸಾಮಾಜಿಕ ಅಶಾಂತಿಯ ಜೊತೆಗೆ ದೀರ್ಘಾವಧಿಯಲ್ಲಿ ಸಾಮಾಜಿಕ ಸಾಮರಸ್ಯಕ್ಕೆ ಅಪಾಯ ತರುವ ಸಾಧ್ಯತೆ ಇದೆ. ಈ ವಿಚಾರಗಳನ್ನು ಗಣನೆಗೆ ತೆಗೆದುಕೊಂಡು, ಈ ಬಗ್ಗೆ ಮರು ಪರಿಶೀಲನೆ ನಡೆಸುವುದು ಅಗತ್ಯವಾಗಿದೆ' ಎಂದು ಅಭಿಪ್ರಾಯ ಪಟ್ಟಿದ್ದಾರೆ.

105 ಮಂದಿಗೆ ಸ್ಟೆಂಟ್ ಅಳವಡಿಕೆ

ಜಯದೇವ ಆಸ್ಪತ್ರೆಯಲ್ಲಿ ಹೃದ್ರೋಗಿಗಳಿಗೆ ಉಚಿತ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಹಮ್ಮಿಕೊಂಡಿದ್ದ ಆಂಜಿಯೋಪ್ಲಾಸ್ಟಿ ಕಾರ್ಯಾಗಾರದಲ್ಲಿ 105 ಹೃದ್ರೋಗಿಗಳಿಗೆ ಉಚಿತವಾಗಿ ಸ್ಟೆಂಟ್ ಅಳವಡಿಸಲಾಗಿದೆ.

ಸಂಸ್ಥೆಯು ಅಮೆರಿಕದ ಮೆಡ್ ಟ್ರಾನಿಕ್ಸ್ ಸಂಸ್ಥೆ ಮತ್ತು ಡಾ.ಗೋವಿಂದರಾಜು ಸುಬ್ರಮಣಿ ಹಾರ್ಟ್ ಫೌಂಡೇಷನ್ ಸಹಯೋಗದಲ್ಲಿ ಈ ಕಾರ್ಯಾಗಾರ ಹಮ್ಮಿ ಕೊಂಡಿತ್ತು. ಇದೇ ತಿಂಗಳು 15ರಿಂದ 17ರವರೆಗೆ ಸಂಸ್ಥೆಯ ಬೆಂಗಳೂರು ಹಾಗೂ ಮೈಸೂರು ಆಸ್ಪತ್ರೆಯಲ್ಲಿ ಈ ಕಾರ್ಯಾಗಾರ ನಡೆದಿದೆ.

'ರೈತರು, ದಿನಗೂಲಿ ನೌಕರರು, ಆಟೊ ಚಾಲಕರು, ಬೀದಿ ಬದಿ ವ್ಯಾಪಾರಿಗಳು ಹಾಗೂ ಹಿರಿಯ ನಾಗರಿಕರು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ. ರಾಜ್ಯದ ಹೃದ್ರೋಗಿಗಳ ಜೊತೆಗೆ ಹೊರ ರಾಜ್ಯಗಳ ರೋಗಿಗಳೂ ಕಾರ್ಯಾಗಾರದಲ್ಲಿ ಚಿಕಿತ್ಸೆಗೆ ಒಳಗಾಗಿದ್ದರು. ಒಟ್ಟು 120 ಸ್ಟೆಂಟ್‌ಗಳನ್ನು ಅಳವಡಿಸಲಾಗಿದೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಬಿ. ದಿನೇಶ್ ತಿಳಿಸಿದ್ದಾರೆ.

'ಜಯದೇವ ಆಸ್ಪತ್ರೆಯಲ್ಲಿ 15 ವರ್ಷಗಳಿಂದಲೂ ಆರ್ಥಿಕವಾಗಿ ಹಿಂದುಳಿದಿರುವ ರೋಗಿಗಳನ್ನು ಆಯ್ಕೆ ಮಾಡಿ, ಉಚಿತವಾಗಿ ಸ್ಟೆಂಟ್ ಅಳವಡಿಕೆ ಮಾಡಲಾಗುತ್ತಿದೆ. ಅದೇ ರೀತಿ, ಈ ವರ್ಷವೂ ಯಶಸ್ವಿಯಾಗಿ 105 ಹೃದ್ರೋಗಿಗಳಿಗೆ ಉಚಿತವಾಗಿ ಸ್ಟೆಂಟ್ ಅಳವಡಿಕೆ ಮಾಡಲಾಗಿದೆ' ಎಂದು ಹೇಳಿದ್ದಾರೆ.

ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಹೃದ್ರೋಗಿಗಳೊಂದಿಗೆ ಡಾ.ಬಿ.ದಿನೇಶ್, ಡಾ.ಗೋವಿಂದರಾಜು ಸುಬ್ರಮಣಿ, ಡಾ.ವಿ.ಪ್ರಭಾಕರ್, ಡಾ.ಎ.ಎಂ.ಜಗದೀಶ್, ಡಾ.ಭೂಪಾಲ್, ಜಿ.ಎ.ಅಡಗಟ್ಟಿ ಹಾಗೂ ಅವಿನಾಶ್ ಉಪಸ್ಥಿತರಿದ್ದರು

ಹಲವು ಅನಾರೋಗ್ಯ ಸಮಸ್ಯೆ

'ಕಾರ್ಯಾಗಾರದಲ್ಲಿ ಭಾಗವಹಿಸಿದ ಹೃದ್ರೋಗಿಗಳಿಗೆ ನಡೆಸಲಾದ ವೈದ್ಯಕೀಯ ಪರೀಕ್ಷೆಯಲ್ಲಿ ವಿವಿಧ ಅನಾರೋಗ್ಯ ಸಮಸ್ಯೆಗಳು ಪತ್ತೆಯಾಗಿವೆ. ಕೆಲವರು ಮಧುಮೇಹ, ಅಧಿಕ ರಕ್ತದೊತ್ತಡ ಸೇರಿ ಒಂದಕ್ಕೂ ಅಧಿಕ ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವುದು ದೃಢಪಟ್ಟಿದೆ. ಶೇ 60 ರಷ್ಟು ರೋಗಿಗಳಲ್ಲಿ ಮಧುಮೇಹ, ಶೇ 54 ರಷ್ಟು ಮಂದಿಯಲ್ಲಿ ಅಧಿಕ ರಕ್ತದೊತ್ತಡ, ಶೇ 33 ರಷ್ಟು ಮಂದಿ ಧೂಮಪಾನಿಗಳು ಹಾಗೂ ಶೇ 35 ರಷ್ಟು ಮಂದಿ ಕೊಲೆಸ್ಟ್ರಾಲ್ ಸಮಸ್ಯೆ ಹೊಂದಿದವರಾಗಿದ್ದಾರೆ' ಎಂದು ಡಾ.ಬಿ. ದಿನೇಶ್ ತಿಳಿಸಿದ್ದಾರೆ.

'ಎಷ್ಟೋ ಹೃದ್ರೋಗಿಗಳಿಗೆ ಆಂಜಿಯೋಗ್ರಾಂ ಪರೀಕ್ಷೆ ನಡೆಸಿದ ಬಳಿಕ ಸ್ಟೆಂಟ್ ಅಳವಡಿಕೆಗೆ ಶಿಫಾರಸು ಮಾಡಿದರೂ, ಹಣದ ಕೊರತೆಯಿಂದ ಸ್ಟೆಂಟ್ ಅಳವಡಿಕೆ ಮಾಡಿಕೊಳ್ಳಲು ನಿರಾಕರಿಸುತ್ತಾರೆ. ಆದ್ದರಿಂದ ರೋಗಿಗಳ ಆರ್ಥಿಕ ಪರಿಸ್ಥಿತಿ ಅವಲೋಕಿಸಿ, ಕೆಲವರಿಗೆ ಉಚಿತವಾಗಿ ಸ್ಟೆಂಟ್ ಅಳವಡಿಸಲಾಗಿದೆ' ಎಂದು ತಿಳಿಸಿದ್ದಾರೆ.

'ಡಾ.ಜಿ. ಸುಬ್ರಮಣಿ ಅವರ ಸಹಕಾರದಿಂದ ಸ್ಟೆಂಟ್ ಅಳವಡಿಕೆ ಸಾಕಾರವಾಗುತ್ತಿದೆ. ಮುಂದಿನ ವರ್ಷವೂ ಆಂಜಿಯೋಪ್ಲಾಸ್ಟಿ ಕಾರ್ಯಾಗಾರ ನಡೆಯಲಿದ್ದು, ಆರ್ಥಿಕವಾಗಿ ಹಿಂದುಳಿದ ಹೃದ್ರೋಗಿಗಳು ಇದರ ಪ್ರಯೋಜನ ಪಡೆದುಕೊಳ್ಳಬೇಕು' ಎಂದು ಹೇಳಿದ್ದಾರೆ.

ನಗರದಲ್ಲಿ ಇಂದು

ಆರ್ಗ್ಯಾನಿಕ್ ಸಂತೆ: ಅತಿಥಿಗಳು: ಉದಯ್ ಶಂಕರ್, ಮೇಘಾ, ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಬೆಳಿಗ್ಗೆ 10

ಯುವ ದಸರಾ–2025: ಸ್ಟ್ರೀಟ್ ಹಬ್ಬ, ಆಯೋಜನೆ: ಯುವಕ ಸಂಘ, ಸ್ಥಳ: 10 ಮೇನ್, ನಾಲ್ಕನೇ ಬ್ಲಾಕ್, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, ಬೆಳಿಗ್ಗೆ 10.30

ಬಡಗುತಿಟ್ಟು ಪೌರಾಣಿಕ ಯಕ್ಷೋತ್ಸವ: ಅತಿಥಿಗಳು: ಶ್ರೀಪಾದ ಹೆಗಡೆ, ಸುಧೀಂದ್ರ ಭಾರದ್ವಾಜ್, ಅಧ್ಯಕ್ಷತೆ: ಶಿವರಾಮ ಶೆಟ್ಟಿ ತಲ್ಲೂರು, 'ಸಾರ್ಥಕ ಸಾಧಕ' ಪ್ರಶಸ್ತಿ ಸ್ವೀಕರಿಸುವವರು: ಮಂಜುನಾಥ ಪ್ರಭು, ಆಯೋಜನೆ: ಯಕ್ಷಸಿಂಚನ ಟ್ರಸ್ಟ್ ಬೆಂಗಳೂರು, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಮಧ್ಯಾಹ್ನ 3

'ಕಚ ದೇವಯಾನಿ' ತಾಳಮದ್ದಳೆ: ಆಯೋಜನೆ: ನಿರ್ಮಾಣ್ ಯಕ್ಷ ಬಳಗ, ಸ್ಥಳ: ಶ್ರೀರಾಮಾಶ್ರಮ, ಗಿರಿನಗರ, ಮಧ್ಯಾಹ್ನ 3

'ದಾದಾಭಾಯಿ ನವರೋಜಿ ಅವರ ದ್ವಿ ಶತಮಾನೋತ್ಸವ' ಉಪನ್ಯಾಸ, ಸಂವಾದ: ಭಾಗವಹಿಸುವವರು: ರಘುನಾಥ್ ಕೃಷ್ಣಮಾಚಾರ್, ಸುಧೀಂದ್ರ ಬುಧ್ಯ, ಕೆ. ಸತ್ಯನಾರಾಯಣ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಆರ್.ಟಿ. ನಗರ, ಸ್ಥಳ: ತರಳಬಾಳು ಮಿನಿ ಸಭಾಂಗಣ, ತರಳಬಾಳು ಕೇಂದ್ರ, ಬಿಡಿಎ ಕಾಂಪ್ಲೆಕ್ಸ್ ಬಳಿ, ಆರ್.ಟಿ. ನಗರ, ಸಂಜೆ 4

ವಿಶೇಷ ಪ್ರವಚನ: ಕೃಷ್ಣರಾಮನ್, ಆಯೋ ಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಬೃಂದಾವನ, ಕಾಡುಗೋಡಿ, ಸಂಜೆ 4

ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ಅಂಗವಾಗಿ 18ನೇ ಸಾಂಸ್ಕೃತಿಕ ಸಿಂಚನ: ಉದ್ಘಾಟನೆ: ಕೆ.ಎನ್. ಫಣೀಂದ್ರ, ಅಧ್ಯಕ್ಷತೆ: ಗಂಡಸಿ ಸದಾನಂದಸ್ವಾಮಿ, ಅತಿಥಿಗಳು: ಮಂಜುನಾಥ್ ಬಾಬು, ಟಿ. ಶಿವಕುಮಾರ್ ನಗರ್‌ನವಿಲೆ, ಅನ್ಮೋಲ್ ವಿಜಯ ಭಟ್ಕಲ್, ರೂಪಹೃಷಿಕೇಶ್, ವೀರಭದ್ರ ಸ್ವಾಮಿ, ಆಯೋಜನೆ: ಇದು ನಿಮ್ಮ ವಾಹಿನಿ ಕಲಾ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

ಕರ್ನಾಟಕ ಶಾಸ್ತ್ರೀಯ ಸಂಗೀತ: ಗಾಯನ: ಎಂ. ದೀಪಿಕಾ, ಎಂ. ಧನ್ಯಶ್ರೀ, ಪಿಟೀಲು: ಅಭಯ್ ಸಂಪಿಗೆತಾಯ, ಮೃದಂಗ: ಎಚ್. ಪ್ರವೀಣ್, ಆಯೋಜನೆ: ವೆಂಕಟೇಶ ಸಂಗೀತ ಸಭಾ ಟ್ರಸ್ಟ್, ಸ್ಥಳ: ಚಿಕ್ಕಲ್ಲಸಂದ್ರ, ಸಂಜೆ 5.30

'ಸೂರ್ಯಪುತ್ರನ್' ನಾಟಕ ಪ್ರದರ್ಶನ: ಆಯೋಜನೆ: ಲಾಸ್ಯ ಕಲಾಕ್ಷೇತ್ರ, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಕೋಣನಕುಂಟೆ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. CAO/CN/BNC/139/2025, ದಿನಾಂಕ: 04.09.2025 ಗೆ ತಿದ್ದುಪಡಿ ಸಂ. 1

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ಕಂಟೋನ್ಮೆಂಟ್ ಪ್ರದೇಶದಲ್ಲಿ ವಿದ್ಯುತ್ ಕಾಮಗಾರಿಗಳು ಸೇರಿದಂತೆ ಕಚೇರಿ, ಸರ್ವೀಸ್ ಬಿಲ್ಡಿಂಗ್‌ಗಳ (ಎಸ್+3 & ಜಿ+5) ನಿರ್ಮಾಣ ಮತ್ತು ವಿವಿಧ ಅಭಿವೃದ್ಧಿ ಕೆಲಸಗಳು. (ಸಂಯುಕ್ತ ಕಾಮಗಾರಿ). **ಉಪ ಕಾಮಗಾರಿ–1:** ಬೆಂಗಳೂರು ಕಂಟೋನ್ಮೆಂಟ್ (ಬಿಎನ್‌ಸಿ) ನಿಲ್ದಾಣದಲ್ಲಿ ಆರ್‌ಆರ್‌ಬಿ ಕಚೇರಿ ಕಟ್ಟಡ (ಎಸ್+3) ನಿರ್ಮಾಣ. **ಉಪ ಕಾಮಗಾರಿ–2:** ಬೆಂಗಳೂರು ಕಂಟೋನ್ಮೆಂಟ್ (ಬಿಎನ್‌ಸಿ) ನಿಲ್ದಾಣದಲ್ಲಿ ಜಿಯೊ ಟೆಕ್ ಲ್ಯಾಬ್, ಎಸ್‌ಎಸ್‌ಇ/ಡಬ್ಲ್ಯೂ/ಬಿಎನ್‌ಸಿ (ಓಎಲ್) ಕಚೇರಿ, ಎಸ್‌ಎಸ್‌ಇ/ಹೆಚ್‌ಕ್ಯೂ/ಸಿಎನ್/ಬಿಎನ್‌ಸಿ ಕಚೇರಿ, ಮೇಲ್ವಿಚಾರಕರ ವಿಶ್ರಾಂತಿ ಗೃಹ ಮತ್ತು ಜಿ+5 ರಚನೆಯಂತೆ ಕ್ಯಾಂಟೀನ್‌ನ ನಿರ್ಮಾಣ. **ಉಪ ಕಾಮಗಾರಿ–3:** ಬೆಂಗಳೂರು ಕಂಟೋನ್ಮೆಂಟ್ (ಬಿಎನ್‌ಸಿ) ನಿಲ್ದಾಣದ ಹೊರಾಂಗಣದಲ್ಲಿ ಬಿಟ್ಯುಮೆನ್ ರಸ್ತೆ, ಗ್ರೌಂಡ್, ಕಾಂಪೌಂಡ್, ಪೋರ್ಟಾ ಕ್ಯಾಬಿನ್ ಮತ್ತು ವರ್ಕ್ ಸ್ಟೇಷನ್‌ಗಳಂತಹ ವಿವಿಧ ಕಾಮಗಾರಿಗಳು. (ಟೆಂಡರು ಉಲ್ಲೇಖ ಸಂ.: **BNC-REDEV-MISC-WORKS**)	ರೂ. 16,07,82,205/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ	
ಪ್ರಸ್ತುತ	ಪರಿಷ್ಕೃತ
26.09.2025, 15:00 ಗಂಟೆಯವರೆಗೆ	10.10.2025

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ ಇಂಜಿನಿಯರ್/ನಿರ್ಮಾಣ/ಕಾಮಗಾರಿ/ಬೆಂಗಳೂರು ದಂಡು

PUB/487/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ನಗರಸಭಾ ಕಾರ್ಯಾಲಯ, ರಾಮನಗರ

ಬೆಂಗಳೂರು ದಕ್ಷಿಣ ಜಿಲ್ಲೆ – 562159. e-mail: ka.ramanagara.cmc@gmail.com

ಸಂ.: ನಸರಾ/ತಾ.ವಿ./ಸ.ಅ/ಟೆಂ./ಸಿ.ಆರ್./52/2025–26 ದಿನಾಂಕ: 20.09.2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ರಾಮನಗರ ನಗರಸಭೆಯ ವಿವಿಧ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಯ ಟೆಂಡರ್‌ಗಳನ್ನು ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical qualification criteria) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ಅಭಿಯಂತರರ ಶಾಖೆಯಿಂದ ಪಡೆಯಬಹುದು. ಈ ಕೆಳಕಂಡಂತೆ ನಿಗಧಿಪಡಿಸಿದ ಇ.ಎಂ.ಡಿ.ಯನ್ನು ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ.ಯು ಟೆಂಡರ್‌ನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 90 ದಿನಗಳವರೆಗೆ ಮಾನ್ಯತೆ ಇರತಕ್ಕದ್ದು.

ಪ್ಯಾಕೇಜ್ ಸಂಖ್ಯೆ	ಇಂಡೆಂಟ್ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)	ಟೆಂಡರ್ ಫಾರಂ ಶುಲ್ಕ (ರೂ. ಗಳಲ್ಲಿ)	ಕೆಲಸ ಪೂರ್ಣಗೊಳಿಸುವ ಅವಧಿ
1	DMA/2025-26/BD/WORK_INDENT 49458	45.20	90,400/-	As per KPPP	90 ದಿನ
2	DMA/2025-26/OW/WORK_INDENT 49304	17.85	44,625/-		30 ದಿನ
3	DMA/2025-26/OW/WORK_INDENT49301	23.55	47,100/-		30 ದಿನ

1) ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 06.10.2025 ರಂದು ಸಂಜೆ: 5.30 ಗಂಟೆವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 08.10.2025 ರಂದು ಬೆಳಿಗ್ಗೆ: 11.00 ಗಂಟೆಗೆ.** 3) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 10.10.2025 ರಂದು ಬೆಳಿಗ್ಗೆ 11.00 ಗಂಟೆಗೆ.**

ಸಹಿ/– **ಪೌರಾಯುಕ್ತರು**, ನಗರಸಭೆ, ರಾಮನಗರ

DIPR/BSD/353/SA/2025-26

ಕರ್ನಾಟಕ ಸರ್ಕಾರದ ಸಚಿವಾಲಯ

ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು.

ಸಂಖ್ಯೆ: ಮಮಇ 108 ರಾಮಆ 2025 ದಿನಾಂಕ: 18.09.2025

ಟೆಂಡರ್ ಪ್ರಕಟಣೆ

ಬಾಲ ಭವನದ ಆವರಣದ ನಿಗಧಿತ ಜಾಗದಲ್ಲಿ ಸಾರ್ವಜನಿಕರಿಗೆ / ಮಕ್ಕಳಿಗೆ ಊಟ ಮತ್ತು ಉಪಹಾರ ಒದಗಿಸಲು ಕ್ಯಾಂಟೀನ್ ಮತ್ತು ಅಂಗಡಿ ಮಳಿಗೆಗಳನ್ನು ನಡೆಸಲು ಆಸಕ್ತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮದಂತೆ ವಾರ್ಷಿಕ ಗುತ್ತಿಗೆ ಆಧಾರದಲ್ಲಿ ಒಂದು ವರ್ಷದ ಅವಧಿಗೆ ನಡೆಸಲು ಅರ್ಹ ಬಿಡ್ಡುದಾರರಿಂದ ಟೆಕ್ನಿಕಲ್ ಮತ್ತು ಆರ್ಥಿಕ ಬಿಡ್ ನೀಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ (KPPP) ಕಾಯ್ದೆ 1999 ನಿಯಮಗಳು 2000 ಪ್ರಕಾರ e-Procurement ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವಿಳಾಸ https://kppp.karnataka.gov.in ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: **31.10.2025 ಮಧ್ಯಾಹ್ನ 2.00 ಗಂಟೆಗೆ.** ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **03.11.2025 ಸಂಜೆ 4.00 ಗಂಟೆಗೆ** ಹಾಗೂ ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ: **05.11.2025 ಸಂಜೆ 4.00 ಗಂಟೆಗೆ.** ಹೆಚ್ಚಿನ ಮಾಹಿತಿಯನ್ನು ಬಾಲ ಭವನ ಸೊಸೈಟಿ, ಕಬ್ಬನ್ ಪಾರ್ಕ್, ಬೆಂಗಳೂರು ಈ ಕಛೇರಿಯಿಂದ ಪಡೆಯಬಹುದು.

ಸಹಿ/–

(ಮುರಳೀಧರ ಎಸ್.ತಳ್ಳಿಕೇರಿ)

ಸರ್ಕಾರದ ಉಪಕಾರ್ಯದರ್ಶಿ–2 ಹಾಗೂ ರಾಜ್ಯ ಟೆಂಡರ್ ಬುಲೆಟಿನ್ ಅಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/2907/ಎಂಎಎ/25–26

1,478 ರೌಡಿಗಳ ಮನೆ ಮೇಲೆ ದಾಳಿ

ರೌಡಿಗಳ ಚಟುವಟಿಕೆ ನಿಯಂತ್ರಿಸಲು ನಗರ ಪೊಲೀಸರಿಂದ ಕ್ರಮ

ರೌಡಿಗಳಿಗೆ ಎಚ್ಚರಿಕೆ ನೀಡಿದ ಪೊಲೀಸರು (ಎಡ ಚಿತ್ರ). ರೌಡಿಗಳ ಮನೆಗಳಲ್ಲಿ ಪೊಲೀಸರು ಪರಿಶೀಲನೆ ನಡೆಸಿದರು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಗರದ 11 ಉಪ ವಿಭಾಗಗಳ ಕೆಲವು ಬಡಾವಣೆಗಳಲ್ಲಿ ನೆಲಸಿರುವ ರೌಡಿಗಳ ಮನೆಗಳ ಮೇಲೆ ಶುಕ್ರವಾರ ತಡರಾತ್ರಿ ದಿಢೀರ್ ದಾಳಿ ನಡೆಸಿದ ಪೊಲೀಸರು, ರೌಡಿಗಳಿಗೆ ಬಿಸಿ ಮುಟ್ಟಿಸಿದ್ದಾರೆ. ಮುಂದಿನ ದಿನಗಳಲ್ಲಿ ರೌಡಿ ಚುಟುವಟಿಕೆಗಳಲ್ಲಿ ಭಾಗಿ ಆಗಬಾರದು ಎಂದು ಸೂಚನೆ ನೀಡಿದ್ದಾರೆ.

1,478 ರೌಡಿಗಳ ಮನೆಗಳ ಮೇಲೆ ಆಯಾ ಠಾಣೆಯ ಪೊಲೀಸರು ದಾಳಿ ನಡೆಸಿದ್ದಾರೆ. ಪದೇ ಪದೇ ಅಪರಾಧಗಳಲ್ಲಿ ತೊಡಗುವ ಎಂಒಬಿಗಳ (ಅಪರಾಧ ಹಿನ್ನೆಲೆಯುಳ್ಳವರು) 165 ಮನೆಗಳ ಮೇಲೆ ದಾಳಿ ನಡೆಸಿ, ಪರಿಶೀಲನೆ ನಡೆಸಲಾಗಿದೆ ಎಂದು ಪೊಲೀಸರು ಹೇಳಿದರು.

ಕಾರ್ಯಾಚರಣೆ ವೇಳೆ 124 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ನ್ಯಾಯಾಲಯ ಹಾಗೂ ಹಿರಿಯ ಅಧಿಕಾರಿಗಳ ಅನುಮತಿ ಪಡೆದು ಕೆಲವು ರೌಡಿಗಳನ್ನು ಗಡಿಪಾರು ಮಾಡಲಾಗಿತ್ತು. ಆ ಪೈಕಿ ಮೂವರು ನಗರಕ್ಕೆ ವಾಪಸ್ ಬಂದು ನೆಲಸಿದ್ದು ಕಂಡುಬಂತು. ಅವರ ಮೇಲೆ ಮತ್ತೆ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ಸರಗಳ್ಳತನ, ದರೋಡೆ ಸೇರಿ ಸಣ್ಣಪುಟ್ಟ ಅಪರಾಧ ಚಟುವಟಿಕೆಗಳು ಹೆಚ್ಚುತ್ತಿವೆ ಎಂಬ ದೂರು ಬಂದಿತ್ತು. ಅಪರಾಧ ಚಟುವಟಿಕೆಗಳಲ್ಲಿ ರೌಡಿಗಳು ಭಾಗಿ ಆಗುತ್ತಿರುವ ಬಗ್ಗೆಯೂ ಪೊಲೀಸರಿಗೆ ಮಾಹಿತಿ ಬಂದಿತ್ತು. ರೌಡಿಗಳ ಚಟುವಟಿಕೆ ನಿಯಂತ್ರಿಸಲು ಹಾಗೂ ಅಪರಾಧ ಹಿನ್ನೆಲೆಯುಳ್ಳವರ ಮೇಲೆ ನಿಗಾ ವಹಿಸುವಂತೆ ಹಿರಿಯ ಅಧಿಕಾರಿಗಳು ಸೂಚನೆ ನೀಡಿದ್ದರು. ಸೂಚನೆಯ ಬೆನ್ನಲ್ಲೇ ಶುಕ್ರವಾರ ತಡರಾತ್ರಿ ನಗರದಾದ್ಯಂತ ಹಲವು ರೌಡಿಶೀಟರ್‌ಗಳ ಮನೆಗಳ ಮೇಲೆ ನಗರ ಪೊಲೀಸರು ದಿಢೀರ್ ದಾಳಿ ನಡೆಸಿದ್ದರು ಎಂದು ಗೊತ್ತಾಗಿದೆ.

ಹಲಸೂರು, ಬಾಣಸವಾಡಿ, ಇಂದಿರಾನಗರ, ಹೆಣ್ಣೂರು, ರಾಮಮೂರ್ತಿನಗರ, ಭಾರತಿನಗರ, ಶಿವಾಜಿನಗರ, ಆಡುಗೋಡಿ, ಕುಮಾರಸ್ವಾಮಿ ಲೇಔಟ್, ತಿಲಕ್ ನಗರ ಸೇರಿ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯ ರೌಡಿಗಳ ಮನೆಗಳ ಮೇಲೆ ಈ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ.

ಈಶಾನ್ಯ, ಉತ್ತರ, ಪೂರ್ವ, ಪಶ್ಚಿಮ, ಎಲೆಕ್ಟ್ರಾನಿಕ್ ಸಿಟಿ, ಆಗ್ನೇಯ, ನೈರುತ್ಯ, ಕೇಂದ್ರ, ವಾಯವ್ಯ, ವೈಟ್‌ಫೀಲ್ಡ್ ಹಾಗೂ ದಕ್ಷಿಣ ಉಪ ವಿಭಾಗದ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಲಾಯಿತು ಎಂದು ಪೊಲೀಸ್ ಅಧಿಕಾರಿಗಳು ಹೇಳಿದರು.

ನಗರದ ಎಲ್ಲಾ ವಿಭಾಗಗಳ ಉಪ ವಿಭಾಗಗಳಲ್ಲಿ ಎಸಿಪಿಗಳ ನೇತೃತ್ವದಲ್ಲಿ ಮನೆಗಳು, ಬಾರ್‌ಗಳ ಮೇಲೆ ದಿಢೀರ್ ದಾಳಿ ನಡೆಸಲಾಗಿದ್ದು, ಶೋಧ ನಡೆಸಲಾಗಿದೆ. ರೌಡಿಶೀಟರ್‌ಗಳ ಪ್ರಸ್ತುತ ಕೆಲಸ, ಅವರ ಆದಾಯದ ಮೂಲ ಸೇರಿ ಮತ್ತಿತರ ವಿವರಗಳನ್ನು ಕಲೆ ಹಾಕಲಾಗಿದ್ದು, ಅಪರಾಧ ಕೃತ್ಯಗಳಲ್ಲಿ ಭಾಗಿ ಆಗದಂತೆ ಅವರಿಗೆ ಎಚ್ಚರಿಕೆಯನ್ನೂ ನೀಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಿಎಸ್‌ಐ, ಕಾನ್‌ಸ್ಟೆಬಲ್ ಮೇಲೆ ಹಲ್ಲೆ: ಇಬ್ಬರ ಬಂಧನ

ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ಪರಿಶೀಲನೆಗೆ ತೆರಳಿದ್ದ ವೇಳೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಮತ್ತು ಕಾನ್‌ಸ್ಟೆಬಲ್ ಮೇಲೆ ಹಲ್ಲೆ ನಡೆಸಿದ್ದ ಇಬ್ಬರನ್ನು ಚಂದ್ರಾಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕೆ.ಜಿ.ನಗರ ನಿವಾಸಿ ಮೋನಿಷ್ (28) ಮತ್ತು ಬಾಪೂಜಿನಗರ ನಿವಾಸಿ ವಿಶಾಲ್ (28) ಬಂಧಿತರು.

ಸೆ.19ರ ರಾತ್ರಿ ಚಂದ್ರಾಲೇಔಟ್ ವೆಸ್ಟ್ ವ್ಯೂ ಎಂಬ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ಪರಿಶೀಲನೆಗೆ ತೆರಳಿದ್ದ ವೇಳೆ ಪಿಎಸ್‌ಐ ರವೀಶ್ ಮತ್ತು ಕಾನ್‌ಸ್ಟೆಬಲ್ ಸಿದ್ದಪ್ಪಗೌಡ ಅವರ ಮೇಲೆ ಆರೋಪಿಗಳು ಹಲ್ಲೆ ನಡೆಸಿದ್ದರು. ಆರೋಪಿಗಳ ಪೈಕಿ ಮೋನಿಷ್ ಎಲ್ ಆ್ಯಂಡ್ ಟಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ವಿಶಾಲ್ ರಾಜಾಜಿನಗರದಲ್ಲಿ ಇರುವ ತರಬೇತಿ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ರೌಡಿಶೀಟರ್‌ಗಳ ಮನೆಗಳ ಮೇಲೆ ಶುಕ್ರವಾರ ರಾತ್ರಿ ಪೊಲೀಸರು ದಾಳಿ ನಡೆಸಿದ್ದರು. ಅದೇ ವೇಳೆ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಲ್ಲಿ ಪರಿಶೀಲನೆಯನ್ನೂ ನಡೆಸಲಾಗುತ್ತಿತ್ತು. ವೆಸ್ಟ್ ವ್ಯೂ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ಪಿಎಸ್‌ಐಗಳಾದ ರವೀಶ್, ಶ್ರೀಕಂಠಯ್ಯ, ಹೆಡ್ ಕಾನ್‌ಸ್ಟೆಬಲ್ ವಿನೋದ್ ಹಾಗೂ ಕಾನ್‌ಸ್ಟೆಬಲ್ ಸಿದ್ದಪ್ಪಗೌಡ ಅವರು ಪರಿಶೀಲನೆಗೆ ತೆರಳಿದ್ದರು. ಸಿದ್ದಪ್ಪಗೌಡ ಅವರು ಬಾರ್ ಒಳಗಿನ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿಯುತ್ತಿದ್ದರು. ಆಗ ಟೇಬಲ್ ಬಳಿ ಕುಳಿತು ಮದ್ಯ ಸೇವಿಸುತ್ತಿದ್ದ ಆರೋಪಿಗಳು, ವಿಡಿಯೊ ಮಾಡುತ್ತಿದ್ದನ್ನು ಪ್ರಶ್ನಿದ್ದರು.

ಸ್ಥಳದಲ್ಲಿದ್ದ ಪಿಎಸ್‌ಐ ರವೀಶ್ ಅವರು ‘ಇದು ನಿತ್ಯದ ವಿಶೇಷ ಕಾರ್ಯಾಚರಣೆ. ನಿಮಗೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ. ನೀವು ಆರಾಮಾಗಿ ಮದ್ಯ ಸೇವಿಸಿ’ ಎಂದು ಹೇಳಿದ್ದರು. ಆರೋಪಿಗಳ ಕೋಪ ತಣಿಯದೇ ಸಿದ್ದಪ್ಪಗೌಡ ಅವರ ಬಳಿಯಿದ್ದ ಮೊಬೈಲ್ ಕಸಿದುಕೊಂಡು ಹಲ್ಲೆ ನಡೆಸಿದ್ದಾರೆ. ಅದನ್ನು ಪ್ರಶ್ನಿಸಿದ ರವೀಶ್ ಅವರ ಮೇಲೂ ಹಲ್ಲೆ ನಡೆಸಿ, ಸಮವಸ್ತ್ರ ಹಿಡಿದು ಎಳೆದಾಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಅಡಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು. ಚಂದ್ರಾಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕನ್ನಡ ಜಾಗೃತ ಸಮಿತಿಗೆ ಹರಿಪ್ರಸಾದ್ ನೇಮಕ

ಯಲಹಂಕ: ಬೆಂಗಳೂರು ಜಿಲ್ಲಾ ಕನ್ನಡ ಜಾಗೃತ ಸಮಿತಿಯ ಸದಸ್ಯರನ್ನಾಗಿ ಎ.ಸಿ.ಹರಿಪ್ರಸಾದ್ ಅವರನ್ನು ನೇಮಕ ಮಾಡಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್ಲ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಅಮೆರಿಕಾ ಅಧ್ಯಕ್ಷರು ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುತ್ತಿದ್ದಾರೆ!

ಶನಿಮಹಾತ್ಮ ದೇವಸ್ಥಾನದಲ್ಲಿ ಕಳ್ಳತನ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಸೋಂಪುರ ಹೋಬಳಿಯ ಮಾಕೇನಹಳ್ಳಿಯ ಶನಿಮಹಾತ್ಮ ದೇವಸ್ಥಾನದಲ್ಲಿ ಬೆಳ್ಳಿ ವಿಗ್ರಹ ಹಾಗೂ ಹುಂಡಿ ಹಣ ಕಳವು ಮಾಡಲಾಗಿದೆ. ಕಳ್ಳತನ ಬಳಿಕ ಕಳ್ಳರು ವಸ್ತುಗಳ ಮೇಲೆ ಕಾರದ ಪುಡಿ ಎರಚಿದ್ದಾರೆ.

ಬೆಳಿಗ್ಗೆ ಪೂಜೆಗಾಗಿ ಅರ್ಚಕ ವಿನೋದ್ ಅವರು ದೇವಾಲಯದ ಬಾಗಿಲು ತೆರೆಯಲು ಬಂದಾಗ ಕಳ್ಳತನ ಮಾಡಿರುವುದು ಗೊತ್ತಾಗಿದೆ.

6 ಕೆ.ಜಿ. ತೂಕದ ಬೆಳ್ಳಿಯ ಉತ್ಸವ ಮೂರ್ತಿ, ಹುಂಡಿಯಲ್ಲಿ ಹಣ ಹಾಗೂ ಕಾಗೆ ಕೊರಳಲ್ಲಿದ್ದ ಬೆಳ್ಳಿ ಸರ ಹಾಗೂ ಇತರೆ ವಸ್ತುಗಳನ್ನು ಕಳವು ಮಾಡಿದ್ದಾರೆ. ವರ್ಷದ ಹಿಂದೆಯೂ ಹಣ ಮತ್ತು ವಸ್ತುಗಳನ್ನು ಕಳವು ಮಾಡಲಾಗಿತ್ತು.

ಸಿಸಿಟಿವಿ ಕ್ಯಾಮೆರಾ ಅಳವಡಿಸಲು ನಿರ್ಧರಿಸಲಾಗಿತ್ತು. ಅಷ್ಟರಲ್ಲಿ ಕಳ್ಳತನವಾಗಿದೆ ಎಂದು ಅರ್ಚಕ ವಿನೋದ್ ತಿಳಿಸಿದರು. ‘ಮಧುಗಿರಿ ರಸ್ತೆಗೆ ಹೊಂದಿಕೊಂಡಂತೆ ದೇವಾಲಯ ಇದೆ. ಅಪಾರ ಭಕ್ತರನ್ನು ಹೊಂದಿರುವ ದೇವಾಲಯದಲ್ಲಿ ಕಳ್ಳತನ ಆಗಿರುವುದು ನೋವು ತರಿಸಿದೆ’ ಎಂದರು ದೇವಾಲಯದ ಭಕ್ತ ಸಂತೋಷ್.

ದಾಬಸ್ ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳಕ್ಕೆ ಬೆರಳಚ್ಚು ತಜ್ಞರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಗೋದಾಮಿನಲ್ಲಿ ಕಾಣಿಸಿಕೊಂಡಿದ್ದ ಬೆಂಕಿ

ಗೋದಾಮಿನಲ್ಲಿ ಬೆಂಕಿ ಅವಘಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಟನ್‌ಪೇಟೆ ಮುಖ್ಯರಸ್ತೆಯ ಹೋಟೆಲ್ ಮಹಾವೀರ್ ಎದುರಿನ ಗೋದಾಮಿನಲ್ಲಿ ಶುಕ್ರವಾರ ರಾತ್ರಿ ಬೆಂಕಿ ಅವಘಡ ಸಂಭವಿಸಿ, ಅಲ್ಲಿದ್ದ ಕೆಲವು ವಸ್ತುಗಳು ಬೆಂಕಿಗೆ ಆಹುತಿಯಾಗಿವೆ.

ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಅವಘಡ ಸಂಭವಿಸಿದೆ ಎಂಬುದು ಕಂಡುಬಂದಿದೆ. ಕಾಟನ್‌ಪೇಟೆ ಹಾಗೂ ಉಪ್ಪಾರಪೇಟೆ ಠಾಣೆಯ ಪೊಲೀಸರು ಸ್ಥಳೀಯರ ಜತೆಗೆ ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸಲು ಯಶಸ್ವಿಯಾದರು.

ಶುಕ್ರವಾರ ರಾತ್ರಿ 9.30ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತು. ಘಟನೆಯಲ್ಲಿ ಯಾವುದೇ ಅಪಾಯ ಸಂಭವಿಸಿಲ್ಲ ಎಂದು ಸ್ಥಳೀಯರು ಹೇಳಿದರು.

ಠಾಣಾ ಜಾಮೀನಿನ ಮೇಲೆ ಆರೋಪಿ ಬಿಡುಗಡೆ

ವಿಡಿಯೊ ಹಂಚಿ ತಪ್ಪು ಮಾಹಿತಿ: ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಪ್ರದೇಶದಲ್ಲಿ ನಡೆದಿದ್ದ ಘಟನೆ ವಿಡಿಯೊವನ್ನು ‘ಬೆಂಗಳೂರಿನಲ್ಲಿ ರೌಡಿಗಳ ಪುಂಡಹಾಸ’ ಎಂಬುದಾಗಿ ಬರೆದು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದ ಯುವತಿಯನ್ನು ಪುಲಕೇಶಿನಗರ ಠಾಣೆಯ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಶಹಾ ಜಹಾನ್

ಕೋಣನಕುಂಟೆ ನಿವಾಸಿ ಶಹಾ ಜಹಾನ್ (36) ಎಂಬ ಯುವತಿಯನ್ನು ಬಂಧಿಸಿ, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ವಿಡಿಯೊ, ಫೋಟೊ ಹಾಗೂ ಸುದ್ದಿಗಳನ್ನು ತನ್ನ ಖಾತೆಯಲ್ಲಿ ಹಂಚಿಕೊಳ್ಳುತ್ತಿದ್ದರು. ಅದೇ ರೀತಿ ಉತ್ತರಪ್ರದೇಶದ ಕಾನ್ಪುರದಲ್ಲಿ ನಡೆದಿದ್ದ ಹಳೆಯ ಘಟನೆಯೊಂದರ ವಿಡಿಯೊವನ್ನು ‘ಬೆಂಗಳೂರಿನಲ್ಲಿ ರೌಡಿಗಳ ಪುಂಡಹಾಸ’ ಎಂಬ ಶೀರ್ಷಿಕೆ ಅಡಿ ಸೆ.6ರಂದು ಹಂಚಿಕೊಂಡಿದ್ದರು. ಸಾಮಾಜಿಕ ಜಾಲತಾಣಗಳ ನಿರ್ವಹಣಾ ವಿಭಾಗದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ, ವಿಡಿಯೊ ಪರಿಶೀಲನೆ ನಡೆಸಿದಾಗ ಅದು ಬೆಂಗಳೂರಿನಲ್ಲಿ ನಡೆದ ಘಟನೆ ವಿಡಿಯೊ ಅಲ್ಲ ಎಂಬುದು ಗೊತ್ತಾಗಿತ್ತು. ಬಳಿಕ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 132, 121, 352, 3(5) ಅಡಿ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಘಟನೆಯ ಕುರಿತು ಶಹಾ ಜಹಾನ್ ಸಹ ಸ್ಪಷ್ಟನೆ ನೀಡಿದ್ದು, ‘ಮತ್ತೊಬ್ಬರು ಹಂಚಿಕೊಂಡಿದ್ದ ವಿಡಿಯೊವನ್ನು ನಾನು ಜನಜಾಗೃತಿಯ ಉದ್ದೇಶದಿಂದ ಸಾಮಾಜಿಕ ಜಾಲತಾಣದಲ್ಲಿ ಮರುಹಂಚಿಕೊಂಡಿದ್ದೆ. ಮುಂದಿನ ದಿನಗಳಲ್ಲಿ ಈ ರೀತಿಯಾಗಿ ವಿಡಿಯೊ ಹಂಚಿಕೊಳ್ಳುವುದಿಲ್ಲ’ ಎಂದು ತಿಳಿಸಿದ್ದಾರೆ.

ಐವರು ಅತಿಥಿ ಉಪನ್ಯಾಸಕರ ವಿರುದ್ಧ ಎಫ್‌ಐಆರ್

ಅತಿಥಿ ಉಪನ್ಯಾಸಕಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದಡಿ ಐವರು ಅತಿಥಿ ಉಪನ್ಯಾಸಕರ ವಿರುದ್ಧ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಗೆ ಸೇರುವ ರಾಮನಗರದ ಸ್ನಾತಕೋತ್ತರ ಕೇಂದ್ರದಲ್ಲಿ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿರುವ ಬಿ.ಕೆ. ರಾಮಾಂಜನೇಯ, ರಂಗಸ್ವಾಮಿ, ಕೆ.ಜಗನ್ನಾಥ್, ಶಿವರಾಮ್ ಸೇರಿ ಐವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘30 ವರ್ಷದ ಅತಿಥಿ ಉಪನ್ಯಾಸಕಿ ನೀಡಿದ ದೂರಿನ ಮೇರೆಗೆ ಜ್ಞಾನಭಾರತಿ ಠಾಣೆಯಲ್ಲಿ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ. ಘಟನಾ ಸ್ಥಳ ಆಧರಿಸಿ, ರಾಮನಗರ ಜಿಲ್ಲೆಯ ಐಜೂರು ಪೊಲೀಸ್ ಠಾಣೆಗೆ ಪ್ರಕರಣವನ್ನು ವರ್ಗಾವಣೆ ಮಾಡಲಾಗಿದೆ. ಅಲ್ಲಿನ ಪೊಲೀಸರು ತನಿಖೆ ಮುಂದುವರೆಸಲಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಆರೋಪಿಗಳು ಮಾನಸಿಕ ಹಿಂಸೆ ನೀಡಿ, ಅಪಪ್ರಚಾರ ಮಾಡುತ್ತಿದ್ದರು. ಅವರ ವಿರುದ್ಧ ಈ ಹಿಂದೆಯೂ ದೂರು ನೀಡಿದ್ದೆ. ದೂರು ನೀಡಿದ ಮೇಲೆ, ನನ್ನ ಮೇಲೆ ಇಲ್ಲಸಲ್ಲದ ಆರೋಪ ಮಾಡಿ ಅತಿಥಿ ಉಪನ್ಯಾಸಕ ಹುದ್ದೆಯಿಂದ ತೆಗೆಸಿ ಹಾಕಿದ್ದರು’ ಎಂದು ಉಪನ್ಯಾಸಕಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಆರೋಪಿಗಳು ನನ್ನ ವಿಡಿಯೊ ಮಾಡುತ್ತಿದ್ದರು. ವಿಡಿಯೊ ಮಾಡುತ್ತಿರುವುದಕ್ಕೆ ಆಕ್ಷೇಪಿಸಿ ಮೊಬೈಲ್ ಕಸಿದುಕೊಂಡು ನೋಡಿದ್ದೆ. ನನ್ನ ಬಗ್ಗೆ ಅಸಹ್ಯ ಹಾಗೂ ಲೈಂಗಿಕವಾಗಿ ಬಳಸಿಕೊಳ್ಳುವುದರ ಬಗ್ಗೆ ಮಾತನಾಡಿರುವುದು ರೆಕಾರ್ಡ್ ಆಗಿತ್ತು. ಆ ಬಗ್ಗೆ ಪ್ರಶ್ನೆ ಮಾಡಿದ್ದೆ. ಆಗ ಅವಾಚ್ಯ ಶಬ್ದಗಳಿಂದ ನಿಂದಿಸಿ, ನೀನು ಹಳ್ಳಿಯಿಂದ ಬಂದು ಕೆಲಸ ಮಾಡುತ್ತೀಯಾ. ನೀನು, ನಾವು ಹೇಳಿದ ಹಾಗೇ ಕೇಳಬೇಕು. ಹೇಳಿದ ಜಾಗಕ್ಕೆ ಬಂದು ನಮ್ಮೆಲ್ಲರಿಗೂ ದೈಹಿಕ ಸುಖ ನೀಡಬೇಕು. ಇಲ್ಲವಾದರೆ ನಿನ್ನನ್ನು ಅಪಹರಣ ಮಾಡಿ ನಾವೆಲ್ಲರೂ ಎಂಜಾಯ್ ಮಾಡುತ್ತೇವೆ. ಕತ್ತರಿಸಿ ಬಿಸಾಡುತ್ತೇವೆ ಎಂಬುದಾಗಿ ಬೆದರಿಕೆ ಹಾಕಿದ್ದರು’ ಎಂದು ಉಪನ್ಯಾಸಕಿ ದೂರು ನೀಡಿದ್ದರು.

ಲೈಂಗಿಕ ಕಿರುಕುಳ ಮತ್ತು ಮಾನಸಿಕ ಕಿರಕುಳ ನೀಡಿದ ಐವರ ವಿರುದ್ಧ ಕಾನೂನು ಕ್ರಮಕೈಗೊಳ್ಳುವಂತೆ ಮಹಿಳೆ ದೂರು ನೀಡಿದ್ದಾರೆ ಎಂದು ಪೊಲೀಸರು ಹೇಳಿದರು.

ಜನರ ಮೇಲೆ ಮಾರಕಾಸ್ತ್ರ ಬೀಸುತ್ತಿದ್ದ 6 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ನಡೆದು ತೆರಳುತ್ತಿದ್ದ ಸಾರ್ವಜನಿಕರ ಮೇಲೆ ಮಾರಕಾಸ್ತ್ರ ಬೀಸುತ್ತಿದ್ದ ಆರು ಮಂದಿಯನ್ನು ಚಂದ್ರಾಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಾಮಾಕ್ಷಿಪಾಳ್ಯ ಕಾವೇರಿಪುರದ ಮೂರನೇ ಕ್ರಾಸ್ ನಿವಾಸಿ ಎಸ್.ಅರುಣ್ (19), ಕೆಂಗುಂಟೆ ಅಂಬೇಡ್ಕರ್ ಕ್ರಾಸ್ ಬಳಿಯ ಮೂರನೇ ಕ್ರಾಸ್ ನಿವಾಸಿ ಪ್ರಜ್ವಲ್ (18) ಮೂಡಲಪಾಳ್ಯ ಗಾಳಿ ಆಂಜನೇಯ ದೇವಸ್ಥಾನದ ಬಳಿಯ ನಿವಾಸಿ ರವಿ (19), ಕಾಮಾಕ್ಷಿಪಾಳ್ಯ ಒಂದನೇ ಮುಖ್ಯರಸ್ತೆ, ಎರಡನೇ ಕ್ರಾಸ್‌ನ ನಿವಾಸಿ ದಿಲೀಪ್ ಅಲಿಯಾಸ್ ಡಾಲಿ (20) ಸೇರಿ ಆರು ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಸೆ.13ರಂದು ಮುಂಜಾನೆ ಆರು ಮಂದಿ ಆರೋಪಿಗಳು ಮೂರು ದ್ವಿಚಕ್ರ ವಾಹನದಲ್ಲಿ ತಿರುಗಾಟ ನಡೆಸುತ್ತಾ ರಸ್ತೆಯಲ್ಲಿ ನಡೆದು ತೆರಳುತ್ತಿದ್ದವರ ಮೇಲೆ ಮಾರಕಾಸ್ತ್ರ ಬೀಸುತ್ತಿದ್ದರು. ಬಸವೇಶ್ವರನಗರದ ರಸ್ತೆಬದಿಯಲ್ಲಿ ನಿಲುಗಡೆ ಮಾಡಿದ್ದ ಮೂರು ಕಾರುಗಳ ಗ್ಲಾಸ್ ಒಡೆದು ಹಾಕಿದ್ದರು. ಮಾಲೀಕರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಆರೋಪಿಗಳ ವಿರುದ್ಧ ಕೊಲೆಯತ್ನ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಎರಡು ಆಯುಧಗಳು ಹಾಗೂ ಮೂರು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕಾರ್ಯಕ್ರಮ: ಮಾಹಿತಿ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಲೇಜಿನಲ್ಲಿ ಆಯೋಜಿಸುವ ಕಾರ್ಯಕ್ರಮಗಳ ಕುರಿತು ಪೊಲೀಸರಿಗೆ ಮೊದಲೇ ಮಾಹಿತಿ ನೀಡಬೇಕು’ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಸೂಚಿಸಿದರು.

ಸೀಮಾಂತ್ ಕುಮಾರ್

ನಗರದಲ್ಲಿ ಶನಿವಾರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಮೊದಲೇ ಪೊಲೀಸರಿಗೆ ಮಾಹಿತಿ ನೀಡುವಂತೆ ಆಡಳಿತ ಮಂಡಳಿಯವರಿಗೆ ಸೂಚಿಸುತ್ತಿದ್ದೇವೆ’ ಎಂದರು.

‘ಆವಲಹಳ್ಳಿಯಲ್ಲಿ ನಡೆದಿದ್ದ ಗಲಾಟೆ ಬಳಿಕ 8 ಮಂದಿಯನ್ನು ಆಡಳಿತ ಮಂಡಳಿಯವರು ನಿರ್ಬಂಧಿಸಿದ್ದಾರೆ. ಕಾನೂನು ಕ್ರಮ ಸಹ ಕೈಗೊಳ್ಳಲಾಗಿದೆ. ಆದರೆ, ಮುಂದಿನ ದಿನಗಳಲ್ಲಿ ಈ ರೀತಿ ಘಟನೆಗಳು ಮರುಕಳಿಸಬಾರದು. ನಗರದ ಯಾವುದೇ ಕಾಲೇಜಿನಲ್ಲಿ ಆಯೋಜನೆ ಆಗುವ ಕಾರ್ಯಕ್ರಮಗಳ ಕುರಿತು ಪೊಲೀಸರೊಂದಿಗೆ ಮೊದಲೇ ಚರ್ಚಿಸಿ, ಕಾಲಮಿತಿ ನಿಗದಿಪಡಿಸಬೇಕು’ ಎಂದರು.

ಆವಲಹಳ್ಳಿ ವ್ಯಾಪ್ತಿಯಲ್ಲಿರುವ ನರ್ಸಿಂಗ್ ಕಾಲೇಜ್‌ನಲ್ಲಿ ಬುಧವಾರ ಆಯೋಜಿಸಿದ್ದ ಓಣಂ ಸಂಭ್ರಮಾಚರಣೆ ವೇಳೆ ತೃತೀಯ ವರ್ಷದ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ನಡುವೆ ಗಲಾಟೆಯಾಗಿತ್ತು. ತಮಗೆ ಮಾಹಿತಿ ನೀಡದೇ ಓಣಂ ಆಯೋಜಿಸಿರುವುದನ್ನು ಹಿರಿಯ ವಿದ್ಯಾರ್ಥಿಗಳು ವಿರೋಧಿಸಿದ್ದರು. ಅಲ್ಲಿಂದ ಆರಂಭವಾದ ಗಲಾಟೆ ರಸ್ತೆಗಿಳಿದು ಬಡಿದಾಡಿಕೊಳ್ಳುವ ಹಂತಕ್ಕೆ ತಲುಪಿತ್ತು. ವಿದ್ಯಾರ್ಥಿಗಳು ಬಡಿದಾಟದ ದೃಶ್ಯಗಳು ಜಾಲತಾಣಗಳಲ್ಲಿ ಹರಿದಾಡಿತ್ತು. ಪರಸ್ಪರ ಹೊಡೆದಾಟ ನಡೆಸಿಕೊಂಡ ವಿದ್ಯಾರ್ಥಿಗಳನ್ನು ಠಾಣೆಗೆ ಕರೆಸಿ, ಎಚ್ಚರಿಕೆ ನೀಡಿ ಪೊಲೀಸರು ಕಳುಹಿಸಿದ್ದರು.

ಬಿಜೆಪಿ ರಾಷ್ಟ್ರೀಯ ವಕ್ತಾರ ಶಹಜಾದ್ ಪೂನಾವಾಲ ಆರೋಪ

‘ತುರ್ತುಪರಿಸ್ಥಿತಿ ಮನಸ್ಥಿತಿಯ ರಾಹುಲ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾ ಗಾಂಧಿ ಕಾಲದ ತುರ್ತು ಪರಿಸ್ಥಿತಿಯ ಮನಸ್ಥಿತಿಯಲ್ಲೇ (ಎಮರ್ಜೆನ್ಸಿ ಮೈಂಡ್‌ಸೆಟ್ ಆಫ್ ಇಂದಿರಾ) ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಇದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಶಹಜಾದ್ ಪೂನಾವಾಲ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಇಂದಿರಾ ಅವರ ನಿಕಟವರ್ತಿಯೊಬ್ಬರು ‘ಇಂದಿರಾ ಈಸ್ ಇಂಡಿಯಾ, ಇಂಡಿಯಾ ಈಸ್ ಇಂದಿರಾ’ ಎಂದಿದ್ದರು. ಲೋಕತಂತ್ರ, ಸಂವಿಧಾನಕ್ಕಿಂತ ಪರಿವಾರ ತಂತ್ರ ಮಿಗಿಲು ಎಂದು ಅವರು ಭಾವಿಸುತ್ತಾರೆ. ಚುನಾವಣೆಯಲ್ಲಿ ಸೋತರೆ ಆಯೋಗವನ್ನು, ನ್ಯಾಯಾಲಯದಲ್ಲಿ ಹಿನ್ನಡೆಯಾದರೆ ನ್ಯಾಯಾಂಗ ವ್ಯವಸ್ಥೆಯನ್ನು ದೂಷಿಸುತ್ತಾರೆ. ತೆಲಂಗಾಣ, ಜಮ್ಮು ಮತ್ತು ಕಾಶ್ಮೀರದಲ್ಲಿ ಅವರಿಗೆ ಸಮಸ್ಯೆ ಕಾಣುವುದಿಲ್ಲ. ಮಹಾರಾಷ್ಟ್ರದಲ್ಲಿ ಸೋತಾಗ ಸುಪ್ರೀಂಕೋರ್ಟ್‌ಗೆ ಹೋಗಿದ್ದರು ಎಂದು ಟೀಕಿಸಿದರು.

‘ರಾಹುಲ್ ಅವರು ಉಪರಾಷ್ಟ್ರಪತಿ ಚುನಾವಣೆಯಲ್ಲಿ ಮತ ಕಳವು ಕುರಿತು ಮಾತನಾಡುವ ಮೂಲಕ ತಮಿಳುನಾಡಿನಿಂದ ಆಯ್ಕೆಯಾದ ಉಪರಾಷ್ಟ್ರಪತಿ, ಅಲ್ಲಿನ ಜನರನ್ನು ಅವಮಾನಿಸಿದ್ದಾರೆ. ಮತ ಕಳವಿನ ಬಗ್ಗೆ ಮಾತನಾಡುವ ರಾಹುಲ್ ಗಾಂಧಿ ಅವರು, ನಂಜೇಗೌಡ, ಜಿ.ಪರಮೇಶ್ವರ ಅವರ ಆಡಿಯೊಗಳ ಬಗ್ಗೆ ಮಾತನಾಡಬೇಕು. ಆ ಆಡಿಯೊದಲ್ಲಿ ಪರಮೇಶ್ವರ ಅವರು ಕಟಾಕಟ್, ಕಟಾಕಟ್ ಎಂದು ಮತ ಹಾಕುತ್ತಿದ್ದ ಕುರಿತು ಮಾತನಾಡಿದ್ದಾರೆ. ಹಾಗೆಯೇ, ಶಶಿ ತರೂರ್, ಕೀರ್ತಿ ಆಜಾದ್ ಅವರ ವಿಡಿಯೊಗಳನ್ನೂ ನೋಡಬೇಕು. ಇಂದಿರಾ ಗಾಂಧಿಯವರು ಮತದಾನದಲ್ಲಿ ಅಕ್ರಮ ಎಸಗಿ ಶಿಕ್ಷೆಗೆ ಒಳಗಾಗಿದ್ದನ್ನು ನೆನಪಿಸಿಕೊಳ್ಳಬೇಕು’ ಎಂದರು.



> **ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿರುವುದು ಗುಂಡಿಗಳ ಮಾದರಿ ಸರ್ಕಾರ. ಹಗರಣಗಳ ಮೂಲಕ ಲೂಟಿ ನಡೆಸಿದ, ಎಲ್ಲ ಅಗತ್ಯ ವಸ್ತುಗಳ ಬೆಲೆ ಏರಿಸುತ್ತಿರುವ ಸರ್ಕಾರ**
>
> **ಶಹಜಾದ್ ಪೂನಾವಾಲ**
> ಬಿಜೆಪಿ ರಾಷ್ಟ್ರೀಯ ವಕ್ತಾರ

‘ನಮಸ್ತೆ ಸದಾ ವತ್ಸಲೆ ಹಾಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಬಳಿಕ ಕ್ಷಮೆ ಕೇಳಿಸಲಾಯಿತು. ಈಗ ಕೆಲವು ನಾಯಕರು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ (ಎಬಿವಿಪಿ) ಕಾರ್ಯಕ್ರಮಗಳಲ್ಲಿ ಭಾಗಹಿಸುವ ಮೂಲಕ ರಾಹುಲ್‌ಗೆ ಸಡ್ಡು ಹೊಡೆಯುತ್ತಿದ್ದಾರೆ’ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, ಮಾಜಿ ಸಂಸದ ಮುನಿಸ್ವಾಮಿ, ಶಾಸಕ ಸಿ.ಕೆ.ರಾಮಮೂರ್ತಿ, ರಾಜ್ಯ ವಕ್ತಾರರಾದ ಸುರಭಿ ಹೊದಿಗೆರೆ, ಆರ್ಥಿಕ ಪ್ರಕೋಷ್ಠದ ರಾಜ್ಯ ಸಂಚಾಲಕ ಪ್ರಶಾಂತ್, ರಾಜ್ಯ ಮಾಧ್ಯಮ ಸಂಚಾಲಕ ಕರುಣಾಕರ ಖಾಸಲೆ ಉಪಸ್ಥಿತರಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

ARVIND PROPERTIES
FOR FAITH AND RELIABILITY
We are HIRING
▪ TELE CALLERS
▪ EXECUTIVES
▪ TEAM LEADERS
Apply Now →
arvindproperties.contact@gmail.com
Freshers or min 1 year Exp. in Real estate sector
99986 08666
www.arvindproperties.com

WANTED
A Leading Layout Real Estate developer is looking for Experienced/ Retired / Senior / Independent capacity & 100% Dedicated Revenue/Legal/Advocate/ Liaison candidates for Bangalore office. Mail resumes to associates.blr10@gmail.com

Deccan International School
#11, 18th Main Rd, Brindavan Layout, Padmanabhanagar, Bengaluru, Karnataka 560061
JOB OPPORTUNITY
Positions open
- English Teacher:
  - Grades-ICSE High School
  - Masters with BEd
- French Teacher
  - Grades - Middle & High School
  - Graduate with relevant certification
- Cambridge Primary Teacher
  - Subjects - English, Maths, Science
  - Cambridge Trained teacher with BEd
- Librarian
  - B.Lib / M.Lib

Minimum 3 to 5 years of relevant experience is mandatory.
✓ Attractive compensation package commensurate with qualification & experience.
✓ We are equal opportunity employer.
Candidates are required to forward the CV with their photograph
work@deccan.edu.in

ADITYA GROUP OF INSTITUTIONS
Yelahanka, Bengaluru
Invites applications for the following posts:

ADITYA COLLEGE OF ENGINEERING & TECHNOLOGY
Kamakshipura, Yelahanka
Professor/ Associate Professor/ Assistant Professor
CSE, ISE, AIML & AIDS
Eligibility: As per AICTE/ VTU norms. Candidates with M.Tech/ Ph.D (preferred) in relevant disciplines. Freshers may also apply.

ADITYA BANGALORE INSTITUTE OF PHARMACY EDUCATION AND RESEARCH
Kogilu, Yelahanka, Bengaluru
Professor/ Associate Professor/ Assistant Professor
Pharmaceutics, Pharmacology, Pharmaceutical Chemistry & Pharm. analysis
Eligibility: M. Pharm with /without Ph D having requisite teaching experience as per PCI norms

ADITYA COLLEGE OF NURSING
Kogilu, Yelahanka, Bengaluru
Professor/ Associate Professor/ Assistant Professor/ Lecturer/ Tutor
Eligibility: As per the RGUHS Regulations.

ADITYA COLLEGE OF PHYSIOTHERAPY
Kogilu, Yelahanka, Bengaluru
Professor/ Associate Professor/ Assistant Professor/ Lecturer
Eligibility: As per the RGUHS Regulations.

ADITYA COLLEGE OF ALLIED HEALTH SCIENCES
Kogilu, Yelahanka, Bengaluru
Professor/ Associate Professor/ Assistant Professor/ Lecturer
Eligibility: As per the RGUHS Regulations.

NON-ACADEMIC/ NON-TEACHING POSITIONS
Placement Officer: Eligibility: MBA (HR)
Admn. & Accounts Executives, Hostel wardens (Gents & Ladies), Front office, Tele callers, IT & Networking, Housekeeping, drivers, Lab Instructors/ Attenders, Canteen Manager, Cooks.
Interested candidates may send their resumes with photograph to:
hrdept.aditya@gmail.com / 7090001940

Drivers

BETHANY INSTITUTIONS
CA -12, 20th Main, 6th Block, Koramangala, Bangalore - 95.
ಚಾಲಕರು ಬೇಕಾಗಿದ್ದಾರೆ
ಬಾರಿ ವಾಹನ ಡ್ರೈವಿಂಗ್ ಲೈಸೆನ್ಸ್ ಹೊಂದಿರುವ 5 ವರ್ಷಗಳ ಅನುಭವ ಹೊಂದಿರುವ ಚಾಲಕರು ಬೇಕಾಗಿದ್ದಾರೆ, ಶಾಲಾ ವಾಹನಗಳ ಚಾಲಕರಿಗೆ ಆದ್ಯತೆ ನೀಡಲಾಗುವುದು.
Contact Person: Ravi - 99805 21695 K.Naik - 97413 06328

Wanted

WANTED EMPTY Cartridges For Export. Best Prices , Instant Payment, Free Pick Up. Contact : Eco Wave 9810899501 9971533209

SSRC LOGISTICS PVT LTD. Makali Bangalore. Wanted Female DATA Entry Operator. Salary Rs. 12,000-20,000/-. Min. B.Com, Hindi, Kannada, English. M. 9742121211, 9986022251. Interview 10 am to 04 pm.

Teachers/ Professors

TEACHER REQUIRED for English, Science and Maths for High school contact Kenmore school Basavanagudi or whatsapp 9901501185

Marketing & Sales

A REPUTED Transformer manufacturing company at Nelamangala requires MARKETING ENGINEERS with qualification, DEE/BE-Electrical Decent salary depending upon experience. Fresh candidates can also apply. Contact: 9845087967 8660480075

Manager

REQUIRED M/F Marketing Managers & Marketing Executives B'lore & All Karnataka for Education Projects Salary up-to 1Lack 9535195656.

Part-Time Jobs

JOB OPPORTUNITY Retired Men, Housewife & Graduates Age 40 to 80, Earn upto 75,000: 9886641282/ 6362220162

Engg/ Production Technical

REQUIRED FITTER TURNER MILLER CNC OPERATOR WELDER, COMPUTER OPERATOR, SUPERVIOSER, ROOM BOY, HELPER. Contact: 9448558947.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
www.dhclassifieds.com BOOK NOW
* Conditions apply
For more details contact:
+91 9845114560 | +91 9900428036 | +91 9731810277 | +91 9886213331 | 080- 45557163/164

REAL ESTATE SELLING

Sites

Anjanapura

BDA SITE 20'X30' for sale in Anjanapura 5th 'G' Block, Immediate registration Only,64 Lakhs, Owner:9008716584

Banashankari

BANASHANKARI 6TH STAGE- BDA-AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES-9980863245/ 9945333993

AVAILABLE BANASHANKARI 6th Stage, 6th Block 30x40, W/F,Near 100" Road Budget Friendly Call Lingaraju: 9663393533

BANASHANKARI 6TH Stage,BDA 40x60, Site For Sale Near 100 Feet Road Cheque Payment: 9916817739

BDA BANASHANKARI 5th Stage Opposite Pattalamma Temple & Mantri Alphine Apartment 30x40 E/F: 9606922132/ 9448531837

BTM Layout

BTM RING Road 60x80 Commercial Site For Sale, 36,000/- Per Sft. Genuine Buyers Contact:- 9845036826

Bannerghatta Road

BANNERAGATTA ROAD AKSHAYANAGARA 3562 SQFT 12000/- NISARGA LAYOUT 50x80 EF 5000/- BROCKERS EXCUSE. CONTACT: 9449655947

Basaweshwaranagar

SITE FOR SALE VALUED 2 CRORE 50 LAKHS NOW SELLING FOR 2 CRORE ONLY: 9035883017

Chandra Layout

SITE SALE 30x38 W/F 40ft Road Good Location BCC Layout Near Water Tank, Chandralayout: 8088935256

Hosur Road

LAYOUT SALE ONLY 12 LEFT. Rs.900 Sqft. Rayakottai Road, Near Krishnagiri Court. Tamilnadu. 9443225303, 9566899288.

HSR Layout

"HSR-LAYOUT 20X30 Commercial Building 1.80 Lakh`Rent, 20x30 Duplex House, 20x30,30x40,40x60 Commercial`& Residential`Sites for`sale. "Krishna"-9886294610"

Jigani

KHB Sites in Surya City Near Jigani STRRA & BMRDA Approved Plots
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) Call : 74115 54412

INVEST IN REAL ESTATE PROPERTIES ON HAROHALLI-JIGANI/ANEKAL ROAD, ON SMALL EXTENT PROPERTIES AND GET GOOD RETURNS AT THE EARLIEST,VICTORY PROPERTIES, www.victoryproperties.in, mail: info@victoryproperties.in 8618576685/7411692219/ 9686894972

Jayanagar

COMMERCIAL PROPERTY Sale 40x60 JP-Nagar Ring Road North West Corner, Jayanagra Residential Property 40×60 North: 9845075792/ 9880600899

3RD BLOCK East Facing 2 Adjoining 40X60 BDA Sites 9Cr. Each. Settler: 9845035333/ 9880225333

J P Nagar

JP-NAGAR 1ST PHASE 30x46 WEST FACING 4 CR NEGOTIABLE BROCKERS EXCUSE. CONTACT: 9449655947

Kengeri

SUNCITY PROPERTY 40X60 West Rs.8500 Sft BALAJI LAYOUT Vishweshwaraiya 1st BLOCK 55X40 East Rs.9500 sft Contact: 9448793428

KENGERI UPANAGARA BDA Auction North-West Corner Site For Sale 64×82 Single First Owner 17000/- Per Sq.ft. Clear Title-9900115519

Kanakapura Road

GRAMATHANA "E' Khatha Site 46x80, North Facing 30 meeters From Vajarahalli Metro Station: 9845451425 9741296957

30X40 BDA SITE SALE, E/F, Vajarahalli, Near Metro Station, Kaveri Water, 11k /sft. Nego. 9611105595

Kempegowda Layout

NADA PRABHU Kempegowda layout BDA Site For Sale 30x40, 40x60, 50x80 Contact: 7676900174 6363496142

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

Mysore Road

"HEJJALA 30X43 East BMRDA Approved Near Railway Station,Bus Route Loan Documents 44 Lakhs. 9845178335 (Owner)"

Nagarabhavi

"NAGARABHAVI NEAR Deepa Complex 40x60 East & Vishveshwaraiah 6th Block 40x60 South 40 feet Road. 9448432633"

BDA SITE FOR SALE Nagarabhavi 10th block 40/75, West facing Broker excuse Contact Owner: 8884709409

Nelamangala

SITES IN Pillahalli Near BGS School Nagaruru Nelamangala A Khatha Reasonable Rates Call 7760780309 8123259175

Outer Ring Road

ORR(MAGADI RD-TUMKUR Rd) facing corner commercial site 2,800 Sqft near Pipeline/Chowdeshwarinagar Rs. 22,000 call: 9980555558

Out-Station

HOSUR NEAR Mathikere Circle, One Acre Land For Sale, Per Cent 23 lakhs. Contact 9845036826

Sadashiva Nagar

SADASHIVANAGAR 40X60 DOLLARS-COLONY 50X90, 45X60 MALLESHWARAM 50X80 SANJAYNAGAR 40X60 R.T.NAGAR 30X50 JAYAMAHAL 40X55 KUMARAPARK 40X60. BUYERS/SELLERS CALL:NITI ESTATES 9900001973

Uttarahalli

BHCS LAYOUT Uttarahalli Road 40x60 Site with 4000 Sq.ft Building in Good Condition. 40Ft Semi-Commercial Road-9986055474

Vijayanagar

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS CONTACT: 6363250343

Vishweshwariah Layout

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

BDA SITE SALE VISHWESHWARAIAH LAYOUT 1ST BLOCK 30X40 EAST FACE 13000/- NEGOTIABLE DIRECT OWNER MEETING CONTACT: 8892901567

VISHVESHVARAYA LAYOUT 6th Block (Near KLE Law College) 50x80 East Facing BDA Site for Sale. Contact: Owner Mohan Kumar 9686208002. Agents/ Resellers not required.

Yelahanka

NORTH-WEST CORNER 60x40 site sale good location Someswara Nagara Yelahanka Newtown B-Sector. Contact: 8147920772

Chikkaballapura

DC CONVERTED,TOWN Planning Approved Sites For Sale at Chikkaballapur Near Isha Foundation.Contact-9008817966,7483171036

Mysore

SITE FOR SALE 100'x80' North facing Adipampa Road, Mysore,suitable for complex, hospital, flats. Contact: 7676058694

House

Basaveshwaranagar

INDEPENDENT HOUSE LEASE 5 BHK 60 LAKHS, 3BHK 30 LAKHS, 2 BHK 30 LAKHS: 9035883017

ಕ್ಲಾಸಿಫೈಡ್ಸ್ PROPERTY CORNER

Jayanagar

SALE 40X60 Jayanagar 5th Block With 3 BHK old House Excellent Location Contact: 9844134068 8073859758

J P Nagar

SALE 40X60 J.P.Nagar 3rd Phase With Beautiful Architect design 5 BHK Bungalow Contact: 9844134068 8073859758

J.P.NAGAR, BDA 45x60 Excellent Residential South Facing 3 BHK 3 Unit Livable House, Site Cost only -9845232711

Peenya

PEENYA 2ND Stage, Andrahalli Main Road, Chetan Circle, 2450 sft. 'B' Katha, 16 Houses, Getting 64000 Rent, 8500 /sft. 9845288310

Flat

R T Nagar

GROUND FIRST DUPLEX INDEPENDENT FLAT 1 BHK VACANT POSITION READY TO OCCUPY 60 LAKHS: 9035883017

Sarjapur Road

NEWLY CONSTRUCTED 3.5BHK 1616sqft Appartment for sale in confident meadows, Sarjapur main road with all amenities. Contact-9845039547, 9945563995.

Vijayanagar

AVILABLE FLATS RENTAL ONE TWO BHK MALAGALA NAGARABHVI THREE BHK MYSORE ROAD SPECIOUS 9738223432/ 8105273951

Agricultural Land

Out-Station

10-LAKHS PER-ACRE Challakere 28acre Land Suitable For Agriculture, Solar, Poultry. Immediate Settlement Call: 9741040748

Commerical

J P Nagar

40X60 N/W Corner Commercial Building JP.Nagar 100 Feet Ring Road also 60x90-SS.Realtors: Call-9845760178.

Mysore

FOR SALE 3 Prime High End Commercial Properties - Around 2 Acres, 3 Acres and Commercial Complex in the Heart of Mysore City. Write to linamys54@gmail.com

Whitefield

3210SFT,& 1200Sft, Commercial Sites For Sale Near Varthur Sub-Register Office,Within BBMP Limits With 'E'Khatha Call:9353532040

4560 SFT COMMERCIAL SITE SALE, 3 SIDE CORNERS, at WHITEFIELD MAIN ROAD. Price: 6.99cr. 9980577227.

Farm House/ Land/ Resorts

Out-Station

CHANCE PROPERTY Near Kotagiri, Nilgiris, Tamil Nadu: 63 Acres Patta Land with Teak Wood for Just Rs.70 cr. Ph:9848392893, 9052200009

Uttarahalli

UTTARAHALLI, BANGALORE South 7000 Sft Vacant Land for Sale. Suitable for Godown/ Catering. Contact: 77957-22852

Industrial & Factory

Jigani

JIGANI BANNERGHATTA ROAD 2Acres Sale Conversion Done E-Katha 60,000 Sqft Warehouse Getting 16,00,000 Rent: 9481801053

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

CONSTRUCTION MATERIALS FOR SALE
Large quantity of used construction materials in good conditions. Such as Shuttering Plate, Jacks, Spans, Cuplock scafolding and Machinery such as Mixer Machine, DG Sets of different capacity Winch and Hoist, passenger hoist for sale.
Contact: 6360605636 / 8431164733

Mysore Road

INDUSTRIAL CONVERTED LAND AVILABLE FOR SALE AREA 10000SQFT TO 20000 SQFT TO 1ACRE AT KUMBALGODU IND AREA MYSORE ROAD MOB:6366378787/ 9964783877

Residential/ Commercial

Multiple Locations

LEADING 35 YEARS EXPERIENCED REAL ESTATE COMPANY BASED IN BANGALORE SOUTH, WE ARE INTO PROPERTY MANAGEMENT, PROPERTY MONITORING, PROPERTY INVESTMENT MANAGEMENT, RENTAL/ BUYING- VICTORY PROPERTIES 7411692219/ 8618576685/ 9686894972. info@victoryproperties.in www.victoryproperties.in

REAL ESTATE BUYING

Sites

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda. SAPTHAGIRI (Opp.BDA Head Office, Kumara Park). 9036360366.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

RENTAL PROPERTIES

Accommodation Wanted

Flat

REQUIRED TWO bedroom flat/ house for rent with carpark within 3kms from Kumarapark/ Windsormanor. 9448355660/ 9945993784

Accommodation Available

Commercial

FOR RENT
Commercial Space for rent Ground and First floor Suitable for Hotels, Banks etc 14,000 sq.ft., with Parking Space of 20,000, Address: No.25, Vaderahalli, Rampura-Kadagrahara Main Road, Bangalore-560049. Prime Location - Prestige Augusta Golf Village, R. V. Lokesh Ph No: 9343675557, 9342675557.

BANASHANKARI 6TH STAGE 80`Feet Road,11th`Block 50x80 Site Built-to-Suit. And 2nd`Block, 80`Feet Road,50x80 RENT for Vacant`Site. Call 9945724472

WAREHOUSE/ OFFICE SPACE available for rent, near Hoodi, Whitefield, Bangalore. Area Gf-20,000`sqft. 1st floor-20,000`sqft. Call 8150943158

Industrial And Factory

AVAILABLE OF Industrial Shed of 75000`sqft at Soukya Road, Whitefield. Available Built-to-Suit Warehouse 160000 sqft`Vijipura Hoskote Contact: 9341234288/ 9663224353/ 9845417487.

House

1 RK RENT 400 sqft. plus Terrace, suitable OFFICE/ RESIDENCE near Smart Bazaar, MALLESHWARAM. 7892081511

Villas/Bunglows

FOR RENT Vasanth Nagar 5 BHK Bunglow. Near Mahaveer Jain Hospital. Vegetarians Only: 9844072344/ 9844830500

ರಸ್ತೆ ಗುಂಡಿ: ಅಧಿಕಾರಿಗಳ ವಿರುದ್ಧ ಸಿ.ಎಂ ಕೆಂಡ

'ಹಣ ಕೊರತೆ ಇದ್ದರೆ ಕೊಡುತ್ತೇನೆ, ಅ. 30ರೊಳಗೆ ರಸ್ತೆ ಗುಂಡಿ ಮುಚ್ಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಹಾಳಾಗಿರುವ ರಸ್ತೆ, ಗುಂಡಿಗಳಿಂದ ಜನರು ಹೈರಾಣಾಗಿದ್ದು, ನಿತ್ಯ ಅವರ ಸಂಕಷ್ಟ ನಿಮ್ಮ ಕಣ್ಣಿಗೆ ಬೀಳುತ್ತಿಲ್ಲವೇ? ತುರ್ತು ಕ್ರಮ ಏಕೆ ತೆಗೆದುಕೊಂಡಿಲ್ಲ' ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಜಿಬಿಎ ಹಾಗೂ ಪಾಲಿಕೆಗಳ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಬೆಂಗಳೂರು ರಸ್ತೆಗಳ ಸುಧಾರಣೆ ಹಾಗೂ ಸಂಚಾರ ವ್ಯವಸ್ಥೆ ಕುರಿತು ಅಧಿಕಾರಿಗಳೊಂದಿಗೆ ಶನಿವಾರ ಸಭೆ ನಡೆಸಿದರು.

'ವಾರ್ಡ್ ಎಂಜಿನಿಯರ್‌ಗಳು, ಮುಖ್ಯ ಎಂಜಿನಿಯರ್‌ಗಳು ಏನು ಮಾಡುತ್ತಿದ್ದಾರೆ? ಒಂದು ತಿಂಗಳ ಕಾಲಾವಕಾಶ ನೀಡುತ್ತೇವೆ. ರಸ್ತೆ ಗುಂಡಿಗಳನ್ನು ಮುಚ್ಚಲು ಕಟ್ಟುನಿಟ್ಟಿನ ಕ್ರಮ ವಹಿಸಲೇಬೇಕು. ರಸ್ತೆಗಳನ್ನು ಸಂಚಾರ ಯೋಗ್ಯ ಮಾಡಲೇಬೇಕು' ಎಂದು ತಾಕೀತು ಮಾಡಿದರು.

'ರಸ್ತೆ ನಿರ್ವಹಣೆಗೆ ಸೂಕ್ತ ಕ್ರಮ ವಹಿಸದ ಅಧಿಕಾರಿಗಳ ಮೇಲೆ ಮುಲಾಜಿಲ್ಲದೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ಗುತ್ತಿಗೆದಾರರೊಂದಿಗೆ ಶಾಮೀಲಾಗದೆ ಒದಗಿಸಿರುವ ಅನುದಾನಕ್ಕೆ ಉತ್ತಮ ಗುಣಮಟ್ಟದ ಕಾಮಗಾರಿಗಳನ್ನು, ವೈಜ್ಞಾನಿಕವಾದ ಕಾಮಗಾರಿಗಳನ್ನು ಪೂರೈಸಲು ಕ್ರಮ ಕೈಗೊಳ್ಳಬೇಕು' ಎಂದರು.

'ಮಳೆಗಾಲಕ್ಕೆ ಮುನ್ನವೇ ರಸ್ತೆ ಕಾಮಗಾರಿಗಳನ್ನು ಏಕೆ ಮುಗಿಸುತ್ತಿಲ್ಲ? ಮಳೆಗಾಲದಲ್ಲೇ ಕಾಮಗಾರಿ ಏಕೆ ಪ್ರಾರಂಭಿಸುತ್ತೀರಿ' ಎಂಬ ಸಿದ್ದರಾಮಯ್ಯ ಅವರ ಪ್ರಶ್ನೆಗೆ ಜಿಬಿಎ ಅಧಿಕಾರಿಗಳು ನಿರುತ್ತರರಾದರು.

ಮುಖ್ಯಾಂಶಗಳು

- ಹೊರವರ್ತುಲ ರಸ್ತೆ ಅಭಿವೃದ್ಧಿ ಯೋಜನೆಗೆ ₹400 ಕೋಟಿ
- ನಗರ ಪಾಲಿಕೆಗಳ ನಡುವೆ ತಾಂತ್ರಿಕ ಸಮನ್ವಯ ಅಧಿಕಾರಿ
- ಒಂದು ತಿಂಗಳ ನಂತರ ಮತ್ತೆ ಮೌಲ್ಯಮಾಪನ

'ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ನೂತನವಾಗಿ ನೇಮಕಗೊಂಡಿರುವ ಆಯುಕ್ತರು ಫೀಲ್ಡ್ ವರ್ಕ್ ಮಾಡಿ, ನಿಗಾ ಇರಿಸಬೇಕು. ಬಿಡಿಎ, ಬಿಎಂಆರ್‌ಸಿಎಲ್, ಜಲಮಂಡಳಿ ಅಧಿಕಾರಿಗಳ ನಡುವೆ ಸಮನ್ವಯವೇ ಇರುವುದಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಜಿಬಿಎ ಮುಖ್ಯ ಆಯುಕ್ತರು ಪ್ರತಿ ವಾರ ಐದೂ ನಗರ ಪಾಲಿಕೆಗಳ ಆಯುಕ್ತರೊಂದಿಗೆ ಸಭೆ ನಡೆಸಿ, ನಿರಂತರ ಸಂಪರ್ಕದಲ್ಲಿರಬೇಕು. ಹಣದ ಕೊರತೆಯಿದ್ದರೆ ಆರ್ಥಿಕ ಇಲಾಖೆಯಿಂದ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳುತ್ತೇವೆ. ಆದ್ಯತೆ ಮೇರೆಗೆ ಕ್ರಮ ವಹಿಸಿ. ತಿಂಗಳ ನಂತರ ಮತ್ತೆ ಮೌಲ್ಯಮಾಪನ ನಡೆಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಇಂಧನ ಸಚಿವ ಕೆ.ಜೆ. ಜಾರ್ಜ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್, ಪೊಲೀಸ್ ಮಹಾ ನಿರ್ದೇಶಕ ಎಂ.ಎ. ಸಲೀಂ, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ಬಿಎಂಆರ್‌ಸಿಎಲ್, ಬಿಡಿಎ, ಜಲಮಂಡಳಿ ಅಧಿಕಾರಿಗಳು ಭಾಗವಹಿಸಿದ್ದರು.

ಬೆಂಗಳೂರು ರಸ್ತೆಗಳ ಸುಧಾರಣೆ ಹಾಗೂ ಸಂಚಾರ ವ್ಯವಸ್ಥೆ ಕುರಿತು ಅಧಿಕಾರಿಗಳೊಂದಿಗೆ ಸಿದ್ದರಾಮಯ್ಯ ಶನಿವಾರ ಸಭೆ ನಡೆಸಿದರು.

ಅಂಕಿ ಅಂಶಗಳು

- **1,648.43 ಕಿ. ಮೀ** ಜಿಬಿಎ ವ್ಯಾಪ್ತಿಯಲ್ಲಿರುವ ಮುಖ್ಯ–ಉಪ ಮುಖ್ಯ ರಸ್ತೆಗಳ ಉದ್ದ
- **46.61 ಕಿ.ಮೀ** ಹೈಡೆನ್ಸಿಟಿ ಕಾರಿಡಾರ್ ರಸ್ತೆಗಳು
- **14,795** ಐದೂ ನಗರ ಪಾಲಿಕೆಗಳಲ್ಲಿರುವ ರಸ್ತೆ ಗುಂಡಿಗಳು
- **6,749** ಗುಂಡಿಗಳನ್ನು ಮುಚ್ಚಲಾಗಿದೆ
- **8,046** ಗುಂಡಿಗಳು ಮುಚ್ಚಲು ಬಾಕಿ
- **108.20 ಕಿ.ಮೀ** ಉದ್ದದ ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಪೂರ್ಣ
- **143.68 ಕಿ.ಮೀ** ಉದ್ದದ ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಪ್ರಗತಿ
- **401.63 ಕಿ. ಮೀ** ರಸ್ತೆ ಡಾಂಬರೀಕರಣ ಪೂರ್ಣ
- **440.92 ಕಿ.ಮೀ** ರಸ್ತೆ ಡಾಂಬರೀಕರಣ ಕಾಮಗಾರಿ ಪ್ರಗತಿಯಲ್ಲಿದೆ
- **584.60 ಕಿ.ಮೀ** ಉದ್ದದ ರಸ್ತೆಗಳಲ್ಲಿ ಅಭಿವೃದ್ಧಿ ಕಾಮಗಾರಿ ಪ್ರಗತಿ

ಜಿಬಿಎ ಅಧಿಕಾರಿಗಳ ಸಮಜಾಯಿಷಿ

- ಮುಖ್ಯ– ಉಪ ಮುಖ್ಯ ರಸ್ತೆಗಳಲ್ಲಿ ಗುಂಡಿ ಮುಚ್ಚಲು 2025-26ರ ಆಯವ್ಯಯದಲ್ಲಿ ₹18 ಕೋಟಿ ಅನುದಾನ
- ನಗರ ಪಾಲಿಕೆಗಳಲ್ಲಿ ತುರ್ತು ಕಾಮಗಾರಿಗಳಿಗೆ ತಲಾ ₹25 ಕೋಟಿಗಳ ಹಣವನ್ನು ಬಿಡುಗಡೆ ಮಾಡಲಾಗಿದ್ದು, ಪಾಲಿಕೆಗಳಿಂದ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮ
- ನೂತನ ತಂತ್ರಜ್ಞಾನ ಜೆಟ್ ಪ್ಯಾಚರ್ ಬಳಸಿಕೊಂಡು ₹2.5 ಕೋಟಿ ಮೊತ್ತ ಟೆಂಡರ್ ಚಾಲ್ತಿಯಲ್ಲಿದೆ. ಇದರಿಂದ ತೇವಾಂಶವಿರುವ ಸಮಯದಲ್ಲಿಯೂ ಗುಂಡಿಗಳನ್ನು ಮುಚ್ಚಬಹುದು
- ಐದೂ ಪಾಲಿಕೆಗಳೊಂದಿಗೆ ಸಮನ್ವಯ ಸಾಧಿಸಲು ಒಬ್ಬ ತಾಂತ್ರಿಕ ಸಮನ್ವಯಾಧಿಕಾರಿ ನೇಮಿಸಲು ಕ್ರಮ
- ಇಬ್ಬಲೂರು ಜಂಕ್ಷನ್, ಅಗರ, ವೀರಣ್ಣನ ಪಾಳ್ಯ, ನಾಗವಾರ ಮತ್ತು ಹೆಬ್ಬಾಳ ಜಂಕ್ಷನ್‌ಗಳಲ್ಲಿ ಜಲಮಂಡಳಿ ಮತ್ತು ಮೆಟ್ರೊ ಕಾಮಗಾರಿಯಿಂದ ಜಂಕ್ಷನ್ ಹಾಳಾಗಿದ್ದು, ಹೊರವರ್ತುಲ ರಸ್ತೆ ಅಭಿವೃದ್ಧಿ ಯೋಜನೆಯಡಿ ₹400 ಕೋಟಿಯ ಸಮಗ್ರ ಅಭಿವೃದ್ಧಿ

ಏಳು ಸಾವಿರ ಗುಂಡಿ ಮುಚ್ಚಲಾಗಿದೆ: ಡಿಸಿಎಂ

'ನಗರದಲ್ಲಿ ಏಳು ಸಾವಿರಕ್ಕೂ ಹೆಚ್ಚು ರಸ್ತೆ ಗುಂಡಿಗಳನ್ನು ಈಗಾಗಲೇ ಮುಚ್ಚಲಾಗಿದೆ. ಇನ್ನೂ ಐದು ಸಾವಿರದಷ್ಟು ಗುಂಡಿಗಳನ್ನು ಮುಚ್ಚಲು ಬಾಕಿಯಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ರಸ್ತೆ ಗುಂಡಿ ಸಮಸ್ಯೆ ಬಗೆಹರಿಸಲು ನಾವು ಬದ್ಧವಾಗಿದ್ದು, ಸಮಾರೋಪಾದಿಯಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ' ಎಂದರು.

'ಉದ್ದೇಶಪೂರ್ವಕವಾಗಿ ಯಾರೂ ರಸ್ತೆ ಗುಂಡಿಗಳನ್ನು ಮಾಡುವುದಿಲ್ಲ. ಅತಿಯಾದ ಮಳೆ ಬಿದ್ದ ಕಾರಣಕ್ಕೆ ಗುಂಡಿಗಳಾಗಿವೆ. ಈ ಬಗ್ಗೆ ಪೊಲೀಸ್ ಕಮಿಷನರ್ ಅವರಿಂದ ವರದಿ ಕೇಳಲಾಗಿದೆ. ಸಾರ್ವಜನಿಕರು ಸೇರಿದಂತೆ ಎಲ್ಲರೂ ರಸ್ತೆ ಗುಂಡಿಗಳು ಕಂಡರೆ ಗಮನಕ್ಕೆ ತರುವ ವ್ಯವಸ್ಥೆ ರೂಪಿಸಲಾಗಿದೆ' ಎಂದು ತಿಳಿಸಿದರು.

ಬಿಜೆಪಿ ಶಾಸಕರು ಗುಂಡಿ ಮುಚ್ಚಿಲ್ಲ ಯಾಕೆ: 'ಬಿಜೆಪಿಯವರು ರಸ್ತೆ ತಡೆಯದರೂ ಮಾಡಲಿ, ಬೇರೆ ಏನಾದರೂ ಮಾಡಲಿ. ಪ್ರತಿಯೊಬ್ಬ ಬಿಜೆಪಿ ಶಾಸಕನ ಕ್ಷೇತ್ರಕ್ಕೆ ₹25 ಕೋಟಿ ನೀಡಲಾಗಿದೆ. ನನ್ನ ಅನುದಾನದಲ್ಲೂ ಯಾವುದೇ ತಾರತಮ್ಯ ಇಲ್ಲದೆ ನಗರದ ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ಅನುದಾನ ನೀಡಿದರೂ ರಸ್ತೆ ಗುಂಡಿಗಳನ್ನು ಏಕೆ ಮುಚ್ಚಿಸಿಲ್ಲ' ಎಂದು ಶಿವಕುಮಾರ್ ಪ್ರಶ್ನಿಸಿದರು.

'ಸುರಂಗದಾಚೆ: ಉತ್ತಮ ಸಂಚಾರ ಮಾರ್ಗಗಳ ಹುಡುಕಾಟ' ವಿಚಾರಸಂಕಿರಣದಲ್ಲಿ ಶಹೀನ್ ಶಶಾ, ಆಶಿಶ್ ವರ್ಮ, ಸಂಪ್ರೀತ ಭಾಗವಹಿಸಿದ್ದರು–ಪ್ರಜಾವಾಣಿ ಚಿತ್ರ

'ಸುರಂಗ ರಸ್ತೆ: ಸಂಚಾರ ದಟ್ಟಣೆ ನಿಯಂತ್ರಣವಾಗದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗೆ ರಾಜ್ಯ ಸರ್ಕಾರ ನಿರ್ಮಿಸಲು ಉದ್ದೇಶಿಸಿರುವ ಸುರಂಗ ರಸ್ತೆಯಿಂದ ನಗರದಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಸಾಧ್ಯವಿಲ್ಲ ಎಂದು ಬೆಂಗಳೂರು ಬಸ್ ಪ್ರಯಾಣಿಕರ ವೇದಿಕೆಯ ಸದಸ್ಯೆ ಶಹೀನ್ ಶಶಾ ತಿಳಿಸಿದರು.

'ಸುರಂಗದಾಚೆ: ಉತ್ತಮ ಸಂಚಾರ ಮಾರ್ಗಗಳ ಹುಡುಕಾಟ' ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

₹ 17,697 ಕೋಟಿ ಖರ್ಚು ಮಾಡಿ 16.69 ಕಿ.ಮೀ. ಉದ್ದದ ಜೋಡಿ ಸುರಂಗ ರಸ್ತೆ ನಿರ್ಮಿಸುವ ಯೋಜನೆಯು ಸಂಚಾರ ದಟ್ಟಣೆಯನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾವಣೆಯನ್ನಷ್ಟೇ ಮಾಡಲಿದೆ ಎಂದು ಅಭಿಪ್ರಾಯಪಟ್ಟರು.

ಸಂಚಾರ ದಟ್ಟಣೆ ಕಡಿಮೆ ಮಾಡಲು ಈ ಯೋಜನೆ ರೂಪಿಸಲಾಗಿದೆ ಎಂದು ಸರ್ಕಾರ ಹೇಳುತ್ತಿದ್ದರೂ ವೈಜ್ಞಾನಿಕ ಯೋಜನೆ ಇದಲ್ಲ. ಈ ಹಿಂದೆ ಎತ್ತರಿಸಿದ ಕಾರಿಡಾರ್ ಯೋಜನೆಯನ್ನು ತರಲು ಸರ್ಕಾರ ತಂದಿತ್ತು. ನಾಗರಿಕರ ವಿರೋಧದದಿಂದ ಯೋಜನೆ ರದ್ದಾಗಿತ್ತು. ಪ್ರಸ್ತುತ ಇರುವ ಕೆಲವು ಎತ್ತರಿಸಿದ ಕಾರಿಡಾರ್, ಮೇಲ್ಸೇತುವೆ, ಕೆಳಸೇತುವೆ ರಸ್ತೆಗಳಲ್ಲಿ ಸ್ವಲ್ಪ ದೂರವಷ್ಟೇ ವೇಗವಾಗಿ ಪ್ರಯಾಣಿಸಬಹುದು. ನಿಯಮಿತ ರಸ್ತೆಗಳಿಗೆ ಬಂದ ಕೂಡಲೇ ಸಂಚಾರ ದಟ್ಟಣೆ ಪ್ರಾರಂಭವಾಗುತ್ತಿದೆ ಎಂದರು.

'ನಗರದಲ್ಲಿ 1.25 ಕೋಟಿಯಷ್ಟು ಜನರಿದ್ದಾರೆ. ಒಂದು ಕೋಟಿ ಕಾರು, ಒಂದು ಕೋಟಿ ಬೈಕ್‌ಗಳಿವೆ. ಇಷ್ಟೊಂದು ವಾಹನಗಳು ಸಂಚರಿಸಲು ನಗರದಲ್ಲಿ ರಸ್ತೆಗಳು ಎಲ್ಲಿ ಸಾಕಾಗುತ್ತವೆ' ಎಂದು ಪ್ರಶ್ನಿಸಿದರು.

ಸಂಚಾರ ದಟ್ಟಣೆ ನಿಯಂತ್ರಿಸಬೇಕೆಂದರೆ ಎಲ್ಲರೂ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಳಸಬೇಕು. ಪ್ರಸ್ತುತ ನಗರದಲ್ಲಿ ಅಂದಾಜು 40 ಲಕ್ಷ ಜನ ಸಾರ್ವಜನಿಕ ಸಾರಿಗೆಯಲ್ಲಿ ಪ್ರಯಾಣಿಸುತ್ತಿದ್ದಾರೆ. ಇಷ್ಟು ದೊಡ್ಡ ಸಂಖ್ಯೆಗೆ ಕೇವಲ 6 ಸಾವಿರ ಬಸ್‌ಗಳು ಮಾತ್ರ ಇವೆ. ಸಾರ್ವಜನಿಕ ಬಸ್‌ಗಳ ಸಂಖ್ಯೆ ಇನ್ನಷ್ಟು ಹೆಚ್ಚು ಮಾಡಬೇಕು ಎಂದು ಒತ್ತಾಯಿಸಿದರು.

ಸುರಂಗ ರಸ್ತೆಗೆ ₹17 ಸಾವಿರ ಕೋಟಿ ಖರ್ಚು ಮಾಡುವುದಕ್ಕಿಂತ, ಅದರ ಅರ್ಧಭಾಗ ವೆಚ್ಚ ಮಾಡಿ 10 ಸಾವಿರ ಬಸ್ ಖರೀದಿಸಿ ಜನರಿಗೆ ಸಮಯಕ್ಕೆ ಸರಿಯಾಗಿ, ಸುಲಭವಾಗಿ ಪ್ರಯಾಣಿಸಲು ಅವಕಾಶ ಮಾಡಿಕೊಟ್ಟಿದ್ದರೆ ಸಂಚಾರ ದಟ್ಟಣೆ ನಿಯಂತ್ರಣವಾಗುತ್ತಿತ್ತು ಎಂದು ಹೇಳಿದರು.

ಸಂವಾದದಲ್ಲಿ ಐಐಎಸ್‌ಸಿ ಸುಸ್ಥಿರ ಸಾರಿಗೆ ಪ್ರಯೋಗಾಲಯದ ಸಂಚಾಲಕ ಆಶಿಶ್ ವರ್ಮ, ಫ್ರೈಡೇಸ್ ಫಾರ್ ಫ್ಯೂಚರ್ ಕರ್ನಾಟಕದ ಶ್ರೀನಿಧಿ, ಸಂಪ್ರೀತಿ ಭಾಗವಹಿಸಿದ್ದರು.

ಪೀಣ್ಯ 2ನೇ ಹಂತದಲ್ಲಿ ಹಾಳಾದ ರಸ್ತೆಗಳು

ವಾಹನ ಸವಾರರಿಗೆ ನರಕ ಯಾತನೆ

• ಪ್ರಸನ್ನಕುಮಾರ್ ಯಾದವ್

ಪೀಣ್ಯ ದಾಸರಹಳ್ಳಿ: ರಸ್ತೆಗಳ ತುಂಬೆಲ್ಲ ಗುಂಡಿಗಳು, ಮಳೆ ಬಂದರೆ ಆ ಗುಂಡಿಗಳಲ್ಲಿ ಕೆಸರು, ಬಿಸಿಲಿದ್ದರೆ ರಸ್ತೆಯ ತುಂಬೆಲ್ಲ ದೂಳು... ಇಂತಹ ರಸ್ತೆಗಳಲ್ಲೇ ನಿತ್ಯವೂ ಸಾವಿರಾರು ವಾಹನ ಸವಾರರು ಪರದಾಡಿಕೊಂಡು ಸಂಚರಿಸುತ್ತಿದ್ದಾರೆ.

ಪೀಣ್ಯ 2ನೇ ಹಂತ, ದೊಡ್ಡಣ್ಣ ಕೈಗಾರಿಕಾ ಪ್ರದೇಶ, ಹೆಗ್ಗನಹಳ್ಳಿ ಕ್ರಾಸ್, ಪೀಣ್ಯ ಕೈಗಾರಿಕಾ ಪ್ರದೇಶ, ಸುಂಕದ ಕಟ್ಟೆ, ಲಗ್ಗೆರೆ ರಸ್ತೆಗಳ ಪರಿಸ್ಥಿತಿ ಇದು.

ರಾಜಗೋಪಾಲನಗರ ಮುಖ್ಯರಸ್ತೆಯಲ್ಲಿ ಗುಂಡಿಗಳ ನಡುವೆ ರಸ್ತೆ ಹುಡುಕುವಂತಾಗಿದೆ. ಒಂದು ಗುಂಡಿ ತಪ್ಪಿಸಿ ಮುಂದೆ ಸಾಗುವಷ್ಟರಲ್ಲಿ ಮತ್ತೊಂದು ಗುಂಡಿ ಎದುರಾದುವುದರಿಂದ ವಾಹನ ಸವಾರರು ಬಿದ್ದು ಗಾಯಗೊಳ್ಳುತ್ತಿದ್ದಾರೆ.

'ದ್ವಿಚಕ್ರ ವಾಹನ ಸವಾರರ ಬೆನ್ನು ಮೂಳೆ ಮುರಿಯಲಿ, ಗುಂಡಿಗಳಲ್ಲಿ ಬಿದ್ದು ಪ್ರಾಣವನ್ನೇ ಕಳೆದುಕೊಳ್ಳಲಿ, ಅದಕ್ಕೂ ತನಗೂ ಸಂಬಂಧವೇ ಇಲ್ಲವೆಂಬಂತೆ ಅಧಿಕಾರಿಗಳು ವರ್ತಿಸುತ್ತಿದ್ದಾರೆ' ಎಂದು ನಾಗರಿಕರು ದೂರುತ್ತಿದ್ದಾರೆ.

'ರಸ್ತೆಗಳಲ್ಲಿ ಗುಂಡಿಗಳು ಕಾಣಿಸಿಕೊಂಡರೆ, ಅವುಗಳನ್ನು ತಕ್ಷಣ ಮುಚ್ಚಬೇಕಿರುವುದು ಸಂಬಂಧಪಟ್ಟ ವಾರ್ಡ್‌ನ ಎಇ, ಎಇಇಗಳ ಜವಾಬ್ದಾರಿ. ಅವರು ಈ ಹೊಣೆಯನ್ನು ಸರಿಯಾಗಿ ನಿರ್ವಹಿಸದಿದ್ದರೆ ಶಿಸ್ತುಕ್ರಮ ಕೈಗೊಳ್ಳುವುದಾಗಿ ನಗರ ಪಾಲಿಕೆ ಹೇಳಿತ್ತು. ಆದರೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

'ಗುಂಡಿ ಬಿದ್ದು ಹಾಳಾಗಿರುವ ರಸ್ತೆಯಲ್ಲಿ ಪೊಟರೆ ಕಲ್ಲುಗಳ ಮೇಲೆ ವಾಹನ ಸವಾರರು ಸರ್ಕಸ್ ಮಾಡುತ್ತಾ ಬಿದ್ದು ಗಾಯ ಮಾಡಿಕೊಂಡವರಿದ್ದಾರೆ. ಯಾವಾಗ ರಸ್ತೆ ಸರಿಪಡಿಸುತ್ತಾರೋ ಗೊತ್ತಿಲ್ಲ. ಆದರೆ ಪ್ರತಿನಿತ್ಯ ಈ ರಸ್ತೆಗಳಲ್ಲಿ ವಾಹನ ಚಲಿಸಲು ನರಕ ಯಾತನೆಯಾಗಿದೆ' ಎಂದು ಪೀಣ್ಯ 2ನೇ ಹಂತದ ನಿವಾಸಿ ಉಮೇಶ್ ರಾವಣ್ ದೂರಿದರು.

ರಾಜಗೋಪಾಲನಗರ ಮುಖ್ಯರಸ್ತೆಯಲ್ಲಿರುವ ಗುಂಡಿಗಳ ಮಧ್ಯೆ ವಾಹನ ಸವಾರರ ಪರದಾಟ

ಮುಖ್ಯಾಂಶಗಳು

- ಗುಂಡಿ ತಪ್ಪಿಸಲು ಹೋಗಿ ಬಿದ್ದು ಗಾಯಗೊಳ್ಳುತ್ತಿರುವ ಸವಾರರು
- ತಪ್ಪು ಲೆಕ್ಕ ತೋರಿಸಿ ಯಾಮಾರಿಸುತ್ತಿರುವ ಅಧಿಕಾರಿಗಳು
- ವಿಳಂಬ ಧೋರಣೆ: ಸ್ಥಳೀಯರ ಆಕ್ರೋಶ

ದಾರಿದೀಪ ಮಂಜು

ಉಮೇಶ್ ರಾವಣ್

'ರಸ್ತೆ ಗುಂಡಿಗಳನ್ನು ಮುಚ್ಚಬೇಕು ಎಂದು ಪಾಲಿಕೆ ಆಯುಕ್ತರು ಆದೇಶಿಸಿದ್ದಾರೆ ಎಂಬುದು ಪ್ರಕಟಣೆಗಳಲ್ಲಿ ಮಾತ್ರ ಕಾಣುತ್ತಿದೆ. ಅಧಿಕಾರಿಗಳು ರಸ್ತೆ ಗುಂಡಿಯಲ್ಲೂ ತಪ್ಪು ಲೆಕ್ಕ ತೋರಿಸಿ ಯಾಮಾರಿಸುವ ಕೆಲಸ ಮಾಡುತ್ತಿದ್ದಾರೆ. ಬೆಂಗಳೂರಿನ ಅಭಿವೃದ್ಧಿ ಬಗ್ಗೆ ಬಂದಾಗ ಸಾವಿರಾರು ಕೋಟಿಯ ಯೋಜನೆಗಳ ಪ್ರಸ್ತಾಪವಾಗುತ್ತದೆ. ಆದರೆ ಗುಂಡಿ ಮುಚ್ಚುವುದಕ್ಕೆ ಮಾತ್ರ ಅಸಡ್ಡೆ ತೋರುತ್ತಿದ್ದಾರೆ' ಎಂದು ರಾಜಗೋಪಾಲನಗರ ನಿವಾಸಿ ದಾರಿದೀಪ ಮಂಜು ಆಕ್ರೋಶ ವ್ಯಕ್ತಪಡಿಸಿದರು.

ವಾರದೊಳಗೆ ಗುಂಡಿ ಮುಚ್ಚಲು ಕ್ರಮ

ಜನಸ್ಪಂದನ ಕಾರ್ಯಕ್ರಮದಲ್ಲಿ ಸಚಿವ ಬೈರತಿ ಸುರೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಕ್ಷೇತ್ರದಲ್ಲಿರುವ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಯನ್ನು ಇನ್ನೊಂದು ವಾರದಲ್ಲಿ ಆರಂಭಿಸಲಾಗುವುದು ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ.

ಕ್ಷೇತ್ರದ ಕುಂದುಕೊರತೆಗಳ ಪರಿಹಾರಕ್ಕೆ ಶನಿವಾರ ಆಯೋಜಿಸಿದ್ದ ಜನಸ್ಪಂದನ ಸಭೆಯಲ್ಲಿ ಅವರು ಮಾತನಾಡಿದರು.

ಒಳಚರಂಡಿ ಕಾಮಗಾರಿಗಾಗಿ ರಸ್ತೆಯನ್ನು ಅಗೆದು ಬಿಡಲಾಗಿದೆ, ಬೀದಿ ದೀಪಗಳ ಸಮಸ್ಯೆ, ಇ- ಖಾತಾ ವಿತರಣೆಯಲ್ಲಿ ವಿಳಂಬ ಸೇರಿದಂತೆ ಹಲವು ಸಮಸ್ಯೆಗಳನ್ನು ನಾಗರಿಕರು ಸಚಿವರ ಮುಂದಿಟ್ಟರು.

ಕಳೆದ ಹಲವು ದಿನಗಳಿಂದ ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ರಸ್ತೆ ಗುಂಡಿಗಳನ್ನು ಮುಚ್ಚಲು ಸಾಧ್ಯವಾಗುತ್ತಿಲ್ಲ. ಇನ್ನು ಒಂದೆರಡು ದಿನಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇದ್ದು, ಮಳೆ ಬಿಟ್ಟ ತಕ್ಷಣ ಗುಂಡಿ ಮುಚ್ಚುವ ಕಾಮಗಾರಿಯನ್ನು ಮೊದಲ ಆದ್ಯತೆಯಾಗಿ ಕೈಗೆತ್ತಿಕೊಳ್ಳಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಕಸ ವಿಲೇವಾರಿಯಲ್ಲಿ ಆಗುತ್ತಿರುವ ಲೋಪಗಳ ಬಗ್ಗೆ ಜನರು ದೂರು ತೋಡಿಕೊಂಡ ಬಗ್ಗೆ ಪ್ರತಿಕ್ರಿಯೆ ನೀಡಿದ ಸಚಿವರು, 'ಕೂಡಲೇ ಈ ಲೋಪ ಎಸಗಿದ ಕಸ ವಿಲೇವಾರಿ ಗುತ್ತಿಗೆದಾರನಿಗೆ ನೋಟೀಸ್ ನೀಡಿ ದಂಡ ವಿಧಿಸಬೇಕು' ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಆದೇಶ ನೀಡಿದರು.

ಜಿಬಿಎ ವತಿಯಿಂದ ಲಕ್ಕಸಂದ್ರ ಬಳಿ ಗುಂಡಿಗಳನ್ನು ಮುಚ್ಚುವ ಕಾಮಗಾರಿ ನಡೆಯಿತು

ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಅಲ್ಲಲ್ಲಿ ರಸ್ತೆಯನ್ನು ಅಗೆಯಲಾಗಿತ್ತು. ಆದರೆ, ಕಾಮಗಾರಿ ಮುಗಿದು ಹಲವು ತಿಂಗಳುಗಳು ಕಳೆದಿದ್ದರೂ ರಸ್ತೆ ದುರಸ್ತಿ ಮಾಡದ ಜಲಮಂಡಳಿ ಮತ್ತು ಬಿಬಿಎಂಪಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಇಂತಹ ಸ್ಥಳಗಳಲ್ಲಿ ರಸ್ತೆ ದುರಸ್ತಿ ಮಾಡಿ ಡಾಂಬರೀಕರಣ ಮಾಡುವ ಕಾಮಗಾರಿಯನ್ನು ಸೋಮವಾರದೊಳಗೆ ಪೂರ್ಣಗೊಳಿಸಬೇಕು. ಇದಕ್ಕೆ ವಿಫಲರಾದ ಅಧಿಕಾರಿಗಳನ್ನು ನಿರ್ದಾಕ್ಷಿಣ್ಯವಾಗಿ ಅಮಾನತು ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪಾದಚಾರಿ ಮಾರ್ಗಗಳಲ್ಲಿ ಅಂಗಡಿ ಮುಗ್ಗಟ್ಟುಗಳನ್ನು ಇಟ್ಟುಕೊಂಡು ಪಾದಚಾರಿಗಳಿಗೆ ಅಡಚಣೆ ಆಗುತ್ತಿರುವ ಹಿನ್ನೆಲೆಯಲ್ಲಿ ಮುಂದಿನ ವಾರ ಅಂತಹ ಅಂಗಡಿಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಬೀದಿ ದೀಪಗಳ ನಿರ್ವಹಣೆ, ಕುಡಿಯುವ ನೀರಿನ ಪೂರೈಕೆ, ಭದ್ರತಾ ವ್ಯವಸ್ಥೆ ಸೇರಿದಂತೆ ಇನ್ನಿತರ ವಿಚಾರಗಳಿಗೆ ಸಂಬಂಧಿಸಿದ ಅಹವಾಲುಗಳನ್ನು ಆಲಿಸಿದ ಸಚಿವರು, ಕಾಲಮಿತಿಯಲ್ಲಿ ಸಮಸ್ಯೆಗಳನ್ನು ಪರಿಹರಿಸುವಂತೆ ಅಧಿಕಾರಿಗಳಿಗೆ ಗಡುವು ವಿಧಿಸಿದರು.

ಇಬ್ಬರು ಗುತ್ತಿಗೆದಾರರಿಗೆ ₹ 4 ಲಕ್ಷ ದಂಡ

ಬೆಂಗಳೂರು: ನಗರದ ಸರ್ಜಾಪುರ ರಸ್ತೆ ಮತ್ತು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಸ್ಥಳದಲ್ಲಿ ಸಾರ್ವಜನಿಕರಿಗೆ ಮತ್ತು ವಾಹನ ಸವಾರರಿಗೆ ಸೂಕ್ತ ಸುರಕ್ಷಿತ ಕ್ರಮಗಳನ್ನು, ಬ್ಯಾರಿಕೇಡ್, ಎಚ್ಚರಿಕೆ ಫಲಕಗಳನ್ನು ಅಳವಡಿಸದ ಇಬ್ಬರು ಗುತ್ತಿಗೆದಾರರಿಗೆ ತಲಾ ₹ 2 ಲಕ್ಷ ರೂ. ದಂಡ ವಿಧಿಸಲಾಗಿದೆ.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಶುಕ್ರವಾರ ವಿವಿಧೆಡೆ ಕಾಮಗಾರಿಗಳ ಪರಿವೀಕ್ಷಣೆ ಮಾಡಿದ್ದರು. ವೈಟ್‌ಟಾಪಿಂಗ್ ಕಾಮಗಾರಿ ನಡೆಸುವಾಗ ಸುರಕ್ಷತಾ ಕ್ರಮ ಕೈಗೊಳ್ಳದಿರುವುದು ಕಂಡು ಬಂದಿದ್ದರಿಂದ ದಂಡ ವಿಧಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಅದರಂತೆ, ಮೆ. ಜೆಎಂಸಿ ಕನ್‌ಸ್ಟ್ರಕ್ಷನ್ ಮತ್ತು ಮೆ. ಓಷನ್ ಕನ್‌ಸ್ಟ್ರಕ್ಷನ್ ಗುತ್ತಿಗೆ ಕಂಪನಿಗಳಿಗೆ ದಂಡ ವಿಧಿಸಲಾಗಿದೆ. ಎರಡು ದಿನಗಳಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಂಡು ಕಾಮಗಾರಿಯ ವೇಗ ಹೆಚ್ಚಿಸಲು ಸೂಚಿಸಲಾಗಿದೆ ಎಂದು ಬಿ ಸ್ಮೈಲ್ ತಾಂತ್ರಿಕ ನಿರ್ದೇಶಕ ಬಿ.ಎಸ್. ಪ್ರಹ್ಲಾದ್ ತಿಳಿಸಿದ್ದಾರೆ.

ನೂರು ಗುಂಡಿ ಮುಚ್ಚಿದ ಬಿಎಂಆರ್‌ಸಿಎಲ್

ಬನ್ನೇರುಘಟ್ಟ ರಸ್ತೆಯಲ್ಲಿ ಹುಳಿಮಾವು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೂರು ಗುಂಡಿಗಳನ್ನು ಬೆಂಗಳೂರು ಮೆಟ್ರೊ ರೈಲ್ ಕಾರ್ಪೊರೇಷನ್ ಲಿಮಿಟೆಡ್ ಮುಚ್ಚಿದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

ಮಳಿಗೆಯಲ್ಲೇ ವ್ಯಾಪಾರ, ಒತ್ತುವರಿ ಮಾಡಿದ್ದರೆ ತೆರವು: ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್

ಕೆ.ಆರ್. ಮಾರುಕಟ್ಟೆಯಲ್ಲಿ 24 ಗಂಟೆಯೂ ಸ್ವಚ್ಛತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಮಾರುಕಟ್ಟೆಯಲ್ಲಿ 24 ಗಂಟೆಯೂ ಸ್ವಚ್ಛತೆ ಕಾರ್ಯ ನಡೆಸಬೇಕು ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

ಕೆ.ಆರ್. ಮಾರುಕಟ್ಟೆಗೆ ಶನಿವಾರ ಬೆಳಿಗ್ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಮಾರುಕಟ್ಟೆಯಲ್ಲಿ ಪ್ರತಿಯೊಂದು ಮಳಿಗೆಯೂ ಕಡ್ಡಾಯವಾಗಿ ತ್ಯಾಜ್ಯ ಹಾಕಲು ಕಸದ ಡಬ್ಬಿ ಇಟ್ಟುಕೊಳ್ಳಬೇಕು. ಎಲ್ಲೆಂದರಲ್ಲಿ ತ್ಯಾಜ್ಯ ಬಿಸಾಡುವವರಿಗೆ ದಂಡ ವಿಧಿಸಿ, ನಿಗದಿತ ಸ್ಥಳದಲ್ಲಿಯೇ ತ್ಯಾಜ್ಯ ಹಾಕಲು ಮಾರ್ಷಲ್‌ಗಳು ಜಾಗೃತಿ ಮೂಡಿಸಬೇಕು' ಎಂದರು.

ಪ್ರತಿನಿತ್ಯ ಸುಮಾರ 70 ಟನ್ ತ್ಯಾಜ್ಯ ಉತ್ಪತ್ತಿ ಆಗುತ್ತಿದ್ದು, ಅದನ್ನು ಪರಿಣಾಮಕಾರಿ ಹಾಗೂ ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕಿದೆ. ಈ ನಿಟ್ಟಿನಲ್ಲಿ ಮಾರುಕಟ್ಟೆಯಲ್ಲಿ ಸಂಪೂರ್ಣ ಸ್ವಚ್ಛತೆ ಕಾಪಾಡಲು ಮಾಸ್ಟರ್ ಪ್ಲಾನ್ ತಯಾರಿಸಬೇಕು ಎಂದು ಸೂಚಿಸಿದರು.

ಮಾರುಕಟ್ಟೆಯ ನೆಲ ಮಹಡಿಯಲ್ಲಿ 529, ಮೊದಲನೇ ಮಹಡಿಯಲ್ಲಿ 494 ಹಾಗೂ ಎರಡನೇ ಮಹಡಿಯಲ್ಲಿ 265 ಸೇರಿದಂತೆ ಒಟ್ಟು 1,288 ಮಳಿಗೆಗಳಿವೆ. ಬಾಡಿಗೆ ಪಾವತಿಸುವ ವಿಚಾರವಾಗಿ ನ್ಯಾಯಾಲಯದಲ್ಲಿ ಪ್ರಕರಣವಿದ್ದು, ಪ್ರಕರಣವನ್ನು ತ್ವರಿತವಾಗಿ ಇತ್ಯರ್ಥಪಡಿಸಿಕೊಂಡು, ಪಾಲಿಕೆಗೆ ಮಳಿಗೆಗಳಿಂದ ಬರಬೇಕಿರುವ ಬಾಕಿ ಹಣವನ್ನು ವಸೂಲಿ ಮಾಡಲು ಅಧಿಕಾರಿಗಳಿಗೆ ಹೇಳಿದರು.

'ಮಳಿಗೆಗಳಿಗೆ ನೀಡಿರುವ ಜಾಗದಲ್ಲಿ ಮಾತ್ರ ವ್ಯಾಪಾರ ಮಾಡಬೇಕು. ಅದಕ್ಕಿಂದ ಹೆಚ್ಚುವರಿ ಜಾಗ ಅತಿಕ್ರಮಣ ಮಾಡಿಕೊಂಡು ಮಾರಾಟ ಮಾಡುವ ಮಳಿಗೆಗಳಿಗೆ ಕೂಡಲೇ ದಂಡ ವಿಧಿಸಿ ಅತಿಕ್ರಮಣವನ್ನು ತೆರವುಗೊಳಿಸಬೇಕು. ಮತ್ತೆ ಅತಿಕ್ರಮಣ ಮಾಡಿಕೊಂಡರೆ ಕಾನೂನು ಕ್ರಮ ಜರುಗಿಸಬೇಕು' ಎಂದರು.

ಕೆ.ಆರ್. ಮಾರುಕಟ್ಟೆಯ 1ನೇ ಮಹಡಿಯಲ್ಲಿರುವ ಶೌಚಾಲಯವನ್ನು ನಾಗರಿಕರು ಬಳಸುವಂತೆ ಸ್ವಚ್ಛಗೊಳಿಸಿ. ಮಾರುಕಟ್ಟೆಯಲ್ಲಿರುವ ಮತ್ತೊಂದು ಶೌಚಾಲಯ ಸರಿಯಾಗಿ ನಿರ್ವಹಣೆ ಮಾಡದೇ ಯೋಗ್ಯವಲ್ಲದ ಸ್ಥಿತಿಯಲ್ಲಿದೆ. ಇದಕ್ಕೆ ಪರ್ಯಾಯವಾಗಿ ಪಕ್ಕದದಲ್ಲಿನ ಖಾಲಿ ಸ್ಥಳದಲ್ಲಿದ್ದು ಇನ್ನೊಂದು ಶೌಚಾಲಯ ನಿರ್ಮಿಸಲು ಸೂಚಿಸಿದರು.

ನುಣುಚಿಕೊಳ್ಳಬೇಡಿ: 'ಮಾರುಕಟ್ಟೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳಲ್ಲಿ ಸಮನ್ವಯತೆ ಇಲ್ಲ. ಅಧಿಕಾರಿಗಳು ಜವಾಬ್ದಾರಿಯಿಂದ ನುಣುಚಿಕೊಳ್ಳಬೇಡಿ, ಎಲ್ಲ ವಿಭಾಗದ ಅಧಿಕಾರಿಗಳು ಮಾರುಕಟ್ಟೆಯ ಸ್ವಚ್ಛತೆಗಾಗಿ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಬೇಕು' ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆ (ಬಿಸಿಸಿಸಿ) ಆಯುಕ್ತ ರಾಜೇಂದ್ರ ಚೋಳನ್ ಆದೇಶಿಸಿದರು.

ಕೆ.ಆರ್ ಮಾರುಕಟ್ಟೆಯಲ್ಲಿ ರಾಜೇಂದ್ರ ಚೋಳನ್, ಮಹೇಶ್ವರ್ ರಾವ್ ಅವರು ಶನಿವಾರ ಪರಿಶೀಲನೆ ನಡೆಸಿದರು

ರಸ್ತೆ ವಿಸ್ತರಣೆ ಶೀಘ್ರ: ರಮೇಶ್

ಭೋಗನಹಳ್ಳಿ ತಿರುವಿನಿಂದ ಪಣತ್ತೂರು ರೈಲ್ವೆ ಹಳಿಯವರೆಗಿನ ರಸ್ತೆ ವಿಸ್ತರಣೆ ಕಾಮಗಾರಿಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಬೇಕು ಎಂದು ಬೆಂಗಳೂರು ಪೂರ್ವ ನಗರ ಪಾಲಿಕೆ (ಬಿಇಸಿಸಿ) ಆಯುಕ್ತ ಡಿ.ಎಸ್. ರಮೇಶ್ ಅವರು ಎಂಜಿನಿಯರ್‌ಗಳಿಗೆ ತಿಳಿಸಿದರು.

ನಗರ ಪಾಲಿಕೆಯ ರಸ್ತೆ ಮೂಲಸೌಕರ್ಯ ವಿಭಾಗ, ಟಿಡಿಆರ್ ವಿಭಾಗ ಹಾಗೂ ತಹಶೀಲ್ದಾರ್‌ಗಳೊಂದಿಗೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಪಣತ್ತೂರು ಗ್ರಾಮದ ಪರಿಮಿತಿಯಲ್ಲಿರುವ ಭೋಗನಹಳ್ಳಿ ತಿರುವಿನಿಂದ ಪಣತ್ತೂರು ರೈಲ್ವೆ ಹಳಿವರೆಗಿನ ರಸ್ತೆಯು ಬಳಗೆರೆ ಹೊರವರ್ತುಲ ರಸ್ತೆ ಕಾಡುಬಿಸನಹಳ್ಳಿಯಿಂದ ವರ್ತೂರು-ಗುಂಜೂರು ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯಾಗಿರುತ್ತದೆ. ಈ ರಸ್ತೆಯು ಪಣತ್ತೂರು ಗ್ರಾಮದ ಪರಿಮಿತಿಯಲ್ಲಿ ತುಂಬಾ ಕಿರಿದಾಗಿದ್ದು, ಪ್ರತಿ ನಿತ್ಯ ಸಂಚಾರ ದಟ್ಟಣೆ ಹೆಚ್ಚಾಗುತ್ತಿದ್ದು, ಸಂಪರ್ಕ ರಸ್ತೆಯನ್ನು 12 ಮೀಟರ್‌ಗೆ ವಿಸ್ತರಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಎಂಜಿನಿಯರ್‌ಗಳು ವಿವರಿಸಿದರು.

'ಕೂಡಲೇ ಭೂಸ್ವಾಧೀನ ಮಾಡಿಕೊಂಡು ರಸ್ತೆ ವಿಸ್ತರಣೆ ಮತ್ತು ಅಭಿವೃದ್ಧಿ ಕಾರ್ಯವನ್ನು ಆದ್ಯತೆ ಮೇರೆಗೆ ತುರ್ತಾಗಿ ನಿರ್ವಹಿಸಬೇಕು. ಭೂಸ್ವಾಧೀನಕ್ಕೆ ಅಗತ್ಯವಿರುವ ದಾಖಲೆಗಳನ್ನು ಪಡೆದು ನೇರ ಖರೀದಿ ಮೂಲಕ ಪರಿಹಾರ ಒದಗಿಸಬೇಕು' ಎಂದು ರಮೇಶ್ ತಾಕೀತು ಮಾಡಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

APS Educational Trust
N.R.Colony, Bangalore-560 019.
Email: apsedutrust@gmail.com
Contact No: 9880701701/ 99725 30585

Student recruitment agencies to support student admissions across all our institutions - from Kid zee, Kindergarten to Postgraduate and PhD levels.
We offer a holistic and inclusive educational environment, combining tradition and innovation to shape responsible global citizens.

Why Partner with APS Educational Trust?
- Over 90 years of trusted educational legacy
- Comprehensive academic programs – From Kindergarten to PhD
- State-of-the-art infrastructure
- Highly qualified and experienced faculty
- Consistently excellent academic results
- Affordable fee structure across all levels
- Focus on holistic development – Academics, Sports, Arts & Culture
- Safe and inclusive learning environment
- Well-established reputation and alumni network
- Modern teaching methodologies and digital classrooms

(CA Dr. Vishnu Bharath Alampalli) President
(Prof. A. Prakash) General Secretary

MATRIMONIAL

Brides Wanted

Christian

Wanted Bride
Affluent Chiristian family , Looking for a suitable match for their Son 1987 born / 5'11/ MBBS, MS. Surgeon. Early marriage invitation
7200200946

Muslim

Wanted Bride
Alliance invited from a Muslim Family 1993 Born / 5'10/ MBBS/ MS / Doctor/ Resident of Bangalore/ Looking for a Suitable match for their son. Contact
(9164400029)

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

AUTOMOTIVE

Four Wheelers Selling

Hyundai

HYUNDAI ELANTRA 2019 Petrol Automatic 23000km Excellent condition Single owner 14Lacs 9901919167

BUSINESS

Business to Business

Business

PROPERTY COLLATERALS/ Joint Developments/ Take overs) R/E Buying Selling School/ Colleges/ Hospitals. Hot Drinks Factory (GOA). Dr. Swamy, Vamshadhara Projects/ Services- 93422247637.

FOR BEST OUTDOOR ADVERTISEMENT/BUS BACK/AUTOBACK/ HOARDINGS/CYCLE BRANDING/ STANDEES/ THROUGHOUT KARNATAKA STATE AND BANGALORE CITYCONTACT VENUSCAST TECHNOLOGIES PVT LTD. www.Venuscast.com Call: 9482303339/8722123445/ 9538123445

WE ARRANGE GENERAL, HEALTH, AUTOMOBILE, CORPORATE, INDUSTRIAL, INSTITUTIONS EMPLOYEES INSURANCES. CONTACT-VICTORY FIN SERVICES. www.victoryfinservices.com Call: 7411692219/ 8618576685/ 9482303339

WEEKEND CORNER

SMS GROW NEW FARM SOLUTIONS LLP.
MARKETING OF WATER SOLUBLE FERTILIZERS
As per the provisions of S.0 2900(E) dated 24th October 2015 in FCO 1985 issued by Ministry of Agriculture and Farmers welfare, New Delhi, we intend to market the following imported 100% Water Soluble Mixture of Fertilizers in Karnataka State.
100% Water Soluble Mixture of Fertilizers-N-P-K- 05-00-52
100% Water Soluble Mixture of Fertilizers-N-P-K- 06-11-39
100% Water Soluble Mixture of Fertilizers-N-P-K- 11-39-09
SMS GROW NEW FARM SOLUTIONS LLP
No. C-5/A1., Industrial Estate, Yelahanka, Bengaluru, Karnataka-560064.

PROPERTY COLLATERALS/ JD's/ Take Overs/ Finance for big Projects, Problem solving. Dr.Swamy Naidu-Vamshadhara Projects And Services. 9342247637.

Finance

WANTED LOANS TO BE TAKEN OVER FROM CO-OPERATIVE BANK OF ONE CRORE TWENTY LAKHS 9035883017

FRANCHISE-BASED BAKERY For Sale with 2years Successful Operations at Hennur& Sanjaynagar.Fully Equipped, Strong Customer Base, Great opportunity for Investors.Contact :8548800337

WE ARRANGE HOUSING, BUSINESS, AUTOMOBILE, PERSONAL LOANS. CONTACT-VICTORY FIN SERVICES. www.victoryfinservices.com, Call: 7411692219/ 8618576685/ 9482303339

PERSONAL

Change of Name

I, A.SENBAGAALLI residing at No.P-3/2, Akash Vihar, Airforce Camp, Marathalli, Bangalore-560037 have chagned my minor daughter's name from S.V SEEMA HASINI to V. SEEMA HASINI vide affidavit dated 18/09/2025 sworn before notary Jalandhara, Bangalore

I, HARSHIKA NARESH KAPOOR resident of Flat No.306, 3rd Floor, Hoysala Dreamz, Seenappa Layout, New BEL Road, Bangalore-560094 have changed my name to HARSHIKA KAPOOR vide affidavit dated 20/09/2025 sworn before notary Ambika.S, Bangalore

ಚಿಟಿಕೆ ಸುದ್ದಿ

‘ಕುಂಬಾರ ಎಂದೇ ನಮೂದಿಸಿ’

ಬೆಂಗಳೂರು: ‘ಜಾತಿವಾರು ಸಮೀಕ್ಷೆಯ ವೇಳೆ ಧರ್ಮದ ಕಾಲಂನಲ್ಲಿ ಹಿಂದೂ ಹಾಗೂ ಜಾತಿಯ ಕಾಲಂನಲ್ಲಿ ‘ಕುಂಬಾರ’ ಎಂದೇ ನಮೂದಿಸಬೇಕು’ ಎಂದು ಕರ್ನಾಟಕ ರಾಜ್ಯ ಕುಂಬಾರ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಸಂಸ್ಥಾಪಕ ಅಧ್ಯಕ್ಷ ಆರ್. ಶ್ರೀನಿವಾಸ್, ಅಧ್ಯಕ್ಷ ಬಾಬು ಎಸ್. ಕುಂಬಾರ ಮನವಿ ಮಾಡಿದ್ದಾರೆ.

‘ಉಪಜಾತಿಯ ಕಾಲಂನಲ್ಲಿ ತಮ್ಮ ತಮ್ಮ ಉಪಜಾತಿಗಳ ಹೆಸರನ್ನು ನಮೂದಿಸಬೇಕು. ಈ ವಿಷಯದಲ್ಲಿ ಯಾವುದೇ ಒತ್ತಡ ಮತ್ತು ಗೊಂದಲಕ್ಕೆ ಅವಕಾಶ ನೀಡಬಾರದು. ಸರ್ಕಾರದ ಎಲ್ಲ ರೀತಿಯ ಸೌಲಭ್ಯಗಳನ್ನು ಪಡೆದುಕೊಳ್ಳಬೇಕಾದರೆ ಜನಾಂಗವು ಒಗ್ಗಟ್ಟನ್ನು ಪ್ರದರ್ಶಿಸಬೇಕು. ಎಲ್ಲರೂ ಕುಂಬಾರ ಎಂದು ಬರೆಯಿಸದಿದ್ದರೇ ಸಮುದಾಯದ ಜನಸಂಖ್ಯೆ ಕಡಿಮೆಯಾಗುತ್ತದೆ. ಇದರಿಂದ ಸರ್ಕಾರದ ಸೌಲಭ್ಯಗಳು ಕಡಿತಗೊಳ್ಳುತ್ತವೆ. ಆದ್ದರಿಂದ ಇದೇ 22ರಿಂದ ನಡೆಯಲಿರುವ ಜಾತಿವಾರು ಸಮೀಕ್ಷೆಯಲ್ಲಿ ಕುಂಬಾರ ಎಂದೇ ಬರೆಯಿಸಬೇಕು’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಬ್ಯಾರಿ ಮುಸ್ಲಿಂ ಎಂದು ಬರೆಸಿ’

ಮಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಬ್ಯಾರಿ ಸಮುದಾಯದವರು ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಉಮರ್ ಯು. ಎಚ್. ಮನವಿ ಮಾಡಿದ್ದಾರೆ.

ಪ್ರಶ್ನಾವಳಿಯ 8ನೇ ಕಾಲಂನಲ್ಲಿ ಧರ್ಮ ‘ಇಸ್ಲಾಂ’, 9ನೇ ಕಾಲಂನಲ್ಲಿ ಜಾತಿ ‘ಮುಸ್ಲಿಂ’, 10ನೇ ಕಾಲಂನಲ್ಲಿ ಉಪಜಾತಿ ‘ಬ್ಯಾರಿ ಮುಸ್ಲಿಂ’, 15ನೇ ಕಾಲಂ ಮಾತೃಭಾಷೆ ಪ್ರಶ್ನೆಗೆ ಬ್ಯಾರಿ ಸಮುದಾಯದ ಎಲ್ಲರೂ ‘ಬ್ಯಾರಿ’ಎಂದು ಬರೆಸಬೇಕು ಎಂದು ಕೋರಿದ್ದಾರೆ.

ತರಾತುರಿಯ ಸಮೀಕ್ಷೆ ಏಕೆ: ಸ್ವಾಮೀಜಿ ಪ್ರಶ್ನೆ

ಹುಬ್ಬಳ್ಳಿ: ‘ತರಾತುರಿಯಿಂದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಿ ಸರ್ಕಾರ ಏನು ಸಾಧಿಸಲು ಹೊರಟಿದೆ?’ ಎಂದು ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಪ್ರಶ್ನಿಸಿದರು.

‘ಮೊದಲು ಜಾತಿಪಟ್ಟಿಯಲ್ಲಿ ಆದ ಗೊಂದಲ ನಿವಾರಿಸಬೇಕು. ಜನರಿಂದ ಆಕ್ಷೇಪಣೆ ಆಹ್ವಾನಿಸಿ, ಹತ್ತು ದಿನ ಕಾಲಾವಕಾಶ ನೀಡಬೇಕು. ಆ ನಂತರ ಕಾನೂನು ತಜ್ಞರ ಸಮಿತಿ ರಚಿಸಿ, ಸಮಾಜದ ಹಿರಿಯರ ಜತೆ ಚರ್ಚಿಸಿ ಜಾತಿ ಸಮೀಕ್ಷೆ ನಡೆಸಬೇಕು. ಇದು ಏಳು ಕೋಟಿ ಕನ್ನಡಿಗರ ಭವಿಷ್ಯದ ಪ್ರಶ್ನೆ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಕೊಡವ ಧರ್ಮ ಎಂದು ಬರೆಸಬೇಡಿ’

ಮಡಿಕೇರಿ: ‘ಕೊಡವ ಪ್ರತ್ಯೇಕ ಧರ್ಮ ಅಲ್ಲ. ಕೊಡವ ಸಮುದಾಯದವರು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ‘ಹಿಂದೂ ಧರ್ಮ, ಕೊಡವ ಜಾತಿ’ ಎಂದೇ ನಮೂದಿಸಬೇಕು’ ಎಂದು ನಾಪೋಕ್ಲು ಕೊಡವ ಸಮಾಜದ ಮಾಜಿ ಅಧ್ಯಕ್ಷ ಮನು ಮುತ್ತಪ್ಪ ಕೋರಿದರು.

‘ಕೊಡವ ಎಂಬುದು ಪ್ರತ್ಯೇಕ ಧರ್ಮ ಎಂದು ಕೆಲವರು ಗೊಂದಲ ಸೃಷ್ಟಿಸುತ್ತಿದ್ದಾರೆ. ಕಾವೇರಿ ಮಾತೆ, ಇಗ್ಗುತ್ತಪ್ಪ ದೇವರು ಹಾಗೂ ಭಗವತಿದೇವಿ ಆರಾಧನೆಗಳಲ್ಲಿ ಹಿಂದೂ ಧರ್ಮದ ಕ್ರಿಯಾವಿಧಿಗಳನ್ನೇ ಪಾಲಿಸಲಾಗುತ್ತದೆ. ಹಿಂದೂ ಧರ್ಮದಲ್ಲಿ ಕೊಡವ ಸಮುದಾಯವು ವಿಶಿಷ್ಟ ಪರಂಪರೆ ಹೊಂದಿದೆ’ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮೀಕ್ಷೆ ಮುಂದೂಡಲು ಆಗ್ರಹ

ಜಾತಿ ಕಾಲಂನಲ್ಲಿ ‘ಒಕ್ಕಲಿಗ’ ಎಂದೇ ಬರೆಯಿಸಿ: ಸಭೆಯಲ್ಲಿ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗವು ಕೈಗೊಳ್ಳಲಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿರುವ ಕೆಲ ನ್ಯೂನತೆಗಳನ್ನು ಸರಿಪಡಿಸಬೇಕು ಹಾಗೂ ನವರಾತ್ರಿ ಕಾರಣ ಸಮೀಕ್ಷೆಯನ್ನು ಮುಂದೂಡಬೇಕು ಎಂದು ಒಕ್ಕಲಿಗ ಸಮುದಾಯ ಆಗ್ರಹಿಸಿದೆ.

ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಅವರ ನೇತೃತ್ವದಲ್ಲಿ ಇಲ್ಲಿ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಶನಿವಾರ ಒಕ್ಕಲಿಗ ಸಮುದಾಯದ ಸಭೆ ನಡೆಯಿತು. ಸ್ವಾಮೀಜಿಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಚಿವರು, ಸಂಸದರು, ಶಾಸಕರು, ಒಕ್ಕಲಿಗರ ಸಂಘದ ಪದಾಧಿಕಾರಿಗಳು ಪಾಲ್ಗೊಂಡು, ಸಾಧಕ -ಬಾಧಕಗಳ ಬಗ್ಗೆ ಚರ್ಚಿಸಿದರು.

ಸಮೀಕ್ಷೆ ವೇಳೆ ಒಕ್ಕಲಿಗ ಸಮುದಾಯದವರು ಜಾತಿ ಕಾಲಂನಲ್ಲಿ ಕಡ್ಡಾಯವಾಗಿ ‘ಒಕ್ಕಲಿಗ’ ಎಂದೇ ಬರೆಯಿಸಬೇಕು. ಅನಿವಾರ್ಯ ಇದ್ದರೆ ಮಾತ್ರ ಉಪಜಾತಿಯ ಬಗ್ಗೆ ಬರೆಯಿಸಬಹುದು. ಇಲ್ಲವಾದರೆ ಬಿಡಬಹುದು ಎಂದು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಸಭೆ ಬಳಿಕ ಮಾತನಾಡಿದ ನಿರ್ಮಲಾನಂದನಾಥ ಸ್ವಾಮೀಜಿ, ‘3.5 ಕೋಟಿ ಜನಸಂಖ್ಯೆ ಇರುವ ತೆಲಂಗಾಣದಲ್ಲಿ ಶೈಕ್ಷಣಿಕ, ಸಾಮಾಜಿಕ ಸಮೀಕ್ಷೆಗೆ 65 ದಿನ ತೆಗೆದುಕೊಂಡಿದ್ದರು. ಒಳ ಮೀಸಲಾತಿ ಕುರಿತ ವರದಿ ನೀಡಲು ನಾಗಮೋಹನದಾಸ್ ಆಯೋಗ 45 ದಿನ ತೆಗೆದುಕೊಂಡಿತ್ತು. ರಾಜ್ಯದಲ್ಲಿ ಸಾಲು ಸಾಲು ಹಬ್ಬಗಳು ಇವೆ. ರಜೆಯ ಕಾರಣ ಹಲವರು ಪ್ರವಾಸ ಹೋಗಿರುತ್ತಾರೆ. ಏಳು ಕೋಟಿ ಜನಸಂಖ್ಯೆಯ ರಾಜ್ಯದಲ್ಲಿ 15 ದಿನಗಳಲ್ಲಿ ಸಮೀಕ್ಷೆ ಪೂರ್ಣಗೊಳಿಸಲು ಸಾಧ್ಯವೇ? ಸಮೀಕ್ಷೆಯಲ್ಲಿರುವ ಕೆಲ ಲೋಪಗಳನ್ನು ಸರಿಪಡಿಸುವಂತೆ ಸಮುದಾಯವನ್ನು ಪ್ರತಿನಿಧಿಸುವ ಸಚಿವರ ಮೂಲಕ ಸರ್ಕಾರಕ್ಕೆ ಗಮನಕ್ಕೆ ತರಲಾಗಿದ್ದು, ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸುವ ವಿಶ್ವಾಸ ಇದೆ’ ಎಂದು ಹೇಳಿದರು.

‘ಕೇಂದ್ರ ಸರ್ಕಾರವು ಜನವರಿಯಲ್ಲಿ ಜಾತಿಗಣತಿ, ಜನಗಣತಿ ನಡೆಸಿದ ಬಳಿಕ ವರದಿ ಬಿಡುಗಡೆ ಮಾಡಲಿದೆ. ಹಾಗಾಗಿ ರಾಜ್ಯ ಸರ್ಕಾರ ಕೇವಲ ಶೈಕ್ಷಣಿಕ ಮತ್ತು ಸಾಮಾಜಿಕ ಸ್ಥಿತಿಗತಿಯ ಬಗ್ಗೆ ವರದಿ ಮಾಡಲಿ. ಸಮೀಕ್ಷೆಯಲ್ಲಿ ಹೊಸ ಜಾತಿಗಳನ್ನು ಸೇರಿಸಿ ಗೊಂದಲ ಉಂಟು ಮಾಡಲಾಗಿದೆ. ಆಯೋಗ ಸ್ವಾಯತ್ತ ಸಂಸ್ಥೆ ಇರಬಹುದು. ಗೊಂದಲಗಳ ಬಗ್ಗೆ ಚರ್ಚಿಸಿ, ಬಗೆಹರಿಸಬೇಕು. ಧರ್ಮದ ಹೆಸರಿನಲ್ಲಿ ಸಮುದಾಯ ಒಡೆಯಬಾರದು’ ಎಂದು ಸ್ವಾಮೀಜಿ ಹೇಳಿದರು.

ಕೆಂಗೇರಿಯ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ, ‘ಕೆಳಮಟ್ಟದಲ್ಲಿರುವ ಅನಕ್ಷರಸ್ಥ ಸಮುದಾಯಕ್ಕೆ ಸಮೀಕ್ಷೆ ಬಗ್ಗೆ ಅರಿವು ಮೂಡಿಸಬೇಕು. ಹದಿನೈದು ದಿನದಲ್ಲಿ ಸಮೀಕ್ಷೆ ನಡೆಸಲು ಆಗುವುದಿಲ್ಲ. ಕನಿಷ್ಠ 45 ದಿನಗಳಾದರೂ ಗಣತಿದಾರರಿಗೆ ಅವಕಾಶ ನೀಡಬೇಕು. ಇಲ್ಲವಾದರೆ ಗಣತಿದಾರರು ಗೊಂದಲ ಮಾಡಿಕೊಂಡು, ಯಾವುದೋ ಕಾಲಂನಲ್ಲಿ ಏನೋ ನಮೂದಿಸಿ, ಸಮಸ್ಯೆ ಉಂಟು ಮಾಡುವ ಸಾಧ್ಯತೆ ಇರುತ್ತದೆ’ ಎಂದು ತಿಳಿಸಿದರು.

> ತರಾತುರಿಯಲ್ಲಿ ಸಮೀಕ್ಷೆ ಮಾಡಿದರೆ ಅಂಕಿ ಅಂಶ ಹಾಗೂ ಜಾತಿ ಜಾತಿಗಳ ನಡುವೆ ಸಮಸ್ಯೆ ಉಂಟಾಗಬಹುದು. ಕನಿಷ್ಠ 60 ದಿನಗಳ ಮಟ್ಟಿಗೆ ಸಮೀಕ್ಷೆ ಮುಂದೂಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ
> **ನಿಶ್ಚಲಾನಂದನಾಥ ಸ್ವಾಮೀಜಿ,** ವಿಶ್ವ ಒಕ್ಕಲಿಗ ಮಹಾಸಂಸ್ಥಾನ, ಕೆಂಗೇರಿ

> ಈಗ ಬೆಳೆ ಕಟಾವಿಗೆ ಬಂದಿದ್ದು ಪಿತೃಪಕ್ಷ ಆಚರಿಸುತ್ತಾರೆ. ಸಾವಿರಾರು ಆಕ್ಷೇಪಣೆ ಸಲ್ಲಿಕೆಯಾಗಿದ್ದರೂ ಆಯೋಗ ಉತ್ತರಿಸಿಲ್ಲ. ಸರ್ಕಾರ ಮಧ್ಯೆ ಪ್ರವೇಶಿಸಿ, ಪರಿಹಾರ ಕಂಡುಕೊಂಡು ಸಮೀಕ್ಷೆ ನಡೆಸಬೇಕು
> **ನಂಜಾವಧೂತ ಸ್ವಾಮೀಜಿ** ಸ್ಫಟಿಕಪುರಿ ಮಠ

ಬೆಂಗಳೂರಿನ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ, ಡಿ.ಕೆ.ಶಿವಕುಮಾರ್, ಡಿ.ವಿ.ಸದಾನಂದಗೌಡ, ಎಚ್‌.ಡಿ.ಕುಮಾರಸ್ವಾಮಿ ಪಾಲ್ಗೊಂಡಿದ್ದರು

ಸಮುದಾಯಕ್ಕೆ ಮಾರ್ಗದರ್ಶನ

ಸಂಘದ ವತಿಯಿಂದ ಮಠಾಧೀಶರು, ಮುಖಂಡರು ಹಳ್ಳಿ, ನಗರ, ಪಟ್ಟಣಗಳಿಗೆ ತೆರಳಿ ಸಮುದಾಯದ ಜನರಿಗೆ ಫಾರಂ ಹೇಗೆ ಭರ್ತಿ ಮಾಡಬೇಕು ಎಂಬುದರ ಬಗ್ಗೆ ಜಾಗೃತಿ ಮೂಡಿಸುವರು. ಈಗಾಗಲೇ ಸಂಘದ ಎರಡು ಸಾವಿರ ನೌಕರರನ್ನು ತಾಲ್ಲೂಕು ಕೇಂದ್ರಗಳಿಗೆ ನಿಯೋಜಿಸಿದ್ದು, ಅವರು ಮಾರ್ಗದರ್ಶನ ನೀಡುತ್ತಿದ್ದಾರೆ ಎಂದು ಒಕ್ಕಲಿಗರ ಸಂಘದ ಅಧ್ಯಕ್ಷ ಕೆಂಚಪ್ಪಗೌಡ ಹೇಳಿದರು.

ಜಾತಿಯ ಪಟ್ಟಿಯಲ್ಲಿ ಹೊಸ ಜಾತಿಗಳ ಸೇರ್ಪಡೆ ಹಾಗೂ ಹಿಂದೂ ಜಾತಿಗಳ ಹೆಸರಿನ ಜೊತೆಗೆ ಕ್ರಿಶ್ಚಿಯನ್ ಪದ ಉಲ್ಲೇಖಿಸಿ ಗೊಂದಲ ಉಂಟು ಮಾಡಲಾಗಿದೆ. ಎಲ್ಲಾ ಸಮುದಾಯಕ್ಕೂ ಸರ್ಕಾರ ನ್ಯಾಯ ಕೊಡಿಸಬೇಕು ಎಂದರು.

ಎಚ್‌ಡಿಕೆ–ಡಿಕೆಶಿ ಹಸ್ತಲಾಘವ

ನಿರ್ಮಲಾನಂದನಾಥ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಮುದಾಯದ ರಾಜಕೀಯ ನಾಯಕರು ಪಾಲ್ಗೊಂಡು ಒಗ್ಗಟ್ಟು ಪ್ರದರ್ಶಿಸಿದರು. ಕೇಂದ್ರ ಸಚಿವ ಕುಮಾರಸ್ವಾಮಿ ಮತ್ತು ಉಪ ಮುಖ್ಯಮಂತ್ರಿ ಶಿವಕುಮಾರ್ ಪರಸ್ಪರ ಹಸ್ತಲಾಘವ ಮಾಡಿ, ಉಭಯ ಕುಶಲೋಪರಿ ವಿಚಾರಿಸಿದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಎಂ.ಸಿ. ಸುಧಾಕರ್, ಎನ್.ಚಲುವರಾಯಸ್ವಾಮಿ, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಶಾಸಕ ಸಿ.ಎನ್. ಅಶ್ವತ್ಥನಾರಾಯಣ, ಸಂಸದ ಕೆ.ಸುಧಾಕರ್, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಪಾಲ್ಗೊಂಡಿದ್ದರು.

ಸುದ್ದಿ 2 ನಿಮಿಷ

‘2ಎ’ ಮೀಸಲಾತಿಗಾಗಿ ಕ್ರಾಂತಿಕಾರಿ ಹೋರಾಟದ ಸಂಕಲ್ಪ –ಸ್ವಾಮೀಜಿ

ಹಾರೂಗೇರಿ (ಬೆಳಗಾವಿ ಜಿಲ್ಲೆ): ‘ಪಂಚಮಸಾಲಿ ಸಮಾಜಕ್ಕೆ ‘2ಎ’ ಮೀಸಲಾತಿಗೆ ಆಗ್ರಹಿಸಿ ಕ್ರಾಂತಿಕಾರಿ ಹೋರಾಟದ ಸಂಕಲ್ಪ ತೊಟ್ಟಿದ್ದೇವೆ’ ಎಂದು ಕೂಡಲಸಂಗಮ ಪಂಚಮಸಾಲಿ ಪೀಠಾಧಿಪತಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ಶನಿವಾರ ಇಲ್ಲಿ ಪ್ರಕಟಿಸಿದರು.

ರಾಯಬಾಗ ತಾಲ್ಲೂಕಿನ ಹಾರೂಗೇರಿಯಲ್ಲಿ ನಡೆದ ‘ಪ್ರತಿಜ್ಞಾ ಕ್ರಾಂತಿ’ ಹೋರಾಟದಲ್ಲಿ ಅವರು, ‘ಮೀಸಲಾತಿ ಸಿಗುವವರೆಗೂ ಹೋರಾಟ ಮುಂದುವರೆಸುತ್ತೇವೆ’ ಎಂದರು.



ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು, ‘ರಾಜ್ಯ ಸರ್ಕಾರದಿಂದ ಮೀಸಲಾತಿ ಸಿಗುವ ಭರವಸೆ ಇಲ್ಲ. ಮುಂದೆ ಎಲ್ಲ ಅಡೆ–ತಡೆ ಮೀರಿ ಹೋರಾಟ ಮಾಡಬೇಕಿದೆ’ ಎಂದರು.

ಶಾಸಕ ಸಿದ್ದು ಸವದಿ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಹಾಗೂ ಸ್ಥಳೀಯ ಮುಖಂಡರು ಈ ಸಂದರ್ಭದಲ್ಲಿ ಮಾತನಾಡಿದರು.

‘ಇಸ್ಲಾಂ’ ಧರ್ಮ, ‘ಮುಸ್ಲಿಂ’ ಜಾತಿ ಎಂದು ನಮೂದಿಸಿ’

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಮುಸ್ಲಿಂ ಸಮುದಾಯದವರು ‘ಇಸ್ಲಾಂ’ ಧರ್ಮದ ಅಡಿಯಲ್ಲಿ ತಮ್ಮನ್ನು ‘ಮುಸ್ಲಿಂ’ ಜಾತಿ ಎಂದು ಗುರುತಿಸಿಕೊಳ್ಳಬೇಕು’ ಎಂದು ಸಮುದಾಯದ ನಾಯಕರು ಮನವಿ ಮಾಡಿದ್ದಾರೆ.

ಅಲ್ಪಸಂಖ್ಯಾತ ಕಲ್ಯಾಣ ಸಚಿವ ಬಿ. ಝಡ್. ಜಮೀರ್ ಅಹಮದ್ ಖಾನ್ ಅಧ್ಯಕ್ಷತೆಯಲ್ಲಿ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆದಿದೆ.

ಪೌರಾಡಳಿತ ಸಚಿವ ರಹೀಂ ಖಾನ್, ಪರಿಷತ್‌ನ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹಮದ್, ನಸೀರ್ ಅಹ್ಮದ್, ನಿವೃತ್ತ ಐಎಎಸ್ ಅಧಿಕಾರಿ ಎಲ್.ಕೆ. ಅತೀಕ್, ಶಾಸಕ ಯಾಸಿರ್ ಅಹ್ಮದ್ ಖಾನ್ ಪಠಾಣ್, ಬೆಂಗಳೂರು ಜಾಮಿಯಾ ಮಸೀದಿಯ ಇಮಾಮ್ ಮೌಲಾನಾ ಮಕ್ಸೂದ್ ಇಮ್ರಾನ್ ರಶಾದಿ ಸಭೆಯಲ್ಲಿದ್ದರು.

ಸಭೆಯ ಕುರಿತು ಪ್ರತಿಕ್ರಿಯಿಸಿದ ಸಲೀಂ ಅಹಮದ್, ‘ರಾಜ್ಯದಾದ್ಯಂತ ನಡೆಯಲಿರುವ ಈ ಸಮೀಕ್ಷೆಯಲ್ಲಿ ಎಲ್ಲ ಸಮುದಾಯದವರೂ ಭಾಗವಹಿಸಬೇಕು. ನಮ್ಮ ಸಮುದಾಯದವರು ‘ಇಸ್ಲಾಂ’ ಅನ್ನು ಧರ್ಮವಾಗಿ, ‘ಮುಸ್ಲಿಂ’ ಅನ್ನು ಜಾತಿಯಾಗಿ ಮತ್ತು ಅನ್ವಯವಾಗುವ ಎಲ್ಲ ಕಡೆ ತಮ್ಮ ಉಪಜಾತಿಯನ್ನು ನಮೂದಿಸಲು ನಿರ್ಧರಿಸಲಾಯಿತು’ ಎಂದರು.

‘ಮುಸ್ಲಿಮರು ಉಪಜಾತಿಗಳನ್ನು ನಮೂದಿಸಬೇಕು. ಏಕೆಂದರೆ, ಈ ಉಪಜಾತಿಗಳು ವೃತ್ತಿ ಆಧಾರಿತ ಆಗಿವೆ. ಪ್ರವರ್ಗ 1ರಲ್ಲಿ ಇರುವ ಮುಸ್ಲಿಮರು ತಮ್ಮ ಉಪಜಾತಿಯನ್ನು ನಮೂದಿಸದಿದ್ದರೆ ಅಂಥ ಜಾತಿಗಳು ಪ್ರವರ್ಗ 2ಬಿ ಅಡಿಗೆ ಬರಬಹುದು’ ಎಂದರು.

ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಮಹಾ ಒಕ್ಕೂಟ ಎಚ್ಚರಿಕೆ

‘ನ್ಯಾಯ ಸಿಗದೆ ದೆಹಲಿ ಬಿಟ್ಟು ಕದಲಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಒಳಮೀಸಲಾತಿ ಅನುಷ್ಠಾನದ ಸಂದರ್ಭದಲ್ಲಿ ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಅಲೆಮಾರಿಗಳಿಗೆ ಘೋರ ಅನ್ಯಾಯ ಮಾಡಿದೆ. ಈ ವಿಷಯದಲ್ಲಿ ಅಲೆಮಾರಿಗಳಿಗೆ ಕಾಂಗ್ರೆಸ್ ಹೈಕಮಾಂಡ್ ನ್ಯಾಯ ಕೊಡಿಸುವ ತನಕ ನವದೆಹಲಿ ಬಿಟ್ಟು ಕದಲುವುದಿಲ್ಲ’ ಎಂದು ಕರ್ನಾಟಕ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಮಹಾ ಒಕ್ಕೂಟ ಎಚ್ಚರಿಸಿದೆ.

75 ವರ್ಷಗಳಿಂದ ತುಳಿತಕ್ಕೆ ಒಳಗಾಗಿರುವ ಸಮುದಾಯಕ್ಕೆ ಆಗಿರುವ ಅನ್ಯಾಯ ಸರಿಪಡಿಸಬೇಕು ಎಂದು ಒತ್ತಾಯಿಸಿ ಮಹಾ ಒಕ್ಕೂಟದ ಪದಾಧಿಕಾರಿಗಳು ಕಾಂಗ್ರೆಸ್ ರಾಷ್ಟ್ರೀಯ ನಾಯಕರನ್ನು ಶನಿವಾರ ಇಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಿದರು. ಅಕ್ಟೋಬರ್ 2ರಂದು ನಡೆಯಲಿರುವ ‘ದೆಹಲಿ ಚಲೊ’ ಸಂಬಂಧ ಪೂರ್ವಭಾವಿ ಸಭೆ ನಡೆಸಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಸಾಮಾಜಿಕ ಕಾರ್ಯಕರ್ತ ನೂರ್ ಶ್ರೀಧರ್, ‘ದೆಹಲಿ ಚಲೊದಲ್ಲಿ ಸಾವಿರ ಅಲೆಮಾರಿಗಳು ಪಾಲ್ಗೊಳ್ಳಲಿದ್ದಾರೆ. 250 ಕಲಾವಿದರು ವಿವಿಧ ದೇವರ ವೇಷ ತೊಟ್ಟು ಪ್ರತಿಭಟನೆ ನಡೆಸಲಿದ್ದಾರೆ. ಅವಕಾಶ ಸಿಕ್ಕಿದರೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಅಹವಾಲು ಹೇಳಿಕೊಳ್ಳುತ್ತೇವೆ. ಸಿಗದಿದ್ದರೆ ಎಐಸಿಸಿ ಕಚೇರಿ ಬಳಿ ಧರಣಿ ನಡೆಸುತ್ತೇವೆ. ನ್ಯಾಯ ಸಿಗುವವವರೆಗೆ ಜಾಗ ಬಿಟ್ಟು ಕದಲುವುದಿಲ್ಲ‘ ಎಂದರು.

ಹಂಪಿ ಕನ್ನಡ ವಿವಿ ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕ ಎ.ಎಸ್. ಪ್ರಭಾಕರ್, ‘ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗವು ಪರಿಶಿಷ್ಟ ಜಾತಿಗಳ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ದತ್ತಾಂಶಗಳನ್ನು ಸಂಗ್ರಹಿಸಿ ಮೀಸಲಾತಿಯನ್ನು ಹಂಚುವ ವೈಜ್ಞಾನಿಕ ಮಾದರಿ ಸರ್ಕಾರಕ್ಕೆ ಸಲ್ಲಿಸಿತ್ತು’ ಎಂದರು.

‘ಸರ್ಕಾರವು ಈ ಶಿಫಾರಸುಗಳನ್ನು ತಿರಸ್ಕರಿಸಿದೆ. 49 ಅಲೆಮಾರಿ ಸಮುದಾಯಗಳನ್ನು ಹಾಗೂ 10 ಸೂಕ್ಷ್ಮ ಪರಿಶಿಷ್ಟ ಜಾತಿ ಸಮುದಾಯಗಳನ್ನು ಒಳಗೊಂಡಂತೆ 59 ಸಮುದಾಯಗಳನ್ನು ಸಿ ಗುಂಪಿನ ಬಲಾಢ್ಯ ಸ್ಪೃಶ್ಯ ಗುಂಪಿನ ಜತೆಗೆ ಸೇರಿಸಿದೆ. ಇದು ಸುಪ್ರೀಂ ಕೋರ್ಟ್ ತೀರ್ಪಿಗೆ ವಿರುದ್ಧ. ಇದು ಬಲಾಢ್ಯ ಸಮುದಾಯಗಳನ್ನು ತೃಪ್ತಿಪಡಿಸಲು ಸರ್ಕಾರ ಮಾಡಿರುವ ಘನಘೋರ ರಾಜಕೀಯ ನಿರ್ಧಾರ’ ಎಂದು ದೂರಿದರು.

> ನಮ್ಮ ಪರವಾಗಿ ಯಾವ ರಾಜಕೀಯ ಲಾಬಿ ಇಲ್ಲ. ಕರ್ನಾಟಕದ ಮಾನವಂತ ಜನರ ಪ್ರೀತಿ ಮಾತ್ರ ನಮ್ಮ ಜತೆಗಿದೆ. ಬೀದಿಯಲ್ಲಿ ಹಾಗೂ ಬೆಂಗಳೂರಿನಲ್ಲಿ ಸಿಗದ ನ್ಯಾಯವನ್ನು ಅರಸುತ್ತಾ ದೆಹಲಿಗೆ ಬರುತ್ತಿದ್ದೇವೆ
> **ನೂರ್ ಶ್ರೀಧರ್,** ಸಾಮಾಜಿಕ ಕಾರ್ಯಕರ್ತ

> ಸರ್ಕಾರದ ಈ ತೀರ್ಮಾನ ಸಾಮಾಜಿಕ ಅನ್ಯಾಯವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗೊತ್ತಿದೆ. ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಇದು ಅಸಹಾಯಕತೆಯ ಪ್ರಶ್ನೆಯಲ್ಲ, ಇಚ್ಛಾಶಕ್ತಿಯ ಕೊರತೆ
> **ಎ.ಎಸ್.ಪ್ರಭಾಕರ್,** ಪ್ರಾಧ್ಯಾಪಕ

‘ಜಾತಿ ಸಮೀಕ್ಷೆ ಬುಡಮೇಲು ಯತ್ನ’

ಹೊಸಪೇಟೆ (ವಿಜಯನಗರ): ‘ಅತಿ ಹಿಂದುಳಿದ ಸಮಾಜಗಳಿಗೆ ಮೀಸಲಾತಿ ಮತ್ತು ಇತರ ಸೌಲಭ್ಯಗಳಿಗೆ ಜಾತಿ ಸಮೀಕ್ಷೆ ತುಂಬಾ ಮುಖ್ಯ. ಇದನ್ನು ಬುಡಮೇಲಾಗಿಸಲು ಅವಕಾಶ ನೀಡಬಾರದು’ ಎಂದು ಕರ್ನಾಟಕ ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಅಧ್ಯಕ್ಷರೂ ಆಗಿರುವ ಕೆಪಿಸಿಸಿ ಉಪಾಧ್ಯಕ್ಷ ಎಂ.ಸಿ. ವೇಣುಗೋಪಾಲ್ ಹೇಳಿದರು.

‘ಅತಿ ಹಿಂದುಳಿದ ಜಾತಿ, ಸಮಾಜಗಳು ಸಮೀಕ್ಷೆ ವೇಳೆ ಮೂಲ ಸಮಾಜದ ಹೆಸರು ಬಳಸಬೇಕು. ಒಳಪಂಗಡ ಬರೆಸಬಾರದು’ ಎಂದು ಸುದ್ದಿಗೋಷ್ಠಿಯಲ್ಲಿ ಸಲಹೆ ಮಾಡಿದರು.

‘ಸಮಾನ ಅವಕಾಶ ಕಲ್ಪಿಸಲು ಸಮೀಕ್ಷೆ’

ಪ್ರಜಾವಾಣಿ ವಾರ್ತೆ

ಗದಗ: ‘ಸಮೀಕ್ಷೆಯು ಜಾತಿಗಳಷ್ಟೇ ಸೀಮಿತವಾಗದೇ, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಅಂಶಗಳನ್ನು ಒಳಗೊಂಡಿದೆ. ಜಾತಿ ಮಾಹಿತಿ ಜೊತೆಗೆ ಜನರ ಬದುಕಿನ ಸ್ಥಿತಿಗತಿ ವಿವರ ಪಡೆದು, ಅವಕಾಶ ವಂಚಿತರಿಗೆ ಸಮಾನ ಅವಕಾಶ ನೀಡುವುದು ಇದರ ಉದ್ದೇಶ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ತಿಳಿಸಿದರು.

‘ಜಾತಿ ಸಮೀಕ್ಷೆಯಲ್ಲಿ ಕ್ರಿಶ್ಚಿಯನ್‌ನಡಿ ವಿವಿಧ ಜಾತಿಗಳನ್ನು ಉಲ್ಲೇಖಿಸಲಾಗುವುದೇ ಅಥವಾ ಇಲ್ಲವೇ ಎಂಬುದು ಹಿಂದುಳಿದ ವರ್ಗಗಳ ಆಯೋಗವೇ ನಿರ್ಧರಿಸುತ್ತದೆ. ಆಯೋಗವು ಶಾಸನಬದ್ಧ ಸಂಸ್ಥೆಯಾಗಿದ್ದು, ಸಮೀಕ್ಷೆ ನಡೆಸಲು ಮಾರ್ಗಸೂಚಿಗಳನ್ನಷ್ಟೇ ಸರ್ಕಾರ ನೀಡಿದೆ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಸಿದ್ದರಾಮಯ್ಯ

‘ಜಾತಿ ಸಮೀಕ್ಷೆ ಹಿಂದೆ ಷಡ್ಯಂತ್ರವಿದೆ ಎಂದು ವಚನಾನಂದ ಸ್ವಾಮೀಜಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ‘ಕೇಂದ್ರ ಸರ್ಕಾರವೂ ಜಾತಿಸಮೀಕ್ಷೆ ನಡೆಸಲಿದ್ದು, ಅದರಲ್ಲಿಯೂ ಷಡ್ಯಂತ್ರ ಇರಲಿದೆಯೇ?’ ಎಂದು ಪ್ರಶ್ನಿಸಿದರು.

ಸಮೀಕ್ಷೆ ವಿಷಯದಲ್ಲಿ ಬಿಜೆಪಿ ರಾಜಕೀಯ ಮಾಡುತ್ತಿದೆ. ಸಮೀಕ್ಷೆಯ ವಿಷಯದಲ್ಲಿ ಜಾತಿ ಒಡೆಯುವ ಪ್ರಶ್ನೆಯೇ ಇಲ್ಲ’ ಎಂದರು.

‘ರಾಜ್ಯದಲ್ಲಿ ಸಂಭವಿಸಿರುವ ಬೆಳೆಹಾನಿ ಬಗ್ಗೆ ಜಂಟಿ ಸಮೀಕ್ಷೆ ಪ್ರಗತಿಯಲ್ಲಿದೆ. ವರದಿ ಬಂದ ಬಳಿಕ ಬೆಳೆ ಪರಿಹಾರ ನೀಡಲಾಗುವುದು. ಗದಗ ಜಿಲ್ಲೆಯಲ್ಲಿ ಇನ್ನೆರೆಡು ದಿನಗಳಲ್ಲಿ ಜಂಟಿಸಮೀಕ್ಷೆಯ ಪೂರ್ಣಗೊಳ್ಳಲಿದೆ’ ಎಂದರು.

‘ಹೊಸ ಸಮೀಕ್ಷೆಯಿಂದ ರಾಜ್ಯಕ್ಕೆ ಬೆಂಕಿ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಹೆಸರಿನಲ್ಲಿ ರಾಜ್ಯ ಸರ್ಕಾರ ಜಾತಿ ಗಣತಿ ಮಾಡುತ್ತಿದ್ದು, ಭವಿಷ್ಯದಲ್ಲಿ ಇದು ದೊಡ್ಡ ಸಮಸ್ಯೆಗೆ ಕಾರಣವಾಗಲಿದೆ. ಇದರ ಪ್ರತಿಫಲವನ್ನು ಕಾಂಗ್ರೆಸ್ ಪಕ್ಷ ಅನುಭವಿಸಲಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಒಕ್ಕಲಿಗ ಸಮುದಾಯದ ಸಭೆ ಬಳಿಕ ಮಾತನಾಡಿದ ಅವರು, ‘ಸಭೆಯಲ್ಲಿ ಸಾಧಕ -ಬಾಧಕಗಳ ಬಗ್ಗೆ ಚರ್ಚಿಸಿದ್ದು, ಜಾತಿ ವಿಚಾರದಲ್ಲಿ ಒಕ್ಕಲಿಗರಿಗೆ ದೊಡ್ಡ ಮಟ್ಟದ ಪೆಟ್ಟು ಬಿದ್ದಿದೆ. ಬೆಂಗಳೂರಿನಲ್ಲಿ ಹೆಚ್ಚು ಭೂಮಿ ಕಳೆದುಕೊಂಡಿದ್ದು ಒಕ್ಕಲಿಗ ಸಮಾಜ. ಡಿ.ಕೆ. ಶಿವಕುಮಾರ್ ಎಲ್ಲಾ ಸಮಸ್ಯೆ ಬಗೆಹರಿಸುವ ಜವಾಬ್ದಾರಿ ತೆಗೆದುಕೊಂಡಿದ್ದಾರೆ. ಸರ್ಕಾರದ ಸಮೀಕ್ಷೆ ನಂತರ ಬರಲಿರುವುದು ಮತ್ತೊಂದು ಎಚ್. ಕಾಂತರಾಜ ವರದಿ ಅಲ್ಲ, ಅದಕ್ಕಿಂತಲೂ ಕೆಟ್ಟದಾಗಿರುತ್ತದೆ’ ಎಂದರು.

‘ಸಮೀಕ್ಷೆಯಲ್ಲಿ ಅನ್ಯಾಯವಾದರೆ ಸ್ವಾಮೀಜಿಗಳ ನೇತೃತ್ವ ದಲ್ಲಿ ಮುಂದಿನ ಹೋರಾಟದ ರೂಪುರೇಷೆ ಬಗ್ಗೆ ಚರ್ಚೆ ಮಾಡಿದ್ದೇವೆ. ರಾಜ್ಯ ಸರ್ಕಾರ ಬೆಂಕಿ ಹಚ್ಚುವ ಕೆಲಸ ಮಾಡಿದೆ. ಸಮೀಕ್ಷೆಗೆ 15 ದಿನಗಳ ಅವಕಾಶ ಕೊಟ್ಟಿದ್ದಾರೆ. ಅದರಲ್ಲಿ 9 ದಿನ ನವರಾತ್ರಿ, ಉಳಿದ 6 ದಿನಗಳಲ್ಲಿ ಆಯೋಗ ಏನು ವರದಿ ಕೊಡಲು ಸಾಧ್ಯ? ಹಾಗಾದರೆ ಕಾಂತರಾಜ ವರದಿಯನ್ನೇ ಭಟ್ಟಿ ಇಳಿಸುತ್ತಾರಾ’ ಎಂದು ಪ್ರಶ್ನಿಸಿದರು.

‘ಹಿಂದೂ ಕ್ರೈಸ್ತ’ ಕೈಬಿಡದಿದ್ದರೆ ಬಹಿಷ್ಕಾರ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಹಿಂದೂ ಉಪಜಾತಿಗಳ ಜೊತೆ ಸೇರಿಸಿರುವ ಕ್ರಿಶ್ಚಿಯನ್ ಪದ ಬಳಕೆ ಕೈಬಿಡಲಾಗಿದೆ ಎಂದು ಸಿ.ಎಂ ಪ್ರಕಟಿಸದಿದ್ದರೆ ಸಮೀಕ್ಷೆ ಬಹಿಷ್ಕಾರಕ್ಕೆ ಕರೆ ನೀಡಲು ಚಿಂತನೆ ನಡೆದಿದೆ’ ಎಂದು ಗುರುಪುರ ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿ ಹೇಳಿದರು.

ಜಾತಿವಾರು ಸಮೀಕ್ಷೆಯಲ್ಲಿ ಹಿಂದೂವಿನ 47 ಉಪ ಜಾತಿಗಳ ಜೊತೆ ‘ಕ್ರಿಶ್ಚಿಯನ್’ ಎಂದು ಸೇರಿಸಿದ್ದನ್ನು ಖಂಡಿಸಿ ‘ಸಾಮಾಜಿಕ ನ್ಯಾಯ ಜಾಗೃತಿ ವೇದಿಕೆ ಕರ್ನಾಟಕ’ ಮಂಗಳವಾರ ಇಲ್ಲಿ ಏರ್ಪಡಿಸಿದ್ದ ದುಂಡು ಮೇಜಿನ ಸಭೆ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸರ್ಕಾರ ತಕ್ಷಣ ಆಯೋಗಕ್ಕೆ ಸೂಚನೆ ನೀಡಿ ಪಟ್ಟಿಯಿಂದ 47 ಉಪಜಾತಿಗಳ ಕೈಬಿಡಬೇಕು ಎಂದು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈಗಿನಂತೆ ಸಮೀಕ್ಷೆ ನಡೆದಲ್ಲಿ ಮುಂದೆ ಮೀಸಲಾತಿಯಲ್ಲಿ ಏರುಪೇರು ಆಗುವ ಅಪಾಯ ಇದೆ. ಆಯೋಗದ ಈ ನಿರ್ಧಾರ ಮತಾಂತರಕ್ಕೆ ಪ್ರೇರಣೆ ನೀಡಿದಂತಾಗಿದೆ ಎಂದು ಸಭೆ ಅಭಿಪ್ರಾಯಪಟ್ಟಿದೆ ಎಂದರು.

ಯಾವುದೇ ಬಿಷಪ್‌ಗಳು ಈ ಹಿಂದೂ ಕ್ರಿಶ್ಚಿಯನ್ ಜಾತಿಗಳ ಬಗ್ಗೆ ಈವರೆಗೆ ಹೇಳಿಕೆ ನೀಡಿಲ್ಲ. ಹಿಂದೂ ಉಪಜಾತಿಗಳಲ್ಲಿ ಕ್ರಿಶ್ಚಿಯನ್ ಎಂದು ನಮೂದಿಸಿದರೆ ಅವರಿಗೆ ಮೀಸಲಾತಿ ಸಿಗುವುದಿಲ್ಲ ಎಂದು ಮುಖ್ಯಮಂತ್ರಿ ಘೋಷಿಸಬೇಕು ಎಂದು ಸಭೆ ಆಗ್ರಹಿಸಿದೆ ಎಂದರು.

ಮಾಡೂರು ಶಿವಗಿರಿ ಮಠದ ಶಿವಯೋಗಿ ದುರ್ಗಾನಂದ ಸ್ವಾಮೀಜಿ, ಕಾಣಿಯೂರು ಕ್ಷೇತ್ರದ ಮಹಾಬಲೇಶ್ವರ ಸ್ವಾಮೀಜಿ, ಗುರುಪುರ ಜಂಗಮ ಮಠದ ರುದ್ರಮುನಿ ಮಹಾಸ್ವಾಮೀಜಿ, ಓಂಶ್ರೀ ಮಠದ ಮಾತಾಶ್ರೀ ಓಂಶ್ರೀ ಶಿವಜ್ಞಾನಮಯಿ ಸರಸ್ವತಿ, ಓಂಶ್ರೀ ವಿದ್ಯಾನಂದ ಸರಸ್ವತಿ, ಶಿವಾನಂದ ಸ್ವಾಮೀಜಿ ಮುಳಿಯ, ಚಿತ್ರಾಪುರ ಮಠದ ವಿದ್ಯೇಂದ್ರತೀರ್ಥ ಶ್ರೀಪಾದ, ವಿಶ್ವ ಹಿಂದೂ ಪರಿಷತ್ ಮುಖಂಡ ಪ್ರೊ.ಎಂ.ಬಿ.ಪುರಾಣಿಕ್, ಹಿಂದೂ ಜಾಗರಣ ವೇದಿಕೆ ಪ್ರಾಂತ ಕಾರ್ಯಕಾರಿಣಿ ಸದಸ್ಯ ಕೆ.ಟಿ. ಉಲ್ಲಾಸ್ ಭಾಗವಹಿಸಿದ್ದರು.

ಮಂಗಳವಾರ ಮಂಗಳೂರಿನ ರಥಬೀದಿಯ ಬಾಳಂಭಟ್ ಸಭಾಭವನದಲ್ಲಿ ದುಂಡು ಮೇಜಿನ ಸಭೆ ನಡೆಯಿತು

> ತರಾತುರಿಯ ಸಮೀಕ್ಷೆ ಬಗ್ಗೆ ಆತಂಕವಿದೆ. ಆಯೋಗ ಮರುಚಿಂತನೆ ನಡೆಸಿ, ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಬೇಸಿಗೆಯಲ್ಲಿ ಸಮೀಕ್ಷೆ ನಡೆಸುವುದು ಉತ್ತಮ
> **ರಾಜಶೇಖರಾನಂದ ಸ್ವಾಮೀಜಿ,** ಗುರುಪುರ ವಜ್ರದೇಹಿ ಮಠ

ವೀರಶೈವ–ಲಿಂಗಾಯತ ಪ್ರತ್ಯೇಕ ಧರ್ಮದ ಪ್ರಯತ್ನ ನಿಂತಿಲ್ಲ: ಖಂಡ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೀರಶೈವ–ಲಿಂಗಾಯತ ಧರ್ಮ ಎಂದು ಧರ್ಮದ ಕಾಲಂನಲ್ಲಿ ಬರೆಯಿಸಬೇಕು ಎಂಬುದು ಮಹಾಸಭಾ ನಿಲುವು. ಆದರೆ, ಧರ್ಮದ ಕಾಲಂನಲ್ಲಿ ಸರ್ಕಾರ ಗುರುತಿಸಿದ ಧರ್ಮಗಳು ಮಾತ್ರ ಇರುವ ಕಾರಣ ವೀರಶೈವ ಲಿಂಗಾಯತರು ತಮ್ಮ ವಿವೇಚನೆ, ಆತ್ಮಸಾಕ್ಷಿಯಂತೆ ತಮ್ಮ ಧರ್ಮದ ಹೆಸರು ಬರೆಯಿಸಬಹುದು’ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಈಶ್ವರ ಖಂಡ್ರೆ

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ವೀರಶೈವ–ಲಿಂಗಾಯತರು ಪ್ರತ್ಯೇಕ ಧರ್ಮಕ್ಕಾಗಿ ಹಿಂದಿನಿಂದಲೂ ಹೋರಾಟ ನಡೆಸುತ್ತಾ ಬಂದಿದ್ದಾರೆ. ಆದರೆ, ಪ್ರಸ್ತಾವಕ್ಕೆ ಇನ್ನೂ ಮನ್ನಣೆ ಸಿಕ್ಕಿಲ್ಲ. ಸಮುದಾಯಕ್ಕೆ ಜಾಗತಿಕ ಬೆಂಬಲ ಸಿಗಬೇಕು. ಅಲ್ಲಿಯವರೆಗೂ ನಮ್ಮ ನಿಲುವು ಬದಲಾಗದು. ವೀರಶೈವ–ಲಿಂಗಾಯತ ಪ್ರತ್ಯೇಕ ಧರ್ಮಕ್ಕಾಗಿ ಪ್ರಯತ್ನ ಮುಂದುವರಿಸಲಾಗುವುದು’ ಎಂದರು.

‘ವೀರಶೈವ–ಲಿಂಗಾಯತ ಎರಡೂ ಬೇರೆಯಲ್ಲ, ಒಂದೇ ಎನ್ನುವುದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ನಿಲುವಾಗಿದೆ. ಸಿದ್ಧಗಂಗಾ ಮಹಾಸಂಸ್ಥಾನದ ಲಿಂಗೈಕ್ಯ ಶಿವಕುಮಾರ ಸ್ವಾಮೀಜಿ ಅವರೂ ಈ ಕುರಿತು ಖಚಿತ ನಿಲುವು ಹೊಂದಿದ್ದರು. ಶುಕ್ರವಾರ ಹುಬ್ಬಳ್ಳಿಯಲ್ಲಿ ಮಠಾಧಿಪತಿಗಳ ಒಕ್ಕೂಟ ಆಯೋಜಿಸಿದ್ದ ಏಕತಾ ಸಮಾವೇಶದಲ್ಲೂ ಇದಕ್ಕೆ ಸಹಮತ ವ್ಯಕ್ತವಾಗಿದೆ. ರಾಜ್ಯ ಸರ್ಕಾರ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಎಲ್ಲರೂ ಸಹಕಾರ ನೀಡಲಿದ್ದಾರೆ. ಜಾತಿಯ ಕಾಲಂನಲ್ಲಿ ವೀರಶೈವ–ಲಿಂಗಾಯತ ಬಳಸಬೇಕು. ನಂತರ ಅವರವರ ಉಪ ಜಾತಿ ಬರೆಸಬಹುದು’ ಎಂದು ಸಲಹೆ ನೀಡಿದರು.

‘ಎಲ್ಲಾ ಜಾತಿಗಳಲ್ಲೂ ಬಡವರು ಇದಾರೆ. ಸಮಾಜದಲ್ಲಿ ಇರುವ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಿಗಬೇಕು. ಅದೇ ಉದ್ದೇಶಕ್ಕಾಗಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಯುತ್ತಿದೆ. ರಾಜ್ಯದ ಎಲ್ಲ 7 ಕೋಟಿ ಜನರಿಗೂ ತೃಪ್ತಿಯಾಗುವ ರೀತಿಯಲ್ಲಿ ಸಮೀಕ್ಷೆ ನಡೆಯಲಿದೆ. ವೀರಶೈವ ಲಿಂಗಾಯತ ಮಹಾಸಭಾ ವಿಸರ್ಜನೆ ಮಾಡಬೇಕು ಎಂದು ಅಸಂಬದ್ಧ ಹೇಳಿಕೆ ನೀಡಿರುವವರಿಗೆ ಉತ್ತರ ನೀಡುವುದಿಲ್ಲ. ಅವರಿಗೆ ಯಾವುದೇ ಅಸ್ತಿತ್ವ ಇಲ್ಲ’ ಎಂದರು.

ಮಾದಿಗ ಮುಖಂಡರ ತುರ್ತು ಸಭೆಯಲ್ಲಿ ಸಚಿವ ಕೆ.ಎಚ್‌ ಮುನಿಯಪ್ಪ

‘ಮತ್ತೆ ಎಕೆ, ಎಡಿ ಬರೆಸಬೇಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ, ಮುಂದಿನ ವರ್ಷ ಭಾರತ ಸರ್ಕಾರ ನಡೆಸಲಿರುವ ಜಾತಿ ಗಣತಿ ಸಂದರ್ಭದಲ್ಲಿ ಎ.ಕೆ, ಎ.ಡಿ, ಎ.ಎ ಎಂಬುದಾಗಿ ನಮೂದಿಸದೇ ಮೂಲ ಜಾತಿಯನ್ನೇ ಬರೆಯಿಸಬೇಕು ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ನಗರದಲ್ಲಿ ಶನಿವಾರ ನಡೆದ ರಾಜ್ಯ ಮಾದಿಗ ಮುಖಂಡರ ತುರ್ತು ಸಭೆಯಲ್ಲಿ ಅವರು ಮಾತನಾಡಿದರು.

ಒಳಮೀಸಲಾತಿಗಾಗಿ ಪರಿಶಿಷ್ಟ ಜಾತಿಯ ಸಮೀಕ್ಷೆ ನಡೆದಿರುವುದರಿಂದ ಮತ್ತೆ ಹಿಂದುಳಿದ ವರ್ಗದ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬೇಕಾ ಎಂಬ ಪ್ರಶ್ನೆ ಕೆಲವರಲ್ಲಿ ಇದೆ. ಎಲ್ಲರೂ ಪಾಲ್ಗೊಳ್ಳಬೇಕು. ಸರಿಯಾದ ಮಾಹಿತಿಯನ್ನು ದಾಖಲಿಸಬೇಕು. ಹೀಗೆ ಬರೆಯಿಸುವಾಗ ಆದಿ ಕರ್ನಾಟಕ (ಎ.ಕೆ), ಆದಿ ದ್ರಾವಿಡ(ಎ.ಡಿ), ಆದಿ ಆಂಧ್ರ (ಎ.ಎ) ಎಂದು ಬರೆಯಿಸಬೇಡಿ ಎಂದರು.

ನಗರದ ಅರಮನೆ ಮೈದಾನದಲ್ಲಿ ನಡೆದ ರಾಜ್ಯ ಮಾದಿಗ ಮುಖಂಡರ ಸಭೆಯನ್ನು ಎಚ್‌ ಆಂಜನೇಯ, ಕೆ.ಎಚ್‌ ಮುನಿಯಪ್ಪ ತಮಟೆ ಬಾರಿಸುವ ಮೂಲಕ ಉದ್ಘಾಟಿಸಿದರು. ಎಲ್‌ ಹನುಮಂತಯ್ಯ, ಅಂಬಣ್ಣ ಅರೋಲಿಕರ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಮಾಜಿ ಸಚಿವ ಎಚ್. ಆಂಜನೇಯ ಮಾತನಾಡಿ, ‘ಮಾದಿಗರು ಎಲ್ಲದರಲ್ಲಿಯೂ ಹಿಂದುಳಿದಿದ್ದು, ಜನಸಂಖ್ಯೆಯಲ್ಲಿ ಮಾತ್ರ ಮುಂದೆ ಇದ್ದಾರೆ. ನ್ಯಾ. ಸದಾಶಿವ ಆಯೋಗ, ಮಾಧುಸ್ವಾಮಿ ಉಪಸಮಿತಿ, ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗದ ವರದಿಗಳೆಲ್ಲವೂ ಇದನ್ನೇ ಹೇಳಿವೆ’ ಎಂದರು.

ಸಮುದಾಯದ ಮುಖಂಡ ಎಲ್. ಹನುಮಂತಯ್ಯ ಮಾತನಾಡಿ, ‘ಇಂದು ಒಳಮೀಸಲಾತಿ ಪಡೆದಿರುವ ಹಲವು ಸಮುದಾಯಗಳು ಒಳಮೀಸಲಾತಿ ಜಾರಿಗೆ ಬರಬಾರದು ಎಂದು ಪ್ರಯತ್ನಿಸಿದ್ದರು. ಯಾಕೆಂದರೆ, ಎಸ್‌ಸಿಗೆ ಮೀಸಲಾದ 1,000 ಸರ್ಕಾರಿ ಉದ್ಯೋಗಗಳಲ್ಲಿ 600ರಷ್ಟು ಮಾದಿಗರು ಇರಬೇಕಿತ್ತು. ಆದರೆ, 60 ಮಾತ್ರ ಇದ್ದಾರೆ. ಪಿಡಬ್ಲ್ಯೂಡಿಯ 400 ಎಂಜಿನಿಯರ್‌ಗಳಲ್ಲಿ 40 ಜನರಷ್ಟೇ ಮಾದಿಗರಾಗಿದ್ದಾರೆ. 1,000 ಪ್ರಾಧ್ಯಾಪಕರಲ್ಲಿ 16 ಜನರಷ್ಟೇ ಮಾದಿಗರಿದ್ದಾರೆ. ಒಳಮೀಸಲಾತಿ ಜಾರಿಗೆ ಬಂದಿರುವುದರಿಂದ ಮಾದಿಗರ ಪ್ರಮಾಣ ಹೆಚ್ಚಲಿದೆ ಎಂಬ ಕಾರಣಕ್ಕೆ ವಿರೋಧಿಸಿದ್ದರು’ ಎಂದು ಹೇಳಿದರು.

ವಿಶೇಷ ಪ್ಯಾಕೇಜ್

ಪರಿಶಿಷ್ಟ ಜಾತಿಯಲ್ಲಿರುವ ಎಲ್ಲ 101 ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸಲು ಒಳಮೀಸಲಾತಿಯನ್ನು ಸರ್ಕಾರ ಜಾರಿ ಮಾಡಿದೆ. ಈ ಸಂದರ್ಭದಲ್ಲಿ ಅಲೆಮಾರಿ ಸಮುದಾಯಗಳಿಗೆ ಆಗಿರುವ ತೊಂದರೆಯನ್ನು ಸರಿಪಡಿಸಲು ವಿಶೇಷ ಪ್ಯಾಕೇಜ್ ರೂಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಚಿಂತನೆ ನಡೆಸಿದ್ದಾರೆ ಎಂದು ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

‘ಜೈನರು ಹಿಂದೂಗಳೆಂದು ಬರೆಯಿಸಬೇಡಿ’

ಬೆಂಗಳೂರು: ‘ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ವೇಳೆ ಜೈನರು ಧರ್ಮದ ಕಾಲಂನಲ್ಲಿ ‘ಹಿಂದೂ’ ಎಂದು ಬರೆಯಿಸಬಾರದು. ಬದಲಿಗೆ ‘ಜೈನ’ ಎಂದೇ ಬರೆಯಿಸಬೇಕು’ ಎಂದು ಕರ್ನಾಟಕ ಜೈನ ಅಸೋಸಿಯೇಷನ್ ಕರೆ ನೀಡಿದೆ. ‘ಸಮೀಕ್ಷೆ ವೇಳೆ ಸಮುದಾಯದ ಎಲ್ಲರೂ ಧರ್ಮದ ಕಾಲಂನಲ್ಲಿ ‘ಜೈನ’, ಜಾತಿಯ ಕಾಲಂನಲ್ಲಿ ‘ಜೈನ’, ಉಪಜಾತಿಯ ಕಾಲಂನಲ್ಲಿ ‘ಜೈನ ದಿಗಂಬರ’ ಅಥವಾ ಇತರ 32 ಉಪಜಾತಿಗಳನ್ನು ಬರೆಯಿಸಬೇಕು’ ಎಂದು ಕೋರಿದೆ. ‘ಜೈನ ಎಂದೇ ಬರೆಯಿಸುವುದರಿಂದ ರಾಜ್ಯದಲ್ಲಿರುವ ಸಮುದಾಯದ ಜನರ ಸಂಖ್ಯೆ ನಿಖರವಾಗಿ ಗೊತ್ತಾಗಲಿದೆ’ ಎಂದು ಜೈನ ಅಸೋಸಿಯೇಷನ್ ಅಧ್ಯಕ್ಷ ಎಸ್. ಜಿತೇಂದ್ರ ಕುಮಾರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ವಹ್ನಿಕುಲ ಕ್ಷತ್ರಿಯ ಎಂದೇ ಬರೆಯಿಸಿ’

ಬೆಂಗಳೂರು: ‘ತಿಗಳ ಮತ್ತು ತಿಗಳ ಸಂಬಂಧಿ ಜಾತಿಗಳ ಜನರು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ತಮ್ಮ ಜಾತಿಯನ್ನು ‘ವನ್ನಿಕುಲ/ವಹ್ನಿಕುಲ ಕ್ಷತ್ರಿಯ’ ಎಂದೇ ಬರೆಸಬೇಕಾಗಿ ಕರ್ನಾಟಕ ರಾಜ್ಯ ತಿಗಳರ (ವಹ್ನಿಕುಲ ಕ್ಷತ್ರಿಯರ) ಸಂಘ ಕರೆ ನೀಡಿದೆ.

ಸಂಘದ ಅಧ್ಯಕ್ಷ ಮು.ಕೃಷ್ಣಮೂರ್ತಿ, ಕಾರ್ಯದರ್ಶಿ ಬಿ.ಎಸ್.ಶ್ರೀಧರ್ ಅವರು ಸಂಘದ ವತಿಯಿಂದ ಪತ್ರಿಕಾ ಪ್ರಕಟಣೆ ಹೊರಡಿಸಿದ್ದಾರೆ.

‘ಧರ್ಮರಾಜ ಕಾಪು, ಪಡೆಯಾಚಿ, ಪಡೆಯಾಚಿ ಗೌಡ, ಪಡೆಯಾಚಿ ಗೌಂಡರು, ಪಳ್ಳಿ, ಪಳ್ಳಿ ಗೌಂಡರು, ಪಳ್ಳಿ ಕಾಪು, ಪಳ್ಳಿರೆಡ್ಡಿಯಾರ್, ವಹ್ನಿಕುಲ, ವನ್ನಿಕುಲ/ವಹ್ನಿಕುಲ ಕ್ಷತ್ರಿಯ, ವನ್ನೇರು ಕ್ಷತ್ರಿಯ, ವನ್ನಿಯರ್, ವನ್ನಿಕುಲ ಕ್ಷತ್ರಿಯ, ವಣ್ಣ್ಇಯ, ವಣ್ಣಿಯ ಗೌಂಡರು, ವಣ್ಣಿಯ ಕಾಪು, ವಣ್ಣಿಯ ಕುಲ ಗೌಂಡರ್, ವನ್ನಿಯಕುಲ/ವಣ್ಣಿಯ ಕುಲ ಕ್ಷತ್ರಿಯ, ವಣ್ಣಿಯ ಪಿಳ್ಳೆ, ವಣ್ಣಿಯ ರೆಡ್ಡಿಯಾರ್ ಮತ್ತು ವಣ್ಣಿಯ ಕುಲ ಎಂಬ ಉಪಜಾತಿಗಳನ್ನು ಸಮೀಕ್ಷೆಯ ಕೈಪಿಡಿಯಲ್ಲಿ ಪ್ರತ್ಯೇಕವಾಗಿ ತೋರಿಸಲಾಗಿದೆ. ಆದರೆ ಇವೆಲ್ಲವೂ ತಿಗಳ ಸಂಬಂಧಿ ಜಾತಿಗಳು’ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ಹಿಂದುಳಿದ ವರ್ಗಗಳ ಆಯೋಗವು ನಮ್ಮ ಸಂಘವನ್ನು ದೃಢೀಕರಿಸುವಾಗ ಈ ಎಲ್ಲ ಜಾತಿಗಳನ್ನು ‘ತಿಗಳ’ ಜಾತಿಯ ಅಡಿಯಲ್ಲಿ ಪರಿಗಣಿಸಿದೆ. ವಹ್ನಿಕುಲ ಕ್ಷತ್ರಿಯ ಎಂಬುದು ಪಾರಂಪರಿಕ ಹೆಸರಾದರೂ, ತಿಗಳ ಎಂಬ ಹೆಸರು ಬಳಕೆಯಲ್ಲಿದೆ. ಹೀಗಾಗಿ ಸಮುದಾಯದವರು ಕ್ರಮ ಸಂಖ್ಯೆ 1508ರಲ್ಲಿ ಜಾತಿ ಹೆಸರನ್ನು ‘ವನ್ನಿಕುಲ/ವಹ್ನಿಕುಲ ಕ್ಷತ್ರಿಯ’ ಎಂದು ಬರೆಯಿಸಬೇಕು. ಉಪಜಾತಿಗಳ ಕಾಲಂನಲ್ಲಿ, ಉಪಜಾತಿಗಳ ಹೆಸರು ಬರೆಸಬೇಕು’ ಎಂದು ಕೋರಲಾಗಿದೆ.

ಅಲೈಡ್ ಹೆಲ್ತ್‌ಸೈನ್ಸ್: ಹಂಚಿಕೆಯಾದ ಕೋರ್ಸ್‌ಗಳೇ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸೀಟು ಹಂಚಿಕೆ ಮಾಡಿದ್ದ 12 ಅಲೈಡ್ ಹೆಲ್ತ್‌ಸೈನ್ಸ್ ಕಾಲೇಜುಗಳಲ್ಲಿ ಆಯ್ಕೆ ಮಾಡಿಕೊಂಡ ಕೋರ್ಸ್‌ಗಳೇ ಇಲ್ಲದೆ ವಿದ್ಯಾರ್ಥಿಗಳು ಸಂಕಷ್ಟ ಅನುಭವಿಸಿದ್ದಾರೆ.

ಕೆಇಎ ಮೊದಲ ಸುತ್ತಿನ ಸೀಟು ಹಂಚಿಕೆ ಮಾಡಿದ ನಂತರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಕೆಲ ಕೋರ್ಸ್‌ಗಳನ್ನು ತೆಗೆದು ಹಾಕಿ, ಕೆಲವು ಕಾಲೇಜುಗಳಲ್ಲಿನ ಸೀಟುಗಳ ಸಂಖ್ಯೆಯನ್ನು ಕಡಿಮೆ ಮಾಡಿತ್ತು. ವಿಶ್ವವಿದ್ಯಾಲಯ ತೆಗೆದು ಹಾಕಿದ ಕೋರ್ಸ್, ಕಾಲೇಜುಗಳು ಹಂಚಿಕೆಯಾಗಿರುವವರು ಆಯ್ಕೆ-3 ನಮೂದಿಸಿ ಮುಂದಿನ ಸುತ್ತಿನಲ್ಲಿ ಭಾಗವಹಿಸಬೇಕು ಎಂದು ಪ್ರಾಧಿಕಾರ ಸೂಚಿಸಿತ್ತು. ಸೀಟು ಲಭ್ಯತಾ ಪಟ್ಟಿಯಂತೆ ಎರಡನೇ ಮತ್ತು ಮೂರನೇ ಸುತ್ತಿನ ಸೀಟು ಹಂಚಿಕೆ ಮಾಡಿದ್ದರೂ ಕೆಲ ಕಾಲೇಜುಗಳಲ್ಲಿ ಆಯ್ಕೆ ಮಾಡಿಕೊಂಡ ಕೋರ್ಸ್‌ಗಳು ಇಲ್ಲದೆ ವಿದ್ಯಾರ್ಥಿಗಳು ಪರದಾಡಿದ್ದಾರೆ.

'ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಕಳುಹಿಸಿದ ಸೀಟು ಲಭ್ಯತಾ ಪಟ್ಟಿಯಂತೆ ಹಂಚಿಕೆ ಮಾಡಲಾಗಿದೆ. ವಿದ್ಯಾರ್ಥಿಗಳು ನಿಗದಿತ ಶುಲ್ಕ ಕಟ್ಟಿ ಕಾಲೇಜಿಗೆ ತೆರಳಿದಾಗ ಅಲ್ಲಿ ಅವರು ಆಯ್ಕೆ ಮಾಡಿಕೊಂಡ ಕೋರ್ಸ್‌ಗಳು ಇಲ್ಲದಿರುವುದು ಗಮನಕ್ಕೆ ಬಂದಿದೆ. ಅಂತಹ ಎಲ್ಲ ವಿದ್ಯಾರ್ಥಿಗಳಿಗೂ ಬದಲಿ ಕಾಲೇಜು ನೀಡಲಾಗಿದೆ. ವಿಷಯವನ್ನು ವೈದ್ಯಕೀಯ ಶಿಕ್ಷಣ ಇಲಾಖೆ ಗಮನಕ್ಕೆ ತರಲಾಗಿದೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಒಂದು ಕಾಲೇಜಿನ ವಿಳಾಸವೇ ಇಲ್ಲ: ಸೀಟು ಹಂಚಿಕೆಯಾಗಿದ್ದ ಬನಶಂಕರಿ ಬಡಾವಣೆಯ ಅಪ್ಪೋಲೋ ಅಲೈಡ್ ಕಾಲೇಜಿನ ತೆರೆದಿದ್ದ ಆ ವಿಳಾಸದಲ್ಲಿ ಕಾಲೇಜು ಇರಲಿಲ್ಲ, ಕಾಲೇಜಿನ ವಿಳಾಸವನ್ನೇ ತಪ್ಪು ನೀಡಲಾಗಿದೆ. 'ಪ್ರವೇಶಕ್ಕಾಗಿ ತೆರಳಿದಾಗ ಕೆಇಎ ನೀಡಿದ್ದ ವಿಳಾಸದಲ್ಲಿ ಕಾಲೇಜು ಇರಲಿಲ್ಲ. ದೂರು ನೀಡಿದ ನಂತರ ಬದಲಿ ಕಾಲೇಜಿನ ಪ್ರವೇಶ ಪಡೆಯಲು ಅವಕಾಶ ಮಾಡಿಕೊಟ್ಟರು' ಎಂದು ವಿದ್ಯಾರ್ಥಿಗಳು ದೂರಿದರು.

ವಿಶ್ವನಾಥ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ ಆರೋಪದಲ್ಲಿ ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಅವರ ವಿರುದ್ಧ ದೇವರಾಜ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೆಪಿಸಿಸಿ ಕಾನೂನು, ಮಾನವ ಹಕ್ಕು ಮತ್ತು ಮಾಹಿತಿ ಹಕ್ಕು ವಿಭಾಗದ ರಾಜ್ಯ ಕಾರ್ಯದರ್ಶಿ ಕವಿತಾ ಕಾಳೆ ಅವರು ದೂರು ನೀಡಿದ್ದರು.

ಎಂಎಸ್‌ಪಿ ಅಡಿ ಐದು ಧಾನ್ಯಗಳ ಖರೀದಿ

ನವದೆಹಲಿ: ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ (ಎಂಎಸ್‌ಪಿ) ಐದು ಧಾನ್ಯಗಳ ಖರೀದಿಗೆ ಕೇಂದ್ರ ಕೃಷಿ ಸಚಿವಾಲಯ ಅನುಮತಿ ನೀಡಿದೆ.

2025-26ನೇ ಸಾಲಿನ ಮುಂಗಾರಿನಲ್ಲಿ ಬೆಳೆದ ಹೆಸರು ಕಾಳು, ಉದ್ದಿನ ಕಾಳು, ನೆಲಗಡಲೆ(ಶೇಂಗಾ), ಸೋಯಾಬಿನ್ ಮತ್ತು ಸೂರ್ಯಕಾಂತಿ ಧಾನ್ಯಗಳನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

38,000 ಟನ್ ಹೆಸರು ಕಾಳು, 60,810 ಟನ್ ಉದ್ದು, 15,650 ಟನ್ ಸೂರ್ಯಕಾಂತಿ, 61,148 ಟನ್ ಕಡಲೆಬೀಜ ಮತ್ತು 1,15,000 ಟನ್ ಸೋಯಾಬೀನ್ ಖರೀದಿಗೆ ಅನುಮತಿ ಸಿಕ್ಕಿದೆ.

ಪ್ರಸಕ್ತ ಮುಂಗಾರಿನಲ್ಲಿ ರಾಜ್ಯದ ಕೃಷಿಕರು ಅತಿವೃಷ್ಟಿಯಿಂದಾಗಿ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಧಾನ್ಯಗಳನ್ನು ಖರೀದಿಸುವಂತೆ ಒತ್ತಾಯಿಸಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಪ್ರಧಾನಿ ಮೋದಿ ಮತ್ತು ಕೇಂದ್ರ ಕೃಷಿ ಸಚಿವರಿಗೆ ಪತ್ರ ಬರೆದಿದ್ದರು.

ಕರ್ನಾಟಕದ ರೈತರಿಗೆ ಕಲ್ಪಿಸಿರುವ ಈ ಬೆಂಬಲ ಬೆಲೆ ಯೋಜನೆಯ ನೆರವನ್ನು ರಾಜ್ಯ ಸರ್ಕಾರ ತ್ವರಿತವಾಗಿ ಒದಗಿಸಬೇಕು ಎಂದು ಜೋಶಿ ಒತ್ತಾಯಿಸಿದ್ದಾರೆ.

ಮಂಗಳೂರು ದಸರಾ ನಾಳೆಯಿಂದ

ಮಂಗಳೂರು: ಪ್ರಸಿದ್ಧ ಮಂಗಳೂರು ದಸರಾ ಮಹೋತ್ಸವ ಸೆ.22ರಿಂದ ಅ.3ರವರೆಗೆ ನಡೆಯಲಿದ್ದು, ಕುದ್ರೋಳಿಯ ಗೋಕರ್ಣನಾಥ ಕ್ಷೇತ್ರ ಸಜ್ಜುಗೊಂಡಿದೆ. ಶಾರದಾ ಮಾತೆ, ನವದುರ್ಗೆಯರು, ಮಹಾಗಣಪತಿ ಪ್ರತಿಷ್ಠಾಪನೆಯೊಂದಿಗೆ 22ರಂದು ಚಾಲನೆ ಸಿಗಲಿದೆ. ಮಕ್ಕಳ ದಸರಾ, ಮ್ಯಾರಥಾನ್ ಸೇರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಮೇಳೈಸಲಿವೆ. ಅ.2ರಂದು ಶಾರದಾ ಮಾತೆಯ ಶೋಭಾಯಾತ್ರೆ ನಡೆಯಲಿದೆ ಎಂದು ಕ್ಷೇತ್ರದ ಆಡಳಿತ ಮಂಡಳಿ ಖಜಾಂಚಿ ಪದ್ಮರಾಜ್ ಪೂಜಾರಿ ಶನಿವಾರ ತಿಳಿಸಿದರು.

ನೋಂದಣಿ ಸಂಖ್ಯೆ/ಎಆರ್41/1/ನೊಂದಣಿ 34190/2004–05, ದಿನಾಂಕ : 31–08–2004

ನೇಕಾರರ ಗೃಹ ನಿರ್ಮಾಣ ಸಹಕಾರ ಸಂಘ (ನಿ.)

ನಂ. 2166, ನ್ಯೂ ನಂ. 38, ಅಕ್ಬರ್ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು

ಮೇಲ್ಕಂಡ ಸಹಕಾರ ಸಂಘದ 2024–25ನೇ ಸಾಲಿನ 21ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯು ದಿ: 24–09–2025ನೇ ಬುಧವಾರ ಸಮಯ : ಬೆಳಿಗ್ಗೆ 11.00 ಗಂಟೆಗೆ ದಿ ಪ್ರೆಸಿಡೆಂಟ್ ಹೋಟೆಲ್, ಬೆಂಗಳೂರು ನೀಲಗಿರಿ ರಸ್ತೆ, ಸೆಂಟ್ರಲ್ ಮಾಲ್ ಎದುರು, ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟ್ಯಾಂಡ್ ಹತ್ತಿರ, ಮೈಸೂರು ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಲ್.ಎಸ್. ಚಲುವರಾಜ್‌ಕುಮಾರ್ ರವರ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದೇ ಆಹ್ವಾನ ಪತ್ರಿಕೆ ಎಂದು ತಿಳಿದು ಸಭೆಗೆ ಹಾಜರಾಗಬೇಕೆಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇವೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ

ಸಹಿ/– ರವಿ ಎನ್., ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಮೊಬೈಲ್ ನಂ. 9742471439

ನೇಕಾರರ ಗೃಹ ನಿರ್ಮಾಣ ಸಹಕಾರ ಸಂಘ (ನಿ.), ಮೈಸೂರು–01

ಕರ್ನಾಟಕ ಸರ್ಕಾರ

Govt of Karnataka

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಾಗಲಕೋಟೆ – 587103

OFFICE OF THE DEPUTY COMMISSIONER, BAGALKOTE- 587103

Ph: 08354-235091 E-mail: dudc_bgk@yahoo.co.in, Itstaff dudc_bagalkote@yahoo.co.in

ಸಂಖ್ಯೆ:ಜಿನಕೋಬಾ: ನಗರೋತ್ಥಾನ ಹಂತ–4:2025–26 ದಿನಾಂಕ:19.09.2025.

ಅಲ್ಪಾವಧಿ ಟೆಂಡರ್ ಪ್ರಕಟಣೆ

E-Procurement portal ಮುಖಾಂತರ

ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಮಾನ್ಯ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ ಹಂತ–4 ಹಾಗೂ ಇತರೆ ಕಾಮಗಾರಿಗಳಿಗೆ e-protal:https://kppp.karnataka.gov.in ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರನಲ್ಲಿ ದಿನಾಂಕ ಹಾಗೂ ಇತರೆ ತಿದ್ದುಪಡಿಗಳು ಇದ್ದಲ್ಲಿ ಇ–ಪೋರ್ಟಲ್‌ನಲ್ಲಿ ತಿಳಿಸಲಾಗುವದು, ಯಾವುದೇ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವದಿಲ್ಲ.

ಇಂಡೆಂಟ ನಂ :

1) DMA/2025-26/OW/WORK_INDENT45854/CALL-2, 2) DMA/2025-26/OW/WORK_INDENT45907/CALL-2, 3) DMA/2025-26/OW/WORK_INDENT41750/CALL-2, 4) DMA/2024-25/BD/WORK_INDENT37686/CALL-2, 5) DMA/2025-26/EL/WORK_INDENT49198

ಸೂಚನೆಗಳು:

(1) Pre-bid Meeting Date 24.09.2025 at 1.30pm

(2)Last Date & Time for receip t of tenders 29.09.2025 at 04.00 pm.

(3) Opening of Technical bid is on Dtd : 03.10.2025 at11.00 am

(4) Date & Time for Opening of Financial Bid Dtd:10.10.2025 at 11.00 am.

ಸಹಿ/–ಕಾರ್ಯಪಾಲಕ ಅಭಿಯಂತರರು

ಜಿಲ್ಲಾ ನಗರಾಭಿವೃದ್ಧಿಕೋಶ ಬಾಗಲಕೋಟೆ.

DIPR/BGK/RO-NO-291/KSMCA/2025-26

ನಗರ ಸಭೆ ಕಾರ್ಯಾಲಯ, ಬಾಗಲಕೋಟ–587101

CITY MUNICIPAL COUNCIL, BAGALKOTE -587101

Taluk: Bagalkot District: Bagalkot

Website: - www.yahoo.mail.com. Email Id:- itstaff_ulb_bagalkote@yahoo.co.in

ನಂ/ನಕಾಬಾ/ಲೋ.ಶಾ/2025–26/720 ದಿನಾಂಕ:19–09–2025

ತಿದ್ದುಪಡಿ ಟೆಂಡರ ಪ್ರಕಟಣೆ

ಈ ಕಾರ್ಯಾಲಯದ ಟೆಂಡರ ಪ್ರಕಟಣೆ ಸಂಖ್ಯೆ ನಸಬಾ/ಲೊ.ವಿ/SFC15th/TND/2025–26/348 ದಿನಾಂಕ: 07–07–2025 ರಂದು ಪ್ರಚೂರಪಡಿಸಿದ ಟೆಂಡರ ಪ್ರಕಟಣೆಯನ್ನು ತಾಂತ್ರಿಕ ಕಾರಣಗಳಿಂದ ದಿನಾಂಕ: 25–09–2025ಕ್ಕೆ ಮುಂದೂಡಲಾದ್ದು, ಸದರಿ ಟೆಂಡರ ಸಲ್ಲಿಸಲು ಕೊನೆಯ ದಿನಾಂಕವನ್ನು 25–09–2025 ಸಾಯಂಕಾಲ 5:00 ಎಂದು ಓದಿಕೊಳ್ಳತಕ್ಕದ್ದು.

ಸಹಿ/–ಪೌರಾಯುಕ್ತರು,

ನಗರಸಭೆ, ಬಾಗಲಕೋಟ

DIPR/BGK/RO-NO-292/KSMCA/2025-26

ಕರ್ನಾಟಕ ಸರ್ಕಾರ

ಮಕ್ಕಳ ರಕ್ಷಣಾ ನಿರ್ದೇಶನಾಲಯ,

ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ದಾವಣಗೆರೆ.

e-Mail: dcpudvg11@gmail.com, Ph: 08192-222701

ಪೋಷಕರ ಪತ್ತೆಗಾಗಿ ಪ್ರಕಟಣೆ

ಹರಿಹರ ನಗರ ದಾವಣಗೆರೆ ಜಿಲ್ಲೆ ಲೇ॥ ಲಕ್ಷ್ಮೀ ಗಂಡ ಉರುಗಪ್ಪ, ವಯಸ್ಸು ಸುಮಾರು 40 ವರ್ಷಯಾಗಿದ್ದು, ಇವರು ತನ್ನ ಮಕ್ಕಳಾದ 1) ಶ್ವೇತ (11 ವರ್ಷ), 2) ಅಕ್ಕಮ್ಮ (8 ವರ್ಷ), 3) ಚಂದ್ರಶೇಖರ (6 ವರ್ಷ) ಇವರೊಂದಿಗೆ ಜಾಹಿರ ಬಾದ್ ನಗರ, ಸಂಗಾರೆಡ್ಡಿ ಜಿಲ್ಲೆ, ತೆಲಂಗಾಣ ರಾಜ್ಯದಲ್ಲಿ ಭಿಕ್ಷಾಟಣೆಯಲ್ಲಿ ತೊಡಗಿದ್ದು ದಿನಾಂಕ: 20.11.2021 ರಂದು ರಕ್ಷಿಸಿ ದಾವಣಗೆರೆ ಜಿಲ್ಲೆಯ, ರಾಜ್ಯ ಮಹಿಳಾ ನಿಲಯದಲ್ಲಿ ಪಾಲನೆ ಮತ್ತು ರಕ್ಷಣೆಗಾಗಿ ವರ್ಗಾವಣೆ ಮಾಡಿರುತ್ತಾರೆ. ಈಗಿರುವಾಗ ದಿನಾಂಕ: 30.10.2022 ರಂದು ಶ್ರೀಮತಿ ಲಕ್ಷ್ಮಿಯವರು ದಾವಣಗೆರೆಯ ಚಿಗಟೇರಿ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಅನಾರೋಗ್ಯದಿಂದ ಮರಣ ಹೊಂದಿದ್ದು, ಸದರಿಯವರ ಗಂಡ ಹಾಗೂ ಹತ್ತಿರದ ಸಂಬಂಧಿಕರ ವಿಳಾಸ ಪತ್ತೆಯಾಗಿರುವುದಿಲ್ಲ ಆದ್ದರಿಂದ ಸದರಿಯವರ ಈ ಮೂರು ಮಕ್ಕಳನ್ನು ಬಾಲನ್ಯಾಯ ಕಾಯ್ದೆ ಅನುಸಾರ ದತ್ತು ಪ್ರಕ್ರಿಯೆಗೆ ಒಳಪಡಿಸಬೇಕಾಗಿದ್ದು ಪ್ರಕಟಣೆಗೊಂಡ 120 ದಿನಗಳ ಒಳಗಾಗಿ ಸದರಿ ಮಕ್ಕಳ ತಂದೆ/ಹತ್ತಿರದ ರಕ್ತ ಸಂಬಂಧಿಗಳು ಮೂಲ ದಾಖಲೆಗಳೊಂದಿಗೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ, ಜೆ.ಹೆಚ್ ಪಟೇಲ್ ಬಡಾವಣೆ, ಶಾಮನೂರು ದೂರವಾಣಿ ಸಂಖ್ಯೆ: 08192–222701 ಅಥವಾ ವಿಶೇಷ ದತ್ತು ಸಂಸ್ಥೆ ಅಮೂಲ್ಯ(ಜಿ) ಘಟಕ–1, ಶ್ರೀ ರಾಮ ನಗರ ದಾವಣಗೆರೆ, ದೂರವಾಣಿ ಸಂಖ್ಯೆ: 08192–262990 ಇಲ್ಲಿ ಸಂಪರ್ಕಿಸಲು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ದಾವಣಗೆರೆ ಇವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಜೈವಿಕ ತಂದೆ–ತಾಯಿಯವರ ಪತ್ತೆಗಾಗಿ



ಮಗುವಿನ ಹೆಸರು: ನವಜಾತ ಹೆಣ್ಣು ಶಿಶು (ಲತಿಕ). ಬಿಟ್ಟು ಹೋದಾಗ ಇದ್ದಂತಹ ವಯಸ್ಸು: 01 ದಿನ ಶಿಶು. ಮಗು ದೊರೆತ ಸ್ಥಳ: ಸೂರ್ಯೋದಯ (ಹಾಸ್ಪಿಟಲ್) ಪೆವಿಲಿಯನ್ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ. ಶಿಶು ದೊರೆತ ದಿನಾಂಕ: 20.09.2024. ಲಭ್ಯವಿರುವ ತಂದೆ–ತಾಯಿಯರ ಹೆಸರು: ತಾಯಿ ಸುಮಿಯಾ ಅಂಜುಮ್, ತಂದೆ ಬಾಷಾ ಹಿರಿಯಾರು, ಚಿತ್ರದುರ್ಗ ಜಿಲ್ಲೆ ಎಂದು ಹೇಳಲಾಗಿರುತ್ತದೆ. ಬಣ್ಣ: ಬಿಳಿ ಬಣ್ಣ. ಶಿಶುವಿನ ಆರೋಗ್ಯ: ಉತ್ತಮವಾಗಿದೆ.

ಸದರಿ ಶಿಶುವಿಗೆ ಸಂಬಂಧಿಸಿದ ಜೈವಿಕ ಪೋಷಕರು ಮುಂದಿನ 60 ದಿನಗಳ ಒಳಗೆ ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಬೇಕಾದ ವಿಳಾಸ: ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ, ಜೆ.ಹೆಚ್ ಪಟೇಲ್ ಬಡಾವಣೆ, ಶಾಮನೂರು ದೂರವಾಣಿ ಸಂಖ್ಯೆ: 08192–222701 ಅಥವಾ ವಿಶೇಷ ದತ್ತು ಸಂಸ್ಥೆ ಅಮೂಲ್ಯ (ಜಿ) ಘಟಕ–1, ಶ್ರೀ ರಾಮ ನಗರ ದಾವಣಗೆರೆ, ದೂರವಾಣಿ ಸಂಖ್ಯೆ: 08192–262990/ಮಹಿಳಾ ಪೊಲೀಸ್ ಠಾಣೆ ದಾವಣಗೆರೆ.

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,

ಜಿಲ್ಲಾ ಮಕ್ಕಳ ರಕ್ಷಣಾ ಘಟಕ ದಾವಣಗೆರೆ.

ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಳಿ – ಸಮುದಾಯದ ನಿರ್ಮಾಣದತ್ತ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/2025–26 ದಿನಾಂಕ: 18–09–2025

ತಿದ್ದುಪಡಿ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಗದಗ ಜಿಲ್ಲೆ ಕಳಸಾಪುರ 1ನೇ ಮತ್ತು 2ನೇ ಹಂತದ ಬಡಾವಣೆಗಳಲ್ಲಿ ಪ್ರಸ್ತುತ ಲಭ್ಯವಿರುವ ನಿವೇಶನಗಳನ್ನು ಇ–ಲಾಟರಿ ಮೂಲಕ ಹಂಚಿಕೆ ಮಾಡಲು ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ: 18.09.2025ರ ಪ್ರಜಾವಾಣಿ ಮತ್ತು ವಿಜಯವಾಣಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿದೆ. ಸದರಿ ಪ್ರಕಟಣೆಯಲ್ಲಿ ವರ್ಗಾವಾರು ಲಭ್ಯವಿರುವ ಅಂದಾಜು ಸ್ವತ್ತುಗಳಲ್ಲಿ ವ್ಯತ್ಯಾಸವಿದ್ದು, ಕಳಸಾಪುರ 1ನೇ ಮತ್ತು 2ನೇ ಹಂತ ಬಡಾವಣೆಗಳಲ್ಲಿ ವರ್ಗಾವಾರು ಲಭ್ಯವಿರುವ ಅಂದಾಜು ಸ್ವತ್ತುಗಳನ್ನು ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು. ಉಳಿದಂತೆ ದಿನಾಂಕ: 18.09.2025 ರಂದು ನೀಡಲಾದ ಸಾರ್ವಜನಿಕ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕ್ರ. ಸಂ	ಬಡಾವಣೆ	ವರ್ಗಾವಾರು ಲಭ್ಯವಿರುವ ಅಂದಾಜು ಸ್ವತ್ತುಗಳು						ಮಂಡಳಿಯ ದರ (ಪ್ರತಿ ಚದರ ಅಡಿಗೆ ರೂ.ಗಳಲ್ಲಿ)
		EWS	LIG	MIG-I	MIG-II	HIG	ಒಟ್ಟು	
1	ಗದಗ ಕಳಸಾಪುರ 1ನೇ ಹಂತ, ಗದಗ ಜಿಲ್ಲೆ	-	23	04	03	-	30	380/-
2	ಗದಗ ಕಳಸಾಪುರ 2ನೇ ಹಂತ, ಗದಗ ಜಿಲ್ಲೆ	02	150	09	39	06	206	380/- (EWS Rs.190)

ಸಹಿ/–

ಗೃಹ ಆಯುಕ್ತರು,

ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/2888/Zen/2025-26

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ

(ಕರ್ನಾಟಕ ಸರ್ಕಾರದ ಅಧೀನಕೊಳ್ಳಪಟ್ಟಿದೆ)

3ನೇ ಮಹಡಿ, ಕೌಶಲ್ಯ ಭವನ, ಬನ್ನೇರುಘಟ್ಟ ಮುಖ್ಯ ರಸ್ತೆ, ಡೈರಿ ಸರ್ಕಲ್, ಬೆಂಗಳೂರು–560029. ದೂ.ಸಂಖ್ಯೆ : 080–29522222. e-mail ID: skilldev.2017@gmail.com

ಕೌಶಲ್ಯ ಕರ್ನಾಟಕ

No. KSDC/Careerguidance/PMU/CR-51/2025-26 ದಿನಾಂಕ: 20.09.2025

ಆಸಕ್ತಿ ವ್ಯಕ್ತಪಡಿಸುವಿಕೆ (Expression of Interest)

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (KSDC)ವು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ (SDEL), ಕರ್ನಾಟಕ ಸರ್ಕಾರದ ಅಡಿಯಲ್ಲಿ ಜಾರಿಗೊಳ್ಳುವ "ನನ್ನ ವೃತ್ತಿ, ನನ್ನ ಆಯ್ಕೆ 2.0" ಯೋಜನೆಯ ಅನುಷ್ಠಾನಕ್ಕಾಗಿ ಪ್ರಾಜೆಕ್ಟ್ ಮ್ಯಾನೇಜ್ಮೆಂಟ್ ತಂಡದ ಆಯ್ಕೆಗೆ ಅನುಭವ ಹೊಂದಿರುವ ಹಾಗೂ ಖ್ಯಾತಿ ಪಡೆದ ಸಂಸ್ಥೆಗಳಿಂದ ಇ–ಟೆಂಡರ್‌ಗಳನ್ನು ಆಹ್ವಾನಿಸಿದೆ. ಈ ಇ–ಟೆಂಡರ್ ಅಧಿಸೂಚನೆ (ದಾಖಲೆ ಸಂಖ್ಯೆ: KSDC/2025-26/SE0024) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (KPPP) ನಲ್ಲಿ ಪ್ರಕಟಗೊಂಡಿದ್ದು, ಟೆಂಡರ್ ದಾಖಲೆಗಳನ್ನು 21.09.2025 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04.10.2025, ಸಮಯ 17.30 ಗಂಟೆ. EOI ಅಧಿಸೂಚನೆಯ ದಾಖಲೆಗಳು ಮತ್ತು ವಿವರಗಳು ಆಸಕ್ತಿವುಳವರು ತಮ್ಮ ಪ್ರಸ್ತಾವನೆಗಳನ್ನು ಇ–ಪ್ರೊಕ್ರೂರಮೆಂಟ್ Karnataka Public Procurement Portal (www.kppp.karnataka.gov.in) ನಲ್ಲಿ ಸಲ್ಲಿಸಬಹುದು. ಸ್ಪಷ್ಟೀಕರಣ ಅಥವಾ ಹೆಚ್ಚಿನ ಮಾಹಿತಿಗಾಗಿ KPPP ಸಹಾಯವಾಣಿ ಸಂಖ್ಯೆ: +91 9240214000/ +91 9240214001 ಕರೆ ಮಾಡಿ ಅಥವಾ support@eprochelpdesk.com ಗೆ ಇ–ಮೇಲ್ ಮಾಡಬಹುದಾಗಿದೆ.

ಸಹಿ/–

ಕಾರ್ಯನಿರ್ವಾಹಕ ನಿರ್ದೇಶಕರು–02

ಕೆ.ಎಸ್.ಡಿ.ಸಿ., ಬೆಂಗಳೂರು.

ಡಿಐಪಿಆರ್/ಸಿಪಿ/2921/ಸಿಸಿಎಲ್/2025–26

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಅಭಿಯಂತರರು ಕಛೇರಿ, ಕಬಿನಿ ನಾಲಾ ವಿತರಣಾ ವಿಭಾಗ, ತಿ. ನರಸೀಪುರ–571124, ಮೈಸೂರು ಜಿಲ್ಲೆ.

ಫೋನ್ ನಂ. 08227–261362 E-Mail eekcdtnp@yahoo.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ. 10/2025–26 ದಿನಾಂಕ: 20.09.2025

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಮೈಸೂರು / ಬೆಂಗಳೂರು ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ ವರ್ಗದಲ್ಲಿ ಹೆಸರು ನೋಂದಾಯಿತ ಗುತ್ತಿಗೆದಾರರಿಂದ ಒಟ್ಟು 2 ಕಾಮಗಾರಿಗಳಿಗಾಗಿ ಐಟಂವಾರು ದರದ ಎರಡನೇ ಕರೆಯ ಅಲ್ಪಾವಧಿ ಟೆಂಡರ್‌ಗಳನ್ನು ಕೆಪಿಪಿ–ಪೋರ್ಟ್‌ಲ್ ಮೂಲಕ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು. ಅರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರಗಳನ್ನು ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್ ಮೂಲಕ ಟೆಂಡರ್‌ಗಳ ಜೊತೆಗೆ ಸಲ್ಲಿಸುವುದು. ಇ.ಎಂ.ಡಿ ಹಣ ಹಾಗೂ ಪ್ರೊಸೆಸ್ಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು. ಕಾಮಗಾರಿಗಳಿಟ್ಟ ಕನಿಷ್ಠ ಮೊತ್ತ ರೂ.65.03 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ.69.49 ಲಕ್ಷಗಳು, ಸದರಿ ಕಾಮಗಾರಿಗಳ ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿ: 26.09.2025 ಸಾಯಂಕಾಲ 4.00 ಗಂಟೆವರೆಗೆ. ಆನ್ ಲೈನ್ ಮೂಲಕ ಭರ್ತಿಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: 29.09.2025 ಸಾಯಂಕಾಲ 5.30 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿ: 03.10.2025 ಬೆಳಿಗ್ಗೆ 11.00 ಗಂಟೆಗೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿ: 06.10.2025 ಬೆಳಿಗ್ಗೆ 11.00 ಗಂಟೆಗೆ, ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ: https://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,

ಕಬಿನಿ ನಾಲಾ ವಿತರಣಾ ವಿಭಾಗ, ಟಿ.ನರಸೀಪುರ.

DIPR/DDMYS/988/KSMCA/527/2025-26

ಮಹಾನಗರ ಪಾಲಿಕೆ, ಕಲಬುರಗಿ

ದೂ.: 08472/278675, ಫ್ಯಾಕ್ಸ : 08472/260776 ಇ ಮೇಲ್– itstaff_ulb_gulbarga@yahoo.com

No: KMP/EE/TS-02/ 15th FC /Amrut 2.0/Jal hi Amrut/SFC C.A/ 2025-26 ದಿನಾಂಕ:19.09.2025

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ.

ಸಂಖ್ಯೆ: /2025–26

1) ಕಾಮಗಾರಿಯ ವಿವರ ಃ ಕಲಬುರಗಿ ಮಹಾನಗರ ಪಾಲಿಕೆಯಿಂದ 2025–26 ನೇ ಸಾಲಿನ 15ನೇ ಹಣಕಾಸು ಆಯೋಗದ ಕ್ರಿಯಾ ಯೋಜನೆಯ ಅನುದನದಲ್ಲಿ, 2024–25ನೇ ಸಾಲಿನ 15ನೇ ಹಣಕಾಸು ಪರಿಷ್ಕೃತ ಕ್ರಿಯಾ ಯೊಜನೆಯ ಅನುದಾನದಲ್ಲಿ, 2020–21 ರಿಂದ 2022–23 ಉಳಿತಾಯ ಮೊತ್ತದಲ್ಲಿ ಹಾಗೂ 2023–24 & 2024–25ನೇ ಸಾಲಿನಲ್ಲಿ ಪರಿಷ್ಕೃತ ಕ್ರಿಯಾ ಯೋಜನೆಯ ಅನುದಾನದಲ್ಲಿ, 2022–23, 2023–24 & 2024–25ನೇ ಸಾಲಿನ 15ನೇ ಹಣಕಾಸು ಆಯೋಗದ ಉಳಿತಾಯ ಮೊತ್ತದ ಕ್ರಿಯಾ ಯೋಜನೆಯ ಅನುದಾನದಲ್ಲಿ, ಅಮೃತ 2.0, ಜಲ ಹೀ ಅಮೃತ, Reform Incentive (Component Under Amrut-2.0) ಅನುದಾನದಲ್ಲಿ ಹಾಗೂ ಎಸ್.ಎಫ್.ಸಿ ಕ್ಯಾಪಿಟಲ್ ಅಸೆಟ್ಸ್ 2025–26 ಅನುದಾನದಲ್ಲಿ ಅನುಮೋದನೆಗೊಂಡ ಒಟ್ಟು (71) ಕಾಮಗಾರಿಗಳಿಗೆ ಕೆ.ಪಿ.ಪಿ. ಪ್ರೋರ್ಟಲ್–2.0 ನಲ್ಲಿ ಕೆ.ಟಿ.ಪಿ.ಪಿ ರ ಪ್ರಕಾರ ಕೆ.ಡಬ್ಲ್ಯೂ–1,2,3&4 ರ ಮೂಲಕ 15 ದಿನಗಳ ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು **ಕನಿಷ್ಠ ಮೊತ್ತ ರೂ. 3.00 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ. 200.00 ಲಕ್ಷಗಳು.** 3) ಗುತ್ತಿಗೆದಾರರ ಅರ್ಹತೆ ವಿವರಃ 2,3&4ನೇ ದರ್ಜೆ ಮತ್ತು ಹೆಚ್ಚು, 4) ಟೆಂಡರ ಅರ್ಜಿಯ ಬೆಲೆ ರೂ. ಕೆ.ಪಿ.ಪಿ.ಪಿ ಪ್ರೋರ್ಟಲ್–2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. ಕನಿಷ್ಠ ರೂ. 5,200.00 ಗಳು ಹಾಗೂ ಗರಿಷ್ಠ ರೂ. 2,55,000.00 ಗಳು. 5) ಪೂರ್ವಭಾವಿ ಸಭೆ ದಿನಾಂಕ: 04.10.2025 ರಂದು ಬೆಳಿಗ್ಗೆ 11:00 ಗಂಟೆಗೆ. 6) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 04.10.2025 ರಂದು ಸಾಯಂಕಾಲ 4:30 ಗಂಟೆಗೆ. 7) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: 06.10.2025 ರಂದು ಸಾಯಂಕಾಲ 04:35 ಗಂಟೆಗೆ. 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: 07.10.2025 ರಂದು ಬೆಳಿಗ್ಗೆ 11:30 ಗಂಟೆಗೆ. ನಿಗದಿಪಡೆಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 9) ಹೆಚ್ಚಿನ ವಿವರಗಳಿಗೆ ಃ ಕಾರ್ಯಾಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿರವರನ್ನು ಸಂಪರ್ಕಿಸಬಹುದಾಗಿದೆ. 10) ಹೆಚ್ಚಿನ ಮಾಹಿತಿಯು ಪಾಲಿಕೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ http://www.kalaburagicity.mrc.gov.in/

Note: All subsequent corrigendum/amendment shall be published only on website and not in press. Hence, tenderers are advoised to always be in touch with our said website until the tender is finally opened.

ಸಹಿ/– ಕಾರ್ಯಪಾಲಕ ಅಭಿಯಂತರರು,

ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/530/ಕೆ.ಎಸ್.ಎಂ.ಸಿ.&ಎ/2025–26

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ನ್ಯಾಕ್ ಎ+ ಮಾನ್ಯತೆ

ಆಸ್ತಿ ಅಧಿಕಾರಿಗಳ ಕಛೇರಿ, ನಾಯಕ್ ಭವನ, ಗಾಕೃವಿಕೆ, ಬೆಂಗಳೂರು–560065

ದೂರವಾಣಿ : GKVK: 2330153-250, Direct : 23332765

Email : eo@uasbangalore.edu.in, Website: www.uasbangalore.edu.in

ಸಂ:ಆಅ/ಟಿ.ಎನ್/13/2025–26 ದಿ:17.09.2025

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕಾಮಗಾರಿ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–1 ಮತ್ತು ಕೆಡಬ್ಲ್ಯೂ–2ರಂತೆ ನೊಂದಣಿ ಪಡೆದ ಕೆಪಿಡಬ್ಲ್ಯೂಡಿ/ಪಿಡಬ್ಲ್ಯೂಡಿ/ಗುತ್ತಿಗೆದಾರರುಗಳಿಂದ ಕ್ರಮ ಸಂಖ್ಯೆ.1ರಿಂದ 2ರವರೆಗಿನ ಕಾಮಗಾರಿಗಳಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್ https://www.kppp.karnataka.gov.in ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಮೇಲಿನ ಕಾಮಗಾರಿಯು ದ್ವಿಲಕೋಟೆ ಪದ್ಧತಿಯಲ್ಲಿರುತ್ತದೆ. ದ್ವಿಲಕೋಟೆ ಪದ್ಧತಿಯ ಷರತ್ತುಗಳ ವಿವರಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ರಂತೆ ಅಪ್‌ಲೋಡ್ ಮಾಡಲಾಗಿದೆ.

ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು www.kppp.karnataka.gov.in ನಿಂದ ಪಡೆಯಬಹುದು. ಟೆಂಡರ್ ಸಲ್ಲಿಸುವ ಕೊನೆ ದಿನಾಂಕ: **26–9–2025 ರಂದು ಸಾಯಂಕಾಲ 4.00 ಗಂಟೆಯವರೆಗೆ** ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು **ದಿನಾಂಕ: 29–9–2025ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು ಮತ್ತು ಹಣಕಾಸಿನ ಬಿಡ್ಡನ್ನು **ದಿನಾಂಕ: 4–10–2025ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ. 080–23332765ರಲ್ಲಿ ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ– support@eprochelpdesk.com ಅಥವಾ 8046010000 ಮತ್ತು 8068948777.

ಸಹಿ/–

ಆಸ್ತಿ ಅಧಿಕಾರಿಗಳು

ವಾಸಾಸಂಇ/ವಾಪ್ರ/ಜಿಎ/2902/2025–26

Government of Karnataka

HEALTH AND FAMILY WELFARE DEPARTMENT ENGINEERING WING

Office of the, Executive Engineer, H & F W D Engg., Division, Fort Road, Dharwad-580 008 Ph : 0836 -2955800 E-mail : eehfwedvndwd1@gmail.com

No: EE/H&FW Engg./Div/Dharwad/ PMC-Neurology-DWD / 777/2025-26 Date : 20.09.2025

TENDER NOTIFICATION

The Executive Engineer, HFWD, Engineering Division, Dharwad invites tenders from eligible consultants/firms for Appointment of Consultants for Providing Project Management Consultancy Services for the following works in two tender document system through e-procurement. (Rs. In lakh)

Sl. No	Description of work	Est., cost	Appro ximate PMC cost	Earnest Money Deposit	Head of Account	Stipulated period for Completion (including monsoon)
1	Project Management Consultancy Services for Construction of 100 beds Neurology and Neurosurgery blocks at DIMHANS Dharwad	2350.00	9.43	25,000/-	Deposit	Till the completion of work

Calendar of Events: (1) Last date for receipt of tenders : **29.09.2025** upto 16.00 hrs. (2) Date of Opening of Tenders (Technical Bids) : **03.10.2025** at 11.00 hrs.

The tender details can be downloaded from the e-Procurement platform. Tenders shall be submitted electronically at www.kppp.karnataka.gov.in and Earnest Money Deposit and Tender Processing Fee shall also be paid electronically. Interested eligible contractors shall register on the e-procurement platform to participate in this tender.

Note : (1) All the rights are reserved by the undersigned for postponement or cancellation of entire tender process, rejection of bids /individual bid etc., without assigning any reason. (2) Henceforth, any changes in the schedule/contents will not be published through news papers and further changes will be updated only on e-procurement portal.

DIPR/DWD/KSMCA/691/2025-26 Sd/- Executive Engineer, H&FWD Engg. Division, Dharwad.

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ

Ministry of Micro, Small and Medium Enterprises, Government of India

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಮಂತ್ರಾಲಯ, ಭಾರತ ಸರ್ಕಾರ

ಮಲ್ಟಿ ಡಿಸಿಪ್ಲಿನರಿ ಟ್ರೈನಿಂಗ್ ಸೆಂಟರ್

ವಿಜಿನಾಪುರ, ಎಫ್‌ಸಿಐ ಗೋಡೌನ್ ಹತ್ತಿರ, ದೂರವಾಣಿನಗರ, ಬೆಂಗಳೂರು–560 016.

ಸ್ವ-ಉದ್ಯೋಗ ಆಧಾರಿತ ತರಬೇತಿ ಕಾರ್ಯಕ್ರಮಗಳಿಗಾಗಿ ಅರ್ಜಿ ಆಹ್ವಾನ

ಮಲ್ಟಿ ಡಿಸಿಪ್ಲಿನರಿ ಟ್ರೈನಿಂಗ್ ಸೆಂಟರ್ (MDTC), ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ (KVIC), MSME ಸಚಿವಾಲಯ, ಭಾರತ ಸರ್ಕಾರ, ವಿಜಿನಾಪುರ, ದೂರವಾಣಿನಗರ, ಬೆಂಗಳೂರು ಮತ್ತು ಅದರ ಎಂಪ್ಯಾನೆಲ್ಡ್ ವೃತ್ತಿಪರ ತರಬೇತಿ ಸಹವರ್ತಿಗಳು (PTAs) ನಡೆಸುವ ಕೆಳಗೆ ವಿವರಿಸಿದಂತೆ ವಿವಿಧ ಸ್ಥಳಗಳಲ್ಲಿ ಸ್ವ–ಉದ್ಯೋಗ ಆಧಾರಿತ ತರಬೇತಿ ಕಾರ್ಯಕ್ರಮಗಳಿಗೆ ನಿರುದ್ಯೋಗಿ ಯುವಕರು, ಮಹಿಳೆಯರು, ಸರ್ಕಾರೇತರ ಸಂಸ್ಥೆಗಳು, ಸ್ವ–ಸಹಾಯ ಗುಂಪುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರಸಂ.	ಕಾರ್ಯಕ್ರಮದ ಹೆಸರು	ಅವಧಿ	ತರಬೇತಿ ಒದಗಿಸುವವರು	ಸ್ಥಳ	ಸಂಪರ್ಕ ಸಂಖ್ಯೆ	ಶುಲ್ಕ
1	ಟೈಲರಿಂಗ್ & ಎಂಬ್ರಾಯಿಡರಿ	3 ತಿಂಗಳು	ಎಂಡಿಟಿಸಿ	ಬೆಂಗಳೂರು	080–25650285	3000/–
2		3 ತಿಂಗಳು	ಪಿಟಿಎ–ಶ್ರೀ ವಿನಾಯಕ ಎಂಟರ್‌ಪ್ರೈಸಸ್	ಬೆಂಗಳೂರು	9886916515	1500/–
3		3 ತಿಂಗಳು	ಪಿಟಿಎ–ಚಿಲುಮೆ ಎಸ್‌ಎಸ್‌ಟಿ	ಬೆಂಗಳೂರು	9945400845	3000/–
4	ಬ್ಯೂಟಿಷಿಯನ್ ತರಬೇತಿ	1 ತಿಂಗಳು	ಎಂಡಿಟಿಸಿ	ಬೆಂಗಳೂರು	080–25650285	2500/–
5		1 ತಿಂಗಳು	ಪಿಟಿಎ–ಎಸ್‌ಜಿಸಿಇಟಿ	ಬೆಂಗಳೂರು	9483141411	1500/–
6		1 ತಿಂಗಳು	ಪಿಟಿಎ–ಎಸ್‌ಎಸ್‌ಡಬ್ಲ್ಯೂಡಿಎಫ್	ಬೆಂಗಳೂರು	8197693975	2500/–
7	ಕಂಪ್ಯೂಟರ್ ಬೇಸಿಕ್ ಕೋರ್ಸ್	1 ತಿಂಗಳು	ಎಂಡಿಟಿಸಿ,	ಬೆಂಗಳೂರು	080–25650285	2000/–
8		1 ತಿಂಗಳು	ಪಿಟಿಎ– ಮಾಡರ್ನ್ ಎಜುಕೇಷನ್ ಟ್ರಸ್ಟ್	ಕೋಲಾರ	9901020518	1500/–
9	ಬೇಸಿಕ್ ಬೇಕರಿ ತರಬೇತಿ	5 ದಿನಗಳು	ಎಂಡಿಟಿಸಿ	ಬೆಂಗಳೂರು	080–25650285	1000/–
10	ಬೇಸಿಕ್ ರಿನಿವೇಬಲ್ ಎನರ್ಜಿ	5 ದಿನಗಳು	ಪಿಟಿಎ– ಪ್ರಿಯಾ ವಿಂಡೂ	ಬೆಂಗಳೂರು	9980095896	5000/–
11	ಪೇಪರ್ ಆರ್ಟಿಕಲ್ ತಯಾರಿಕೆ	10 ದಿನಗಳು	ಎಂಡಿಟಿಸಿ	ಬೆಂಗಳೂರು	080–25650285	1000/–
12	ಹಣ್ಣು ಮತ್ತು ತರಕಾರಿ ಸಂಸ್ಕರಣೆ	10 ದಿನಗಳು	ಪಿಟಿಎ– ಕೆಎಂಕೆ ಸಂಘ	ಬೆಂಗಳೂರು	7760339885	1000/–
13	ಮನೆಯ ರಾಸಾಯನಿಕ ಉತ್ಪನ್ನಗಳು	5 ದಿನಗಳು	ಎಂಡಿಟಿಸಿ	ಬೆಂಗಳೂರು	080–25650285	1000/–
14	ಹಣ್ಣು ಮತ್ತು ತರಕಾರಿ ಸಂಸ್ಕರಣೆ	10 ದಿನಗಳು	ಎಂಡಿಟಿಸಿ	ಬೆಂಗಳೂರು		2000/–
15	ಖಾದಿ ಪ್ರಾಕೃತಿಕ್ ಪೈಂಟ್	5 ದಿನಗಳು	ಎಂಡಿಟಿಸಿ	ಬೆಂಗಳೂರು		2000/–
16	ಆರಿ ಎಂಬ್ರಾಯಿಡರಿ	5 ದಿನಗಳು	ಎಂಡಿಟಿಸಿ	ಬೆಂಗಳೂರು		1000/–
17	ಮನೆಯ ರಾಸಾಯನಿಕ ಉತ್ಪನ್ನಗಳು	5 ದಿನಗಳು	ಪಿಟಿಎ– ಗಂಗಾ ಸಿ. ಟ್ರಸ್ಟ್	ಮೈಸೂರು	9740097600	1000/–
18	ಬೇಸಿಕ್ ಜೇನುನೊಣ ಸಾಕಾಣಿಕೆ	5 ದಿನಗಳು	ಎಂಡಿಟಿಸಿ	ಬೆಂಗಳೂರು	080–25650285	1000/–
19	ಅಗರಬತ್ತಿ ತಯಾರಿಕೆ	10 ದಿನಗಳು	ಎಂಡಿಟಿಸಿ	ಬೆಂಗಳೂರು		1000/–

ಇತರ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳು ಸಹ ಲಭ್ಯವಿದೆ. ಆಸಕ್ತ ಅಭ್ಯರ್ಥಿಗಳು ನೇರವಾಗಿ / ಫೋನ್ ಸಂಖ್ಯೆ 080–25650285, 8105788431 8299377420 ಮತ್ತು ಕಚೇರಿ ಇ–ಮೇಲ್ ಐಡಿ: kvicbang@gmail.com ಮೂಲಕ ಸಂಪರ್ಕಿಸಬಹುದು. ತರಬೇತಿ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಿದ ನಂತರ, ಭಾರತ ಸರ್ಕಾರದ ಪ್ರಮಾಣಪತ್ರಗಳನ್ನು ತರಬೇತಿದಾರರಿಗೆ ನೀಡಲಾಗುತ್ತದೆ ಮತ್ತು PMEGP ಯೋಜನೆಯಡಿಯಲ್ಲಿ ಬ್ಯಾಂಕ್‌ಗಳ ಮೂಲಕ 15% ರಿಂದ 35% ರಷ್ಟು ಮಾರ್ಜಿನ್ ಹಣ (ಸಬ್ಸಿಡಿ) ದೊಂದಿಗೆ ಹಣಕಾಸಿನ ನೆರವು ಪಡೆಯಲು ಮಾರ್ಗದರ್ಶನ ನೀಡಲಾಗುತ್ತದೆ. ಸೇವಾ ವಲಯಕ್ಕೆ ರೂ. 20 ಲಕ್ಷದವರೆಗೆ ಮತ್ತು ಉತ್ಪಾದನಾ ವಲಯಕ್ಕೆ ರೂ. 50 ಲಕ್ಷದವರೆಗೆ ಯೋಜನಾ ವೆಚ್ಚದೊಂದಿಗೆ ತಮ್ಮದೇ ಆದ ಉದ್ಯಮವನ್ನು ಸ್ಥಾಪಿಸಲು ಸಹಾಯ ಮಾಡುತ್ತದೆ. ಹೆಚ್ಚಿನ ಮಾಹಿತಿಯನ್ನು www.kvic.org.inಗೆ ಭೇಟಿ ನೀಡಿ ಪಡೆಯಬಹುದು.

ಸಹಿ/–

ಉಪ ನಿರ್ದೇಶಕರು / ಪ್ರಾಂಶುಪಾಲರು

ಪುರಸಭಾ ಕಾರ್ಯಾಲಯ, ಚಿಕ್ಕನಾಯಕನಹಳ್ಳಿ

ಚಿಕ್ಕನಾಯಕನಹಳ್ಳಿ – 572 214. ತುಮಕೂರು ಜಿಲ್ಲೆ.

ದೂರವಾಣಿ : 08133 – 267223,

ಇ–ಮೇಲ್ : itstaff_ulb_chikkanayakanahalli@yahoo.co.in

ವೆಬ್‌ಸೈಟ್ : www.chikkanayakanahallitown.mrc.gov.in

ಸಂಖ್ಯೆ : ಪು.ಚಿ./ತಾಂತ್ರಿಕ/11/2025–26 ದಿನಾಂಕ : 18–09–2025

ಟೆಂಡರ್ ಪ್ರಕಟಣೆ

ಚಿಕ್ಕನಾಯಕನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿ ಎಸ್.ಬಿ.ಎಂ. 2.0 ನೇ ಸಾಲಿನ ಅನುದಾನದಡಿ ತೆಗೆದುಕೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಕರ್ನಾಟಕ ಲೋಕೋಪಯೋಗಿ ಇಲಾಖೆ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ **ಇಂಡೆಂಟ್ ಸಂಖ್ಯೆ : DMA/2025-26/OW/WORK_INDENT49244 ಟೆಂಡರ್‌ಗಳಿಗೆ** ಐಟಂವಾರು ಟೆಂಡರ್‌ನ್ನು ಕೆಟಿಪಿಪಿ 2000 ರನ್ವಯ ಆಹ್ವಾನಿಸಲಾಗಿದೆ.

1) ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ : 20–10–2025 ರ ಸಂಜೆ 5.00 ಗಂಟೆವರೆಗೆ, 2) ಭರ್ತಿ ಮಾಡಿದ ಟೆಂಡರ್ ಫಾರಂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 21–10–2025 ರ ಸಂಜೆ 5.00 ಗಂಟೆವರೆಗೆ, 3) ಭರ್ತಿ ಮಾಡಿದ ಟೆಂಡರ್ ಫಾರಂ ಆರ್ಥಿಕ ಬಿಡ್ ತೆರೆಯುವ ದಿನಾಂಕ : 22–10–2025 ರ ಸಂಜೆ 5.00 ಗಂಟೆವರೆಗೆ.

ಇ–ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ **ವೆಬ್‌ಸೈಟ್ : https://kppp.karnataka.gov.in** ಮೂಲಕ ಸಂಪರ್ಕಿಸಿ ಅರ್ಜಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯ **www.chikkanayakanahallitown.mrc.gov.in ವೆಬ್‌ಸೈಟ್‌ನಲ್ಲಿ** ನೋಡಬಹುದು ಮತ್ತು ಕಛೇರಿ ವೇಳೆಯಲ್ಲಿ ಕಿರಿಯ ಅಭಿಯಂತರರನ್ನು ಸಂಪರ್ಕಿಸುವುದು.

ಸಹಿ/–	ಸಹಿ/–	ಸಹಿ/–	ಸಹಿ/–
ಅಧ್ಯಕ್ಷರು, ಪುರಸಭೆ ಚಿಕ್ಕನಾಯಕನಹಳ್ಳಿ	ಉಪಾಧ್ಯಕ್ಷರು, ಪುರಸಭೆ ಚಿಕ್ಕನಾಯಕನಹಳ್ಳಿ	ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ ಚಿಕ್ಕನಾಯಕನಹಳ್ಳಿ	ಮುಖ್ಯಾಧಿಕಾರಿ, ಪುರಸಭೆ ಚಿಕ್ಕನಾಯಕನಹಳ್ಳಿ

ಡಿಐಪಿಆರ್/ತುಮಕೂರು/17/ಮಣಿಪಾಲ್/2025–26

ಕರ್ನಾಟಕ ಸರ್ಕಾರ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಆಯುಕ್ತರ ಕಾರ್ಯಾಲಯ, 4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18, ದೂರವಾಣಿ:26709689/ 26706775, Email: endowmentcommissioner@gmail.com.

ಸಂಖ್ಯೆ: HRICE-ADM0ADM8/180/2024/E-1426188 ದಿನಾಂಕ : 20.09.2025

ಪ್ರಕಟಣೆ

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಕಲಂ 25 ಅನ್ವಯ ರಾಜ್ಯದಲ್ಲಿನ 'ಎ' ಪ್ರವರ್ಗದ ಈ ಕೆಳಕಂಡ ಅಧಿಸೂಚಿತ ಸಂಸ್ಥೆಗಳಿಗೆ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಕುರಿತು ಆಸಕ್ತ ಭಕ್ತಾಧಿಗಳು / ಸಾರ್ವಜನಿಕರಿಂದ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಲು ತಿಳಿಸಿ ದಿನಾಂಕ : 06.11.2023, 14.03.2025 ಮತ್ತು 12.08.2025 ರಂದು ಪ್ರಕಟಣೆ ಹೊರಡಿಸಲಾಗಿತ್ತು.

ಆದರೆ ಈ ಕೆಳಕಂಡ ದೇವಾಲಯದ ವ್ಯವಸ್ಥಾಪನಾ ಸಮಿತಿ ಸದಸ್ಯತ್ವಕ್ಕೆ ನಿರೀಕ್ಷಿತ ರೀತಿಯಲ್ಲಿ ಅರ್ಜಿಗಳು ಸ್ವೀಕೃತವಾಗದೇ ಇದ್ದುದರಿಂದ ಹಾಗೂ ಹೊಸದಾಗಿ ಹಲವಾರು ಮನವಿಗಳು ಸ್ವೀಕೃತವಾಗುತ್ತಿರುವುದರಿಂದ ಈ ಅಧಿಸೂಚಿತ ಸಂಸ್ಥೆ / ದೇವಾಲಯಕ್ಕೆ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಆಸಕ್ತರಿಂದ ಅರ್ಜಿಗಳನ್ನು ಆಹ್ವಾನಿಸಿ ಮರು ಪ್ರಕಟಣೆಯನ್ನು ಹೊರಡಿಸಲು ದಿನಾಂಕ : 19.09.2025 ರಂದು ನಡೆದ 4ನೇ ರಾಜ್ಯ ಧಾರ್ಮಿಕ ಪರಿಷತ್ತಿನ 9ನೇ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಕ್ರ.ಸಂ.	ದೇವಾಲಯದ ಹೆಸರು ಮತ್ತು ವಿಳಾಸ
1.	ಶ್ರೀ ಹಾಸನಾಂಭ ದೇವಾಲಯ, ಹಾಸನ ನಗರ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ

ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯ ನಿರ್ಣಯದಂತೆ ಸದರಿ "ಎ" ಪ್ರವರ್ಗದ ದೇವಾಲಯಕ್ಕೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಸೆಕ್ಷನ್ 25 ರನ್ವಯ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಆಸಕ್ತ ಭಕ್ತಾಧಿಗಳಿಂದ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆ ಹೊರಡಿಸಲಾಗಿದೆ.

ಸದರಿ ದೇವಾಲಯಗಳ ವ್ಯವಸ್ಥಾಪನಾ ಸಮಿತಿಗೆ ಕನಿಷ್ಟ 25 ವರ್ಷಕ್ಕಿಂತ ಮೇಲ್ಪಟ್ಟ ಆಸಕ್ತ ಭಕ್ತಾಧಿಗಳು ಸದಸ್ಯತ್ವ ಕೋರಿ ಅರ್ಜಿಯನ್ನು ನಿಗದಿತ ನಮೂನೆ–1(ಬಿ)(22ನೇ ನಿಯಮ) ನಮೂನೆಯಲ್ಲಿ ಭರ್ತಿ ಮಾಡಿ, ಅರ್ಜಿಯನ್ನು ದಿನಾಂಕ : 25.09.2025 ರೊಳಗಾಗಿ **"ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ,ಬೆಂಗಳೂರು–560018"** ಇಲ್ಲಿಗೆ ನೇರವಾಗಿ ಸಲ್ಲಿಸತಕ್ಕದ್ದು, ಅಂತಹ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು, ನಿಗಧಿತ ಅವಧಿಯ ನಂತರದಲ್ಲಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ನಿಗಧಿತ ಅರ್ಜಿ ನಮೂನೆಯ ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮತ್ತು **www.itms.kar.gov.in** ನಲ್ಲಿ ಲಭ್ಯವಿರುತ್ತದೆ.

ಸಹಿ/–

(ಡಾ॥ ಎಂ.ವಿ.ವೆಂಕಟೇಶ್, ಭಾ.ಆ.ಸೇ)

ಸದಸ್ಯ ಕಾರ್ಯದರ್ಶಿ, ರಾಜ್ಯ ಧಾರ್ಮಿಕ ಪರಿಷತ್ತು ಹಾಗೂ ಆಯುಕ್ತರು,

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು

ವಾಸಸಂಇ/ವಾ.ಪ್ರ/2918/2025–26

ಶುಲ್ಕ ಹೆಚ್ಚಳ: ಹಗಲು ದರೋಡೆ

ಒಂದನೇ ಪುಟದಿಂದ..

‘ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 100ರಷ್ಟು ಫಲಿತಾಂಶದ ಗರಿಮೆ ಹೊಂದಿದ್ದ ನಗರದ ಕಾಲೇಜೊಂದರಲ್ಲಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಿದ್ದೆವು. ಮಗ ಎಸ್‌ಎಸ್‌ಎಲ್‌ಸಿಯಲ್ಲಿ ಶೇ 95ರಷ್ಟು ಅಂಕ ಗಳಿಸಿದ್ದರಿಂದ ಸೀಟೂ ಸಿಕ್ಕಿತ್ತು. ವಸತಿ ಸೇರಿ ವಾರ್ಷಿಕ ₹ 5 ಲಕ್ಷ ಕಟ್ಟಬೇಕೆಂದು ಹೇಳಿದರು. ಅದನ್ನು ಕೇಳಿ ಗಾಬರಿಗೊಂಡ ನಾವು ₹ 1.5 ಲಕ್ಷ ಕೊಟ್ಟು ಬೇರೆ ಕಾಲೇಜಿಗೆ ಸೇರಿಸಿದೆವು. ಈ ಕುರಿತು ದೂರು ನೀಡಿದರೂ ಸಂಬಂಧಪಟ್ಟ ಕಾಲೇಜಿನ ವಿರುದ್ಧ ಶಿಕ್ಷಣ ಇಲಾಖೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ’ ಎಂದು ಬೆಂಗಳೂರಿನ ಜೆ.ಪಿ. ನಗರದ ನಿವಾಸಿ ಆರ್.ಶಿವರಾಜ್ ಬೇಸರ ವ್ಯಕ್ತಪಡಿಸಿದರು.

‘ಮಗಳು ಖಾಸಗಿ ಶಾಲೆಯೊಂದರಲ್ಲಿ 7ನೇ ತರಗತಿ ಓದುತ್ತಿದ್ದಳು. ಆಡಳಿತ ಮಂಡಳಿಯವರು ₹ 40,000 ಇದ್ದ ಶುಲ್ಕವನ್ನು ಒಂದೇ ವರ್ಷಕ್ಕೆ ₹ 64,000ಕ್ಕೆ ಹೆಚ್ಚಿಸಿದ್ದರು. ಅಷ್ಟು ಹಣ ಕಟ್ಟಿ ಅವಳನ್ನು ಅಲ್ಲಿ ಓದಿಸುವ ಶಕ್ತಿ ಇರಲಿಲ್ಲ. ಹೀಗಾಗಿ ಸರ್ಕಾರಿ ಶಾಲೆಗೆ ಸೇರಿಸಿದೆ’ ಎಂದು ಶಿವಮೊಗ್ಗದ ಬಾಪೂಜಿನಗರ ನಿವಾಸಿ ಆರ್.ಮನೋಜ್ ಕುಮಾರ್ ಹೇಳಿದರು.

ಖಾಸಗಿ ಹಾಗೂ ಅನುದಾನಿತ ಶಾಲೆ– ಕಾಲೇಜುಗಳು ಶುಲ್ಕ ಹೆಚ್ಚಳದ ಮೂಲಕ ‘ಹಗಲು ದರೋಡೆ’ ನಡೆಸುತ್ತಿವೆ ಎಂಬ ಆರೋಪ ನಿರಂತರವಾಗಿ ಕೇಳಿಬರುತ್ತಲೇ ಇದೆ. ಶುಲ್ಕ ಕಟ್ಟಲಾಗದೆ ಪಾಲಕರು ಹಾಗೂ ವಿದ್ಯಾರ್ಥಿಗಳು ಅವಮಾನಕ್ಕೀಡಾದ, ಆತ್ಮಹತ್ಯೆ ಮಾಡಿಕೊಂಡ ಘಟನೆಗಳೂ ಸಾಕಷ್ಟು ನಡೆದಿವೆ. ಈಚೆಗೆ ಕಲಬುರಗಿಯ ತಾಜ್ ಸುಲ್ತಾನಪುರದಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿರುವುದು ಇದಕ್ಕೊಂದು ತಾಜಾ ಉದಾಹರಣೆ.

‘₹1.25 ಲಕ್ಷ ಕೊಟ್ಟು ಮಗಳನ್ನು ಎಂಜಿನಿಯರಿಂಗ್ ಕಾಲೇಜಿಗೆ ಸೇರಿಸಿದ್ದೆವು. 3ನೇ ಸೆಮಿಸ್ಟರ್ ಶುಲ್ಕ ಕಟ್ಟಲು ಸೆಪ್ಟೆಂಬರ್ 10 ಕೊನೆ ದಿನವಾಗಿತ್ತು. ಅಷ್ಟರೊಳಗೆ ಹಣ ಹೊಂದಿಸಲು ಆಗಲಿಲ್ಲ. ಇದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ’ ಎಂದು ಮೃತ ಯುವತಿಯ ತಾಯಿ, ಅಂಗನವಾಡಿ ಶಿಕ್ಷಕಿ ಮಹಾನಂದಾ ಚಿಟಗುಪ್ಪಿ ಕಣ್ಣೀರಿಟ್ಟರು.

ಕೇಂದ್ರ ಸರ್ಕಾರ 2010ರಲ್ಲಿ ಜಾರಿಗೆ ತಂದ ‘ಶಿಕ್ಷಣ ಹಕ್ಕು ಕಾಯ್ದೆ’ಯನ್ನು ರಾಜ್ಯದಲ್ಲಿ 2012ರಲ್ಲಿ ಅನುಷ್ಠಾನಗೊಳಿಸಲಾಗಿದೆ. ಈ ಕಾಯ್ದೆಯ ಸೆಕ್ಷನ್– 13ರ ಪ್ರಕಾರ ಡೊನೇಷನ್ ಪಡೆಯುವ, ಅಧಿಕ ಶುಲ್ಕ ವಸೂಲಿ ಮಾಡುವ ಶಾಲೆಗಳಿಗೆ ಅವು ವಸೂಲಿ ಮಾಡಿದ ಮೊತ್ತದ 10 ಪಟ್ಟು ದಂಡ ವಿಧಿಸಲು ಅವಕಾಶವಿದೆ. ಆದರೆ, ಯಾರೂ ಇದನ್ನು ಪಾಲಿಸುತ್ತಿಲ್ಲ. ಶುಲ್ಕ ಹೆಚ್ಚಳ ಖಂಡಿಸಿ ನಾನಾ ರೀತಿಯ ಪ್ರತಿಭಟನೆ ನಡೆಸಿದರೂ ಸರ್ಕಾರ ಮತ್ತು ಶಿಕ್ಷಣ ಇಲಾಖೆ ಕುಂಭಕರ್ಣ ನಿದ್ರೆಯಿಂದ ಮೇಲೇಳುತ್ತಿಲ್ಲ ಎಂದು ಪಾಲಕರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಅಸಮಾಧಾನ ವ್ಯಕ್ತಪಡಿಸುತ್ತಾರೆ.

ಇದೇ ಕಾಯ್ದೆಯ ಸೆಕ್ಷನ್ 2 ‘ಬಿ’ ಪ್ರಕಾರ ಶುಲ್ಕದ ವಿವರಗಳನ್ನು ಆಯಾ ಶಾಲೆಯವರು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ಪ್ರವೇಶದ ಅರ್ಜಿಯ ಜತೆಗೆ ವಿದ್ಯಾರ್ಥಿಗಳಿಗೆ ನೀಡುವ ಕಿರುಹೊತ್ತಿಗೆಯಲ್ಲೂ ಅದನ್ನು ಮುದ್ರಿಸಬೇಕು. ಶಿಕ್ಷಣ ಇಲಾಖೆಯೂ ಶಾಲೆಗಳ ಶುಲ್ಕದ ವಿವರವನ್ನು ಆಯಾ ವರ್ಷ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ಇಷ್ಟೆಲ್ಲಾ ಇದ್ದರೂ, ಶಿಕ್ಷಣ ಸಂಸ್ಥೆಗಳು ಈ ನಿಯಮಗಳನ್ನೆಲ್ಲಾ ಗಾಳಿಗೆ ತೂರಿವೆ ಎಂಬುದೂ ಪಾಲಕರ ಅಳಲು.

‘ರಾಜ್ಯದಲ್ಲಿರುವ ಬಹುಪಾಲು ಖಾಸಗಿ ಶಿಕ್ಷಣ ಸಂಸ್ಥೆಗಳು ರಾಜಕಾರಣಿಗಳು ಹಾಗೂ ಪ್ರಭಾವಿಗಳ ಒಡೆತನದಲ್ಲಿದ್ದು, ‘ಬೇಲಿಯೇ ಎದ್ದು ಹೊಲ ಮೇಯ್ದಂತೆ’ ಎಂಬ ಸ್ಥಿತಿ ಇದೆ. ‘ಶಿಕ್ಷಣ ಹಕ್ಕು ಕಾಯ್ದೆ’ ಅತ್ಯಂತ ಪರಿಣಾಮಕಾರಿಯಾಗಿದೆ. ಆದರೆ ಇದನ್ನು ಯಾವ ಶಿಕ್ಷಣ ಸಂಸ್ಥೆಗಳೂ ಪಾಲಿಸುತ್ತಿಲ್ಲ. ಇಂತಹ ಸಂಸ್ಥೆಗಳ ವಿರುದ್ಧ ಶಿಕ್ಷಣ ಇಲಾಖೆಯ ಅಧಿಕಾರಿಗಳು ಕ್ರಮ ಜರುಗಿಸಿದ ಉದಾಹರಣೆಯೂ ಇಲ್ಲ. ಡಿಡಿಪಿಐ ಹಾಗೂ ಬಿಇಒ ಇಂತಹ ಶಾಲೆಗಳ ಒಳಗೆ ಹೋಗಿ ತಪಾಸಣೆ ನಡೆಸುವ ಧೈರ್ಯವನ್ನೂ ತೋರುವುದಿಲ್ಲ’ ಎಂದು ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಹೇಳುತ್ತಾರೆ.

ರಾಜ್ಯ ಸರ್ಕಾರದ ಅಂಕುಶದಿಂದ ತಪ್ಪಿಸಿಕೊಳ್ಳಲು ಬಹುತೇಕ ಶಾಲೆಗಳು ಐಸಿಎಸ್‌ಇ, ಸಿಬಿಎಸ್‌ಇ ಪಠ್ಯಕ್ರಮದ ಮೊರೆ ಹೋಗುತ್ತಿವೆ. ಒಮ್ಮೆ ಎನ್‌ಒಸಿ ಸಿಕ್ಕರೆ ತಮ್ಮ ಮೇಲೆ ರಾಜ್ಯದ ಶಿಕ್ಷಣ ಇಲಾಖೆ ನಿಯಂತ್ರಣ ಸಾಧಿಸುವುದು ಕಷ್ಟ ಎಂಬ ಕಾರಣಕ್ಕೆ ಅವು ಈ ‘ಜಾಣ ನಡೆ’ ಅನುಸರಿಸುತ್ತಿವೆ. ಆದರೆ, ಕಾಯ್ದೆಯ ಸೆಕ್ಷನ್–3 ಹೇಳುವುದೇ ಬೇರೆ. ಇದರ ಪ್ರಕಾರ ಶಾಲೆಗಳನ್ನು ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಎಂದು ವಿಭಜಿಸಲಾಗಿದೆಯೇ ಹೊರತು ರಾಜ್ಯ ಪಠ್ಯ, ಕೇಂದ್ರ ಪಠ್ಯ ಎಂಬ ವಿಭಜನೆ ಇಲ್ಲ. ಆದ್ದರಿಂದ ರಾಜ್ಯ ಸರ್ಕಾರ ಎಲ್ಲ ಪಠ್ಯಕ್ರಮ ಅನುಸರಿಸುವ ಶಾಲೆಗಳ ಮೇಲೂ ನಿಯಂತ್ರಣ ಸಾಧಿಸಬಹುದು. ಇಷ್ಟಾದರೂ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ ಎಂಬುದು ಶಿಕ್ಷಣ ತಜ್ಞರ ಆರೋಪ.

ಚಿತ್ರ: ಗುರು ನಾವಳ್ಳಿ

ಶೂ, ಸಾಕ್ಸ್ ಹೆಸರಲ್ಲೂ ಸುಲಿಗೆ: ಶಾಲೆಗಳು ಸಮವಸ್ತ್ರ, ಶೂ, ಸಾಕ್ಸ್ ಹೆಸರಿನಲ್ಲಿ ಶುಲ್ಕ ವಸೂಲಿ ಮಾಡಬಾರದೆಂದು 1983ರ ಶಿಕ್ಷಣ ಕಾಯ್ದೆ ಹೇಳುತ್ತದೆ. ಆದರೆ ಸಂಸ್ಥೆಗಳು ಇದಕ್ಕೆ ಕವಡೆ ಕಾಸಿನ ಕಿಮ್ಮತ್ತನ್ನೂ ನೀಡುತ್ತಿಲ್ಲ. ಬೋಧನಾ ಶುಲ್ಕ, ಇತರೆ ಶುಲ್ಕ, ವಿಶೇಷ ಅಭಿವೃದ್ಧಿ ಶುಲ್ಕ, ವಾಹನ ಶುಲ್ಕ, ಕೌಶಲಾಭಿವೃದ್ಧಿ ಮತ್ತು ಕ್ರೀಡಾ ಶುಲ್ಕ ಹೀಗೆ ನಾನಾ ರೂಪದಲ್ಲಿ ಪಾಲಕರಿಂದ ಸಾವಿರಾರು ರೂಪಾಯಿ ಕಟ್ಟಿಸಿಕೊಳ್ಳುತ್ತಿವೆ. ಸಮವಸ್ತ್ರ, ಶೂ, ಸಾಕ್ಸ್ ಹೆಸರಿನಲ್ಲಿ ಪ್ರತ್ಯೇಕವಾಗಿ ಸಾವಿರಾರು ರೂಪಾಯಿ ಪಡೆಯುತ್ತಿವೆ. ಈ ಮೊತ್ತ ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ.

‘ಶಾಲೆಯವರು ವಾಹನ ಶುಲ್ಕದ ರೂಪದಲ್ಲಿ ಮಾಸಿಕ ಸರಾಸರಿ ₹ 2,000 ದಿಂದ ₹ 3,000 ಶುಲ್ಕ ಪಡೆಯುತ್ತಿದ್ದಾರೆ. ಇದರ ಜೊತೆಗೆ ನಾವು ತಿಂಗಳಿಗೆ ₹ 300ರಿಂದ ₹ 500 ಮೊತ್ತವನ್ನು ಹೆಚ್ಚುವರಿಯಾಗಿ ಕೊಡಬೇಕಿದೆ’ ಎಂದು ದಾವಣಗೆರೆಯ ನಿಟುವಳ್ಳಿಯ ಅಂಜಲಿ ಹೇಳುತ್ತಾರೆ.

‘ರಾಜ್ಯದ ಬಹುತೇಕ ಖಾಸಗಿ ಶಾಲೆಗಳಲ್ಲಿ 2024-25ನೇ ಸಾಲಿನಲ್ಲಿ ಪ್ರವೇಶ ಶುಲ್ಕದ ಜೊತೆಗೆ ವಿವಿಧ ಶುಲ್ಕಗಳನ್ನೂ ಹೆಚ್ಚಿಸಲಾಗಿದೆ. ಶಿಕ್ಷಣ ಹಕ್ಕು ಕಾಯ್ದೆ ಉಲ್ಲಂಘಿಸಿ ಬಟ್ಟೆ, ಶೂ, ಸಾಕ್ಸ್, ನೋಟ್ ಬುಕ್ ಅನ್ನು ಶಾಲೆಗಳಲ್ಲೇ ಮಾರಾಟ ಮಾಡಲಾಗುತ್ತಿದೆ. ಕಾನೂನು ಬಾಹಿರವಾಗಿ ಈ ಕಾರ್ಯದಲ್ಲಿ ತೊಡಗಿರುವ ಶಾಲೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನ ವೆಂಕಟರಮಣ ಒತ್ತಾಯಿಸುತ್ತಾರೆ.

‘ರಾಜ್ಯದ ಬಹುತೇಕ ಅನುದಾನಿತ ಶಾಲೆಗಳು 2024–25ನೇ ಸಾಲಿನ ಶುಲ್ಕವನ್ನು ಶೇ 30ರಿಂದ 40ರಷ್ಟು ಹೆಚ್ಚಿಸಿವೆ. ಒಂದೇ ಬಾರಿಗೆ ಇಷ್ಟು ಪ್ರಮಾಣದಲ್ಲಿ ಶುಲ್ಕ ಏರಿಕೆ ಮಾಡಿರುವುದರಿಂದ ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಹೊರೆಯಾಗಿದೆ. ಖಾಸಗಿ ಶಾಲೆಗಳಿಗೆ ಮೂಗುದಾರ ಹಾಕುವ ಉದ್ದೇಶದಿಂದ ಶಿಕ್ಷಣ ಇಲಾಖೆ ಹೊರಡಿಸಿದ್ದ ಆದೇಶವನ್ನು ಕಳೆದ ವರ್ಷ ಹೈಕೋರ್ಟ್ ವಜಾಗೊಳಿಸಿತ್ತು. ಅದಾದ ಬಳಿಕ ಕೆಲ ಅನುದಾನರಹಿತ ಶಾಲೆಗಳಿಗೆ ಲಂಗು–ಲಗಾಮೇ ಇಲ್ಲದಂತಾಗಿದೆ’ ಎಂದು ಹಲವು ಪೋಷಕರು ಅಳಲು ತೋಡಿಕೊಂಡಿದ್ದಾರೆ.

ಬಡ, ಮಧ್ಯಮ ವರ್ಗದವರಿಗೆ ಬಿಸಿ ತುಪ್ಪ: ಶುಲ್ಕ ಹೆಚ್ಚಳವು ಬಡ ಮತ್ತು ಮಧ್ಯಮ ವರ್ಗದವರಿಗೆ ನುಂಗಲಾರದ ಮತ್ತು ಉಗುಳಲಾರದ ಬಿಸಿ ತುಪ್ಪವಾಗಿ ಪರಿಣಮಿಸುತ್ತಿದೆ. ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವವರಿಗೆ ಹೆಚ್ಚೆಂದರೆ ತಿಂಗಳಿಗೆ ₹30,000 ದಿಂದ ₹40,000 ವೇತನ ಸಿಗುತ್ತಿದೆ. ಮಕ್ಕಳನ್ನು ಎಲ್‌ಕೆಜಿಗೆ ಸೇರಿಸುವುದಕ್ಕೇ ಕನಿಷ್ಠ ₹ 20,000 ದಿಂದ ಗರಿಷ್ಠ ₹ 1 ಲಕ್ಷದವರೆಗೂ ಶುಲ್ಕ ಪಾವತಿಸಬೇಕಿದೆ. ರೈತರ ವಾರ್ಷಿಕ ಆದಾಯ, ಉದ್ಯೋಗಿಯ ವೇತನ ಹೆಚ್ಚಳಕ್ಕಿಂತಲೂ ಶಿಕ್ಷಣ ಶುಲ್ಕವೇ ಅಧಿಕವಾಗಿದೆ.

‘ನಾನು ಕೆಲಸ ಮಾಡುವ ಕಂಪನಿ ವರ್ಷಕ್ಕೆ ಶೇ 4ರಿಂದ ಶೇ 6ರಷ್ಟು ವೇತನ ಹೆಚ್ಚಿಸಿದರೆ ದೊಡ್ಡ ಮಾತು. ಆದರೆ ಶಾಲೆಯವರು ಶೇ 15ರಿಂದ ಶೇ 30ರವರೆಗೂ ಶುಲ್ಕ ಹೆಚ್ಚಳ ಮಾಡುತ್ತಿದ್ದಾರೆ. ಹೀಗಾಗಿ ಮಕ್ಕಳಿಗೆ ಶಿಕ್ಷಣ ಕೊಡಿಸುವುದೇ ಸವಾಲಿನ ಕೆಲಸವಾಗಿದೆ’ ಎಂದು ಚಿತ್ರದುರ್ಗದ ಲಿಂಗರಾಜ್ ಹೇಳುತ್ತಾರೆ.

‘ಬಹುತೇಕ ಖಾಸಗಿ ಶಾಲೆಗಳಲ್ಲಿ ಶೇ 85ರಷ್ಟು ಶುಲ್ಕವನ್ನು ಒಂದೇ ಬಾರಿಗೆ ಭರಿಸುವಂತೆ ಒತ್ತಡ ಹಾಕುತ್ತಿದ್ದಾರೆ. ಕೆಲವೆಡೆ, 3–4 ಕಂತುಗಳಲ್ಲಿ ಕಟ್ಟಿಸಿಕೊಳ್ಳುವ ಪದ್ಧತಿ ಇದ್ದು, ಅದಕ್ಕೆ ಬಡ್ಡಿಯನ್ನೂ ವಿಧಿಸುತ್ತಾರೆ. ಮೊದಲ ಬಾರಿಗೆ ಶಾಲೆಗೆ ದಾಖಲು ಮಾಡುವಾಗ ಶಿಕ್ಷಣ ಸಂಸ್ಥೆಗಳು ಅಭಿವೃದ್ಧಿ ಶುಲ್ಕದ ಹೆಸರಿನಲ್ಲಿ ಸರಾಸರಿ 30,000 ದಿಂದ 60,000ದವರೆಗೂ ಹಣ ಪಡೆಯುತ್ತಿವೆ’ ಎಂದು ಮೈಸೂರಿನ ಹಲವು ಪೋಷಕರು ದೂರಿದ್ದಾರೆ.

ಹೆಸರಿಗಷ್ಟೇ ಶಿಕ್ಷಣ ನಿಯಂತ್ರಣ ಪ್ರಾಧಿಕಾರ: ಬಲವಂತವಾಗಿ ಅಧಿಕ ಶುಲ್ಕ ವಸೂಲಿ ಮಾಡುವ ಖಾಸಗಿ ಶಾಲೆಗಳ ವಿರುದ್ಧ ಪಾಲಕರು ದೂರು ನೀಡಲೆಂದೇ ರಚಿಸಲಾಗಿರುವ ‘ಜಿಲ್ಲಾ ಮಟ್ಟದ ಶಿಕ್ಷಣ ನಿಯಂತ್ರಣ ಪ್ರಾಧಿಕಾರ’ ಹೆಸರಿಗಷ್ಟೇ ಎನ್ನುವಂತಾಗಿದೆ. ಅಧಿಕಾರಿಗಳು ‘ಶಾಸ್ತ್ರ’ಕ್ಕೆ ಎಂಬಂತೆ ಪ್ರಾಧಿಕಾರ ರಚಿಸಿ ಕೈತೊಳೆದುಕೊಂಡಿದ್ದಾರೆ. ಬಹುತೇಕ ಪಾಲಕರು ಯಾವ ಹೋರಾಟದ ಗೊಡವೆಯೂ ಬೇಡವೆಂದು ದೂರು ಕೊಡುವುದಕ್ಕೂ ಮುಂದಾಗುತ್ತಿಲ್ಲ.

ಮೈಸೂರು, ಮಂಡ್ಯ, ಮಧುಗಿರಿ ಶೈಕ್ಷಣಿಕ ಜಿಲ್ಲೆಯಲ್ಲಿ ಈಚಿನ ವರ್ಷಗಳಲ್ಲಿ ತಲಾ ಒಂದು ದೂರಷ್ಟೇ ದಾಖಲಾಗಿದೆ. ಚಾಮರಾಜನಗರ, ಹಾಸನ, ಕೊಡಗು, ದಕ್ಷಿಣ ಕನ್ನಡ, ತುಮಕೂರು, ಕೊಪ್ಪಳ, ದಾವಣಗೆರೆ, ಹುಬ್ಬಳ್ಳಿ, ಧಾರವಾಡ ಜಿಲ್ಲೆಗಳಲ್ಲಿ ಪ್ರಾಧಿಕಾರಕ್ಕೆ ದೂರುಗಳೇ ಬಂದಿಲ್ಲ. ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಯ ವಿರುದ್ಧವೂ ಗುರುತರವಾದ ಕ್ರಮ ಕೈಗೊಂಡ ಉದಾಹರಣೆಗಳಿಲ್ಲ. ‘ಸಾರ್ವಜನಿಕರು ದೂರು ಸಲ್ಲಿಸಿದರೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು’ ಎನ್ನುವ ಸಿದ್ಧ ಉತ್ತರ ಜಿಲ್ಲಾಧಿಕಾರಿಗಳಿಂದ ಬರುತ್ತದೆ. ಪಾಲಕರು ದೂರು ಕೊಡುವಂತೆ ಜಾಗೃತಿ ಮೂಡಿಸುವ ಕೆಲಸವನ್ನು ಶಾಲಾ ಶಿಕ್ಷಣ ಇಲಾಖೆಯಾಗಲಿ, ಜಿಲ್ಲಾಡಳಿತಗಳಾಗಲಿ ಮಾಡುತ್ತಿಲ್ಲ.

‘ಕಲಬುರಗಿಯಲ್ಲಿ ಕೆಲವು ಪಾಲಕರು ದೂರು ನೀಡಿದ್ದರು. ಶಾಲಾ ಆಡಳಿತ ಮಂಡಳಿಯೊಂದು ಅವರು ಭರಿಸಬೇಕಿದ್ದ ಶುಲ್ಕದ ಮೊತ್ತದಲ್ಲಿ ವಿನಾಯಿತಿ ನೀಡುತ್ತಿದ್ದಂತೆಯೇ ದೂರು ಹಿಂದೆ ಪಡೆದು ವಿಚಾರಣೆ ನಡೆಸದಂತೆಯೂ ಕೋರಿದ್ದರು’ ಎಂದು ಡಿಡಿಪಿಐ ಸೂರ್ಯಕಾಂತ ಮದಾನೆ ಹೇಳಿದರು.

ಖಾಸಗಿ ಶಾಲೆಗಳ ಬಗ್ಗೆ ಏಕಿಷ್ಟು ವ್ಯಾಮೋಹ: ‘ಶುಲ್ಕ ಹೆಚ್ಚಳದ ‘ಬರೆ’ ಬೀಳುತ್ತಿದ್ದರೂ ಬಹುಪಾಲು ಪಾಲಕರು ಖಾಸಗಿ ಶಾಲೆಗಳ ಮೇಲಿನ ವ್ಯಾಮೋಹ ತೊರೆದಿಲ್ಲ. ಸರ್ಕಾರ ಬಿಸಿಯೂಟ, ಪಠ್ಯಪುಸ್ತಕ, ಸೈಕಲ್, ಸಮವಸ್ತ್ರ, ಲ್ಯಾಪ್‌ಟಾಪ್ ಹೀಗೆ ವಿವಿಧ ಸೌಕರ್ಯಗಳನ್ನು ಕಲ್ಪಿಸುತ್ತಿದೆ. ತರಬೇತಿ ಪಡೆದ ನುರಿತ ಶಿಕ್ಷಕರನ್ನೂ ನಿಯೋಜಿಸಿದೆ. ಇಷ್ಟಾದರೂ ಪಾಲಕರಲ್ಲಿ ಸರ್ಕಾರಿ ಶಾಲೆಗಳ ಬಗೆಗಿನ ತಾತ್ಸಾರ ಮನೋಭಾವ ದೂರವಾಗಿಲ್ಲ. ‘ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ’ ಎಂಬುದನ್ನು ಅರಿಯದೇ ಮಕ್ಕಳ ಶಿಕ್ಷಣಕ್ಕೆ ದೂರದ ಊರುಗಳಲ್ಲಿರುವ ಖಾಸಗಿ ಶಾಲೆಗಳನ್ನೇ ಆರಿಸಿಕೊಳ್ಳುತ್ತಿದ್ದಾರೆ’ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ಬೇಸರ ವ್ಯಕ್ತಪಡಿಸುತ್ತಾರೆ.

‘ಸರ್ಕಾರಿ ಶಾಲೆಗಿಂತ ಖಾಸಗಿ ಶಾಲೆಯಲ್ಲಿ ಮಕ್ಕಳ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಾರೆ. ಎಲ್ಲಾ ಆಗುಹೋಗುಗಳ ಕುರಿತೂ ಪಾಲಕರಿಗೆ ತಿಳಿಸಿ, ತಿದ್ದುತ್ತಾರೆ. ‘ಪ್ರತಿಷ್ಠಿತ’ ಶಾಲೆ, ಕಾಲೇಜುಗಳಲ್ಲಿ ಕಲಿತರೆ, ಮಕ್ಕಳಿಗೆ ‘ಪ್ರತಿಷ್ಠಿತ’ ಕಂಪನಿಗಳಲ್ಲಿ ಸುಲಭವಾಗಿ ಉದ್ಯೋಗವೂ ಸಿಗುತ್ತದೆ’ ಎಂದು ಹುಬ್ಬಳ್ಳಿಯ ಮಯೂರ ನಗರದ ಆನಂದ ಶಿಂಧೆ ಹೇಳುತ್ತಾರೆ.

‘ಮಗನನ್ನು ಸರ್ಕಾರಿ ಕನ್ನಡ ಮಾಧ್ಯಮ ಶಾಲೆಯಲ್ಲೇ ಕಲಿಸಬೇಕೆಂಬ ಆಸೆ ಇತ್ತು. ಆದರೆ, ಅಲ್ಲಿ ತರಗತಿಗಳನ್ನು ವ್ಯವಸ್ಥಿತವಾಗಿ ನಡೆಸುವುದಿಲ್ಲ. ಈ ಹಿಂದೆ ಶಿಸ್ತು ಇತ್ತು. ಈಗ ಅದೂ ಉಳಿದಿಲ್ಲ. ಈ ಕಾರಣಕ್ಕೆ ಮಗನನ್ನು ಖಾಸಗಿ ಶಾಲೆಗೆ ದಾಖಲಿಸಿದ್ದೇನೆ’ ಎಂದು ಮಂಗಳೂರಿನ ಕೃಷ್ಣಾಪುರದ ಶ್ರೀನಾಥ್ ಕುಲಾಲ್ ತಮ್ಮ ನಿರ್ಧಾರ ಸಮರ್ಥಿಸಿಕೊಳ್ಳುತ್ತಾರೆ.

ಕಲ್ಯಾಣ ಕರ್ನಾಟಕ ಭಾಗದ ಸರ್ಕಾರಿ ಶಾಲೆಗಳಲ್ಲಿ ಉತ್ತಮ ಕಲಿಕಾ ವಾತಾವರಣ ಇಲ್ಲ ಎಂಬುದು ಬಹುತೇಕ ಪಾಲಕರ ದೂರು. ಹೀಗಾಗಿ, ಮಕ್ಕಳನ್ನು ಸಿಬಿಎಸ್‌ಇ ಪಠ್ಯಕ್ರಮ ಹೊಂದಿರುವ ಖಾಸಗಿ ಶಾಲೆಗಳಿಗೆ ಸೇರಿಸುತ್ತಿರುವುದಾಗಿ ಅವರು ಹೇಳುತ್ತಾರೆ. ಇದರ ನಡುವೆ ಶುಲ್ಕ ಹೆಚ್ಚಳದಿಂದ ಕಂಗೆಟ್ಟ ಅನೇಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಂದ ಸರ್ಕಾರಿ ಶಾಲೆಗಳಿಗೆ ದಾಖಲಿಸಿದ ಉದಾಹರಣೆಗಳೂ ಇವೆ.

‘ನನ್ನ ಮಗ ಖಾಸಗಿ ಶಾಲೆಯೊಂದರಲ್ಲಿ ಓದುತ್ತಿದ್ದ. ಶುಲ್ಕ ಕಟ್ಟುವುದು ತಡವಾದರೆ, ಆತನನ್ನು ಶಾಲೆಯಿಂದ ಹೊರಗಡೆ ನಿಲ್ಲಿಸುತ್ತಿದ್ದರು. ಆಗಾಗ ಮನೆಗೂ ಕಳುಹಿಸುತ್ತಿದ್ದರು. ಪ್ರತಿ ವರ್ಷ ಅವೈಜ್ಞಾನಿಕವಾಗಿ ಶುಲ್ಕ ಹೆಚ್ಚಳ ಮಾಡುತ್ತಿದ್ದರು. ಅದರಿಂದ ಬೇಸತ್ತು ಅವನನ್ನು ಸರ್ಕಾರಿ ಶಾಲೆಗೆ ಸೇರಿಸಿದ್ದೇನೆ’ ಎಂದು ಮಂಡ್ಯ ಜಿಲ್ಲೆಯ ಸಾತನೂರು ಗ್ರಾಮದ ಶಶಿಕುಮಾರ್ ತಿಳಿಸಿದರು.

ಮಧ್ಯಮ ಆದಾಯದ ಸುಳಿಯಲ್ಲಿ: ರಾಜಕೀಯ ಹಸ್ತಕ್ಷೇಪ, ಸ್ವಾಯತ್ತತೆಯ ಕೊರತೆಯಿಂದ ಭಾರತದ ಉನ್ನತ ಶಿಕ್ಷಣ ಕ್ಷೇತ್ರವು ಬಿಕ್ಕಟ್ಟಿನಲ್ಲಿದೆ ಎಂದು ದೆಹಲಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಹಾಗೂ ಅರ್ಥಶಾಸ್ತ್ರಜ್ಞ ದೀಪಕ್ ನಯ್ಯರ್ ಈಚೆಗೆ ಅಭಿಪ್ರಾಯಪಟ್ಟಿದ್ದರು. ‘ಗುಣಮಟ್ಟದ ಶಿಕ್ಷಣ ಮತ್ತು ಸಂಶೋಧನೆಯಿಲ್ಲದೆ ಭಾರತವು ಲ್ಯಾಟಿನ್ ಅಮೆರಿಕ ಮತ್ತು ಏಷ್ಯಾದ ಆರ್ಥಿಕತೆಯ ಮಾದರಿಯಲ್ಲೇ ‘ಮಧ್ಯಮ ಆದಾಯದ ಸುಳಿ’ಗೆ ಸಿಲುಕುವ ಸಾಧ್ಯತೆಯಿದೆ. ಉನ್ನತ ಶಿಕ್ಷಣ ಪರಿವರ್ತನೆಗೊಳ್ಳದ ಹೊರತು 2047ರ ವೇಳೆಗೆ ಹೆಚ್ಚಿನ ಆದಾಯದ ಸ್ಥಿತಿಗೆ ತಲುಪುವುದು ಕಷ್ಟಸಾಧ್ಯ ಎಂದೂ ಅವರು ಹೇಳಿದ್ದರು.

ಆಗಬೇಕಿರುವುದು ಏನು?: ದೆಹಲಿ, ಕೇರಳ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಷ್ಟೇ ಮೂಲ ಸೌಕರ್ಯಗಳನ್ನು ಹೊಂದಿವೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಿಗೂ ಆಧುನಿಕ ಸ್ಪರ್ಶ ನೀಡಬೇಕು. ಮನಸ್ಸಿಟ್ಟು ಪಾಠ ಮಾಡುವ ಶಿಕ್ಷಕರು, ಶುದ್ಧ ಕುಡಿಯುವ ನೀರು, ವಿದ್ಯಾರ್ಥಿ– ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯ, ಶಾಲಾ– ಕಾಲೇಜು ಸ್ವಚ್ಛತೆಗೆ ನೌಕರರು, ಇಂಟರ್‌ನೆಟ್ ಮತ್ತು ಕಂಪ್ಯೂಟರ್ ಇರುವ ಗ್ರಂಥಾಲಯವಿದ್ದರೆ ಲಗಾಮಿಲ್ಲದೆ ಶುಲ್ಕ ಹೇರುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಕಡಿವಾಣ ಹಾಕಬಹುದು ಎಂಬುದು ಶಿಕ್ಷಣ ತಜ್ಞರು ಹಾಗೂ ಪಾಲಕರ ಅಭಿಪ್ರಾಯ.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ
ಪೂರಕ ಮಾಹಿತಿ: ಚಂದ್ರಹಾಸ ಹಿರೇಮಳಲಿ, ಎಂ.ಮಹೇಶ್, ಪ್ರವೀಣ್ ಕುಮಾರ್ ಪಿ.ವಿ, ಕೆ.ಜೆ.ಮರಿಯಪ್ಪ, ನಾಗರಾಜ ಚಿನಗುಂಡಿ, ಮಲ್ಲಿಕಾರ್ಜುನ ನಾಲವಾರ

> **ಜೀವನ ನಡೆಸಲೇ ನಾವು ಕಷ್ಟ ಅನುಭವಿಸುತ್ತಿದ್ದೇವೆ. ಆದರೆ, ನಮ್ಮಂತೆ ನಮ್ಮ ಮಕ್ಕಳು ಕಷ್ಟಪಡುವುದು ಬೇಡ ಎಂದು ಖಾಸಗಿ ಶಾಲೆಗೆ ಸೇರಿಸಿದ್ದೇವೆ. ಅಲ್ಲಿ ಒಳ್ಳೆಯ ಫಲಿತಾಂಶ ಪಡೆದವರನ್ನು ನೋಡಿದ್ದೇವೆ. ಅವರಂತೆಯೇ ನಮ್ಮ ಮಕ್ಕಳು ಶಿಕ್ಷಣದಲ್ಲಿ ಸಾಧನೆ ಮಾಡಬೇಕು ಎಂಬ ಆಸೆ ಇದೆ**
> **ಶಿವಾನಂದ ಗೊರಜನವರ,** ಗೋಕುಲ ನಿವಾಸಿ, ಹುಬ್ಬಳ್ಳಿ

> **ನಾನು ಕಲಿತದ್ದು ಸರ್ಕಾರಿ ಶಾಲೆಯಲ್ಲೇ. ನನ್ನ ಮಗನನ್ನೂ ಅದೇ ಶಾಲೆಯಲ್ಲಿ ಓದಿಸಬೇಕೆಂದಿದ್ದೆ. ನಾವು ಕಲಿಯುವಾಗ 400ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದ ಶಾಲೆಯಲ್ಲೀಗ 80 ಮಕ್ಕಳಿದ್ದಾರೆ. ಒಂದರಿಂದ ಏಳನೇ ತರಗತಿಗೆ ಇಬ್ಬರೇ ಶಿಕ್ಷಕಿಯರಿದ್ದಾರೆ. ಇಂತಹ ಶಾಲೆಯಲ್ಲಿ ನಮ್ಮ ಮಕ್ಕಳಿಗೆ ಯಾವ ರೀತಿಯ ಶಿಕ್ಷಣ ಸಿಗಲು ಸಾಧ್ಯ. ಹಾಗಾಗಿ ಖಾಸಗಿ ಶಾಲೆಗೆ ಸೇರಿಸಿರುವೆ**
> **ದೀಪಕ್ ಬಜಾಲ್,** ಪಕ್ಕಲಡ್ಕ, ಮಂಗಳೂರು

> **ಅಕ್ಕಪಕ್ಕದ ಮನೆಯವರು ತಮ್ಮ ಮಕ್ಕಳನ್ನು ಪ್ರತಿಷ್ಠಿತ ಶಾಲೆಗಳಿಗೆ ದಾಖಲಿಸಿದ್ದಾರೆ. ನಾವು ಮಗನನ್ನು ಸರ್ಕಾರಿ ಶಾಲೆಗೆ ಸೇರಿಸಿದರೆ ಅವರು ಕೀಳಾಗಿ ನೋಡುತ್ತಾರೆ. ಈ ಕಾರಣಕ್ಕೆ ಇದ್ದಿದ್ದರಲ್ಲೇ ಕಡಿಮೆ ಶುಲ್ಕ ಇರುವ ಶಾಲೆಗೆ ಸೇರಿಸಿದ್ದೇವೆ**
> **ಪ್ರಕಾಶ್ ಕುಮಾರ್,** ಶಾಮನೂರು ನಿವಾಸಿ, ದಾವಣಗೆರೆ

ಹೈಕೋರ್ಟ್‌ನಲ್ಲಿ ಸರ್ಕಾರಕ್ಕೆ ಹಿನ್ನಡೆ

ಈ ಹಿಂದೆ ಶಿಕ್ಷಣ ಇಲಾಖೆಯು ಕರ್ನಾಟಕ ಶಿಕ್ಷಣ ಕಾಯ್ದೆ–1983ರ ಅನ್ವಯ ಆದೇಶ ಹೊರಡಿಸಿ, ಶುಲ್ಕ ನಿಗದಿ ಸೇರಿದಂತೆ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಕೆಲ ಚಟುವಟಿಕೆಗಳನ್ನು ನಿಯಂತ್ರಿಸಿತ್ತು. ಇದರಿಂದ ಖಾಸಗಿ ಶಾಲೆಗಳು ಪ್ರತಿ ವರ್ಷ ಶುಲ್ಕ ಹೆಚ್ಚಳ ಮಾಡುವುದಕ್ಕೆ ಕಡಿವಾಣ ಬಿದ್ದಿತ್ತು. ಇದರ ವಿರುದ್ಧ ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿಗಳ ಸಂಘ (ಕುಸ್ಮಾ) ಎರಡೂವರೆ ದಶಕದ ಹಿಂದೆಯೇ ಹೈಕೋರ್ಟ್ ಮೊರೆ ಹೋಗಿತ್ತು.

ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್, ‘ಸರ್ಕಾರದ ಅನುದಾನ ಪಡೆಯದ ಖಾಸಗಿ ಶಿಕ್ಷಣ ಸಂಸ್ಥೆಗಳ ಚಟುವಟಿಕೆಗಳಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವಂತಿಲ್ಲ’ ಎಂದು ತೀರ್ಪು ನೀಡಿತ್ತು. ಇದರ ವಿರುದ್ಧ ಶಿಕ್ಷಣ ಇಲಾಖೆ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಸುಪ್ರೀಂಕೋರ್ಟ್ ಸೂಚನೆಯಂತೆ ಮತ್ತೆ ಹೈಕೋರ್ಟ್‌ನಲ್ಲೇ ಮೇಲ್ಮನವಿಯ ವಿಚಾರಣೆ ನಡೆದಿತ್ತು. 2017ರಲ್ಲಿ ಮರು ಆದೇಶ ಹೊರಡಿಸಿದ್ದ ಇಲಾಖೆಯು ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಮತ್ತೆ ಹಿಡಿತ ಸಾಧಿಸಿತ್ತು. ಆದರೆ ಹೈಕೋರ್ಟ್ ಈ ಎರಡು ಆದೇಶಗಳನ್ನೂ ವಜಾಗೊಳಿಸಿತ್ತು.

‘ಖಾಸಗಿ ಶಿಕ್ಷಣ ಸಂಸ್ಥೆಗಳು ಸರ್ಕಾರದ ಅನುದಾನ ಪಡೆಯುವುದಿಲ್ಲ. ಮೂಲ ಸೌಕರ್ಯ, ಶಿಕ್ಷಕರಿಗೆ ವೇತನ ಸೇರಿದಂತೆ ಎಲ್ಲ ವೆಚ್ಚವನ್ನೂ ಸಂಸ್ಥೆಗಳೇ ಭರಿಸಬೇಕಿದೆ. ಹಾಗಾಗಿ, ಶುಲ್ಕ ಹೆಚ್ಚಳ ಅನಿವಾರ್ಯ. ಎಷ್ಟು ಪ್ರಮಾಣದಲ್ಲಿ ಹೆಚ್ಚಳ ಮಾಡಬೇಕು ಎನ್ನುವ ಕುರಿತು ಆಯಾ ಸಂಸ್ಥೆಗಳೇ ನಿರ್ಧಾರ ತೆಗೆದುಕೊಳ್ಳುತ್ತವೆ’ ಎಂದು ಕುಸ್ಮಾ ಕಾರ್ಯದರ್ಶಿ ಎ.ಮರಿಯಪ್ಪ ಹೇಳಿದ್ದರು.

ಬೆಳಗಾವಿಯಲ್ಲಿ ತಿರುಮಲ ತಿರುಪತಿ ದೇವಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿಯಲ್ಲಿ ತಿರುಮಲ ತಿರುಪತಿ ದೇವಸ್ಥಾನ ನಿರ್ಮಿಸಲು ನಿರ್ಧರಿಸಲಾಗಿದೆ ಎಂದು ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಆಡಳಿತ ಮಂಡಳಿಯ ಸದಸ್ಯ ಎಸ್. ನರೇಶ್ ಕುಮಾರ್ ತಿಳಿಸಿದರು.

ಮಲ್ಲೇಶ್ವರದಲ್ಲಿ ಇರುವ ಟಿಟಿಡಿ ದೇವಾಲಯದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬೆಳಗಾವಿ ಬಾಲಾಜಿ ಟ್ರಸ್ಟ್ ಎಂಬ ಸಂಸ್ಥೆಯು ಸುವರ್ಣ ಸೌಧದ ಎದುರು ಏಳು ಎಕರೆ ಜಾಗವನ್ನು ಖರೀದಿಸಿದೆ. ಅಲ್ಲಿ ಅಂದಾಜು ₹100 ಕೋಟಿ ವೆಚ್ಚದಲ್ಲಿ ದೇವಾಲಯ ನಿರ್ಮಿಸಲು ಟಿಟಿಡಿ ಆಡಳಿತ ಮಂಡಳಿ ಅನುಮೋದನೆ ನೀಡಿದೆ’ ಎಂದರು.

‘ಮುಂದಿನ ತಿಂಗಳಿನಲ್ಲಿ ಟಿಟಿಡಿ ಆಡಳಿತ ಮಂಡಳಿ ಸದಸ್ಯರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಿದ್ದಾರೆ. 2025ರ ಅಂತ್ಯದೊಳಗೆ ನಿರ್ಮಾಣ ಕಾಮಗಾರಿ ಆರಂಭವಾಗುವ ನಿರೀಕ್ಷೆ ಇದೆ’ ಎಂದು ಮಾಹಿತಿ ನೀಡಿದರು.

ವೈಷ್ಣವ ದೇವಾಲಯಗಳಿಗೆ ನೆರವು: ‘ಜೀರ್ಣೋದ್ಧಾರ ಅಗತ್ಯವಿರುವ, ದೈನಂದಿನ ಪೂಜೆ ವಿಧಿವಿಧಾನಗಳನ್ನು ನಡೆಸಲು ಆರ್ಥಿಕ ನೆರವು ಅಗತ್ಯವಿರುವ ವೈಷ್ಣವ ಸಂಬಂಧಿ ದೇವಾಲಯಗಳು ಟಿಟಿಡಿ ಮಂಡಳಿಗೆ ಮನವಿ ಪತ್ರ ಸಲ್ಲಿಸಿದರೆ, ಅಗತ್ಯ ಹಣಕಾಸು ನೆರವು ಒದಗಿಸುತ್ತೇವೆ’ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ದೇಶದ ಯಾವುದೇ ಭಾಗದಲ್ಲಿರುವ ದೇವಾಲಯಗಳು ಜೀರ್ಣೋದ್ಧಾರಕ್ಕೆ ಅರ್ಜಿ ಸಲ್ಲಿಸಿದರೆ, ಅದನ್ನು ಪರಿಶೀಲನೆ ನಡೆಸಲಾಗುತ್ತದೆ’ ಎಂದರು.

ಫೆ. 28 ರಿಂದ ಪಿಯು, ಮಾ. 18ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆಯನ್ನು ಫೆಬ್ರುವರಿ 28ರಿಂದ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಮಾರ್ಚ್ 18ರಿಂದ ಆರಂಭಿಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ನಿರ್ಧರಿಸಿದ್ದು, ತಾತ್ಕಾಲಿಕ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ.

ದ್ವಿತೀಯ ಪಿಯು ಪರೀಕ್ಷೆ ಮಾರ್ಚ್ 17ಕ್ಕೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಏ.1ಕ್ಕೆ ಮುಕ್ತಾಯವಾಗಲಿದೆ. ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಆಕ್ಷೇಪಣೆಗಳನ್ನು ಸಲ್ಲಿಸಲು ಅ.9ರವರೆಗೆ ಅವಕಾಶ ನೀಡಲಾಗಿದೆ. ಆಕ್ಷೇಪಣೆಗಳನ್ನು ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಇಮೇಲ್ chairpersonkseab@gmail.com ಗೆ ಸಲ್ಲಿಸಬಹುದು.

ದ್ವಿತೀಯ ಪಿಯು ಪರೀಕ್ಷಾ ವೇಳಾಪಟ್ಟಿ: ಫೆ.28–ಕನ್ನಡ, ಅರೇಬಿಕ್, ಮಾರ್ಚ್ 2–ಭೂಗೋಳ ಶಾಸ್ತ್ರ, ಸಂಖ್ಯಾಶಾಸ್ತ್ರ, ಮನಃಶಾಸ್ತ್ರ, 3–ಇಂಗ್ಲಿಷ್, 4–ತೆಲುಗು, ತಮಿಳು, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, ಮಲೆಯಾಳಂ, 5–ಇತಿಹಾಸ, ಗೃಹವಿಜ್ಞಾನ, 6–ಭೌತಶಾಸ್ತ್ರ, 7–ಐಚ್ಛಿಕ ಕನ್ನಡ, ಭೂಗರ್ಭ ಶಾಸ್ತ್ರ, ವ್ಯವಹಾರ ಅಧ್ಯಯನ, 9–ರಾಜ್ಯಶಾಸ್ತ್ರ, ಶಿಕ್ಷಣಶಾಸ್ತ್ರ, ಮೂಲಗಣಿತ, 10–ಅರ್ಥಶಾಸ್ತ್ರ, 11–ತರ್ಕಶಾಸ್ತ್ರ, ಜೀವಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗಣಕ ವಿಜ್ಞಾನ, 12–ಹಿಂದಿ, 13–ರಾಜ್ಯಶಾಸ್ತ್ರ, 14–ಲೆಕ್ಕಶಾಸ್ತ್ರ, 16–ಸಮಾಜ ಶಾಸ್ತ್ರ, ಗಣಿತ, 17–ಹಿಂದೂಸ್ತಾನಿ ಸಂಗೀತ, ಮಾಹಿತಿ ತಂತ್ರಜ್ಞಾನ, ರೀಟೇಲ್, ಆಟೊಮೊಬೈಲ್, ಹೆಲ್ತ್‌ಕೇರ್, ಬ್ಯೂಟಿ ಆ್ಯಂಡ್ ವೆಲ್‌ನೆಸ್.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿ: ಮಾರ್ಚ್ 18–ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ (ಎನ್‌ಸಿಇಆರ್‌ಟಿ), ಸಂಸ್ಕೃತ, 20–ಗಣಿತ, 23–ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ, 25–ದ್ವಿತೀಯ ಭಾಷೆಗಳಾದ ಇಂಗ್ಲಿಷ್, ಕನ್ನಡ, 28–ಸಮಾಜ ವಿಜ್ಞಾನ, 30–ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಎನ್‌ಎಸ್‌ಕ್ಯೂಎಫ್ ವಿಷಯಗಳು, ಏ.1–ಅರ್ಥಶಾಸ್ತ್ರ, ಎಂಜಿನಿಯರಿಂಗ್ ವಿಷಯಗಳು.

ಸಮೀಕ್ಷೆ ಮುಂದೂಡಿ: ಒಕ್ಕಲಿಗರ ನಿರ್ಣಯಕ್ಕೆ ಸಚಿವರ ಸಹಮತ

ಒಂದನೇ ಪುಟದಿಂದ...

‘ಸಮಾಜ ಉಳಿಸಿಕೊಳ್ಳಬೇಕು, ಸಮಾಜದ ಋಣ ತೀರಿಸಬೇಕು ಅಂತ ಎಲ್ಲರೂ ಬಂದಿದ್ದೀರಿ. ನಾವು ಯಾರೇ ಎಷ್ಟು ದೊಡ್ಡ ಸ್ಥಾನಕ್ಕೆ ಹೋಗಿದ್ದರೂ ಅದು ನಮ್ಮ ಸಮಾಜದಿಂದಲೇ ಅನ್ನೋದು ಗಮನ ಇರಲಿ. ಸಮೀಕ್ಷೆಯಿಂದ ಸಮುದಾಯಕ್ಕೆ ಅನುಕೂಲವೂ ಆಗಲಿದೆ. ನಮ್ಮ ಸಮುದಾಯದ ರಕ್ಷಣೆಗೆ ನಾವು ಬೇರೆ ತಂತ್ರಗಾರಿಕೆ ಮಾಡಬೇಕು. ಆತುರವಾಗಿ ಮಾಡುತ್ತಿರುವುದು ತಪ್ಪೋ ಸರಿಯೋ ಎಂಬ ಚರ್ಚೆ ಬೇಡ. 15 ದಿನಗಳಲ್ಲಿ ಮಾಡಲಾಗದು ಎಂಬ ವಿಷಯ ನಿಮಗೆ ಬೇಡ’ ಎಂಬುದಾಗಿ ಅವರು ಹೇಳಿದ್ದಾರೆ ಎಂದು ಗೊತ್ತಾಗಿದೆ.

ಗುಂಡಣ್ಣ



25 ವರ್ಷಗಳ ಹಿಂದೆ
ಗುರುವಾರ, 21-09-2000

• ರಾಜ್ಯ–ರೈಲ್ವೆ ಸಹಭಾಗಿತ್ವದ ಕಂಪನಿ: ಒಪ್ಪಂದಕ್ಕೆ ಅಂಕಿತ

ನವದೆಹಲಿ, ಸೆ.20 (ಪಿಟಿಐ, ಯುಎನ್‌ಐ)– ಕರ್ನಾಟಕದಲ್ಲಿ ಈಗಾಗಲೇ ಆರಂಭವಾಗಿರುವ ₹1,639 ಕೋಟಿ ವೆಚ್ಚದ ನಾಲ್ಕು ರೈಲ್ವೆ ಯೋಜನೆಗಳ ಶೀಘ್ರ ಅಭಿವೃದ್ಧಿಗಾಗಿ ರೈಲ್ವೆ ಸಚಿವಾಲಯ ಕರ್ನಾಟಕ ಸರ್ಕಾರದೊಂದಿಗೆ ಸಹಭಾಗಿತ್ವದ ಕಂಪನಿಯೊಂದನ್ನು ಸ್ಥಾಪಿಸಿದೆ.

ಈ ಸಂಬಂಧ ತಿಳುವಳಿಕೆ ಪತ್ರಕ್ಕೆ ಇಂದು ಇಲ್ಲಿ ರೈಲ್ವೆ ಸಚಿವೆ ಮಮತಾ ಬ್ಯಾನರ್ಜಿ ಮತ್ತು ಕರ್ನಾಟದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಸಮ್ಮುಖದಲ್ಲಿ ರೈಲ್ವೆ ಮಂಡಳಿಯ ಹೆಚ್ಚುವರಿ ಸದಸ್ಯ ಪಿ.ಕೆ ವಾಹಿ ಹಾಗೂ ಮೂಲಸೌಲಭ್ಯ ವಿಭಾಗದ ಪ್ರಧಾನ ಕಾರ್ಯದರ್ಶಿ ಬಿ.ಕೆ ದಾಸ್ ಅವರು ಸಹಿ ಹಾಕಿದರು.

75 ವರ್ಷಗಳ ಹಿಂದೆ
ಗುರುವಾರ, 21-09-1950

• ‘ಪಾಕಿಸ್ತಾನದಿಂದ ಅಂತರರಾಷ್ಟ್ರೀಯ ಕಾನೂನಿನ ಉಲ್ಲಂಘನೆ’

ಲೇಕ್ ಸಕ್ಸಸ್, ಸೆ. 20– ಪಾಕಿಸ್ತಾನದ ಭದ್ರತಾಪಡೆಗಳು 1947 ಅಕ್ಟೋಬರ್‌ನಲ್ಲಿ ಜಮ್ಮು–ಕಾಶ್ಮೀರದ ಗಡಿಯೊಳಗೆ ಪ್ರವೇಶಿಸಿದ್ದಾವೆ. ಇದು ಅಂತರರಾಷ್ಟ್ರೀಯ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ವಿಶ್ವಸಂಸ್ಥೆಯ ಕಾಶ್ಮೀರ ಪ್ರತಿನಿಧಿ ಸರ್ ಒವೆನ್ ಡಿಕ್ಸನ್ ಅವರು ವರದಿ ಮಾಡಿದ್ದಾರೆ.

ಭಾರತ ಮತ್ತು ಪಾಕಿಸ್ತಾನ ನಡುವಿನ ಸಮಸ್ಯೆಯು ಭುಗಿಲೆದ್ದಿದೆ. ಎರಡು ದೇಶಗಳು ಮಾತುಕತೆಯ ಮೂಲಕ ಒಪ್ಪಂದಕ್ಕೆ ಬರುವುದು ಸೂಕ್ತ ಎಂದು ಡಿಕ್ಸನ್ ಅವರು ವರದಿ ಮಾಡಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

21 ಸೆಪ್ಟೆಂಬರ್ 2025 ಭಾನುವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಅಮಾವಾಸ್ಯೆ ಗಂ. 25-24 ನಕ್ಷತ್ರ: ಪೂರ್ವಫಲ್ಗುಣಿ ಗಂ. 9-32 ಯೋಗ: ಶುಭ ಗಂ.19-53 ಕರಣ: ಚತುಷ್ಪಾದ ಗಂ. 12-47 ಕನ್ಯಾ ಮಾಸದ 04 ನೇ ದಿನ. ಮಳೆ ನಕ್ಷತ್ರ : ಉತ್ತರಾ 3 ನೇ ಪಾದ. ರಾಹುಕಾಲ : ಸಾಯಂಕಾಲ 04-30 06-00 ಸೂರ್ಯೋದಯ : 06-23 ಸೂರ್ಯಾಸ್ತ : 06-24 ಮುಸ್ಲಿಂ ದಿನಾಂಕ : 28 ರಬಿಉಲ್ಲಾವಲ್ ದಿನ ವಿಶೇಷ : ಮಹಾಲಯ ಅಮಾವಾಸ್ಯೆ, ಸೂರ್ಯಗ್ರಹಣ (ಭಾರತದಲ್ಲಿ ಗೋಚರಿಸುವುದಿಲ್ಲ)’ ಅದೃಷ್ಟ ಸಂಖ್ಯೆ : 2, 9

ಮೇಷ: ಜೀವನದಲ್ಲಿ ನಿಮ್ಮದೇ ಆದ ಉತ್ತಮ ನಿಯಮ ರೂಢಿಸಿಕೊಳ್ಳಿ. ತಪ್ಪು ಪುನರಾವರ್ತನೆ ಆಗದಂತೆ ಎಚ್ಚರ. ಕಾಲು ನೋವಿನ ಸಮಸ್ಯೆ ಕಾಡಬಹುದು. ಹೋಟೆಲ್ ಅಥವಾ ಸಮಾರಂಭಗಳಲ್ಲಿ ಊಟ ಮಾಡುವಾಗ ಎಚ್ಚರದಿಂದಿರಿ.

ವೃಷಭ: ವರಮಾನದಲ್ಲಿ ಈ ದಿನ ಯಾವುದೇ ರೀತಿಯ ಕೊರತೆ ಇರುವುದಿಲ್ಲ. ಹೊಸ ಮನೆ ನಿರ್ಮಾಣಕ್ಕಾಗಿ ಹೆಚ್ಚಿನ ತಯಾರಿ ನಡೆಸಬಹುದು, ವಾಸ್ತು ವಿಚಾರದಲ್ಲಿ ಗಮನಹರಿಸಿ. ಸಿನಿಮಾ ರಂಗದಲ್ಲಿ ಕೆಲಸ ನಿರ್ವಹಿಸುವವರಿಗೆ ಯಶಸ್ಸು.

ಮಿಥುನ: ಮನೆಯ ಎಲ್ಲ ವಿಷಯಗಳನ್ನು ಮನೆಯ ಸರ್ವ ಸದಸ್ಯರ ಎದುರು ಚರ್ಚಿಸಬೇಕೆಂಬ ಮನಸ್ಸಾಗುವುದು ಅದರಂತೆಯೇ ಚರ್ಚಿಸಲು ಸಿದ್ಧರಾಗುವಿರಿ. ಮಕ್ಕಳೊಂದಿಗೆ ವಿದೇಶ ಪ್ರಯಾಣ ಮಾಡುವ ಸಂದರ್ಭ ಬರಲಿದೆ.

ಕರ್ಕಾಟಕ: ಸತತ ಪ್ರಯತ್ನದಿಂದ ಯಶಸ್ಸು ಹೊಂದಿ ಅಗೌರವಿಸಿದ ಸಂಬಂಧಿಕರ ಎದುರು ತಲೆ ಎತ್ತಿ ನಿಲ್ಲುವಂತಾಗುತ್ತದೆ. ಸುಖ ದುಃಖವನ್ನು ಸಮವಾಗಿ ಸ್ವೀಕರಿಸಿ ಜೀವನದಲ್ಲಿ ಹೊಸ ಚೈತನ್ಯ ತುಂಬಿ, ಆಸಕ್ತಿ ಹೆಚ್ಚಿಸಿಕೊಳ್ಳಿ.

ಸಿಂಹ: ದೇವರ ಅನುಗ್ರಹದಿಂದ ಬಹಳ ಹಳೆಯದಾದ ಹಾಗೂ ಕೌಟುಂಬಿಕವಾದ ಮುಖ್ಯ ಕೆಲಸವೊಂದನ್ನು ಪೂರ್ಣಗೊಳಿಸುವಿರಿ. ಪಿತ್ತ ಪ್ರಕೋಪದಿಂದ ದೈಹಿಕವಾಗಿ ಹಲವು ಸಮಸ್ಯೆಗಳು ಕಾಡಬಹುದು.

ಕನ್ಯಾ: ಅವಶ್ಯಕವಾಗಿ ಬೇಕಾಗಿರುವ ಮತ್ತು ನಿಮ್ಮ ನೆಚ್ಚಿನ ಉದ್ಯೋಗ ದೊರಕಿಸಿಕೊಳ್ಳಲು ತೀವ್ರ ಪ್ರಯತ್ನವನ್ನು ನಡೆಸಬೇಕಾಗುತ್ತದೆ. ಬಹಳ ದಿನಗಳ ಬಳಿಕ ಬಂಧು-ಮಿತ್ರರ ಜೊತೆಗಿನ ಒಡನಾಟ ಸಂತೋಷ ತರಲಿದೆ.

ತುಲಾ: ಯೋಜನಾಬದ್ಧ ಕೆಲಸ ರೂಪಿಸದಿದ್ದರೆ ಈ ದಿನದ ನಿಮ್ಮ ಶ್ರಮ ವ್ಯರ್ಥ ಆಗಲಿದೆ. ಪ್ರಾಮಾಣಿಕವಾಗಿ ದೇವರು ಮೆಚ್ಚುವ ರೀತಿ ಕರ್ತವ್ಯ ನಿರ್ವಹಿಸುವುದು ಉತ್ತಮ. ಇತರರ ಭಾವನೆಗಳಿಗೆ ಹೆಚ್ಚಿನ ಆದ್ಯತೆ ಕೊಡಲು ಕಲಿಯಿರಿ.

ವೃಶ್ಚಿಕ: ಶಿಕ್ಷಕ ವೃತ್ತಿಯನ್ನು ನಡೆಸಿ ವಿದ್ಯಾದಾನ ಮಾಡುವವರಿಗೆ ಸೂಕ್ತ ಗೌರವಾದರಗಳು ದೊರೆಯಲಿವೆ. ರಾಜಕೀಯ ಚಟುವಟಿಕೆಗಳಲ್ಲಿ ಬಿರುಸಿನ ಓಡಾಟ ಇರಲಿದೆ. ತಂದೆ ತಾಯಿಯ ಆರೋಗ್ಯದಲ್ಲಿ ಅಧಿಕವಾದ ಗಮನವಿರಲಿ.

ಧನು: ಕಟ್ಟಡ ನಿರ್ಮಾಣದ ಕೆಲಸಗಾರರಿಗೆ ವೃತ್ತಿಯಲ್ಲಿ ಬೇಸರ ಹುಟ್ಟಬಹುದು. ತಾಂತ್ರಿಕ ವಿದ್ಯಾರ್ಥಿಗಳಿಗೆ ಓದಿನಲ್ಲಿ ಪರಿಶ್ರಮದ ಅಗತ್ಯವಿದೆ. ದೂರ ಸಂಚಾರದಲ್ಲಿ ವೃಥಾ ಖರ್ಚುಗಳಿದ್ದರೂ ಸಂತೋಷ ಇರಲಿದೆ.

ಮಕರ: ಮದುವೆಗೆ ಹಣಕಾಸಿನ ವ್ಯವಸ್ಥೆ ಮಾಡಿಕೊಳ್ಳುವ ಬಗ್ಗೆ ಯೋಚನೆ ಬರಲಿದೆ. ನಿಧಾನಗತಿಯಲ್ಲಿ ಸಾಗುತ್ತಿರುವ ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಬರುವುದು. ವ್ಯಾಪಾರದಲ್ಲಿ ಮೋಸದ ಬಲೆಗೆ ಬೀಳದಿರಿ.

ಕುಂಭ: ನಾಳೆಯ ಯೋಜನೆಗಳಿಗೆ ಇಂದು ಹೆಚ್ಚು ಗಮನ ಕೊಡುವುದರಿಂದ ಕೆಲಸ ಪೂರ್ಣಗೊಳಿಸಲು ಸಹಾಯ ಮಾಡಲಿದೆ. ಒಂದು ಕುತೂಹಲಕಾರಿ ವಿಷಯ ತಿಳಿದು ಅಚ್ಚರಿಗೊಳ್ಳುವಿರಿ.

ಮೀನ: ರಾಜಕಾರಣಿಗಳ ಮಾತಿನ ಪ್ರಭಾವದಿಂದ ಅಥವಾ ಹಣಬಲದಿಂದ ನಿಮ್ಮ ಕೆಲಸ ನೆರವೇರುತ್ತದೆ. ಯೋಜನೆಯ ಮೇಲೆ ಹಿಡಿತ ಸಾಧಿಸಲು ಸ್ನೇಹಿತರ ಬೆಂಬಲ ಸಿಗಲಿದೆ. ಶ್ರೀ ಮಂಜುನಾಥನ ದರ್ಶನ ಪಡೆದುಕೊಳ್ಳಿ.

ಪದಬಂಧ 6171

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

4.ರಾಮನ ಹತ್ತಿರವಿರುವವನು ದುಷ್ಟ (3)
6.ಇತರರು ಮಾಡಿದಂತೆ ಮಾಡುವುದು (5)
8.ಅಡಕೆಯಲ್ಲಿ ಉಲ್ಟಾ ಕಾಣುತ್ತಿದೆ (3)
9.ಕಡಲ ಹತ್ತಿರ ಪಡೆದ ಸಾಲ (2)
11.ಮಾತಿಲ್ಲದ ನೀರವತೆ (2)
13.ಪ್ರತಿಯಲ್ಲಿರುವ ಏಳಿಗೆ (3)
15.ಉಪವಾಸದಿಂದ ಮರಣ ಹೊಂದುವ ವ್ರತ (5)
17.ಅಷ್ಟಮಿ ನಂತರದ ತಿಥಿ (3)

ಮೇಲಿಂದ ಕೆಳಕ್ಕೆ

1.ಇದು ಹಿಂದಿಯವನ ಪರಿಶ್ರಮ (4)
2.ಅಂಕಣದಲ್ಲಿರುವ ಸಂಖ್ಯೆ ಕಾಣುತ್ತಿದೆಯೇ? (2)
3.ಜಾಗರಣೆ ಮಾಡಿದ ಬುದ್ಧಿವಂತೆ (2)
5.ಮರದ ಹತ್ತಿರ ಬಿದ್ದಿರುವ ಪಚ್ಚೆ (4)
6.ನಿಷೇಧಿಸಿರುವ ಸ್ಥಳಕ್ಕೆ ಪ್ರವೇಶಿಸುವುದು (7)
7.ಈತ ವಿಷಯಾಸಕ್ತ (3)
10.ಮನದಲ್ಲಿರುವವ ದಡ್ಡ! (4)
12.ಜನ ಮಾಡಿದ ದೂರದ ಅಳತೆ ಹಿಂದುಮುಂದಾಗಿದೆ (3)
14.ಮಿತಿಗೆ ಒಳಪಟ್ಟದ್ದು ಇದು (4)
15.ಪದ್ಯದ ನಿಯತ ಸ್ಥಳಗಳಲ್ಲಿ ಬರುವ ನಿಯತಾಕ್ಷರ (2)
16.ಛಂದೋಬದ್ಧವಾದ, ಲಯಬದ್ಧವಾದ ರಚನೆ (2)



6170ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಹರವಿ 4.ಪಾಯ 5.ರಾಜಾಧಿರಾಜ 8.ಗುಲಾಮ 10.ವಾಗ್ದಾನ 11.ರಾಮನಗರ 12.ಪ್ರಥಮಾ 13.ವಾದನ 15.ನರಕವೀನ 17.ಬನಿ 18.ರಿಪೇರಿ

ಮೇಲಿಂದ ಕೆಳಕ್ಕೆ: 1.ಹದಗು 2.ವಿರಾಮ 3.ಸಂಧಿ 5.ಯಜಮಾನ 7.ಜನಿವಾರ 9.ಸನದು 11.ರಾಮಾಯಣ 12.ಪ್ರತಿಬಿಂಬ 13.ವಾನರಿ 15.ನಸರಿ 16.ಕಕ್ಕಿ

ಸುಡೊಕು 6555

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3	4				8	2	7	
2	5		4	9				3
		8			2		5	
	3			4			8	
		1	7		5	6	2	
	6			1				
6			5	2		1		7
	1				4			
9		5		7		3		8

6554 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚಿಟಿಕೆ ಸುದ್ದಿ

‘ಕುಟುಂಬ ಪ್ರಾಬಲ್ಯ ಕೊನೆಗೊಳಿಸುವುದೇ ಟಿವಿಕೆ ಗುರಿ’

ವಿಜಯ್

ತಿರುವಾರೂರು (ಪಿಟಿಐ): ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ, ನಟ ವಿಜಯ್ ಅವರು ಡಿಎಂಕೆ ಅಧ್ಯಕ್ಷ ಮತ್ತು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ವಿರುದ್ಧ ಶನಿವಾರ ವಾಗ್ದಾಳಿ ನಡೆಸಿದರು. ತಮಿಳುನಾಡಿನಲ್ಲಿ ‘ಕುಟುಂಬ ಪ್ರಾಬಲ್ಯ’ವನ್ನು ತೊಡೆದುಹಾಕುವುದೇ ಟಿವಿಕೆ ಗುರಿ ಎಂದು ಹೇಳಿದರು.

‘ಡಿಎಂಕೆ ಸರ್ಕಾರವು ತಿರುವಾರೂರನ್ನು ನಿರ್ಲಕ್ಷಿಸಿದೆ. ಜಿಲ್ಲೆಯಲ್ಲಿ ರೈತ ಸ್ನೇಹಿ ಮೂಲ ಸೌಕರ್ಯಗಳ ಕೊರತೆ ಇದೆ’ ಎಂದರು.

ಸುಮಾರು 50 ವರ್ಷಗಳಿಂದ ತಿರುವಾರೂರು ಡಿಎಂಕೆಯ ಭದ್ರಕೋಟೆಯಾಗಿದೆ. ಡಿಎಂಕೆಯ ದಿಗ್ಗಜ ನಾಯಕ ಎಂ.ಕರುಣಾನಿಧಿ ಅವರ ಜನ್ಮಸ್ಥಳವೂ ಹೌದು.

ಮಣಿಪುರ: ದಾಳಿ ಖಂಡಿಸಿ ಪ್ರತಿಭಟನೆ

ಇಂಫಾಲ (ಪಿಟಿಐ): ಮಣಿಪುರದ ಬಿಷ್ಣುಪುರ ಜಿಲ್ಲೆಯ ನಂಬೋಲ್‌ನಲ್ಲಿ ಅಸ್ಸಾಂ ರೈಫಲ್ಸ್‌ನ ಇಬ್ಬರು ಸಿಬ್ಬಂದಿ ಸಾವಿಗೆ ಕಾರಣವಾದ ದಾಳಿಯನ್ನು ಖಂಡಿಸಿ ಸ್ಥಳೀಯರು ಶನಿವಾರ ಪ್ರತಿಭಟನೆ ನಡೆಸಿದರು.

ಶುಕ್ರವಾರ ಸಂಜೆ ನಂಬೋಲ್ ಸಬಲ್ ಲೈಕೈ ಪ್ರದೇಶದಲ್ಲಿ ಶಸ್ತ್ರಸಜ್ಜಿತ ಗುಂಪೊಂದು ಅಸ್ಸಾಂ ರೈಫಲ್ಸ್ ಪಡೆಯ ವಾಹನದ ಮೇಲೆ ದಾಳಿ ನಡೆಸಿತು. ಈ ವೇಳೆ ಇಬ್ಬರು ಯೋಧರು ಸಾವಿಗೀಡಾಗಿದ್ದು, ಐವರು ಗಾಯಗೊಂಡಿದ್ದಾರೆ.

ಈವರೆಗೆ ಯಾವುದೇ ಗುಂಪು ದಾಳಿಯ ಹೊಣೆ ಹೊತ್ತುಕೊಂಡಿಲ್ಲ. ದಾಳಿಕೋರರಿಗಾಗಿ ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ದಾಳಿಯನ್ನು ಖಂಡಿಸಿ ಮಹಿಳೆಯರು ಪ್ರತಿಭಟನಾ ರ‍್ಯಾಲಿ ನಡೆಸಿದರು. ಸಾರ್ವಜನಿಕ ಸ್ಥಳಗಳಲ್ಲಿ ಗುಂಡು ಹಾರಿಸುವುದಕ್ಕೆ ವಿರೋಧ ವ್ಯಕ್ತಪಡಿಸಿದರು.

ಟಿಟಿಡಿ ಕಾಣಿಕೆ ಕಳ್ಳತನ: ಸಿಐಡಿ ತನಿಖೆಗೆ ಆದೇಶ

ಹೈದರಾಬಾದ್: ತಿರುಪತಿಯ ತಿರುಮಲ ದೇವಸ್ಥಾನದ ಪರಕಾಮಣಿಯಲ್ಲಿ ನಡೆದ ಕಳ್ಳತನ ಪ್ರಕರಣದ ತನಿಖೆಯನ್ನು ತ್ವರಿತವಾಗಿ ಮುಕ್ತಾಯಗೊಳಿಸಿರುವ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಆಂಧ್ರಪ್ರದೇಶ ಹೈಕೋರ್ಟ್ ಸಿಐಡಿಗೆ ನಿರ್ದೇಶನ ನೀಡಿದೆ.

ಪ್ರಕರಣದ ತನಿಖೆಯನ್ನು ತ್ವರಿತವಾಗಿ ಮುಕ್ತಾಯಗೊಳಿಸಿದ್ದ ಕುರಿತು ಸಿಐಡಿ ತನಿಖೆ ನಡೆಸುವಂತೆ ಕೋರಿರುವ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ಪೊಲೀಸ್ ಠಾಣೆ ಮತ್ತು ತಿರುಪತಿ ತಿರುಮಲ ದೇವಸ್ಥಾನಂ (ಟಿಟಿಡಿ) ಮಂಡಳಿ ಎರಡರಿಂದಲೂ ಎಲ್ಲ ದಾಖಲೆಗಳನ್ನು ಸಂಗ್ರಹಿಸಿ ನ್ಯಾಯಾಲಯಕ್ಕೆ ಸಲ್ಲಿಸುವಂತೆ ನಿರ್ದೇಶಿಸಿದೆ. ಮಂಡಳಿಯ ನಿರ್ಧಾರ ಮತ್ತು ಸಂಬಂಧಿತ ದಾಖಲೆಗಳನ್ನು ವಶಪಡಿಸಿಕೊಳ್ಳುವಂತೆಯೂ ನ್ಯಾಯಾಲಯ ಆದೇಶಿಸಿದೆ.

ರೈಲ್ ನೀರಿನ ದರ ಲೀಟರ್‌ಗೆ ₹14

ನವದೆಹಲಿ (ಪಿಟಿಐ): ರೈಲ್ವೆ ಮಂಡಳಿಯು ರೈಲು ನಿಲ್ದಾಣ ಮತ್ತು ರೈಲುಗಳಲ್ಲಿ ಮಾರಾಟ ಮಾಡುವ ‘ರೈಲ್ ನೀರಿನ’ ದರವನ್ನು ಲೀಟರ್‌ಗೆ ₹1 ಕಡಿಮೆ ಮಾಡಿದೆ. 1 ಲೀಟರ್ ನೀರಿನ ಬಾಟಲಿಗೆ ₹15 ಇದ್ದ ದರವು ಈಗ ₹14ಕ್ಕೆ ಇಳಿಕೆಯಾಗಿದೆ. 500 ಎಂ.ಎಲ್‌ನ ನೀರಿನ ಬಾಟಲಿಗೆ ಗ್ರಾಹಕರು ₹10ರ ಬದಲು ₹9 ಪಾವತಿಸಿದರೆ ಸಾಕು.

‘ಐಆರ್‌ಸಿಟಿಸಿ ಮತ್ತು ಎಲ್ಲ ರೈಲ್ವೆ ವಲಯಗಳಿಗೆ ರೈಲ್ವೆ ಮಂಡಳಿ ಶನಿವಾರ ಪರಿಷ್ಕೃತ ದರದ ಸುತ್ತೋಲೆ ಹೊರಡಿಸಿದೆ. ಸೆ.22ರಿಂದ ಪರಿಷ್ಕೃತ ದರ ಜಾರಿಗೆ ಬರಲಿದೆ.

‘ಮತ ಕಳ್ಳತನ ಮುಚ್ಚಿಹಾಕಲು ಯತ್ನ’

ನವದೆಹಲಿ ಕ್ಷೇತ್ರದಲ್ಲಿ ಚುನಾವಣಾ ಅಕ್ರಮ: ಎಎಪಿ ಪುನರುಚ್ಚಾರ

ನವದೆಹಲಿ: ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ‘ಮತ ಕಳ್ಳತನ’ ನಡೆದಿದೆ ಎಂಬ ಆರೋಪವನ್ನು ಎಎಪಿ ಶನಿವಾರ ಪುನರುಚ್ಚರಿಸಿದ್ದು, ಚುನಾವಣಾ ಆಯೋಗವು (ಇ.ಸಿ) ಎಲ್ಲ ಅಕ್ರಮಗಳನ್ನು ಮುಚ್ಚಿಹಾಕುತ್ತಿದೆ ಎಂದು ದೂರಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ದೆಹಲಿ ಘಟಕದ ಅಧ್ಯಕ್ಷ ಸೌರಭ್ ಭಾರದ್ವಾಜ್, ‘ವಿಧಾನಸಭಾ ಚುನಾವಣೆಯಲ್ಲಿ ನವದೆಹಲಿ ಕ್ಷೇತ್ರದಲ್ಲಿ ‘ಮತ ಕಳ್ಳತನ’ ನಡೆದಿರುವ ಅನುಮಾನ ವ್ಯಕ್ತವಾಗಿದೆ’ ಎಂದಿದ್ದಾರೆ.

ಫೆಬ್ರುವರಿಯಲ್ಲಿ ನಡೆದ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಎಎಪಿಯ ಅರವಿಂದ ಕೇಜ್ರಿವಾಲ್, ಬಿಜೆಪಿಯ ಪರ್ವೇಶ್ ಸಾಹಿಬ್ ಸಿಂಗ್ ವರ್ಮಾ ಮತ್ತು ಕಾಂಗ್ರೆಸ್‌ನ ಸಂದೀಪ್ ದೀಕ್ಷಿತ್ ಸ್ಪರ್ಧಿಸಿದ್ದರು. ‘ಮತದಾರರ ಪಟ್ಟಿಯಿಂದ ಅರ್ಹ ಮತದಾರರ ಹೆಸರು ಅಳಿಸಿ ಹಾಕಿರುವ ಆರೋಪಗಳ ತನಿಖೆಗೆ ಒತ್ತಾಯಿಸಿ ನಾವು ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದೇವೆ. ಆದರೆ ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯಡಿ ಕೋರಿರುವ ಮಾಹಿತಿ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ್ದಲ್ಲ ಎನ್ನುವ ಮೂಲಕ ಆಯೋಗವು ಪ್ರತಿಕ್ರಿಯಿಸಲು ನಿರಾಕರಿಸಿದೆ’ ಎಂದಿದ್ದಾರೆ.

‘ಮುಖ್ಯ ಚುನಾವಣಾ ಆಯುಕ್ತರ ನಡೆ ಅನುಮಾನಾಸ್ಪದವಾಗಿದೆ ಎಂಬುದನ್ನು ಇದು ತೋರಿಸುತ್ತದೆ. ಆಯೋಗವು ಮತ ಕಳ್ಳತನವನ್ನು ಮುಚ್ಚಿಹಾಕಲು ಪ್ರಯತ್ನಿಸುತ್ತಿದೆ’ ಎಂದು ಆರೋಪಿಸಿದ್ದಾರೆ.

ದೆಹಲಿಯ ಮಾಜಿ ಮುಖ್ಯಮಂತ್ರಿಗಳಾದ ಅರವಿಂದ ಕೇಜ್ರಿವಾಲ್ ಮತ್ತು ಆತಿಶಿ ಅವರು ಬರೆದಿರುವ ಪತ್ರಕ್ಕೆ ಆಯೋಗವು ಯಾವುದೇ ಉತ್ತರ ನೀಡಿಲ್ಲ ಎಂದು ಎಎಪಿ ಶುಕ್ರವಾರ ಆರೋಪಿಸಿತ್ತು. ಅದರೆ ಎಎಪಿ ಆರೋಪ ಅಲ್ಲಗಳೆದಿರುವ ಇ.ಸಿ, ‘ಆತಿಶಿ ಅವರು ಬರೆದ ಪತ್ರಕ್ಕೆ ಆಯೋಗವು ಈಗಾಗಲೇ 76 ಪುಟಗಳ ಉತ್ತರ ನೀಡಿದೆ’ ಎಂದಿದೆ.

‘ರಾಹುಲ್ ನೇತೃತ್ವದಲ್ಲಿ ಹೋರಾಟ’

ಕೋಲ್ಕತ್ತ (ಪಿಟಿಐ): ಚುನಾವಣಾ ಆಯೋಗವು ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಕೈಗೊಳ್ಳುವಾಗ ‘ಬಿಹಾರದಲ್ಲಿ ಮಾಡಿರುವ ತಪ್ಪುಗಳನ್ನು ಪುನರಾವರ್ತಿಸಿದರೆ’ ರಾಹುಲ್ ಗಾಂಧಿ ನೇತೃತ್ವದಲ್ಲಿ ಹೋರಾಟ ನಡೆಸಲಾಗುವುದು ಎಂದು ಕಾಂಗ್ರೆಸ್ ನಾಯಕ ಪ್ರಸೇನ್‌ಜಿತ್ ಬೋಸ್ ಹೇಳಿದ್ದಾರೆ.

ಆರ್ಥಿಕ ತಜ್ಞ ಮತ್ತು ಸಾಮಾಜಿಕ ಕಾರ್ಯಕರ್ತರಾಗಿರುವ ಬೋಸ್ ಅವರು ಈಚೆಗೆ ಕಾಂಗ್ರೆಸ್ ಪಕ್ಷವನ್ನು ಸೇರಿಕೊಂಡಿದ್ದರು.

‘ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ರಾಹುಲ್ ಗಾಂಧಿ ಅವರು ಬಿಹಾರದಲ್ಲಿ ನಡೆದ ಎಸ್‌ಐಆರ್ ವಿರೋಧಿ ಆಂದೋಲನದ ಮುಂಚೂಣಿಯಲ್ಲಿದ್ದಾರೆ. ಅವರು ನಡೆಸಿರುವ ಹೋರಾಟವು ಕಾಂಗ್ರೆಸ್ ಪಕ್ಷಕ್ಕೆ ಮಾತ್ರವಲ್ಲದೆ, ಇಡೀ ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳಿಗೆ ಹೊಸ ಚೈತನ್ಯ ತುಂಬಿದೆ’ ಎಂದು 51 ವರ್ಷದ ಬೋಸ್ ಅವರು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

‘ಬಿಹಾರದಲ್ಲಿ ಚುನಾವಣಾ ಆಯೋಗವು ತೀವ್ರ ಪ್ರತಿರೋಧ ಎದುರಿಸಿತಲ್ಲದೆ, ಸುಪ್ರೀಂ ಕೋರ್ಟ್ ಕೂಡಾ ಮಧ್ಯಪ್ರವೇಶಿಸಬೇಕಾಗಿ ಬಂದಿತು. ಆದ್ದರಿಂದ ಪ್ರತಿರೋಧ ಎದುರಾಗುವುದನ್ನು ತಪ್ಪಿಸಲು ಆಯೋಗವು ಪಶ್ಚಿಮ ಬಂಗಾಳದಲ್ಲಿ ಎಚ್ಚರಿಕೆಯ ನಡೆ ಇರಿಸಬಹುದು’ ಎಂದಿದ್ದಾರೆ.

‘ಇ.ಸಿ ಮಾಹಿತಿ ನೀಡುತ್ತಿಲ್ಲ’

ವಯನಾಡ್ (ಕೇರಳ) (ಪಿಟಿಐ): ಕರ್ನಾಟಕದಲ್ಲಿ ನಡೆದಿದೆ ಎನ್ನಲಾದ ‘ಮತ ಕಳ್ಳತನ’ಕ್ಕೆ ಸಂಬಂಧಿಸಿದ ಮಾಹಿತಿಯನ್ನು ಚುನಾವಣಾ ಆಯೋಗವು ಅಲ್ಲಿನ ಸಿಐಡಿಗೆ ನೀಡುತ್ತಿಲ್ಲ ಎಂಬ ಆರೋಪವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ಪುನರುಚ್ಚರಿಸಿದ್ದಾರೆ.

‘ಮತ ಕಳ್ಳತನ’ ಎಷ್ಟು ಪ್ರಮಾಣದಲ್ಲಿ ನಡೆದಿದೆ ಎಂಬ ಮಾಹಿತಿ ಕೋರಿ ಕರ್ನಾಟಕದ ಸಿಐಡಿ ಚುನಾವಣಾ ಆಯೋಗಕ್ಕೆ ಹಲವು ಪತ್ರಗಳನ್ನು ಬರೆದಿದೆ. ಆದರೆ, ಆಯೋಗವು ಯಾವುದೇ ಮಾಹಿತಿ ನೀಡುತ್ತಿಲ್ಲ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

‘ಪೊಲೀಸರು ಕೇಳಿರುವ ಮಾಹಿತಿಯನ್ನು ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರು ಒದಗಿಸುತ್ತಿಲ್ಲ. ಸಿಇಸಿ ವಿರುದ್ಧ ಇದಕ್ಕಿಂತ ದೊಡ್ಡ ಆಪಾದನೆ ಇನ್ನೊಂದಿಲ್ಲ. ಇದು ನನ್ನ ಹೇಳಿಕೆಯಷ್ಟೇ ಅಲ್ಲ. ಇದು ಸತ್ಯ’ ಎಂದು ದೂರಿದ್ದಾರೆ.

ಕರ್ನಾಟಕದ ಆಳಂದ ವಿಧಾನಸಭಾ ಕ್ಷೇತ್ರದಲ್ಲಿನ ಮತಕಳವು ಯತ್ನ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿಗೆ ಕೇಂದ್ರ ಚುನಾವಣಾ ಆಯೋಗವು ಅಗತ್ಯ ಸಾಕ್ಷ್ಯಗಳನ್ನು ವಾರದೊಳಗೆ ಒದಗಿಸಬೇಕು ಎಂದು ರಾಹುಲ್ ಗಾಂಧಿ ಅವರು ಗುರುವಾರ ಗಡುವು ವಿಧಿಸಿದ್ದರು.

ಮೋಹನ್‌ಲಾಲ್‌ಗೆ ಫಾಲ್ಕೆ ಗರಿ

ನವದೆಹಲಿ (ಪಿಟಿಐ): ಮಲಯಾಳ ಚಿತ್ರರಂಗದ ಹಿರಿಯ ನಟ ಮೋಹನ್‌ಲಾಲ್ ಅವರನ್ನು ಭಾರತೀಯ ಸಿನಿಮಾ ಕ್ಷೇತ್ರದ ಅತ್ಯುನ್ನತ ಗೌರವ ಎನಿಸಿರುವ ‘ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ’ಗೆ ಕೇಂದ್ರ ಸರ್ಕಾರ ಆಯ್ಕೆ ಮಾಡಿದೆ.

ಸಿನಿಮಾ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದವರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಭಾರತೀಯ ಸಿನಿಮಾದ ಪಿತಾಮಹ ದಾದಾಸಾಹೇಬ್ ಫಾಲ್ಕೆ ಹೆಸರಿನಲ್ಲಿ ಈ ಪ್ರಶಸ್ತಿ ಸ್ಥಾಪಿಸಲಾಗಿದೆ.

2023ನೇ ಸಾಲಿನ ಪ್ರಶಸ್ತಿಗೆ 65 ವರ್ಷದ ಮೋಹನ್‌ಲಾಲ್ ಅವರನ್ನು ಆಯ್ಕೆ ಮಾಡಿರುವ ವಿಷಯವನ್ನು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಶನಿವಾರ ‘ಎಕ್ಸ್’ನಲ್ಲಿ ಪ್ರಕಟಿಸಿದ್ದಾರೆ. ಸೆಪ್ಟೆಂಬರ್ 23ರಂದು ನಡೆಯಲಿರುವ 71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಪ್ರಧಾನಿ ಅಭಿನಂದನೆ: ‘ಸಿನಿಮಾ ಮತ್ತು ರಂಗಭೂಮಿ ಕ್ಷೇತ್ರದಲ್ಲಿ ಮೋಹನ್‌ಲಾಲ್ ಅವರ ಪ್ರತಿಭೆ ನಿಜಕ್ಕೂ ಸ್ಫೂರ್ತಿದಾಯಕವಾಗಿದೆ. ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪಡೆದಿದ್ದಕ್ಕಾಗಿ ಅವರಿಗೆ ಅಭಿನಂದನೆಗಳು. ಅವರ ಸಾಧನೆಗಳು ಮುಂದಿನ ಪೀಳಿಗೆಗೆ ಸ್ಫೂರ್ತಿ ನೀಡಲಿ’ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ.

ಮೋಹನ್‌ಲಾಲ್ ಅವರಿಗೆ 2001ರಲ್ಲಿ ಪದ್ಮಶ್ರೀ ಮತ್ತು 2019ರಲ್ಲಿ ಪದ್ಮಭೂಷಣ ಪುರಸ್ಕಾರ ಲಭಿಸಿದ್ದವು.

350ಕ್ಕೂ ಹೆಚ್ಚು ಸಿನಿಮಾದಲ್ಲಿ ನಟನೆ

ನಾಲ್ಕು ದಶಕಗಳಿಗೂ ಹೆಚ್ಚು ವೃತ್ತಿಜೀವನದಲ್ಲಿ ಮೋಹನ್‌ಲಾಲ್ ಅವರು ಮಲಯಾಳ, ತಮಿಳು, ತೆಲುಗು, ಹಿಂದಿ ಮತ್ತು ಕನ್ನಡ ಭಾಷೆಗಳ 350ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ತನ್ಮಾತ್ರ, ‘ಇರುವರ್’, ದೃಶ್ಯಂ, ವಾನಪ್ರಸ್ಥಂ, ಕಂಪನಿ, ಮುಂದಿರಿವಳ್ಳಿಗಳ್ ತಳಿರ್ಕುಂಬೋಳ್ ಮತ್ತು ಪುಲಿಮುರುಗನ್ ಅವರಿಗೆ ಹೆಸರು ತಂದುಕೊಟ್ಟ ಪ್ರಮುಖ ಚಿತ್ರಗಳಾಗಿವೆ.

ಬಹುಪತ್ನಿತ್ವ ಒಪ್ಪಲಾಗದು: ಹೈಕೋರ್ಟ್

ಕೊಚ್ಚಿ (ಪಿಟಿಐ): ‘ಪತ್ನಿಯರನ್ನು ಸಲಹುವ ಸಾಮರ್ಥ್ಯ ಇಲ್ಲದಿದ್ದರೆ ಮುಸ್ಲಿಂ ಪುರುಷನೊಬ್ಬ ಒಂದಕ್ಕಿಂತ ಹೆಚ್ಚು ಮದುವೆಯಾಗುವುದನ್ನು ಒಪ್ಪಲು ಸಾಧ್ಯವಿಲ್ಲ’ ಎಂದು ಕೇರಳ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಕೇರಳದ ಮಲಪ್ಪುರಂ ಜಿಲ್ಲೆಯ ಪೆರಿಂದಲ್‌ಮಣ್ಣ ನಿವಾಸಿ 39 ವರ್ಷದ ಮಹಿಳೆಯೊಬ್ಬರು, ಭಿಕ್ಷಾಟನೆಯಿಂದ ಜೀವನ ನಿರ್ವಹಣೆ ಮಾಡುತ್ತಿರುವ ತನ್ನ ಪತಿಯಿಂದ ಪ್ರತಿ ತಿಂಗಳು ₹10 ಸಾವಿರ ಜೀವನಾಂಶ ಕೋರಿ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು.

ಈ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ವಿ.ಕುಂಞಿಕೃಷ್ಣನ್, ‘ಮುಸ್ಲಿಂ ಪುರುಷನೊಬ್ಬನಿಗೆ ತನ್ನ ಪತ್ನಿಯರನ್ನು ನೋಡಿಕೊಳ್ಳುವ ಆರ್ಥಿಕ ಸಾಮರ್ಥ್ಯ ಇಲ್ಲದಿದ್ದರೆ ಮತ್ತು ಆತನ ಪತ್ನಿಯರಲ್ಲಿ ಒಬ್ಬರು ಜೀವನಾಂಶಕ್ಕಾಗಿ ಕೋರ್ಟ್ ಮೊರೆ ಹೋಗುತ್ತಾರೆ ಎನ್ನುವುದಾದರೆ ಆತನ ಬಹುಪತ್ನಿತ್ವವನ್ನು ಒಪ್ಪಲು ಸಾಧ್ಯವಿಲ್ಲ’ ಎಂದಿದ್ದಾರೆ.

ದೂರುದಾರ ಮಹಿಳೆ ಮೊದಲು ಕೌಟುಂಬಿಕ ನ್ಯಾಯಾಲಯವನ್ನು ಸಂಪರ್ಕಿಸಿದ್ದರು. ಅಲ್ಲಿ ಆಕೆಯ ಮನವಿಯನ್ನು ತಳ್ಳಿಹಾಕಿದಾಗ, ಹೈಕೋರ್ಟ್ ಮೆಟ್ಟಿಲೇರಿದ್ದರು. ‘ಪಾಲಕ್ಕಾಡ್‌ನ ಕುಂಬಡಿ ಗ್ರಾಮದ 44 ವರ್ಷದ ನನ್ನ ಪತಿಯು ಭಿಕ್ಷಾಟನೆಯಿಂದ ಜೀವಿಸುತ್ತಿದ್ದು, ತಿಂಗಳಿಗೆ ₹25 ಸಾವಿರ ಆದಾಯವಿದೆ. ಆದರೆ, ನನಗೆ ಜೀವನಾಂಶ ನೀಡುತ್ತಿಲ್ಲ’ ಎಂದು ದೂರಿದ್ದರು.

ದೂರುದಾರ ಮಹಿಳೆಯ ವಾದ ಆಲಿಸಿದ ನ್ಯಾಯಮೂರ್ತಿ, ‘ಭಿಕ್ಷಾಪಾತ್ರೆಗೆ ಕೈ ಹಾಕಲು ಹೋಗಬೇಡಿ’ ಎನ್ನುವ ಮಲಯಾಳಂ ನುಡಿಗಟ್ಟು ಬಳಸಿದರು. ಈ ಪ್ರಕರಣದಲ್ಲಿ ‘ಪತ್ನಿಗೆ ಜೀವನಾಂಶ ನೀಡುವಂತೆ ಭಿಕ್ಷುಕನಿಗೆ ಕೋರ್ಟ್ ನಿರ್ದೇಶಿಸುವಂತಿಲ್ಲ. ಆದರೆ, ದೂರುದಾರ ಮಹಿಳೆಗೆ ಆಹಾರ, ಬಟ್ಟೆಗಳನ್ನು ಒದಗಿಸಲಾಗಿದೆಯೇ ಎನ್ನುವುದನ್ನು ಸರ್ಕಾರ ಖಚಿತಪಡಿಸಿಕೊಳ್ಳಬೇಕು’ ಎಂದರು.

ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗೆ ಆದೇಶದ ಪ್ರತಿಯನ್ನು ನೀಡುವಂತೆ ಸೂಚಿಸಿದ ಕೋರ್ಟ್, ಈ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಸೂಚಿಸಿತು.

‘ಏಕಪತ್ನಿತ್ವ: ಜಾಗೃತಿ ಮೂಡಿಸಬೇಕು’

ಅಂಧನಾಗಿದ್ದು, ಭಿಕ್ಷಾಟನೆಯಿಂದ ಜೀವನ ಸಾಗಿಸುತ್ತಿದ್ದರೂ, ಎರಡನೆಯ ಪತ್ನಿಯನ್ನೂ ತೊರೆದು ಇನ್ನೊಂದು ಮದುವೆಯಾಗಲು ಹೊರಟ ಪುರುಷನಿಗೆ ಕೋರ್ಟ್ ಛೀಮಾರಿ ಹಾಕಿತು. ‘ಒಂದಕ್ಕಿಂತ ಹೆಚ್ಚು ಮದುವೆಯಾಗಲು ನಿಮ್ಮ ಸಮುದಾಯದ ಸಾಂಪ್ರದಾಯಿಕ ಕಾನೂನು ಅವಕಾಶ ಕಲ್ಪಿಸಬಹುದು. ಆದರೆ, ಪತ್ನಿಯರನ್ನು ನೋಡಿಕೊಳ್ಳುವ ಸಾಮರ್ಥ್ಯ ಇಲ್ಲದಿದ್ದರೆ ಇದನ್ನು ಒಪ್ಪಲು ಸಾಧ್ಯವಿಲ್ಲ’ ಎಂದಿತು.

ಬಹುತೇಕ ಮುಸ್ಲಿಮರು ಏಕಪತ್ನಿತ್ವವನ್ನೇ ಅನುಸರಿಸುತ್ತಾರೆ. ಇದು ಕುರಾನ್‌ನ ನಿಜವಾದ ಆಶಯವನ್ನು ಪ್ರತಿಬಿಂಬಿಸುತ್ತದೆ. ಕೆಲವರಷ್ಟೇ ಬಹುಪತ್ನಿತ್ವ ಹೊಂದಿದ್ದಾರೆ. ಸಮುದಾಯ ಮತ್ತು ಧಾರ್ಮಿಕ ಮುಖಂಡರು ಈ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಕೋರ್ಟ್ ಅಭಿಪ್ರಾಯಪಟ್ಟಿತು.

ಆಳಂದ: ಮನೆಗಳಿಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಕಲಬುರಗಿ: ಧಾರಾಕಾರ ಮಳೆಯಿಂದ ಆಳಂದ ತಾಲ್ಲೂಕಿನ ಮಾಡಿಯಾಳ ಗ್ರಾಮದ ಒಪ್ಪತೇಶ್ವರ ಕೆರೆ ಒಡ್ಡು ಒಡೆದಿದ್ದು, 50ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ. ಗ್ರಾಮಸ್ಥರು ಶುಕ್ರವಾರ ರಾತ್ರಿಯಿಂದ ಶನಿವಾರ ಬೆಳಗಿನ ಜಾವದವರೆಗೆ ಪರದಾಡಿದರು.

ಕೆರೆ ಮಧ್ಯರಾತ್ರಿ ಒಡೆದಿದ್ದು, ರಸ್ತೆಗಳು, ದೇವಸ್ಥಾನ ಆವರಣ ಮತ್ತಿತರ ಪ್ರದೇಶಗಳು ಜಲಾವೃತಗೊಂಡವು. ಅತಂತ್ರರಾದ ಜನರು ಅನ್ಯರ ಮನೆ, ದೇವಸ್ಥಾನ, ಶಾಲೆಗಳಲ್ಲಿ ಆಶ್ರಯ ಪಡೆದರು. ದವಸಧಾನ್ಯ, ದಿನಸಿ, ಬಟ್ಟೆ ಹಾಳಾಗಿವೆ.

ಅಮರ್ಜಾ ಅಣೆಕಟ್ಟೆಯಿಂದ ನೀರು ಬಿಡುಗಡೆ ಆದ ಕಾರಣ ತಗ್ಗಿನ ಭಾಗದ ಭೂಸನೂರು ಗ್ರಾಮದಲ್ಲಿ 130ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ.

‘ಭೂಸನೂರು, ಮಾಡಿಯಾಳ ಗ್ರಾಮದಲ್ಲಿ ಸಮಸ್ಯೆಯಾಗಿದೆ. ಸಂತ್ರಸ್ತ ಕುಟುಂಬಗಳಿಗೆ ನೆರವಿಗೆ ಕ್ರಮವಹಿಸಲಾಗಿದೆ’ ಎಂದು ತಹಶೀಲ್ದಾರ್ ಅಣ್ಣಾರಾವ ಪಾಟೀಲ ತಿಳಿಸಿದರು.

ಯುವಕ ನದಿಪಾಲು: ಅಫಜಲಪುರ ತಾಲ್ಲೂಕಿನ ಮಣ್ಣೂರ ಗ್ರಾಮದಲ್ಲಿ ಭೀಮಾ ನದಿಗೆ ಬಟ್ಟೆ ತೊಳೆಯಲು ಹೋಗಿದ್ದ ಯುವಕ ನದಿಯಲ್ಲಿ ಕೊಚ್ಚಿಕೊಂಡು ಹೋಗಿದ್ದಾನೆ.

ಬೀದರ್ ವರದಿ: ಜಿಲ್ಲೆಯ ಔರಾದ್ ತಾಲ್ಲೂಕಿನ ಬೋರಾಳ ಗ್ರಾಮದ ಸುತ್ತಮುತ್ತ ಶುಕ್ರವಾರ ರಾತ್ರಿ ಸುರಿದ ಭಾರಿ ಮಳೆಗೆ ಸೇತುವೆ ಕೊಚ್ಚಿಕೊಂಡು ಹೋಗಿದೆ.

ಬೋರಾಳ ಮತ್ತು ಮುಂಗನಾಳ ಗ್ರಾಮಗಳ ಸಂಪರ್ಕ ಕಡಿದುಹೋಗಿದೆ.

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಗಾಣಗಾಪುರ ಹಾಗೂ ಜೇವರ್ಗಿ ತಾಲ್ಲೂಕಿನ ಇಟಗಾ ನಡುವಿನ ಭೀಮಾ ನದಿ ಸೇತುವೆ ಶನಿವಾರ ಮುಳುಗಡೆಯಾಗಿರುವುದು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.55	6,819	6,455
ಹಾರಂಗಿ	2,859	2,857.98	1,119	1,600
ಕಬಿನಿ	2,284.00	2,282.32	1,753	1,850
ಹೇಮಾವತಿ	2,922	2,919.91	5,308	6,335
ಲಿಂಗನಮಕ್ಕಿ	1,819	1,816.55	1,161	7,259
ಸೂಪಾ (ಮೀ)	564	559.83	3,344.87	4,274.34
ಮಾಣಿ	595	593.92	569	650
ತುಂಗಭದ್ರಾ	1,633	1,626.06	15,538	15,436
ಮಲಪ್ರಭಾ	2,079.5	2,079.50	1,494	1,494
ಘಟಪ್ರಭಾ	2,175	2,174.56	2,038	1,390
ಭದ್ರಾ *	186	185.6	4,121	4,121
ಆಲಮಟ್ಟಿ (ಮೀ)	519.6	519.59	27,726	30,585
ನಾರಾಯಣಪುರ (ಮೀ)	492.25	492.20	30,000	23,800

* ನೆಲಮಟ್ಟದಿಂದ

ಕೋಲಾರ ಜಿಲ್ಲೆ ಜನಪರ ವೇದಿಕೆಯಿಂದ ಸರ್ಕಾರ, ರಾಜ್ಯಪಾಲರಿಗೂ ದೂರು

ಎಸ್‌ಐಟಿಗೆ ಸ್ಥಳೀಯರಿಂದ ದೂರು

ಪ್ರಜಾವಾಣಿ ವಾರ್ತೆ

ಮಂಗಳೂರು: ಸೌಜನ್ಯಾ ಕೊಲೆ ಪ್ರಕರಣದಲ್ಲಿ ದೋಷಮುಕ್ತರಾಗಿದ್ದ ಮೂವರ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಲಾಗುತ್ತಿದ್ದು ವಾಸ್ತವಾಂಶ ಕುರಿತು ತನಿಖೆ ನಡೆಸಬೇಕು ಎಂದು ಕೋರಿ ಸ್ಥಳೀಯರು ಎಸ್‌ಐಟಿಗೆ ಶನಿವಾರ ದೂರು ಸಲ್ಲಿಸಿದ್ದಾರೆ.

ಇದೇ ವೇಳೆ ಮಹೇಶ್ ಶೆಟ್ಟಿ ತಿಮರೋಡಿ ಮತ್ತು ಇತರರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಕೋಲಾರ ಜಿಲ್ಲೆ ಜನಪರ ವೇದಿಕೆಯವರು ದೂರು ನೀಡಿದ್ದಾರೆ.

25 ಜನರ ಸಹಿಯಿದ್ದ ದೂರಿನೊಂದಿಗೆ ಧರ್ಮಸ್ಥಳದ ನಿವಾಸಿ ಕೆ.ಸಿ ಚಂದ್ರನ್ ನೇತೃತ್ವದಲ್ಲಿ ಎಸ್‌ಐಟಿ ಕಚೇರಿಗೆ ತೆರಳಿದ ನಾಲ್ವರು ಸೌಜನ್ಯಾ ತಂದೆ ಚಂದಪ್ಪ ಸಾವಿನಲ್ಲೂ ಶಂಕಾಸ್ಪದ ಹೇಳಿಕೆಗಳನ್ನು ನೀಡಲಾಗುತ್ತಿದ್ದು ಅದನ್ನು ತನಿಖೆಗೆ ಒಳಪಡಿಸಬೇಕು ಎಂದು ಕೋರಿದರು.

ಈ ಬಗ್ಗೆ ‘ಪ್ರಜಾವಾಣಿ’ ಜೊತೆ ಮಾತನಾಡಿದ ಕೆ.ಸಿ.ಚಂದ್ರನ್, ‘ಸೌಜನ್ಯಾ ಕೊಲೆ ಪ್ರಕರಣದ ವಿಚಾರಣೆ ಸಂದರ್ಭದಲ್ಲೇ ಒಂದೇ ಸಮುದಾಯದ ಮೂವರು ಯುವಕರನ್ನು ಕರೆದೊಯ್ದು ವಿಚಾರಣೆ ನಡೆಸಿದ್ದಾರೆ. ಅವರ ಬ್ರೈನ್ ಮ್ಯಾಪಿಂಗ್ ಕೂಡಾ ಮಾಡಲಾಗಿದೆ. ಕೊನೆಗೆ ಕ್ಲೀನ್ ಚಿಟ್ ನೀಡಲಾಗಿದೆ. ಇವರ ವಿರುದ್ಧ ಈಗಲೂ ದೂರುತ್ತ ಮಾನಸಿಕವಾಗಿ ಕುಗ್ಗುವಂತೆ ಮಾಡುತ್ತಿದ್ದಾರೆ. ಇದಕ್ಕೊಂದು ಅಂತ್ಯ ಕಾಣಬೇಕಿದೆ’ ಎಂದು ಹೇಳಿದರು.

ಕೋಲಾರ ಜಿಲ್ಲೆ ಜನಪರ ವೇದಿಕೆಯ ಅಧ್ಯಕ್ಷ ಕೋಡಿಗಾನಹಳ್ಳಿ ನಾಗರಾಜ್, ಪ್ರಧಾನ ಕಾರ್ಯದರ್ಶಿ ರಮೇಶ್ ಬಾಬು ಮತ್ತು ಕಾನೂನು ಕೋಶದ ಅಧ್ಯಕ್ಷ ವೆಂಕಟಾಚಲಪತಿ ಅವರು ಎಸ್‌ಐಟಿ ಕಚೇರಿಯಲ್ಲಿ ಅಧಿಕಾರಿಗಳಿಗೆ ಮತ್ತು ಬೆಳ್ತಂಗಡಿ ತಹಶೀಲ್ದಾರರ ಮೂಲಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ರಾಜ್ಯಪಾಲರಿಗೆ ದೂರು ಸಲ್ಲಿಸಿದ್ದಾರೆ.

ಸಾಕ್ಷಿ ದೂರುದಾರ–ತಿಮರೋಡಿ ಭೇಟಿ?

ಸಾಕ್ಷಿ ದೂರುದಾರ ಮತ್ತು ಸೌಜನ್ಯಾ ಪರ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ನಡುವಿನ ಮಾತುಕತೆ ಎನ್ನಲಾದ ವಿಡಿಯೊವೊಂದನ್ನು ಹೋರಾಟಗಾರ ಗಿರೀಶ ಮಟ್ಟೆಣ್ಣವರ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಸಾಕ್ಷಿದೂರುದಾರ ಪತ್ನಿ ಜೊತೆ ತಿಮರೋಡಿ 2 ವರ್ಷ ಹಿಂದೆ ಭೇಟಿಯಾಗಿ ಚರ್ಚಿಸಿದ್ದಾರೆ ಎಂದೂ ಬರೆದಿದ್ದಾರೆ.

‘2023ರ ಆಗಸ್ಟ್‌ನಲ್ಲಿ ತಿಮರೋಡಿಗೆ ಬಂದು ಧರ್ಮಸ್ಥಳದಲ್ಲಿ ಕಂಡಿದ್ದ ಮತ್ತು ಭಾಗಿಯಾದ ಘಟನೆಗಳ ಬಗ್ಗೆ ಸಾಕ್ಷಿದೂರುದಾರ ತಿಳಿಸಿದ್ದಾನೆ. ಈ ವರ್ಷದ ಜುಲೈನಲ್ಲಿ ನ್ಯಾಯಾಲಯದಲ್ಲೂ ಅದನ್ನೇ ಹೇಳಿದ್ದಾನೆ. ಆದರೆ ಎಸ್‌ಐಟಿ ಶೋಧದ ವೇಳೆ ಹೇಳಿಕೆ ಬದಲಿಸಲು ಕಾರಣ ಏನು? ಯಾರಾದರೂ ಹೆದರಿಸಿದ್ದಾರಾ, ಆಮಿಷ ಒಡ್ಡಿದ್ದಾರಾ’ ಎಂದು ಗಿರೀಶ ಪ್ರಶ್ನಿಸಿದ್ದಾರೆ.

ಹಣಕಾಸು ವ್ಯವಹಾರದ ತನಿಖೆ?

ಮಂಗಳೂರು: ಧರ್ಮಸ್ಥಳ ಪ್ರಕರಣಗಳಿಗೆ ಸಂಬಂಧಿಸಿ ಹಣಕಾಸು ವ್ಯವಹಾರ ನಡೆದಿರಬಹುದೇ ಎಂಬ ಸಂದೇಹದ ಬೆನ್ನತ್ತಿರುವ ಎಸ್‌ಐಟಿ ಕೆಲ ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸಿದೆ. ಎಸ್‌ಐಟಿ ಮೂಲಗಳೇ ಈ ವಿಷಯವನ್ನು ತಿಳಿಸಿದ್ದು ಹಣಕಾಸಿನ ವಿಷಯವೇ ಈಗ ತನಿಖೆಯ ಕೇಂದ್ರಬಿಂದುವಾಗಿದೆ. ಸಾಕ್ಷಿ ದೂರುದಾರನ ಖಾತೆಗಳಿಗೆ ಹಲವು ಕಡೆಗಳಿಂದ ಹಣ ಬಂದಿದ್ದು ಇತರ ಶಂಕಿತರ ಖಾತೆಗಳಿಗೂ ಹಣ ಜಮೆ ಆಗಿದೆ. ಆದ್ದರಿಂದ ಇದರ ಹಿಂದೆ ದೊಡ್ಡ ಜಾಲವೇ ಇರಬಹುದು ಎಂಬ ಶಂಕೆ ಮೂಡಿದೆ ಎಂದು ಎಸ್‌ಐಟಿ ಮೂಲಗಳು ಹೇಳಿವೆ. ಹಣ ಜಮೆ ಆಗಿರುವುದರ ಹಿಂದೆ ಸಾಗಿದರೆ ಪ್ರಕರಣದಲ್ಲಿ ಭಾಗಿಯಾಗಿರುವ ಇತರ ವ್ಯಕ್ತಿಗಳನ್ನೂ ಪತ್ತೆ ಮಾಡಲು ಸಾಧ್ಯ ಎಂದು ಮೂಲಗಳು ತಿಳಿಸಿವೆ.

ದೂರುಗಳ ಮಳೆ: ಎಸ್‌ಐಟಿಗೆ ನಿತ್ಯವೂ ಹಲವಾರು ದೂರುಗಳು ಸಲ್ಲಿಕೆಯಾಗುತ್ತಿವೆ. ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಸಹಜ ಸಾವುಗಳ ತನಿಖೆಯ ನಡೆಯಬೇಕು ಎಂಬುದು ಹೆಚ್ಚಿನವರ ಬೇಡಿಕೆ. ದೂರುಗಳಿಗೆ ಸಂಬಂಧಸಿ ತನಿಖೆಯನ್ನು ವಿಸ್ತರಿಸಬೇಕೇ ಬೇಡವೇ ಎಂಬುದರ ಬಗ್ಗೆ ಇನ್ನೂ ನಿರ್ಧಾರ ಕೈಗೊಂಡಿಲ್ಲ. ಈಗ ನಡೆಯುತ್ತಿರುವ ತನಿಖೆಯನ್ನು ಒಂದು ಹಂತಕ್ಕೆ ತಲುಪಿಸುವುದಕ್ಕೆ ಸದ್ಯ ಆದ್ಯತೆ ನೀಡಲಾಗುತ್ತಿದೆ ಎಂಬುದು ಎಸ್‌ಐಟಿ ಮೂಲಗಳ ಮಾಹಿತಿ.

‘ಅಧಿಸೂಚನೆಗೆ ಕ್ರಮವಹಿಸಿ’

ಪ್ರಜಾವಾಣಿ ವಾರ್ತೆ

ರಾಯಚೂರು: ‘ಉತ್ತರ ಕರ್ನಾಟಕದ ಅಭಿವೃದ್ಧಿ ಕುರಿತು ಕಾಳಜಿ ಇದ್ದರೆ ಆಲಮಟ್ಟಿ ಜಲಾಯಶದ ಎತ್ತರ ಹೆಚ್ಚಿಸಲು ಕೇಂದ್ರ ಅಧಿಸೂಚನೆ ಹೊರಡಿಸಲು ಕ್ರಮವಹಿಸಲಿ. ಇಲ್ಲದಿದ್ದರೆ ಕೇಂದ್ರ ಸಚಿವರಾಗಿರುವ ರಾಜ್ಯದ ನಾಲ್ವರು ರಾಜೀನಾಮೆ ಕೊಡಬೇಕು’ ಎಂದು ಸಚಿವ ಎನ್.ಎಸ್. ಬೋಸರಾಜು ಒತ್ತಾಯಿಸಿದರು.

‘ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಎಚ್.ಡಿ.ಕುಮಾರಸ್ವಾಮಿ, ವಿ.ಸೋಮಣ್ಣ ಹಾಗೂ ಶೋಭಾ ಕರಂದ್ಲಾಜೆ ದಿನ ಬೆಳಗಾದರೆ ರಾಜ್ಯ ಸರ್ಕಾರವನ್ನು ಟೀಕಿಸುವುದು ಬಿಟ್ಟರೆ ಏನನ್ನೂ ಮಾಡುತ್ತಿಲ್ಲ’ ಎಂದು ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಹರಿಹಾಯ್ದರು.

‘ಕರ್ನಾಟಕದ 1,199 ಗ್ರಾಮ ಪಂಚಾಯಿತಿಗಳಲ್ಲಿ ಅಟಲ್ ಭೂಜಲ ಯೋಜನೆ ಜಾರಿಗೆ ಕೇಂದ್ರ ₹2 ಸಾವಿರ ಕೋಟಿ ನಿಗದಿಪಡಿಸಿತ್ತು. ಕೇವಲ ₹1,300 ಕೋಟಿ ಒದಗಿಸಿದೆ. ಸಿಬ್ಬಂದಿ ವೇತನ ಕೊಟ್ಟಿಲ್ಲ. ₹140 ಕೋಟಿ ಅನುದಾನ ಕಡಿತಗೊಳಿಸಿದೆ’ ಎಂದು ಆರೋಪಿಸಿದರು.

ಬಿಜೆಪಿ ನಾಯಕರಿಗೆ ಕೇಂದ್ರದ ಬಳಿ ಹಣ ಕೇಳುವ ಧೈರ್ಯ ಇಲ್ಲ’ ಎಂದು ದೂರಿದರು.

ಗದಗ ತಾಲ್ಲೂಕು ಕುರುಬರ ಸಂಘದ ರಜತ ಮಹೋತ್ಸವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೊಮ್ಮಗ ಧವನ್ ರಾಕೇಶ್ ಬೆಳ್ಳಿ ಗದೆ ಪ್ರದರ್ಶಿಸಿದರು

‘ಜಾತಿ: ಹಿಂದುಳಿದವರೇ ಬಲಿ’

ಪ್ರಜಾವಾಣಿ ವಾರ್ತೆ

ಗದಗ: ‘ಕರಾವಳಿಯಲ್ಲಿ ಧರ್ಮದ ಹೆಸರಲ್ಲಿ ಜೈಲಿಗೆ ಹೋದವರು, ಕೊಲೆ ಆದವರು ಹಿಂದುಳಿದ ವರ್ಗದವರೇ. ಧರ್ಮದ ಹೆಸರಿನಲ್ಲಿ ಇನ್ನೂ ಎಷ್ಟು ವರ್ಷ ಹಿಂದುಳಿದ ವರ್ಗಗಳ ಮಕ್ಕಳೇ ಬಲಿಯಾಗಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಪ್ರಶ್ನಿಸಿದರು.

ಗದಗ ತಾಲ್ಲೂಕು ಕುರುಬರ ಸಂಘದ ರಜತ ಮಹೋತ್ಸವ, ಸ್ಮರಣ ಸಂಚಿಕೆ ಬಿಡುಗಡೆ ಮತ್ತು ಸಂಘಜೀವಿ ಫಕೀರಪ್ಪ ಹೆಬಸೂರ ಅವರ ಅಭಿನಂದನಾ ಗ್ರಂಥ ಸಮರ್ಪಣೆ ಮತ್ತು ರಾಜ್ಯಮಟ್ಟದ ಕನಕೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ದೇಶದಲ್ಲಿ ಆಳವಾಗಿ ಬೇರುಬಿಟ್ಟ ಜಾತಿ ವ್ಯವಸ್ಥೆ ಇದೆ. ಜಾತಿ ವ್ಯವಸ್ಥೆ ನಿರ್ಮೂಲನೆವರೆಗೆ ಸಮಾನತೆ ಸಾಧ್ಯವಿಲ್ಲ. ಈ ವ್ಯವಸ್ಥೆಯನ್ನು ಜೀವಂತವಾಗಿಡುವ ಸಂಚು ನಡೆದಿದೆ’ ಎಂದರು.

ಜಾತಿ ಸಮೀಕ್ಷೆಯಲ್ಲಿ ಪ್ರತಿಯೊಬ್ಬರೂ ಅವರವರ ಜಾತಿ ಹೆಸರನ್ನು ನಮೂದಿಸಬೇಕು. ಹಾಗೆಯೇ ಕುರುಬ ಸಮಾಜದವರು ಜಾತಿ ಕಾಲಂನಲ್ಲಿ ಕುರುಬ ಎಂದಷ್ಟೇ ಬರೆಯಿಸಿ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಬಾನು ವಿರೋಧಿಗಳಿಗೆ ತಕ್ಕ ಪಾಠ: ‘ನಾಡ ಹಬ್ಬ ದಸರಾ ಉದ್ಘಾಟನೆಗೆ ಲೇಖಕಿ ಬಾನು ಮುಷ್ತಾಕ್ ಆಯ್ಕೆ ವಿರೋಧಿಸಿದವರಿಗೆ ಸುಪ್ರೀಂಕೋರ್ಟ್ ಸರಿಯಾಗಿ ಪಾಠ ಮಾಡಿದೆ ಎಂದರು.

ವೆಂಕಟೇಶ್ ಕುಮಾರ್‌ಗೆ ‘ಸಂಗೀತ ವಿದ್ವಾನ್ ಪ್ರಶಸ್ತಿ’

ಬೆಂಗಳೂರು: ನಾಡಹಬ್ಬ ಮೈಸೂರು ದಸರಾ ಸಂದರ್ಭದಲ್ಲಿ ಸಂಗೀತ ಸಾಧಕರಿಗೆ ರಾಜ್ಯ ಸರ್ಕಾರ ನೀಡುವ 2025ನೇ ಸಾಲಿನ ‘ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ’ಗೆ ಹಿಂದೂಸ್ತಾನಿ ಗಾಯಕ ಎಂ. ವೆಂಕಟೇಶ್ ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹ 5 ಲಕ್ಷ ನಗದು, ಸರಸ್ವತಿ ವಿಗ್ರಹ ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ವೈ.ಕೆ. ಮುದ್ದುಕೃಷ್ಣ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಮೈಸೂರು ಅರಮನೆಯ ಮುಖ್ಯ ವೇದಿಕೆಯಲ್ಲಿ ಇದೇ 22ರಂದು ನಡೆಯುವ ನಾಡಹಬ್ಬ ದಸರಾ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

‘ಅದ್ಭುತ ಗಾಯನದ ಮೂಲಕ ವೆಂಕಟೇಶ್ ಕುಮಾರ್ ಅವರು ದೇಶ ವಿದೇಶಗಳಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. ಅವರ ಸಾಧನೆ ಪರಿಗಣಿಸಿ ಈ ಆಯ್ಕೆ ಮಾಡಲಾಗಿದೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ.

ಮಹಾಲಯ ಅಮಾವಾಸ್ಯೆ: ಪಿತೃಗಳಿಗೆ ಸ್ವಾಗತ

• ಹಿತ್ಲಳ್ಳಿ ಸೂರ್ಯನಾರಾಯಣ ಭಟ್ಟ

ಭಾರತೀಯ ದರ್ಶನಗಳನ್ನು ಆಸ್ತಿಕ-ನಾಸ್ತಿಕ ಎಂದು ಎರಡು ವಿಧವಾಗಿ ವಿಭಾಗಿಸುತ್ತಾರೆ. ವೇದ ವೇದಾಂಗ ಪುರಾಣ ಸ್ಮೃತಿ ಮುಂತಾದ ಗ್ರಂಥಗಳನ್ನು ಪ್ರಮಾಣವೆಂದು ಒಪ್ಪುವವರು ಆಸ್ತಿಕರಾದರೆ, ಇವುಗಳನ್ನು ಸಂಶಯಿಸುವವರು ನಾಸ್ತಿಕರೆನ್ನಬಹುದು. ಆಸ್ತಿಕರಲ್ಲಿಯೂ ಸಂಶಯಿಸುವ ಜನರು ಇರುವಂತೆ, ನಾಸ್ತಿಕರಲ್ಲಿಯೂ ನಂಬುವ ಜನರು ಇರುವ ಕಾರಣ, ದರ್ಶನಗಳನ್ನು ವಿಭಾಗಿಸಿದಂತೆ ಜನರನ್ನು ಬೇರೆಯಾಗಿ ನೋಡಲು ಸಾಧ್ಯವಾಗುವುದಿಲ್ಲ. ಇವರಿಬ್ಬರಿಗೂ ಜನನ-ಮರಣ, ಹಗಲು-ರಾತ್ರಿ, ಸುಖ-ದುಃಖ ಮುಂತಾದ ದ್ವಂದ್ವಗಳು ಸಮಾನವಾಗಿವೆ.

ಚಾರ್ವಾಕ ಎಂಬ ನಾಸ್ತಿಕನು ಆಸ್ತಿಕರಿಗೆ ಒಂದು ಗಮನಾರ್ಹವಾದ ಪ್ರಶ್ನೆಯನ್ನು ಕೇಳುತ್ತಾನೆ: ‘ಗತಿಸಿದ ಪೂರ್ವಜರು ಸ್ವರ್ಗಕ್ಕೆ ಹೋದ ಮೇಲೆ, ನಮ್ಮನ್ನು ಕಾಣಬೇಕೆಂಬ ಬಯಕೆ ಅವರಲ್ಲಿ ಯಾರಿಗೂ ಬರುವುದೇ ಇಲ್ಲವೇ? ಒಂದು ವೇಳೆ ಅಂತಹ ಆಸೆ ಯಾರಿಗೂ ಬಾರದಿದ್ದರೂ ನಮ್ಮ ತಾಯಿ ಅಜ್ಜಿ ಮುಂತಾದ ಮಮತೆಯೇ ಮೂರ್ತಿವೆತ್ತಂತೆ ಬಾಳಿದವರಿಗೂ ಅದು ಬಾರದಿದ್ದೀತೇ? ಖಂಡಿತವಾಗಿಯೂ ಇಲ್ಲ. ಈ ಕಾರಣದಿಂದಲೇ ನಾವು ಸತ್ತ ಮೇಲೆ ಅವರೆಲ್ಲಾ ಇರುವ ಸಂಭವವೇ ಇಲ್ಲ. ಅವರು ಯಾರಿಗೂ ಕಾಣದಂತೆ ಎಲ್ಲಿಯೋ ಇರುತ್ತಾರೆ ಎಂಬಲ್ಲಿ ಪ್ರಮಾಣವಾದರೂ ಏನು?’

ಇದಕ್ಕೆ ಪ್ರತಿಯಾಗಿ ಆಸ್ತಿಕರು ಹೀಗೆ ಹೇಳಬಹುದು: ‘ಪೂರ್ವಜರು ಅವರ ಕರ್ಮಫಲವನ್ನು ಅನುಸರಿಸಿ ಬೇರೆಯ ಲೋಕದಲ್ಲಿಯೋ ಬೇರೆಯ ಶರೀರದಲ್ಲಿಯೋ ಇರುತ್ತಾರೆ. ನಮ್ಮನ್ನು ಕಾಣಲು ಅವರು ಬಂದರೂ ನಮಗೆ ಕಾಣುವುದಿಲ್ಲ. ಹಾಗೆ ಕಾಣದಿರುವ ಕಾರಣಕ್ಕೆ ಅವರು ಇಲ್ಲವೆನ್ನಲಾಗದು. ನಮ್ಮ ಸ್ಮೃತಿಪಟಲದಲ್ಲಿ ಅವರಿಗೆ ಎಂದೆಂದಿಗೂ ಸ್ಥಾನವಿದ್ದೇ ಇದೆ. ಅವರು ನಮ್ಮನ್ನು ಕಾಣಲು ಬರುವರೆಂದೂ ಅವರನ್ನು ನಾವು ಸರಿಯಾಗಿ ಉಪಚರಿಸಿದರೆ ನಮ್ಮನ್ನು ಆಶೀರ್ವದಿಸುವರೆಂದೂ ಶಾಸ್ತ್ರಗಳಲ್ಲಿ ಹೇಳಿದೆ. ಅದರಿಂದಾಗಿ ಸುಖ-ಸಮೃದ್ಧಿಗಳನ್ನು ಪಡೆದವರು ಎಷ್ಟೋ ಜನರಿದ್ದಾರೆ.

ಪೂರ್ವಜರು ನಮ್ಮನ್ನು ಕಾಣಲು ಯಾವಾಗ ಬರುತ್ತಾರೆ? ನಾವು ಕರೆದರೆ ಖಂಡಿತವಾಗಿಯೂ ಅವರು ಬರುತ್ತಾರೆ. ನಾವು ಕರೆಯದಿದ್ದರೂ ವರ್ಷಕ್ಕೊಮ್ಮೆ ಅವರು ಬಂದೇ ಬರುತ್ತಾರೆ. ದೇವತೆಗಳಾಗಲಿ, ದೇವತೆಗಳಂತಿರುವ ಪೂರ್ವಜರಾಗಲಿ ಅವರವರ ಸಮಯವನ್ನು ಅನುಸರಿಸಿಯೇ ವ್ಯವಹರಿಸುತ್ತಾರೆ. ದೇವತೆಗಳು ಆಯಾ ಹಬ್ಬಗಳಲ್ಲಿ ಆಗಮಿಸಿದರೆ, ಪಿತೃಗಳೆಂಬ ಪೂರ್ವಜರು ಶ್ರಾದ್ಧ ಮಹಾಲಯ ವಿವಾಹ ಮುಂತಾದ ಸಂದರ್ಭಗಳಲ್ಲಿ ಉಪಸ್ಥಿತರಾಗುತ್ತಾರೆ. ವರ್ಷಕ್ಕೊಮ್ಮೆ ಪೂರ್ವಜರೆಲ್ಲರೂ ಒಟ್ಟಿಗೆ ಬರುವುದುಂಟು. ಅದನ್ನು ನಾವು ‘ಪಿತೃಪಕ್ಷ’ ಎಂದು ಕರೆಯುತ್ತೇವೆ. ಆ ಸಮಯದಲ್ಲಿ ನಾವು ಎಚ್ಚರದಿಂದ ಇದ್ದು ಆಗಮಿಸಿದ ಪೂರ್ವಜರೆಲ್ಲರಿಗೆ ಸಮುಚಿತವಾದ ಉಪಚಾರಗಳನ್ನು ಸಲ್ಲಿಸಿದರೆ ಅವರು ಪ್ರಸನ್ನರಾಗಿ ನಮ್ಮನ್ನು ಹರಸುತ್ತಾರೆ. ಅದಲ್ಲದಿದ್ದರೆ ಸಂಸ್ಕೃತಿಯನ್ನು ಸಂರಕ್ಷಿಸದೆ ಭೂಮಿಗೆ ಭಾರವಾಗಿರುವ ಭಾರತೀಯರಲ್ಲಿ ಸೇರಿಸಿ ತಿರಸ್ಕಾರದಿಂದ ಶಪಿಸುತ್ತಾರೆ.

ನಮ್ಮ ಪೂರ್ವಜರು ನಮ್ಮನ್ನು ಶಪಿಸುತ್ತಾರೆ ಎಂದು ಹೇಳಿರುವುದು ಖಂಡಿತವಾಗಿಯೂ ಅವರು ಹಾಗೆ ಮಾಡುತ್ತಾರೆ ಎಂದರ್ಥವಲ್ಲ. ವೇದ–ಪುರಾಣಗಳಿಗೆ ಅವುಗಳದೇ ಆದ ಒಂದು ಶೈಲಿಯಿದೆ. ನಮ್ಮ ಗುರುಹಿರಿಯರು ಬಯ್ಗಳದ ಚಿತ್ರ–ವಿಚಿತ್ರವಾದ ಪದಗಳನ್ನು ಉಪಯೋಗಿಸುವುದು ಅದರ ವಾಚ್ಯಾರ್ಥದಲ್ಲಲ್ಲ. ಅದರಂತೆ ಇಲ್ಲಿಯೂ ಪೂರ್ವಜರ ಶಾಪ ಎಂಬುದು ಶಾಪವಲ್ಲ; ಅದು ಕರ್ತವ್ಯವನ್ನು ಬಿಡಬಾರದು ಎಂಬುದರ ಖಡಾ ಖಂಡಿತ ಸೂಚನೆ. ಸಂಯೋಗ ವಿಪ್ರಯೋಗಗಳೆರಡೂ ವಿಧಿಯ ಅಪರಿಹಾರ್ಯವಾದ ನಿಯಮಗಳು. ಅವುಗಳನ್ನು ನಾವು ಸ್ವಾಗತಿಸದೆ ಬೇರೆಯ ವಿಧಿಯಿಲ್ಲ. ಸಂಯೋಗದ ಸಮಯದಲ್ಲಿ ನಾವು ಬೆಳೆಸಿಕೊಂಡಿರುವ ಗೌರವ, ವಿಶ್ವಾಸ ಮತ್ತು ಪ್ರೀತಿಗಳನ್ನು ವಿಯೋಗದಲ್ಲಿ ಇಟ್ಟುಕೊಳ್ಳುವುದನ್ನು ಸಂಸ್ಕೃತಿಯೆನ್ನಬಹುದು. ಹಾಗೆಂದು ಅದನ್ನೇ ಮಾಡುತ್ತಾ ಕುಳಿತುಕೊಳ್ಳುವುದೂ ಉಚಿತವಾಗಲಾರದು. ಅದಕ್ಕಾಗಿಯೇ ಸಮಯೋಚಿತವಾದ ವ್ಯವಸ್ಥೆಯನ್ನು ಶಾಸ್ತ್ರಗಳು ಸೂಚಿಸುತ್ತವೆ. ಒಂದೊಂದು ದಿನದಲ್ಲಿಯೂ ಕಾಲವನ್ನು ಅನುಸರಿಸಿ ನಾವು ಅನೇಕ ಕರ್ತವ್ಯ ಗಳನ್ನು ಮಾಡಬೇಕಾಗುತ್ತದೆ. ಅವುಗಳಲ್ಲಿ ಪಿತೃತರ್ಪಣವೂ ಸೇರಿದೆ. ಹೀಗೆ ಪ್ರತಿದಿನವೂ ತರ್ಪಣ ಮುಂತಾದವುಗಳಿದ್ದರೂ ಪಿತೃಗಳ ವಿಶೇಷವಾದ ಸಾನ್ನಿಧ್ಯವಿರುವುದು ಮಹಾಲಯದ ದಿನಗಳಲ್ಲಿ. ಅದು ಬರುವುದು ವರ್ಷದ ಮಧ್ಯ ಎನ್ನಬಹುದಾದ 15 ದಿನಗಳಲ್ಲಿ. ಚಂದ್ರನು ಸೂರ್ಯನಿಂದ ಗರಿಷ್ಠ ದೂರದಲ್ಲಿರುವುದು ಹುಣ್ಣಿಮೆಯಾದರೆ, ಸೂರ್ಯ-ಚಂದ್ರರು ಜೊತೆಗೆ ಕಾಣುವ ತಿಥಿಯೇ ಅಮಾವಾಸ್ಯೆ. ಒಂದು ವರ್ಷದಲ್ಲಿ ಹನ್ನೆರಡು ಅಮಾವಾಸ್ಯೆಗಳಿರುತ್ತವೆ. ಅವುಗಳಲ್ಲಿ ಭಾದ್ರಪದ ಅಮಾವಾಸ್ಯೆಯನ್ನು ಮಹಾಲಯ ಅಮಾವಾಸ್ಯೆಯೆನ್ನುತ್ತಾರೆ. ಸಾಮಾನ್ಯವಾಗಿ ಎಲ್ಲ ಅಮಾವಾಸ್ಯೆಗಳೂ ಗತಿಸಿದ ಪೂರ್ವಜರ ಸ್ಮರಣೆಗಾಗಿಯೇ ಇದ್ದರೂ, ಮಹಾಲಯ ಅಮಾವಾಸ್ಯೆ ಅವುಗಳಲ್ಲೆಲ್ಲಾ ಶ್ರೇಷ್ಠವಾದುದು ಎಂದು ಶಾಸ್ತ್ರಗಳಲ್ಲಿ ಹೇಳಿದೆ.

ಬಿಂದು ಫಿಜ್ ಜೀರಾ ಮಸಾಲಾ ಗ್ರಾಹಕರಿಗೆ ಉಚಿತ ಬಹುಮಾನ

ಪುತ್ತೂರು: ಪ್ರತಿಷ್ಠಿತ ಬಿಂದು ಕಂಪನಿ ತನ್ನ ಫಿಜ್ ಜೀರಾ ಮಸಾಲಾ ಪಾನೀಯವನ್ನು ಖರೀದಿಸುವ ಗ್ರಾಹಕರಿಗಾಗಿ ವಿಶೇಷ ಉಚಿತ ಬಹುಮಾನಗಳನ್ನು ಘೋಷಿಸಿದೆ.

ಹಬ್ಬದ ಸಂಭ್ರಮವನ್ನು ಇನ್ನಷ್ಟು ತಾಜಾಗೊಳಿಸಲು ಹೊಸ ಆಫರ್‌ಗಳನ್ನು ಪರಿಚಯಿಸಿರುವ ಕಂಪನಿ, 300 ಮಿಲಿ ಪ್ಯಾಕ್‌ನ ಫಿಜ್ ಜೀರಾ ಮಸಾಲಾ ಪಾನೀಯವನ್ನು ಖರೀದಿಸಿದ ಗ್ರಾಹಕರು ಬಾಟಲಿಯ ಮೇಲೆ ನೀಡಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ತಮ್ಮ ವಿವರಗಳನ್ನು ಸಲ್ಲಿಸಬೇಕು. ಇದರಿಂದ 3 ತಿಂಗಳ ಕಾಲ ಉಚಿತ ಜಿಯೋಸಾವನ್ ಸಬ್‌ಸ್ಕ್ರಿಪ್ಶನ್ ಪಡೆದುಕೊಳ್ಳುವ ಜೊತೆಗೆ ಅನೇಕ ಆಕರ್ಷಕ ಬಹುಮಾನಗಳನ್ನು ಗೆಲ್ಲುವ ಅವಕಾಶ ದೊರೆಯುತ್ತದೆ.

ಒಟ್ಟು ವಿಜೇತರು **14,654**

ಮೆಗಾ ವಿಜೇತರು: **305**
(ಸ್ಮಾರ್ಟ್‌ಫೋನ್‌ಗಳು, ಕ್ಯಾಮೆರಾಗಳು, ಹೋಮ್ ಥಿಯೇಟರ್‌ಗಳು, ಸ್ಮಾರ್ಟ್‌ವಾಚ್‌ಗಳು, ಸ್ಪೀಕರ್‌ಗಳು, ಏರ್‌ಡೋಪ್ಸ್, ಟ್ರಾಲಿ ಬ್ಯಾಗ್‌ಗಳು, ಪವರ್‌ಬ್ಯಾಂಕ್‌ಗಳು ಮುಂತಾದವುಗಳನ್ನು ಒಳಗೊಂಡು)

ಮೆಗಾ ವಿಜೇತರ ಹೆಸರುಗಳು:
- **ಸ್ಮಾರ್ಟ್‌ಫೋನ್:** ಜಿ. ವೆಂಕಟೇಶ್ (ವೇಮುಲಪಾಡು), ನವೀನ್ ಎನ್ (ಕಾಮಕ್ಷಿಪಾಳ್ಯ)
- **ಕ್ಯಾಮೆರಾ:** ರಂಗನಾಯಕಲು (ಅನುಮಲಪಳ್ಳಿ), ಮೊಹಮ್ಮದ್ (ಬೋಜ್ಜವ್ರಿಪಳ್ಳಿ)
- **ಹೋಮ್ ಥಿಯೇಟರ್:** ಗಣೇಶ್ (ಉಡುಪಿ)

ಪ್ರಸ್ತುತಿ: ಪಿ.ವಿ ಬ್ರ್ಯಾಂಡ್ ಸ್ಪಾಟ್

ಜಿಎಸ್‌ಟಿ ಪರಿಷ್ಕರಣೆ: ದೂರು ದಾಖಲಿಸಲು ಪ್ರತ್ಯೇಕ ವಿಭಾಗ

ನವದೆಹಲಿ (ಪಿಟಿಐ): ಜಿಎಸ್‌ಟಿ ದರ ಪರಿಷ್ಕರಣೆ ನಂತರದಲ್ಲಿ ಅದಕ್ಕೆ ಸಂಬಂಧಿಸಿದ ದೂರುಗಳನ್ನು ದಾಖಲಿಸಲು ಕೇಂದ್ರ ಸರ್ಕಾರವು 'ಇನ್‌ಗ್ರಾಂ' ಪೋರ್ಟಲ್‌ನಲ್ಲಿ ಪ್ರತ್ಯೇಕ ವಿಭಾಗವನ್ನು ಆರಂಭಿಸಿದೆ.

ಜಿಎಸ್‌ಟಿ ಮಂಡಳಿಯ ನಿರ್ಧಾರದಂತೆ ಪರಿಷ್ಕೃತ ದರವು ಸೆಪ್ಟೆಂಬರ್ 22ರಿಂದ ಜಾರಿಗೆ ಬರಲಿದೆ. ಇದರ ಸಮರ್ಪಕ ಜಾರಿಗಾಗಿ ಗ್ರಾಹಕ ವ್ಯವಹಾರಗಳ ಇಲಾಖೆಯು ರಾಷ್ಟ್ರೀಯ ಗ್ರಾಹಕ ಸಹಾಯವಾಣಿ (ಎನ್‌ಸಿಎಚ್) ಜೊತೆ ಕೈ ಜೋಡಿಸಿ, ವಿವಿಧ ಕ್ರಮ ಕೈಗೊಂಡಿದೆ ಎಂದು ಅಧಿಕೃತ ಹೇಳಿಕೆ ಶನಿವಾರ ತಿಳಿಸಿದೆ.

ಜಿಎಸ್‌ಟಿ ಪರಿಷ್ಕೃತ ದರ, ವಿನಾಯಿತಿ ಜಾರಿಗೆ ಸಂಬಂಧಿಸಿ ಗ್ರಾಹಕರ ದೂರುಗಳನ್ನು ಎನ್‌ಸಿಎಚ್‌ನ ಸಮಗ್ರ ಕುಂದುಕೊರತೆ ಪರಿಹಾರ ಪೋರ್ಟಲ್‌ನಲ್ಲಿ (ಇನ್‌ಗ್ರಾಂ) ದಾಖಲಿಸಬಹುದು. ಗ್ರಾಹಕರು ನೀಡಿದ ದೂರನ್ನು ಸಂಬಂಧಿತ ಕಂಪನಿಗಳು, ಪರೋಕ್ಷ ತೆರಿಗೆಗಳು ಹಾಗೂ ಸುಂಕಗಳ ಕೇಂದ್ರೀಯ ಮಂಡಳಿ (ಸಿಬಿಐಸಿ) ಮತ್ತು ಇತರೆ ಸಂಬಂಧಿತ ಪ್ರಾಧಿಕಾರಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗುತ್ತದೆ.

ಕನ್ನಡ ಸೇರಿದಂತೆ 17 ಭಾಷೆಗಳಲ್ಲಿ ರಾಷ್ಟ್ರೀಯ ಗ್ರಾಹಕ ಸಹಾಯವಾಣಿಗೆ (1915) ಕರೆ ಮಾಡುವ ದೂರು ಸಲ್ಲಿಸಬಹುದಾಗಿದೆ ಅಥವಾ ಇನ್‌ಗ್ರಾಂ ಮೂಲಕ ದೂರು ನೀಡಬಹುದಾಗಿದೆ. ಜೊತೆಗೆ ವಾಟ್ಸ್‌ಆ್ಯಪ್, ಎಸ್‌ಎಂಎಸ್, ಇ–ಮೇಲ್, ಎಚ್‌ಸಿಎಚ್ ಆ್ಯಪ್, ವೆಬ್‌ಪೋರ್ಟಲ್ ಮತ್ತು ಉಮಂಗ್ ಆ್ಯಪ್ ಮೂಲಕ ಗ್ರಾಹಕರು ದೂರು ನೀಡಬಹುದಾಗಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

30ನೇ ವರ್ಷದ ಚಿರಸ್ಮರಣೆ

ದೊಡ್ಡಗೌಡರ ಕೀರ್ತಿಶೇಷ ಎಂ. ರಾಮಣ್ಣ (ಜಮೀನುದಾರರು)
ನಿಧನ 21-09-1995
ನಿಮ್ಮ ಸೇವೆ ಮತ್ತು ಮೌಲ್ಯಗಳು ಇಂದಿಗೂ ನಮಗೆ ಆದರ್ಶ. ನಿಮ್ಮ ಹೆಜ್ಜೆಗಳನ್ನು ಅನುಸರಿಸಿ ನಿಮ್ಮ ಪರಂಪರೆಯನ್ನು ಮುಂದಕ್ಕೆ ಕೊಂಡೊಯ್ಯಬೇಕೆಂದು ಸದಾ ನಿಮ್ಮ ನೆನಪಿನ ನೆರಳಲ್ಲೇ ಜೀವಿಸುವ
ಧರ್ಮಪತ್ನಿ ಶ್ರೀಮತಿ ಕೆಂಪಲಕ್ಕಮ್ಮ ರಾಮಣ್ಣ (ಮಾಜಿ ಚೇರ್ಮನ್, ಗ್ರಾಮ ಪಂಚಾಯ್ತಿ)
ಶ್ರೀ ಪ್ರಕಾಶ್ ರಾಮಣ್ಣ (ಸಮಾಜಸೇವಕರು, ಕಾಂಗ್ರೆಸ್ ಮುಖಂಡರು), ಶ್ರೀ ನಾಗೇಶ್ ರಾಮಣ್ಣ,
ಶ್ರೀ ಆನಂದ್ ರಾಮಣ್ಣ, ಡಾ. ಮಂಜುನಾಥ್ ರಾಮಣ್ಣ MSc(Ag)Phd
ಹಾಗೂ ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು
ಎಂ. ರಾಮಣ್ಣ ವೃತ್ತ, ಹೊರಮಾವು ಅಗರ, ಬೆಂಗಳೂರು -560043
9448465413 / 9886715413

ಉತ್ತರ ಕ್ರಿಯಾದಿ ಭೂಶಾಂತಿ



ಡಾ|| ಚಿಕ್ಕಕೊಮಾರಿಗೌಡರು (ಡಾ|| ಸಿ.ಕೆ. ಗೌಡ)
ಬೆಂಗಳೂರು ದಕ್ಷಿಣ ಜಿಲ್ಲೆ, ಚನ್ನಪಟ್ಟಣ ತಾ||, ವಿರೂಪಾಕ್ಷಿಪುರ ಹೋ||, ಹಾರೋಕೊಪ್ಪ ಗ್ರಾಮದಲ್ಲಿ ವಾಸವಾಗಿರುವ ಲೆ|| ಶ್ರೀ ಸಿದ್ದೇಗೌಡರ ಮಗ ಡಾ|| ಚಿಕ್ಕಕೊಮಾರಿಗೌಡ (ಡಾ|| ಸಿ.ಕೆ.ಗೌಡ)ರ ಧರ್ಮಪತ್ನಿ ಶ್ರೀಮತಿ ಲಿಂಗಮ್ಮ ಸಿ.ಕೆ. ಗೌಡ ಮಾಡುವ ವಿಜ್ಞಾಪನೆಗಳು.
ದಿನಾಂಕ: 12-09-2025ನೇ ಶುಕ್ರವಾರ ನನ್ನ ಪೂಜ್ಯ ಪತಿಯವರಾದ ಡಾ|| ಚಿಕ್ಕಕೊಮಾರಿಗೌಡರು (ಡಾ|| ಸಿ.ಕೆ. ಗೌಡ) ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ಮೃತರ ತತ್ಸಂಬಂಧವಾದ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ: 22-09-2025ನೇ ಸೋಮವಾರ ಬೆಳಿಗ್ಗೆ 11:00 ಗಂಟೆಗೆ ಮೇಲ್ಕಂಡ ಗ್ರಾಮದ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.
ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಮೃತರ ಪತ್ನಿ ಶ್ರೀಮತಿ ಲಿಂಗಮ್ಮ ಸಿ.ಕೆ. ಗೌಡ ಮತ್ತು ಕುಟುಂಬವರ್ಗದವರು ಹಾಗೂ ಬಂಧು-ಮಿತ್ರರು

'ಭಾರತದ ಕಂಪನಿಗಳ ಮೇಲೆ ಪರಿಣಾಮ'

ಅಮೆರಿಕದ ಎಚ್–1ಬಿ ವೀಸಾ ಅರ್ಜಿ ಶುಲ್ಕ ₹88.09 ಲಕ್ಷ
ತಂತ್ರಜ್ಞಾನ ಸೇವಾ ಕಂಪನಿಗಳಿಗೆ ತೊಂದರೆ: ನಾಸ್ಕಾಂ

ನವದೆಹಲಿ (ಪಿಟಿಐ): ಎಚ್–1ಬಿ ವೀಸಾ ಅರ್ಜಿಗಳಿಗೆ ವಿಧಿಸುವ ಶುಲ್ಕವನ್ನು 1 ಲಕ್ಷ ಅಮೆರಿಕನ್ ಡಾಲರ್‌ಗೆ (ಅಂದಾಜು ₹88.09 ಲಕ್ಷ) ನಿಗದಿಪಡಿಸುವ ಅಮೆರಿಕ ಸರ್ಕಾರದ ತೀರ್ಮಾನವು ಭಾರತದ ತಂತ್ರಜ್ಞಾನ ಸೇವಾ ಕಂಪನಿಗಳ ಮೇಲೆ ದುಷ್ಪರಿಣಾಮ ಬೀರಲಿದೆ ಎಂದು ನಾಸ್ಕಾಂ ಅಂದಾಜು ಮಾಡಿದೆ.

ಅಮೆರಿಕದಲ್ಲಿಯೇ ಉಳಿದು ಮಾಡಬೇಕಾದ ಕೆಲಸಗಳ ಮೇಲೆ ಈ ತೀರ್ಮಾನದಿಂದಾಗಿ ಪರಿಣಾಮ ಉಂಟಾಗಲಿದೆ ಎಂದು ಐ.ಟಿ. ಸೇವಾ ಕಂಪನಿಗಳ ಸಂಘಟನೆಯಾದ ನಾಸ್ಕಾಂ ಹೇಳಿದೆ.

ಎಚ್–1ಬಿ ವೀಸಾ ಬೇಕು ಎಂದಾದರೆ 1 ಲಕ್ಷ ಅಮೆರಿಕನ್ ಡಾಲರ್ ಹಣ ಪಾವತಿಸಬೇಕು ಎನ್ನುವ ನಿಯಮವು ಸೆಪ್ಟೆಂಬರ್ 21ರಿಂದಲೇ ಜಾರಿಗೆ ಬರುತ್ತಿರುವುದು ಉದ್ದಿಮೆಗಳು, ವೃತ್ತಿಪರರ ಪಾಲಿಗೆ ಅನಿಶ್ಚಿತತೆಯನ್ನು ಸೃಷ್ಟಿಸುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದೆ.

ಎಚ್–1ಬಿ ವೀಸಾ ಪಡೆದು ಜಾಗತಿಕ ಮಟ್ಟದ ಕಂಪನಿಗಳಿಗೆ, ಭಾರತೀಯ ಕಂಪನಿಗಳಿಗೆ ಕೆಲಸ ಮಾಡುತ್ತಿರುವ ಭಾರತದ ಪ್ರಜೆಗಳ ಮೇಲೆ ಅಮೆರಿಕದ ತೀರ್ಮಾನದಿಂದಾಗಿ ಕೆಟ್ಟ ಪರಿಣಾಮ ಉಂಟಾಗಲಿದೆ ಎಂದು ಅದು ಹೇಳಿದೆ.

ಭಾರತ ಕೇಂದ್ರಿತ ಕಂಪನಿಗಳು ಈಗ ಕೆಲವು ವರ್ಷಗಳಿಂದ ಇಂತಹ ವೀಸಾ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತಿವೆ. ಅಮೆರಿಕದಲ್ಲೇ ಅಗತ್ಯ ಸಿಬ್ಬಂದಿಯನ್ನು ಅವರು ನೇಮಕ ಮಾಡಿಕೊಳ್ಳುವುದು ಹೆಚ್ಚಾಗಿದೆ ಎಂದು ನಾಸ್ಕಾಂ ಹೇಳಿದೆ.

ಅಮೆರಿಕದ ಎಚ್–1ಬಿ ವೀಸಾಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳುವುದು ಭಾರತದ ಟೆಕಿಗಳು. ಅಮೆರಿಕವು ಪ್ರತಿ ವರ್ಷ 6,50,000 ಎಚ್–1ಬಿ ವೀಸಾ ನೀಡುತ್ತದೆ. ಈ ಬಗೆಯ ವೀಸಾಗಳನ್ನು 2024–25ರಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿ ಬಳಕೆ ಮಾಡಿಕೊಂಡ ಕಂಪನಿಗಳ ಪಟ್ಟಿಯಲ್ಲಿ ಅಮೆಜಾನ್ ಮೊದಲ ಸ್ಥಾನದಲ್ಲಿದೆ (10,044).

ಎಚ್–1ಬಿ ವೀಸಾ: ಹೆಚ್ಚು ಬಳಸಿಕೊಳ್ಳುವ ಭಾರತದ ಮುಖ್ಯ ಕಂಪನಿಗಳು

ಕಂಪನಿ	ವೀಸಾ ಅನುಮೋದನೆ
ಟಿಸಿಎಸ್	5,505
ಇನ್ಫೊಸಿಸ್	2,004
ಎಲ್‌ಟಿಐ ಮೈಂಡ್‌ಟ್ರೀ	1,807
ಎಚ್‌ಸಿಎಲ್ ಅಮೆರಿಕ	1,728

ಈ ಯೋಜನೆಯನ್ನು ಬಳಸಿಕೊಳ್ಳುವ ಅಮೆರಿಕದ ಕಂಪನಿಗಳು

ಮೈಕ್ರೊಸಾಫ್ಟ್	5,189
ಮೆಟಾ	5,123
ಆ್ಯಪಲ್	4,202
ಗೂಗಲ್	4,181
ಕಾಗ್ನಿಜೆಂಟ್	2,493
ಜೆಪಿ ಮಾರ್ಗನ್ ಚೇಸ್	2,440
ವಾಲ್‌ಮಾರ್ಟ್	2,390
ಡೆಲಾಯ್ಟ್ ಕನ್ಸಲ್ಟಿಂಗ್	2,353

(2024–25ನೇ ಸಾಲಿನ ಅಂಕಿ–ಅಂಶ)

ನಾಸ್ಕಾಂ ಕಳವಳ

- ಇಂತಹ ಕ್ರಮಗಳು ಅಮೆರಿಕದಲ್ಲಿನ ಸಂಶೋಧನಾ ವ್ಯವಸ್ಥೆಯ ಮೇಲೆ ಹಾಗೂ ಉದ್ಯೋಗ ಮಾರುಕಟ್ಟೆಯ ಮೇಲೆ ಪರಿಣಾಮ ಉಂಟುಮಾಡಬಹುದು
- ಅಮೆರಿಕದಲ್ಲಿಯೇ ಇದ್ದು ಮಾಡಬೇಕಿರುವ ಕೆಲಸಗಳ ಮೇಲೆ ಪರಿಣಾಮ ಆಗುತ್ತದೆ
- ಎಚ್–1ಬಿ ವೀಸಾ ಪಡೆದು ಅಮೆರಿಕ ಪ್ರವೇಶಿಸಿರುವ ಕೆಲಸಗಾರರು ಅಲ್ಲಿನ ಭದ್ರತೆಗೆ ಯಾವ ರೀತಿಯಲ್ಲೂ ಬೆದರಿಕೆ ಅಲ್ಲ

ಅಮೆರಿಕಕ್ಕೆ ನಷ್ಟ, ಭಾರತಕ್ಕೆ ಲಾಭ: ಅಮಿತಾಭ್ ಕಾಂತ್

ಅಮಿತಾಭ್ ಕಾಂತ್

'ಎಚ್–1ಬಿ ವೀಸಾ ಶುಲ್ಕ ಹೆಚ್ಚಳದ ನಿರ್ಧಾರವು ಅಮೆರಿಕದಲ್ಲಿ ಅನ್ವೇಷಣೆಗಳು ಉಸಿರುಗಟ್ಟು-ವಂತೆ ಮಾಡಲಿದೆ. ಆದರೆ, ಈ ನಿರ್ಧಾರವು ಭಾರತದ ಅಭಿವೃದ್ಧಿಗೆ ವೇಗ ನೀಡಲಿದೆ' ಎಂದು ನೀತಿ ಆಯೋಗದ ಮಾಜಿ ಸಿಇಒ ಅಮಿತಾಭ್ ಕಾಂತ್ ಶನಿವಾರ ಹೇಳಿದ್ದಾರೆ.

ವೀಸಾ ಶುಲ್ಕ ಹೆಚ್ಚಳವು, ಜಾಗತಿಕ ಪ್ರತಿಭೆಗಳಿಗೆ ಬಾಗಿಲು ಹಾಕುವ ಕೆಲಸ ಮಾಡಲಿದೆ. ಇದರಿಂದ ಅಮೆರಿಕದಲ್ಲಿ ಸ್ಥಾಪನೆಯಾಗ-ಬೇಕಾದ ಪ್ರಯೋಗಾಲಯಗಳು, ಅಲ್ಲಿಗೆ ಸಿಗಬೇಕಾದ ಹಕ್ಕುಸ್ವಾಮ್ಯ, ಅಲ್ಲಿ ಆಗಬೇಕಾದ ಸಂಶೋಧನೆ ಮತ್ತು ಅಲ್ಲಿ ಸ್ಥಾಪನೆ ಆಗಬಹುದಾಗ ನವೋದ್ಯಮಗಳು ಬೆಂಗಳೂರು, ಹೈದರಾಬಾದ್, ಪುಣೆ ಮತ್ತು ಗುರುಗ್ರಾಮದಂತಹ ನಗರಗಳಿಗೆ ಹೋಗುವಂತೆ ಮಾಡಲಿದೆ ಎಂದು ಹೇಳಿದ್ದಾರೆ.

ಇದರಿಂದಾಗಿ ಭಾರತದ ಅತ್ಯುತ್ತಮ ವೈದ್ಯರು, ಎಂಜಿನಿಯರ್‌ಗಳು, ವಿಜ್ಞಾನಿಗಳು, ನಾವೀನ್ಯಕಾರರು ವಿಕಸಿತ ಭಾರತದ ಗುರಿ ಮತ್ತು ಪ್ರಗತಿಗೆ ಕೊಡುಗೆ ನೀಡಲು ಅವಕಾಶ ಹೊಂದಲಿದ್ದಾರೆ. ಅಮೆರಿಕದ ಈ ನಿರ್ಧಾರವು ಭಾರತಕ್ಕೆ ಲಾಭ ಉಂಟುಮಾಡುತ್ತದೆ ಎಂದು ಅಮಿತಾಭ್ ಕಾಂತ್ 'ಎಕ್ಸ್'ನಲ್ಲಿ ಹೇಳಿದ್ದಾರೆ.

ಅಮೆರಿಕದಲ್ಲಿನ ಭಾರತದ ವೃತ್ತಿಪರರ ಮೇಲೆ ಈ ವೀಸಾ ನಿರ್ಧಾರವು ಹೆಚ್ಚಿನ ಪರಿಣಾಮ ಬೀರಲಿದೆ. ವಲಸೆ ತಗ್ಗಿಸಲು ಎಚ್–1ಬಿ ವೀಸಾದ ವಾರ್ಷಿಕ ಶುಲ್ಕವನ್ನು 1 ಲಕ್ಷ ಡಾಲರ್‌ಗೆ ಹೆಚ್ಚಳ ಮಾಡುವ ನಿರ್ಧಾರಕ್ಕೆ ಶುಕ್ರವಾರ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದಾರೆ.

ಎಚ್–1ಬಿ ವೀಸಾ ಅರ್ಜಿ ಇಳಿಕೆ: ಪೈ

ಮೋಹನದಾಸ್ ಪೈ

ನವದೆಹಲಿ (ಪಿಟಿಐ): ಎಚ್–1ಬಿ ವೀಸಾ ಶುಲ್ಕವನ್ನು ತೀವ್ರವಾಗಿ ಹೆಚ್ಚಿಸಿರುವ ಅಮೆರಿಕದ ಕ್ರಮವು, ಮುಂದಿನ ದಿನಗಳಲ್ಲಿ ಅಮೆರಿಕದ ಕಂಪನಿಗಳ ಕೆಲಸವನ್ನು ಅಲ್ಲಿಂದ ಹೊರಗೆ ನಿರ್ವಹಿಸುವ ಪ್ರವೃತ್ತಿ ಹೆಚ್ಚುವುದಕ್ಕೆ ಕಾರಣವಾಗಬಹುದು ಎಂದು ಐ.ಟಿ. ಉದ್ಯಮದ ಹಿರಿಯ ಮೋಹನದಾಸ್ ಪೈ ಹೇಳಿದ್ದಾರೆ.

ಕಡಿಮೆ ಸಂಬಳಕ್ಕೆ ಕೆಲಸ ಮಾಡಲು ನೌಕರರನ್ನು ಅಮೆರಿಕಕ್ಕೆ ಕಳುಹಿಸಲು ಕಂಪನಿಗಳು ಎಚ್–1ಬಿ ವೀಸಾ ಯೋಜನೆಯನ್ನು ಬಳಸಿಕೊಳ್ಳುತ್ತಿವೆ ಎಂಬ ಭಾವನೆ ತಪ್ಪು ಎಂದು ಹೇಳಿರುವ ಪೈ, ಈ ವೀಸಾಗಳನ್ನು ಬಳಸಿಕೊಳ್ಳುವ ಪ್ರಮುಖ 20 ಕಂಪನಿಗಳು ನೀಡುವ ವೇತನದ ಸರಾಸರಿ ಮೊತ್ತವು ₹88 ಲಕ್ಷ ಮೀರುತ್ತದೆ ಎಂದು ಹೇಳಿದ್ದಾರೆ.

'ಅಮೆರಿಕವು ಜಾರಿಗೆ ತಂದಿರುವ ನಿಯಮವು ಈಗಾಗಲೇ ಎಚ್–1ಬಿ ವೀಸಾ ಪಡೆದವರಿಗೆ ಅನ್ವಯ ಆಗುವುದಿಲ್ಲ. ಹೀಗಾಗಿ ನಿಯಮದ ಪರಿಣಾಮವು ಸೀಮಿತವಾಗಿ ಇರಲಿದೆ. ಆದರೆ ಹೊಸದಾಗಿ ಈ ವೀಸಾಕ್ಕೆ ಅರ್ಜಿ ಸಲ್ಲಿಸುವುದು ಕಡಿಮೆ ಆಗಲಿದೆ. ವೀಸಾಕ್ಕೆ 1 ಲಕ್ಷ ಅಮೆರಿಕನ್ ಡಾಲರ್ ಮೊತ್ತವನ್ನು ಯಾರೂ ಪಾವತಿಸುವುದಿಲ್ಲ, ಅಷ್ಟಂತೂ ಸತ್ಯ' ಎಂದು ಪೈ ಅಭಿಪ್ರಾಯಪಟ್ಟಿದ್ದಾರೆ.

'ಇನ್ನು ಎಲ್ಲರೂ ತಮ್ಮ ಕೆಲಸಗಳನ್ನು ಅಮೆರಿಕದಿಂದ ಹೊರಗಡೆ ಮಾಡಿಸುವುದನ್ನು ಹೆಚ್ಚಿಸಲಿದ್ದಾರೆ... ಏಕೆಂದರೆ ಅಮೆರಿಕಕ್ಕೆ ನೌಕರರನ್ನು ಕಳುಹಿಸಿ ಕೆಲಸ ಮಾಡಿಸುವ ವೆಚ್ಚವು ಬಹಳ ದುಬಾರಿ... ಅಮೆರಿಕದ ಹೊರಗೇ ಕೆಲಸ ಮಾಡಿಸುವುದು ಮುಂದಿನ ಆರು ತಿಂಗಳು ಅಥವಾ ಒಂದು ವರ್ಷದಲ್ಲಿ ಹೆಚ್ಚಬಹುದು. ಹೀಗಾಗಿ ನಾವು ಕಾದು ನೋಡಬೇಕು' ಎಂದು ವಿವರಿಸಿದ್ದಾರೆ.

ಭಾರತದ ಐ.ಟಿ. ಸೇವಾ ಕಂಪನಿಗಳು ಎಚ್–1ಬಿ ವೀಸಾ ಮೇಲೆ ಅವಲಂಬನೆ ಹೊಂದಿರುವುದು ಕಡಿಮೆ ಆಗುತ್ತಿದೆ. ಅಮೆರಿಕದ ಮುಂಚೂಣಿ ತಂತ್ರಜ್ಞಾನ ಕಂಪನಿಗಳೇ ಈ ವೀಸಾ ಯೋಜನೆಯನ್ನು ಹೆಚ್ಚು ಬಳಸಿಕೊಳ್ಳುತ್ತಿವೆ ಎಂದು ಪೈ ಅವರು ಹಿಂದಿನಿಂದಲೂ ಹೇಳುತ್ತಿದ್ದಾರೆ.

'ಪರಿಣಾಮ ಭಾರತಕ್ಕೆ ಸೀಮಿತವಲ್ಲ'

ಭಾರತದ ಕಂಪನಿಗಳು ಪ್ರತಿ ವರ್ಷ ಹೊಸದಾಗಿ 8 ಸಾವಿರದಿಂದ 12 ಸಾವಿರದವರೆಗೆ ಎಚ್–1ಬಿ ವೀಸಾ ಅರ್ಜಿ ಸಲ್ಲಿಸುತ್ತವೆ. ಅಮೆರಿಕ ಸರ್ಕಾರದ ಈಗಿನ ತೀರ್ಮಾನದ ಪರಿಣಾಮವು ಭಾರತದ ಕಂಪನಿಗಳಿಗೆ ಮಾತ್ರವೇ ಸೀಮಿತ ಆಗಿರುವುದಿಲ್ಲ. ಅದು ತಂತ್ರಜ್ಞಾನ ವಲಯದ ಜಾಗತಿಕ ಮಟ್ಟದ ಕಂಪನಿಗಳಾದ ಅಮೆಜಾನ್, ಗೂಗಲ್, ಮೈಕ್ರೊಸಾಫ್ಟ್ ಮೇಲೆಯೂ ಪರಿಣಾಮ ಉಂಟುಮಾಡಲಿದೆ. ಈ ಕಂಪನಿಗಳು ಅಮೆರಿಕಕ್ಕೆ ಅತ್ಯುತ್ತಮ ಪ್ರತಿಭೆಗಳನ್ನು ಕರೆದೊಯ್ಯಲು ಎಚ್–1ಬಿ ವೀಸಾ ಯೋಜನೆಯನ್ನು ದೊಡ್ಡ ಪ್ರಮಾಣದಲ್ಲಿ ಬಳಸಿಕೊಳ್ಳುತ್ತವೆ ಎಂದು ಐ.ಟಿ. ಉದ್ಯಮದ ಪರಿಣತರೊಬ್ಬರು ಹೆಸರು ಬಹಿ-ರಂಗಪಡಿಸಬಾರದು ಎಂಬ ಷರತ್ತಿನೊಂದಿಗೆ ತಿಳಿಸಿದರು.

ಮುಂಬೈ ಧಾರಣೆ (ಶೇಂಗಾ)

20-09-2025	
ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	9800-9900
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1335 (1340)
ಒಂದು ವಾರದ ಡೆಲಿವರಿ	1330 (1335)
ಪಾಮ್ ವಾರದ ಡೆಲಿವರಿ	1273 (1278)
ಸೂರ್ಯಕಾಂತಿ ಎಣ್ಣೆ ಕಚ್ಚಾ	1345 (1350)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,10,400 (1,09,500)
ಬೆಳ್ಳಿ ಕೆ.ಜಿಗೆ	1,30,500 (1,27,800)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಅಮೂಲ್‌ನ 700 ಉತ್ಪನ್ನ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ಅಮೂಲ್ ಬ್ರ್ಯಾಂಡ್ ಅಡಿಯಲ್ಲಿ ಮಾರಾಟವಾಗುವ ತನ್ನ 700ಕ್ಕೂ ಹೆಚ್ಚು ಉತ್ಪನ್ನಗಳ ಚಿಲ್ಲರೆ ಬೆಲೆಯನ್ನು ಕಡಿತ ಮಾಡಿರುವುದಾಗಿ ಗುಜರಾತ್ ಸಹಕಾರ ಹಾಲು ಮಾರುಕಟ್ಟೆ ಒಕ್ಕೂಟವು (ಜಿಸಿಎಂಎಂಎಫ್) ತಿಳಿಸಿದೆ.

ಹೊಸ ದರವು ಸೆ. 22ರಿಂದ ಜಾರಿಗೆ ಬರಲಿದೆ. ಜಿಎಸ್‌ಟಿ ಪರಿಷ್ಕರಣೆಯ ಪೂರ್ಣ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾಯಿಸಲು ಮುಂದಾಗಿರುವುದಾಗಿ ಒಕ್ಕೂಟ ಶನಿವಾರ ತಿಳಿಸಿದೆ.

ಬೆಣ್ಣೆ, ತುಪ್ಪ, ಯುಎಚ್‌ಟಿ ಹಾಲು, ಐಸ್‌ಕ್ರೀಮ್, ಪನೀರ್, ಚಾಕೊಲೇಟ್‌ಗಳು ಸೇರಿದಂತೆ ಹಲವಾರು ಉತ್ಪನ್ನಗಳ ಬೆಲೆಯನ್ನು ಪರಿಷ್ಕರಣೆ ಮಾಡಲಾಗಿದೆ ಎಂದು ತಿಳಿಸಿದೆ.

100 ಗ್ರಾಂ ಬೆಣ್ಣೆಯ ಎಂಆರ್‌ಪಿ ದರ ₹62ರಿಂದ ₹58ಕ್ಕೆ ಇಳಿಯಲಿದೆ. ಒಂದು ಲೀಟರ್ ತುಪ್ಪದ ಬೆಲೆ ₹40ನಷ್ಟು ಕಡಿಮೆ ಆಗಿ ₹610 ಆಗಲಿದೆ. ಸಂಸ್ಕರಿಸಿದ 1 ಕೆ.ಜಿ ಗಿಣ್ಣು ₹30 ಕಡಿಮೆಯಾಗಿ, ₹545 ಆಗಲಿದೆ ಎಂದು ತಿಳಿಸಿದೆ.

OBITUARY

Eveline Pinto (70)
Left For Her Heavenly Abode
On 20th September 2025
Funeral Mass on 21-09-2025, Sunday 1.00pm at St.Vincent Palloti Church, Banaswadi, Bangalore.
Followed by Burial at Kalpalli Cemetery
Deeply mourned by Family Members
Mob: 9886264256 / 9844069568

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು 100 ಕ್ಕೆ ₹580; 12 ಕ್ಕೆ ₹80
ಮೈಸೂರು: 100 ಕ್ಕೆ ₹585

ರಾಮನಗರ ರೇಷ್ಮೆಗೂಡು
ಮಿಶ್ರತಳಿ (ಸಿ.ಬಿ) ₹329-660
ದ್ವಿತಳಿ (ಬಿ.ವಿ) ₹381-790

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹183
ಆರ್‌ಎಸ್‌ಎಸ್-5 ₹178
ಗುಡ್ ಲಾಟ್ ₹163

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1325 (1330)
ಸೋಯಾ (ರಿಫೈನ್ಡ್) ₹1275 (1280)
ಸೂರ್ಯಕಾಂತಿ (ರಿಫೈನ್ಡ್) ₹1415 (1420)
ಪಾಮೋಲಿನ್ ₹1275 (1280)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹27550-27550
ತುಮಕೂರು ₹28000-28000

ನಾಳೆಯಿಂದ ಪರಿಷ್ಕೃತ ದರ ಅನ್ವಯ: ಕೆಎಂಎಫ್

ನಂದಿನಿ: 20 ಉತ್ಪನ್ನಗಳ ದರ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿಯು (ಕೆಎಂಎಫ್) ತುಪ್ಪ, ಬೆಣ್ಣೆ, ಪನೀರ್ ಸೇರಿ 'ನಂದಿನಿ' ಹಾಲಿನ ವಿವಿಧ ಉತ್ಪನ್ನಗಳ ದರವನ್ನು ಇಳಿಕೆ ಮಾಡಿದ್ದು, ಇದೇ 22ರಿಂದಲೇ ಪರಿಷ್ಕೃತ ದರ ಅನ್ವಯ ಆಗಲಿದೆ.

ಶನಿವಾರ ಇಲ್ಲಿ ಸುದ್ದಿಗಾರರೊಂದಿಗೆ ಈ ಬಗ್ಗೆ ಮಾತನಾಡಿದ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ. ಶಿವಸ್ವಾಮಿ, 'ಹಾಲಿನ ಉತ್ಪನ್ನಗಳ ಮೇಲಿನ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಇಳಿಕೆಯ ಪರಿಣಾಮ, ಈ ಪರಿಷ್ಕರಣೆ ಮಾಡಲಾಗಿದೆ. 1 ಲೀಟರ್ ತುಪ್ಪದ ದರ ₹650ರಿಂದ ₹610ಕ್ಕೆ ಇಳಿಕೆ ಮಾಡಲಾಗಿದೆ. ಇದೇ ರೀತಿ, ಮೊಸರು ಹೊರತುಪಡಿಸಿ ಹಾಲಿನ ಇತರ ಉತ್ಪನ್ನಗಳ ದರ ಇಳಿಸಲಾಗಿದೆ. ಈಗಾಗಲೇ ಪೂರೈಕೆ ಆಗಿರುವ ಉತ್ಪನ್ನಗಳ ಮೇಲೆ ಹಳೆ ದರ ಇದ್ದರೂ, ಮಾರಾಟಗಾರರು ಕಡ್ಡಾಯವಾಗಿ ಪರಿಷ್ಕೃತ ದರವನ್ನೇ ಪಡೆಯಬೇಕು. ಈ ಇಳಿಕೆ ಮೂಲಕ ಗ್ರಾಹಕರಿಗೆ ದಸರಾ ಉಡುಗೊರೆ ನೀಡುತ್ತಿದ್ದೇವೆ' ಎಂದು ಹೇಳಿದರು.

'ಜಿಎಸ್‌ಟಿ ಇಳಿಕೆಗೆ ಸಂಬಂಧಿಸಿದಂತೆ ಕೇಂದ್ರ ಹಣಕಾಸು ಸಚಿವಾಲಯದ ಆದೇಶದ ಅನ್ವಯ, ಆಡಳಿತ ಮಂಡಳಿ ಸಭೆ ನಡೆಸಿ ಹಾಲಿನ ಉತ್ಪನ್ನಗಳ ಮೇಲಿನ ದರ ಪರಿಷ್ಕರಿಸಿದ್ದೇವೆ. ನಂದಿನಿ ತುಪ್ಪ, ಬೆಣ್ಣೆ, ಚೀಸ್, ಕುರುಕು ತಿಂಡಿಗಳ ಮೇಲಿನ ಜಿಎಸ್‌ಟಿ ಶೇ 12ರಿಂದ ಶೇ 5ಕ್ಕೆ, ಕುಕೀಸ್, ಚಾಕೊಲೇಟ್ಸ್, ಐಸ್‌ಕ್ರೀಂ, ಇನ್‌ಸ್ಟಂಟ್ ಮಿಕ್ಸ್ ಮತ್ತು ಪ್ಯಾಕ್ಡ್ ನೀರಿನ ಮೇಲಿನ ಜಿಎಸ್‌ಟಿ ಶೇ 18ರಿಂದ ಶೇ 5ಕ್ಕೆ ಇಳಿಕೆಯಾಗಿದೆ. ನಂದಿನಿ ಪನೀರ್ ಮತ್ತು ಯುಎಚ್‌ಟಿ ಹಾಲಿನ ಉತ್ಪನ್ನಗಳ ಮೇಲಿನ ಜಿಎಸ್‌ಟಿ ಶೇ 5ರಿಂದ ಶೂನ್ಯಕ್ಕೆ ಇಳಿಕೆಯಾಗಿದೆ. ನಂದಿನಿ ಮೊಸರಿನ ಮೇಲಿನ ಜಿಎಸ್‌ಟಿ ಈ ಮೊದಲಿನಂತೆ ಶೇ 5 ರಷ್ಟು ಇರಲಿದೆ. ಆದ್ದರಿಂದ ಮೊಸರಿನ ದರದಲ್ಲಿ ವ್ಯತ್ಯಾಸವಾಗುವುದಿಲ್ಲ. ಹಾಲಿನ ದರವೂ ಈ ಮೊದಲಿನಂತೆ ಇರಲಿದೆ' ಎಂದರು.

ಮಳಿಗೆಗಳಿಗೆ ದರ ಪಟ್ಟಿ: '22ರಿಂದ ಹೊಸ ದರ ಅನ್ವಯ ಆಗುವುದರಿಂದ, ಪರಿಷ್ಕೃತ ದರದ ಪಟ್ಟಿಯನ್ನು ಮಳಿಗೆಗಳು ಹಾಗೂ ಮಾರಾಟ ವಿಭಾಗಗಳಿಗೆ ಕಳಿಸಲಾಗುತ್ತದೆ. ಮಾರಾಟ ಮಳಿಗೆಗಳ ಮುಂದೆ ಪರಿಷ್ಕೃತ ದರ ಪಟ್ಟಿ ಪ್ರದರ್ಶಿಸಲಾಗುತ್ತದೆ. ಉತ್ಪನ್ನಗಳ ಮೇಲೆ ಈ ಹಿಂದಿನ ಎಂಆರ್‌ಪಿ ಇದ್ದರೂ, ಹೊಸ ದರದಲ್ಲಿಯೇ ಮಾರಾಟ ಮಾಡಲು ಸೂಚಿಸಲಾಗಿದೆ' ಎಂದು ಹೇಳಿದರು.

> ನಂದಿನಿ ಹಾಲಿನ ಉತ್ಪನ್ನಗಳಿಗೆ ಸೋಮವಾರದಿಂದಲೇ ಪರಿಷ್ಕೃತ ದರ ಅನ್ವಯ ಆಗುತ್ತದೆ. ಮಾರಾಟಗಾರರು ಕಡ್ಡಾಯವಾಗಿ ಪರಿಷ್ಕೃತ ದರಕ್ಕೆ ಮಾರಾಟ ಮಾಡಬೇಕು
>
> **ಬಿ. ಶಿವಸ್ವಾಮಿ,** ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ

ಯಾವೆಲ್ಲ ಉತ್ಪನ್ನಗಳ ದರ ಇಳಿಕೆ?

ಉತ್ಪನ್ನ	ಪ್ಯಾಕ್ ಸೈಜ್	ಹಳೆಯ ದರ (₹ ಗಳಲ್ಲಿ)	ಹೊಸ ದರ (₹ ಗಳಲ್ಲಿ)
ತುಪ್ಪ (ಪೌಚ್)	1 ಲೀ.	650	610
ಬೆಣ್ಣೆ–ಉಪ್ಪು ರಹಿತ	500 ಗ್ರಾಂ	305	286
ಪನೀರ್	1 ಕೆ.ಜಿ.	425	408
ಗುಡ್‌ಲೈಫ್ ಹಾಲು	1 ಲೀ.	70	68
ಚೀಸ್–ಮೊಝ್ಝರೆಲ್ಲಾ	1 ಕೆ.ಜಿ.	480	450
ಚೀಸ್–ಸಂಸ್ಕರಿಸಿದ	1 ಕೆ.ಜಿ.	530	497
ಐಸ್‌ಕ್ರೀಂಗಳು–ವೆನಿಲ್ಲಾ ಟಬ್	1 ಲೀ.	200	178
ಐಸ್‌ಕ್ರೀಂ ಫ್ಯಾಮಿಲಿ ಪ್ಯಾಕ್	5 ಲೀ.	645	574
ಐಸ್‌ಕ್ರೀಂ–ಚಾಕೊಲೇಟ್ ಸಂಡೆ	500 ಎಂ.ಎಲ್	115	102
ಐಸ್‌ಕ್ರೀಂ–ಮ್ಯಾಂಗೊ ನ್ಯಾಚುರಲ್ಸ್	100 ಎಂ.ಎಲ್	35	31
ಖಾರಾ ಉತ್ಪನ್ನಗಳು	180 ಗ್ರಾಂ	60	56
ಮಫಿನ್‌ಗಳು	150 ಗ್ರಾಂ	50	45
ಕೇಕ್‌ಗಳು	200 ಗ್ರಾಂ	110	98
ನಂದಿನಿ ನೀರು	1 ಲೀ.	20	18
ಪಾಯಸ ಮಿಶ್ರಣ	200 ಗ್ರಾಂ	90	80
ಜಾಮೂನ್ ಮಿಶ್ರಣ	200 ಗ್ರಾಂ	80	71
ಬಾದಾಮ್ ಹಾಲಿನ ಪುಡಿ	200 ಗ್ರಾಂ	120	107
ಕುಕೀಸ್	100 ಗ್ರಾಂ	35	31
ಸ್ಪ್ಲಾಶ್ ವೇ ಡ್ರಿಂಕ್ಸ್	200 ಎಂ.ಎಲ್	10	9.50
ರೈಸ್ ಕ್ರಿಪಿ ಮಿಲ್ಕ್ ಚಾಕೊ	80 ಗ್ರಾಂ	65	58

'ಚಿಲ್ಲರೆ ಮಾರಾಟಗಾರರು ಈಗಾಗಲೇ ಹಳೆಯ ದರದಲ್ಲಿ ಸಗಟು ಖರೀದಿ ಮಾಡಿದ್ದರೂ, ಹೊಸ ದರದಲ್ಲೇ ಗ್ರಾಹಕರಿಗೆ ಉತ್ಪನ್ನಗಳನ್ನು ನೀಡಬೇಕು. ವ್ಯತ್ಯಾಸದ ದರವನ್ನು ಜಿಎಸ್‌ಟಿ ಫೈಲ್ ಮಾಡುವಾಗ ಮಾರಾಟಗಾರರು ವಾಪಸ್ ಪಡೆದುಕೊಳ್ಳಬಹುದು' ಎಂದು ವಿವರಿಸಿದರು.

ಎಚ್–1ಬಿ ವೀಸಾ ಶುಲ್ಕ 1 ಲಕ್ಷ ಡಾಲರ್‌ಗೆ ಏರಿಕೆ

ಒಂದನೇ ಪುಟದಿಂದ...

'ಇತರ ದೇಶಗಳಿಂದ ಅಮೆರಿಕಕ್ಕೆ ಬರುವ ಜನರು ಅಧಿಕ ಕೌಶಲ ಉಳ್ಳವರಾಗಿರಬೇಕು ಹಾಗೂ ಈ ವೀಸಾ ಪಡೆದು ಬರುವವರಿಂದಾಗಿ ಸ್ಥಳೀಯರು ತಮ್ಮ ಉದ್ಯೋಗ ಕಳೆದುಕೊಳ್ಳುವುದಿಲ್ಲ ಎಂಬುದನ್ನು ಖಾತ್ರಿಪಡಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ' ಎಂದು ಟ್ರಂಪ್ ಆಡಳಿತ ಹೇಳಿದೆ.

ಟ್ರಂಪ್ ಅವರ ಈ ನಡೆಯು, ಉದ್ಯೋಗ ವೀಸಾ ಪಡೆದು ಅಮೆರಿಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತೀಯರು, ಅದರಲ್ಲೂ ವಿಶೇಷವಾಗಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ದುಡಿಯುತ್ತಿರುವವರ ಮೇಲೆ ಭಾರಿ ಪರಿಣಾಮ ಬೀರಲಿದೆ.

'ಎಚ್–1ಬಿ ವೀಸಾ ಸೌಲಭ್ಯದ ಪ್ರಯೋಜನ ಪಡೆಯಲು ಬಯಸುವ ಕಂಪನಿಗಳ ಮೇಲೆ ಅಧಿಕ ವೆಚ್ಚ ಹೇರುವುದು ಅಗತ್ಯವಾಗಿದೆ. ಈ ಮೂಲಕ, ಅವುಗಳು ಈ ವೀಸಾ ಸೌಲಭ್ಯ ದುರ್ಬಳಕೆ ಮಾಡದಂತೆ ತಡೆಯಬಹುದಾಗಿದೆ' ಎಂದು ಟ್ರಂಪ್ ಹೇಳಿದ್ದಾರೆ.

ಪ್ರಮುಖ ಅಂಶಗಳು

- 1 ಲಕ್ಷ ಡಾಲರ್ ಶುಲ್ಕ ಪಾವತಿಸದವರ ವೀಸಾ ಅರ್ಜಿಗಳನ್ನು ತಡೆ ಹಿಡಿಯುವ ಅಥವಾ ಅವರು ಅಮೆರಿಕ ಪ್ರವೇಶಿಸುವುದನ್ನು ನಿರ್ಬಂಧಿಸುವ ಕುರಿತು ನಿರ್ಧರಿಸುವ ಅಧಿಕಾರವನ್ನು ಆಂತರಿಕ ಭದ್ರತಾ ಕಾರ್ಯದರ್ಶಿಗೆ ನೀಡಿ ಟ್ರಂಪ್ ಆದೇಶ
- ವೀಸಾ ಶುಲ್ಕ ಹೆಚ್ಚಿಸಿ ಹೊರಡಿಸಿರುವ ಆದೇಶವನ್ನು ಅನುಷ್ಠಾನಗೊಳಿಸುವ ವಿಚಾರವಾಗಿ ಆಂತರಿಕ ಭದ್ರತಾ ಇಲಾಖೆ ಮತ್ತು ವಿದೇಶಾಂಗ ಇಲಾಖೆ ಸಮನ್ವಯದಿಂದ ಕೆಲಸ ಮಾಡಬೇಕು
- ತಾನು ನೇಮಕ ಮಾಡಿಕೊಂಡಿರುವ ಉದ್ಯೋಗಿಯ ವೀಸಾ ಅರ್ಜಿಗೆ ಸಂಬಂಧಿಸಿದ ಶುಲ್ಕವನ್ನು ಉದ್ಯೋಗದಾತ ಕಂಪನಿ ಪಾವತಿ ಮಾಡಿರದಿದ್ದಲ್ಲಿ, ಅಂತಹ ವ್ಯಕ್ತಿಗಳು ಅಮೆರಿಕ ಪ್ರವೇಶಿಸುವುದನ್ನು ಈ ಎರಡು ಇಲಾಖೆಗಳು ನಿರ್ಬಂಧಿಸಬೇಕು. ಸೆಪ್ಟೆಂಬರ್ 21ರ ನಂತರ ಅಮೆರಿಕ ಪ್ರವೇಶಿಸುವ ಅಥವಾ ಪ್ರವೇಶಿಸಲು ಯತ್ನಿಸುವ ವ್ಯಕ್ತಿಗಳಿಗೆ ಈ ನಿರ್ಬಂಧಗಳು ಅನ್ವಯ
- ಮುಂದಿನ ವರ್ಷ ಅಕ್ಟೋಬರ್ 1ಕ್ಕಿಂತ ಮೊದಲು ಅಮೆರಿಕದಲ್ಲಿ ಉದ್ಯೋಗ ಕೈಗೊಳ್ಳಲಿರುವ ಹಾಗೂ ತಮ್ಮ ಎಚ್–1ಬಿ ವೀಸಾ ಅರ್ಜಿಗೆ ಅನುಮೋದನೆ ಪಡೆದವರು ಈ ಸೌಲಭ್ಯದ ದುರ್ಬಳಕೆ ಮಾಡದಂತೆ ನೋಡಿಕೊಳ್ಳಬೇಕು. ಇದಕ್ಕಾಗಿ ವಿದೇಶಾಂಗ ಇಲಾಖೆಯು ಸೂಕ್ತ ಮಾರ್ಗದರ್ಶನ ನೀಡಬೇಕು
- ಅಮೆರಿಕದ ರಾಷ್ಟ್ರೀಯ ಭದ್ರತೆ ಅಥವಾ ಅಭಿವೃದ್ಧಿಗೆ ಬೆದರಿಕೆ ಒಡ್ಡದ ಹಾಗೂ ದೇಶದ ಹಿತಾಸಕ್ತಿ ದೃಷ್ಟಿಯಲ್ಲಿಟ್ಟುಕೊಂಡು ನೇಮಕಗೊಂಡಿರುವ ವ್ಯಕ್ತಿಗಳು ಎಚ್-1ಬಿ ವೀಸಾ ಪಡೆದಿದ್ದಲ್ಲಿ ಅವರಿಗೆ ಆಂತರಿಕ ಭದ್ರತಾ ಇಲಾಖೆ ವಿಧಿಸುವ ನಿರ್ಬಂಧಗಳಿಂದ ವಿನಾಯಿತಿ ಇರಲಿದೆ

ಮೋದಿ ದುರ್ಬಲ ಪ್ರಧಾನಿ: ಕಾಂಗ್ರೆಸ್ ಟೀಕೆ

ಡೊನಾಲ್ಡ್ ಟ್ರಂಪ್ ನೇತೃತ್ವದ ಸರ್ಕಾರವು ಎಚ್–1ಬಿ ವೀಸಾ ಅರ್ಜಿಯ ವಾರ್ಷಿಕ ಶುಲ್ಕವನ್ನು 1 ಲಕ್ಷ ಡಾಲರ್‌ಗೆ ಹೆಚ್ಚಳ ಮಾಡಿರುವ ವಿಚಾರ ಮುಂದಿಟ್ಟುಕೊಂಡು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ಪಕ್ಷ ಶನಿವಾರ ವಾಗ್ದಾಳಿ ನಡೆಸಿದೆ.

'ಮೋದಿ ದುರ್ಬಲ ಪ್ರಧಾನಿ. ಅವರ ಉದ್ದೇಶಪೂರ್ವಕ ಮೌನ ಹಾಗೂ ತೋರಿಕೆಯ ನಡೆಗಳು ದೇಶಕ್ಕೆ ಹೊರೆಯಾಗಿ ಪರಿಣಮಿಸಿವೆ' ಎಂದು ಲೋಕಸಭೆಯಲ್ಲಿ ಕಾಂಗ್ರೆಸ್‌ನ ಉಪ ನಾಯಕ ಗೌರವ್ ಗೊಗೋಯಿ ಟೀಕಿಸಿದ್ದಾರೆ. 'ಎಚ್–1ಬಿ ವೀಸಾ ಶುಲ್ಕ ಹೆಚ್ಚಳದಂತಹ ಕ್ರಮದ ಮೂಲಕ ಅಮೆರಿಕ ಸರ್ಕಾರವು ಭಾರತದ ಪ್ರತಿಭಾವಂತರ ಭವಿಷ್ಯಕ್ಕೆ ಕೊಳ್ಳಿ ಇಟ್ಟಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ತಕ್ಷಣವೇ ಅಮೆರಿಕಕ್ಕೆ ಮರಳಿ..'

'ಉದ್ಯೋಗಿಗಳು ತಕ್ಷಣವೇ ಅಮೆರಿಕ್ಕೆ ಮರಳಬೇಕು ಇಲ್ಲದಿದ್ದರೆ, ನೀವು ತೆರಳಿರುವ ದೇಶಗಳಲ್ಲಿಯೇ ಸಿಕ್ಕಿಹಾಕಿಕೊಳ್ಳುವ ಅಪಾಯ ಕಟ್ಟಿಟ್ಟಬುತ್ತಿ' ಎಂದು ಅಮೆರಿಕದ ಹಲವು ಕಂಪನಿಗಳು ಹಾಗೂ ವಲಸೆಗೆ ಸಂಬಂಧಿಸಿದ ಅಟಾರ್ನಿಗಳು ಎಚ್ಚರಿಸಿದ್ದಾರೆ. ಅಲ್ಲದೆ, ಎಚ್-1ಬಿ ವೀಸಾ ಹೊಂದಿರುವವರು ಅಮೆರಿಕದಿಂದ ಹೊರಹೋಗಬಾರದು ಎಂದೂ ಸಲಹೆ ನೀಡಿದ್ದಾರೆ.

'ವ್ಯವಹಾರ ಸಂಬಂಧಿ ಕೆಲಸ ಅಥವಾ ರಜೆಗಾಗಿ ಅಮೆರಿಕದಿಂದ ಹೊರಗೆ ಹೋಗಿರುವ ಎಚ್-1ಬಿ ವೀಸಾ ಹೊಂದಿರುವವರು ಸೆಪ್ಟೆಂಬರ್ 21ರ ಮಧ್ಯರಾತ್ರಿ ಒಳಗಾಗಿ ಮರಳದಿದ್ದರೆ, ತಾವು ಹೋಗಿರುವ ಸ್ಥಳದಲ್ಲಿಯೇ ಇರಬೇಕಾಗಬಹುದು' ಎಂದು ನ್ಯೂಯಾರ್ಕ್ ಮೂಲದ ವಲಸೆ ಅಟಾರ್ನಿ ಸೈರಸ್ ಮೆಹ್ತಾ ಹೇಳಿದ್ದಾರೆ. 'ಭಾರತದಲ್ಲಿರುವವರು (ಎಚ್-1ಬಿ ವೀಸಾ ಹೊಂದಿರುವವರು) ಸೆ. 21ರ ಮಧ್ಯ ರಾತ್ರಿ ಒಳಗಾಗಿ ಕ್ಯಾಲಿಫೋರ್ನಿಯಾ ತಲುಪುವುದಕ್ಕೆ ಈಗಲೂ ಅವಕಾಶ ಇದೆ' ಎಂದೂ ಅವರು ಹೇಳಿದ್ದಾರೆ.

ಉದ್ಯೋಗಿಗಳಿಗೆ ಮೈಕ್ರೊಸಾಫ್ಟ್ ಸೂಚನೆ

ಎಚ್-1ಬಿ ವೀಸಾ ಹೊಂದಿರುವವರು ಹಾಗೂ ಅವರ ಅವಲಂಬಿತರು ಅಮೆರಿಕದಿಂದ ಹೊರಗೆ ಹೋಗಬಾರದು. ತಮ್ಮ ಸ್ವಂತ ಅಥವಾ ಬೇರೆ ದೇಶಗಳಿಗೆ ಹೋಗಿರುವವರು ಸೆಪ್ಟೆಂಬರ್ 21ರ ಒಳಗಾಗಿ ಅಮೆರಿಕಕ್ಕೆ ಮರಳಬೇಕು ಎಂದು ಮೈಕ್ರೊಸಾಫ್ಟ್ ಕಂಪನಿಯು ಸಂಬಂಧಪಟ್ಟ ಉದ್ಯೋಗಿಗಳಿಗೆ ಇ–ಮೇಲ್ ಕಳುಹಿಸಿ, ಸೂಚನೆ ನೀಡಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ

Travel

★ಶ್ರೀಶ್ರೇಯಸ್ ಟೂರ್ಸ್★ 04.10.2025 10ದಿನಗಳು ಅಖಂಡ ಆಂಧ್ರತೆಲಂಗಾಣ ರಾಜ್ಯ ಪ್ರವಾಸ.03.10.2025 12ದಿನಗಳು ಅಖಂಡ ಮಹಾರಾಷ್ಟ್ರ (ಮುಂಬಯಿ ಅಷ್ಟವಿನಾಯಕ,ಶಿರಡಿ ಜ್ಯೋತಿರ್ಲಿಂಗ).23.10.2025 6ದಿನಗಳು ಒರಿಸ್ಸಾ,ಕಲ್ಕತ್ತಾ ಪ್ರವಾಸ.25.10.2025 10 ದಿನಗಳು ಅಖಂಡ ರಾಜಸ್ಥಾನ ಪ್ರವಾಸ.25.10.2025 21.11.2025 12/15/21ದಿನಗಳು ಈಶಾನ್ಯ ರಾಜ್ಯಗಳ (ಸೆವೆನ್ ಸಿಸ್ಟರ್ಸ್) ಅಸ್ಸಾಂ,ಅರುಣಾಚಲ ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ. 25.09.2025 10,24.10.2025 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಪೂಂಚಲಿಂಗ್. 8073824856 9206979202, 9035598467

03.10.2025 ಗುರುವಾಯುರು, ಕೊಚ್ಚಿನ್,ಅಲಪೇ, ತಿರುವನಂತಪುರ, ಕನ್ಯಾಕುಮಾರಿ, ರಾಮೇಶ್ವರಂ. 03.10.2025 ಬೈದ್ಯನಾಥ್, ಗಯಾ,ಕಾಶಿ, ಅಯೋಧ್ಯಾ, ಪ್ರಯಾಗ್‌ರಾಜ್. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ). 9845035349, 9482435755.

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 16.12.2025 ರಿಂದ 7ದಿನಗಳು ಶಿರಡಿ ಪಂಡರಾಪುರ ಶನಿಸಿಂಗಾಪುರ ನಾಸಿಕ್ ಪಂಚವಟಿ ಕೊಲ್ಲಾಪುರ ಎಲ್ಲೋರ 4 ಜ್ಯೋತಿರ್ಲಿಂಗಗಳು. 9448390735, 9449721678

09.10.2025 ಗುಜರಾತ್ ಎರಡು ಜ್ಯೋತಿರ್ಲಿಂಗ: 10.10.25 ಮಧ್ಯಪ್ರದೇಶ ಗುಜರಾತ್ ನಾಲ್ಕು ಜ್ಯೋತಿರ್ಲಿಂಗ: 17.10.25 ಶ್ರೀಶೈಲ ಹೈದರಾಬಾದ್ ಮಂತ್ರಾಲಯ: 27/10/25 ನೇಪಾಳ ಕಾಶಿ: 7.11.25 ಕಾಶಿ ಅಯೋಧ್ಯೆ ಗಯ: 12.11.25 ರಾಜಸ್ಥಾನ: 29.11.25 ಪುರಿ ಜಗನ್ನಾಥ ವೈದ್ಯನಾಥ: ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ; 8496044942/ 8277409101

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರ ಪ್ರಕಟಣೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದನೆಂದರೇ, ನನ್ನ ಕಕ್ಷಿದಾರರಾದ ಶ್ರೀ ಕೆ.ಎಸ್. ಸುರೇಶ್ S/o ಕೆ.ಪಿ. ಶಿವಲಿಂಗಪ್ಪ, ಕಂಗುವಳ್ಳಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರು ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿಯಮಿತ, ಹೊಸದುರ್ಗ ರವರ ಮೇಲೆ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು W.P FR No. 29151/2025, ಮತ್ತು 29154/2025 ದಾವೆ ದಾಖಲಿಸಲಾಗಿರುತ್ತದೆ. ಆದ ಕಾರಣ ಸರ್ವೆ ನಂ.6, ಖಾತೆ ನಂ. 2084/1022/6, ಇ–ಖಾತಾ ನಂ. 150200100600400708 ಲಕ್ಕಿ ಸಾಗರ ಹಳ್ಳಿ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಮತ್ತು ಹೊಸದುರ್ಗ ಟೌನ್ ಇಂಡಸ್ಟ್ರಿಯಲ್ ಎಸ್ಟೇಟ್ ಅಜ್ಜಂಪುರ ರಸ್ತೆ ಬಡಾವಣೆಯ ಸ್ವತ್ತಿನ ಸಂಖ್ಯೆ: 67/67 ಎಸ್ ಪಿ ನಂ. 10 ಹೊಸದುರ್ಗ. ಟೌನ್ ಮುನ್ಸಿಪಾಲಿಟಿ ಇ–ಸ್ವತ್ತಿನ ಸಂಖ್ಯೆ 26–04–9055 ಇದರಲ್ಲಿ ವಿಸ್ತೀರ್ಣ ಪೂರ್ವ–ಪಶ್ಚಿಮ: 18.60 + 17.75/2 ಮೀ., ಉತ್ತರ–ದಕ್ಷಿಣ: 21.00 ಮೀ.ಗಳು ಒಟ್ಟು 381.67 ಚದುರ ಅಡಿಗಳುಳ್ಳ ಸ್ವತ್ತು ಆಗಿರುತ್ತದೆ. ಆದ ಕಾರಣ ಸಾರ್ವಜನಿಕರು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದಲ್ಲಿ ತಾವೇ ಹೊಣೆಗಾರರಾಗಿರುತ್ತಾರೆ. ತಿಳಿದಿರಲಿ,
ಸಹಿ/- ಸಿ.ಎನ್. ಶ್ರೀನಿವಾಸರಾವ್
ವಕೀಲರು, ವಿಜಯ ಸಾರಥಿ ಲಾ ಫಾರ್ಮ್, ಮಲ್ಲೇಶ್ವರಂ, ಬೆಂಗಳೂರು

PUBLIC NOTICE
To Place your Classified Ads Contact
9731810277

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Receptionist/ Secretary

ಬೇಕಾಗಿದ್ದಾರೆ: ಕೆ.ಹೆಚ್.ಡಬಲ್ ರೋಡ್ ನಲ್ಲಿರುವ ಪ್ರತಿಷ್ಠಿತ ಹೋಟೆಲ್ ವೊಂದರಲ್ಲಿ ರಾತ್ರಿ ಕರ್ತವ್ಯಕ್ಕೆ ಪುರುಷ ರಿಸೆಪ್ಷನಿಸ್ಟ ಬೇಕಾಗಿದ್ದಾರೆ. ಸಂಬಳ: 13000/-ಸಂಪರ್ಕಿಸಿ: 9008488555

Teachers/ Professors

TEACHER REQUIRED for English, Science and Maths for High school contact Kenmore school Basavanagudi or whatsapp 9901501185

Wanted

ಉಡುಪಿಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ವೆಜ್ ಹೋಟೇಲಿಗೆ ತಿಂಡಿಯವರು, ವೆರೈಟಿ ದೋಸೆಯವರು, ಜ್ಯೂಸ್, ವೈಟರ್ಸ್, ಚಾಟ್ಸ್ ನವರು ಬೇಕಾಗಿದ್ದಾರೆ. 8088435459

WEEKEND CORNER

ಪ್ರಾಚೀನ ಗಾಂಧಾರಿ ಯೋಗ ವಿದ್ಯೆ
ಬೌದ್ಧಿಕ, ಮಾನಸಿಕ ಹಾಗೂ ಜ್ಞಾಪಕಶಕ್ತಿ ವೃದ್ಧಿಗಾಗಿ
7 ರಿಂದ 20 ವರ್ಷ ಒಳಗಿನ ಮಕ್ಕಳಿಗೆ ಮಾತ್ರ ತರಬೇತಿ. ಕೇವಲ 10 ದಿನಗಳು. ಈ ವಿದ್ಯೆ ಕಲಿತ ಮಕ್ಕಳು ಕಣ್ಣುಗಳಿಗೆ ಬಟ್ಟೆ ಕಟ್ಟಿಕೊಂಡು ಪುಸ್ತಕ ಓದುತ್ತಾರೆ, ಬಣ್ಣಗಳನ್ನು ಗುರುತಿಸುತ್ತಾರೆ, ಸೈಕಲ್ ತುಳಿಯುತ್ತಾರೆ, ಬೈಕ್ ಓಡಿಸುತ್ತಾರೆ, ಡ್ರಾಯಿಂಗ್ ಮತ್ತು ಶಾಲೆ ಹೋಂವರ್ಕ್ ಮಾಡುತ್ತಾರೆ, ಬಚ್ಚಿಟ್ಟ ವಸ್ತು- ವ್ಯಕ್ತಿಗಳನ್ನು ಪತ್ತೆ ಮಾಡುತ್ತಾರೆ. ವ್ಯಕ್ತಿಯ ಮನಸ್ಸನ್ನು ಅಧ್ಯಯನ ಮಾಡುತ್ತಾರೆ. ಹೀಗೆ ಅನೇಕ ಇವೆ. ಈ ವಿದ್ಯೆ ಕಲಿತವರ ಚಮತ್ಕಾರಗಳು ನೋಡುಗರನ್ನು ಮೂಕವಿಸ್ಮಿತರಾಗಿಸಿದರೂ ನಿಜ. ಈ ತರಬೇತಿ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಯೋಗ, ಪ್ರಾಣಾಯಾಮ, ಧ್ಯಾನ ಮತ್ತು ಇತರೆ ಚಟುವಟಿಕೆಗಳ ಮೂಲಕ ಮಕ್ಕಳ ಬೌದ್ಧಿಕ, ಮಾನಸಿಕ ಹಾಗೂ ಜ್ಞಾಪಕಶಕ್ತಿ ವೃದ್ಧಿಗಾಗಿ ಈ ತರಬೇತಿ.
ಊಟ ಮತ್ತು ವಸತಿಯುತ ಕಾರ್ಯಕ್ರಮ
ಆಶ್ರಮದಲ್ಲಿ ಮಾತ್ರ- No Branches
ತರಬೇತಿ ಆರಂಭದ ದಿನಾಂಕ:
28/09/2025 ರಿಂದ 07/10/2025
Can join on 28th or 29th Sept. 2025
ಗಾಂಧಾರಿ ಯೋಗ ವಿದ್ಯೆಯ ಮಕ್ಕಳ ಪ್ರಾತ್ಯಕ್ಷಿಕೆ ಗಾಗಿ
Ananda Yoga Pranayama Trust ನ ಯೂಟ್ಯೂಬ್ ವೀಕ್ಷಿಸಿ

ಪೂಜ್ಯ ಶ್ರೀ ಮಂಜುನಾಥ ಗುರೂಜಿ
ಆನಂದ ಯೋಗಾಶ್ರಮ (ರಿ.)
ಜೋಗಿಸರದ ಹತ್ತಿರ, ಉಜ್ಜಿನ ರಸ್ತೆ, ಕೊಟ್ಟೂರು ವಿಜಯನಗರ ಜಿಲ್ಲೆ 583134
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಪೂಜ್ಯ ಶ್ರೀ ಮಂಜುನಾಥ ಗುರೂಜಿ
9900603013/9663921094

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

Nandini Layout

INDUSTRIAL BUILDING Yeshwantpur Truck terminal buildup area 3600sqft carpet area 1416sqft for sale Contact 9483400249

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭಾರತಕ್ಕೆ ಮತ್ತೊಂದು 'ಮೇಲುಗೈ' ಕನಸು

ಏಷ್ಯಾ ಕಪ್ ಕ್ರಿಕೆಟ್ ಸೂಪರ್ ಫೋರ್: ಸೂರ್ಯ ಬಳಗಕ್ಕೆ ಪಾಕ್ ಸವಾಲು ಇಂದು

ದುಬೈ (ಪಿಟಿಐ): ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡವು 'ಸ್ಪಿನ್ ತ್ರಿವಳಿ'ಯ ಮೇಲೆ ಹೆಚ್ಚು ಅವಲಂಬಿತವಾಗಿದೆ.

ಭಾನುವಾರ ಇಲ್ಲಿ ನಡೆಯಲಿರುವ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ವಿಭಾಗದ ಪಂದ್ಯದಲ್ಲಿ ಭಾರತ ತಂಡವು ತನ್ನ 'ಬದ್ಧ ಪ್ರತಿಸ್ಪರ್ಧಿ' ಪಾಕಿಸ್ತಾನ ತಂಡವನ್ನು ಎದುರಿಸಲಿದೆ. ಈ ಟೂರ್ನಿಯಲ್ಲಿ ಉಭಯ ತಂಡಗಳು ಮುಖಾಮುಖಿಯಾಗುತ್ತಿರುವ ಎರಡನೇ ಪಂದ್ಯ ಇದಾಗಿದೆ.

ಪಾಕ್ ತಂಡದ ನಾಯಕ ಸಲ್ಮಾನ್ ಆಘಾ

ಹೋದವಾರ ನಡೆದಿದ್ದ ಗುಂಪು ಹಂತದ ಪಂದ್ಯದಲ್ಲಿ ಭಾರತದ ಆಟಗಾರರು ಪಾಕ್ ತಂಡದವರ ಕೈಕುಲುಕದೇ ಇದ್ದದ್ದು ವಿವಾದಕ್ಕೆ ಕಾರಣವಾಗಿತ್ತು. ಅದೇ 'ನೀತಿ'ಯನ್ನು ಸೂರ್ಯ ಬಳಗವು ಭಾನುವಾರದ ಪಂದ್ಯದಲ್ಲಿಯೂ ಮುಂದುವರಿಸುವ ಸಾಧ್ಯತೆ ಇದೆ. ಇನ್ನೊಂದೆಡೆ ಪಾಕಿಸ್ತಾನದ ಆಟಗಾರರು ಮತ್ತು ಅಭಿಮಾನಿಗಳಿಗೆ ಇದು 'ಮುಯ್ಯಿ ತೀರಿಸಿಕೊಳ್ಳುವ ಪಂದ್ಯ'ಆಗಿದೆ.

ಈ ಟೂರ್ನಿಯಲ್ಲಿ ಸೂರ್ಯ ಅವರು ಶ್ರೇಷ್ಠ ಬ್ಯಾಟರ್ ಆಗಿದ್ದಾರೆ. ತಾಂತ್ರಿಕ ಕೌಶಲದಲ್ಲಿ ಅಸಾಧಾರಣ ಪ್ರತಿಭಾನ್ವಿತರು ಮತ್ತು ದೇಶದ ರಾಯಭಾರಿಯೂ ಆಗಿರುವ ಅವರ ನಾಯಕತ್ವದಲ್ಲಿ ತಂಡವು ಗುಂಪು ಹಂತದಲ್ಲಿ ಪಾಕ್ ಎದುರು 7 ವಿಕೆಟ್‌ಗಳಿಂದ ಗೆದ್ದಿತ್ತು.

ಏಷ್ಯಾ ಕಪ್ 2025

ಒಮಾನ್ ಎದುರಿನ ಪಂದ್ಯದಲ್ಲಿ ಕ್ಯಾಚ್ ಪಡೆಯುವ ಪ್ರಯತ್ನದಲ್ಲಿ ಅಕ್ಷರ್ ಪಟೇಲ್ ಅವರ ತಲೆಗೆ ಚೆಂಡು ಬಿದ್ದು ಗಾಯವಾಗಿದೆ. ಅವರು ಫಿಟ್ ಆಗಿ ಈ ಪಂದ್ಯಕ್ಕೆ ಮರಳುವರೋ ಇಲ್ಲವೋ ಎಂಬ ಆತಂಕದಲ್ಲಿ ಮುಖ್ಯ ಕೋಚ್ ಗೌತಮ್ ಗಂಭೀರ್ ಇದ್ದಾರೆ. ಆದರೆ ಫೀಲ್ಡಿಂಗ್ ಕೋಚ್ ಟಿ. ದಿಲೀಪ್ ಅವರ ಪ್ರಕಾರ; ಆಲ್‌ರೌಂಡರ್ ಅಕ್ಷರ್ ಚೇತರಿಸಿಕೊಳ್ಳುತ್ತಿದ್ದಾರೆ. ಒಂದೊಮ್ಮೆ ಅಕ್ಷರ್ ಆಡಲು ಸಮರ್ಥರಾಗದಿದ್ದರೆ ವಾಷಿಂಗ್ಟನ್ ಸುಂದರ್ ಅಥವಾ ರಿಯಾನ್ ಪರಾಗ್ ಅವರಲ್ಲೊಬ್ಬರಿಗೆ ಅವಕಾಶ ಸಿಗಲಿದೆ.

ಪಾಕ್ ಎದುರಿನ ಪಂದ್ಯಕ್ಕೂ ಮುನ್ನ ಸೂರ್ಯ ಅವರು ತಮ್ಮ ತಂಡದ ಬೌಲರ್‌ಗಳ ಸಾಮರ್ಥ್ಯವನ್ನು ಪರೀಕ್ಷೆಗೊಡ್ಡಿದರು. ಶುಕ್ರವಾರ ಒಮಾನ್ ವಿರುದ್ಧದ ಪಂದ್ಯದಲ್ಲಿ ಹರ್ಷಿತ್ ರಾಣಾ ಮತ್ತು ಅರ್ಷದೀಪ್ ಸಿಂಗ್ ಅವರನ್ನು ಬ್ಯಾಟರ್‌ಗಳು ಲೀಲಾಜಾಲವಾಗಿ ಆಡಿದರು. ಒಮಾನ್ ತಂಡದಲ್ಲಿ ಆಡುವ ಪಾಕ್ ಮೂಲದವರು ಹಾಗೂ 43 ವರ್ಷದ ಅಮೀರ್ ಖಲೀಂ ಮತ್ತು ಹಮದ್ ಮಿರ್ಜಾ ಅವರು ರಾಣಾ ಮತ್ತು ಸಿಂಗ್ ಅವರಿಗೆ ಬಿಸಿ ಮುಟ್ಟಿಸಿದರು.

ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಎಎಫ್‌ಪಿ ಚಿತ್ರಗಳು

ಭಾನುವಾರ ಜಸ್‌ಪ್ರೀತ್ ಬೂಮ್ರಾ ಅವರು ಕಣಕ್ಕಿಳಿಯಲಿರುವುದು ಸಮಾಧಾನದ ಸಂಗತಿ. ಇದು ತಂಡದಲ್ಲಿ ಆತ್ಮವಿಶ್ವಾಸ ಹೆಚ್ಚಿಸಿದೆ. ವರುಣ್ ಚಕ್ರವರ್ತಿ, ಕುಲದೀಪ್ ಯಾದವ್ ಅವರು ತಮ್ಮ ಯಶಸ್ವಿನ ಓಟ ಮುಂದುವರಿಸಿದರೆ ಪಾಕ್ ತಂಡಕ್ಕೆ ಹಾದಿ ಕಠಿಣವಾಗಲಿದೆ.

ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಅವರು ತಮ್ಮ ಸ್ಫೋಟಕ ಬ್ಯಾಟಿಂಗ್ ಮುಂದುವರಿಸಿದರೆ ಹಾಗೂ ಅವರಿಗೆ ಶುಭಮನ್ ಗಿಲ್ ಕೂಡ ಜೊತೆಯಾದರೆ ಇನಿಂಗ್ಸ್‌ಗೆ ಗಟ್ಟಿ ಅಡಿಪಾಯ ಸಾಧ್ಯವಿದೆ. ಸೂರ್ಯಕುಮಾರ್, ಸಂಜು ಸ್ಯಾಮ್ಸನ್, ಶಿವಂ ದುಬೆ, ಹಾರ್ದಿಕ್ ಪಾಂಡ್ಯ ಅವರು ಮಧ್ಯಮ ಕ್ರಮಾಂಕದಲ್ಲಿ ರನ್‌ಗಳನ್ನು ಹರಿಸಬಲ್ಲರು.

ಆದರೆ ಪಾಕ್ ತಂಡ ಸಮತೋಲಿತವಾಗಿಲ್ಲ. ದಶಕಗಳ ಹಿಂದೆ ಜಾವೆದ್ ಮಿಯಾಂದಾದ್, ಇಂಜಾಮಾಮ್ ಉಲ್ ಹಕ್, ಸಲೀಮ್ ಮಲಿಕ್ ಮತ್ತು ಇಜಾಜ್ ಅಹಮದ್ ಅವರಂತಹ ಖ್ಯಾತನಾಮರು ಆಡಿದ ತಂಡದಲ್ಲಿರುವ ಇಂದಿನ ಬಹುತೇಕ ಆಟಗಾರರಲ್ಲಿ ತಾಂತ್ರಿಕ ಕೌಶಲದ ಕೊರತೆ ಎದ್ದು ಕಾಣುತ್ತಿದೆ. ಆರಂಭಿಕ ಬ್ಯಾಟರ್ ಸೈಮ್ ಅಯೂಬ್ ಅವರು ಕಳೆದ ಎರಡೂ ಪಂದ್ಯಗಳಲ್ಲಿ ಶೂನ್ಯ ಸುತ್ತಿದ್ದಾರೆ. ಸಾಹಿಬ್‌ಝಾದಾ ಫರ್ಹಾನ್, ಹಸನ್ ನವಾಜ್ ಅವರು ಲಯಕ್ಕೆ ಮರಳುವ ಪ್ರಯತ್ನದಲ್ಲಿದ್ದಾರೆ.

ಅನುಭವಿಗಳಾದ ಫಕಾರ್ ಜಮಾನ್ ಮತ್ತು ಶಾಹೀನ್ ಅಫ್ರಿದಿ ಅವರ ಮೇಲೆ ತಂಡಕ್ಕೆ ಹೆಚ್ಚಿನ ನಿರೀಕ್ಷೆ ಇದೆ.

ಪಂದ್ಯ ಆರಂಭ: ರಾತ್ರಿ 8
ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ಟೆನ್ 1 ಮತ್ತು ಟೆನ್ 5.

ಪಂದ್ಯಕ್ಕೆ ಪೈಕ್ರಾಫ್ಟ್ ರೆಫರಿ

ದುಬೈ (ಪಿಟಿಐ): ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರ ನಡೆಯಲಿರುವ ಭಾರತ ಮತ್ತು ಪಾಕಿಸ್ತಾನ ನಡುವಣ ಸೂಪರ್ ಫೋರ್ ಪಂದ್ಯದಲ್ಲಿ ಆ್ಯಂಡಿ ಪೈಕ್ರಾಫ್ಟ್ ಪಂದ್ಯ ರೆಫರಿಯಾಗಿ ಕಾರ್ಯನಿರ್ವಹಿಸುವರು.

ಹೋದ ಭಾನುವಾರ ಇದೇ ಟೂರ್ನಿಯಲ್ಲಿ ಭಾರತ ಮತ್ತು ಪಾಕ್ ನಡುವಣ ನಡೆದಿದ್ದ ಗುಂಪು ಹಂತದ ಪಂದ್ಯದಲ್ಲಿಯೂ ಜಿಂಬಾಬ್ವೆಯ ಪೈಕ್ರಾಫ್ಟ್ ಅವರು ರೆಫರಿಯಾಗಿದ್ದರು. ಆ ಪಂದ್ಯದ ಮುಕ್ತಾಯದ ನಂತರ ಮತ್ತು ಟಾಸ್ ಸಂದರ್ಭಗಳಲ್ಲಿ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಬಳಗವು ಪಾಕ್ ಆಟಗಾರರೊಂದಿಗೆ ಹಸ್ತಲಾಘವ ಮಾಡಿರಲಿಲ್ಲ. ಇದು ವ್ಯಾಪಕ ಚರ್ಚೆಗೆ ಕಾರಣವಾಗಿತ್ತು.

ಪೈಕ್ರಾಫ್ಟ್ ಅವರ ಮೇಲೆ ಕ್ರಮಕೈಗೊಂಡು ಅಮಾನತುಗೊಳಿಸಬೇಕು ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಐಸಿಸಿಗೆ ಇಮೇಲ್ ಮೂಲಕ ಎರಡು ಬಾರಿ ದೂರು ನೀಡಿತ್ತು. ಆದರೆ ಈ ದೂರುಗಳನ್ನು ತಳ್ಳಿಹಾಕಿದ್ದ ಐಸಿಸಿಯು ಪೈಕ್ರಾಫ್ಟ್ ಬೆಂಬಲಕ್ಕೆ ನಿಂತಿತ್ತು.

ರನ್‌ಗಳ ಹೊಳೆಯಲ್ಲಿ ಸರಣಿ ಜಯಿಸಿದ ಆಸ್ಟ್ರೇಲಿಯಾ
ಮೂನಿ, ಮಂದಾನ ಸಿಡಿಲಬ್ಬರ

ನವದೆಹಲಿ (ಪಿಟಿಐ): ಸ್ಮೃತಿ ಮಂದಾನ ಅವರು ಸಿಡಿಲಬ್ಬರದ ಬ್ಯಾಟಿಂಗ್ ಮೂಲಕ ಹಾಕಿದ ಬುನಾದಿಯ ಮೇಲೆ 'ಐತಿಹಾಸಿಕ' ಗೆಲುವಿನ ಸೌಧ ಕಟ್ಟುವ ದೀಪ್ತಿ ಶರ್ಮಾ ಅವರ ದಿಟ್ಟ ಪ್ರಯತ್ನ ಕೈಗೂಡಲಿಲ್ಲ.

ಒಟ್ಟು 781 ರನ್‌ಗಳ ಪ್ರವಾಹದಲ್ಲಿ ಆಸ್ಟ್ರೇಲಿಯಾ ತಂಡವು ಭಾರತದ ಎದುರು 43 ರನ್‌ಗಳಿಂದ ಗೆದ್ದಿತು. ಸರಣಿಯನ್ನು 2–1ರಿಂದ ತನ್ನದಾಗಿಸಿಕೊಂಡಿತು. ಇದರೊಂದಿಗೆ ಭಾರತವು ಇದೇ ಮೊದಲ ಬಾರಿಗೆ ಆಸ್ಟ್ರೇಲಿಯಾ ಎದುರು ಏಕದಿನ ಕ್ರಿಕೆಟ್ ಸರಣಿ ಗೆದ್ದು ದಾಖಲೆ ಬರೆಯುವ ಕನಸು ಕಮರಿತು. ಬೆತ್ ಮೂನಿ (138; 75ಎ, 4X23, 6X1)) ಅವರ ಮಿಂಚಿನ ಶತಕದ ಬಲದಿಂದ ಆಸ್ಟ್ರೇಲಿಯಾ ಗಳಿಸಿದ್ದ 412 ರನ್‌ಗಳ ಬೃಹತ್ ಮೊತ್ತವನ್ನು ಬೆನ್ನತ್ತಿದ ತಂಡವು ವಿಚಲಿತರಾಗದಂತೆ ಆಡಿದ್ದು ಅಭಿಮಾನಿಗಳ ಮನಗೆದ್ದಿತು.

ಆರಂಭಿಕ ಬ್ಯಾಟರ್ ಮಂದಾನ (125; 63ಎ, 4X17, 6X5) ಅವರ ಬೀಸಾಟ ರಂಗೇರಿತು. ಅವರು ಕೇವಲ 50 ಎಸೆತಗಳಲ್ಲಿ ಶತಕದ ಗಡಿ ದಾಟುವ ಮೂಲಕ ಏಕದಿನ ಕ್ರಿಕೆಟ್‌ನಲ್ಲಿ ಅತಿ ವೇಗದ ಶತಕ ಗಳಿಸಿದ ಎರಡನೇ ಬ್ಯಾಟರ್ ಆದರು. ಮಂದಾನ ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ (52; 35ಎ, 4X8) ಅವರಿಬ್ಬರೂ 109 ರನ್ ಸೇರಿಸಿದರು. ಇದರಿಂದಾಗಿ ಕೇವಲ 20 ಓವರ್‌ಗಳಲ್ಲಿ ತಂಡದ ಮೊತ್ತವು 200ರ ಗಡಿ ದಾಟಿತ್ತು. ಇದೇ ವೇಗದಲ್ಲಿ ಆಡಿದ್ದರೆ ಗೆಲುವು ಸಾಧಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ವೇಗಿ ಕಿಮ್ ಗಾರ್ಥ್ ಅವರು ಕೌರ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿ, ಜೊತೆಯಾಟ ಮುರಿದರು.

ನಂತರದ ಓವರ್‌ನಲ್ಲಿ ಗ್ರೇಸ್ ಹ್ಯಾರಿಸ್ ಎಸೆತವನ್ನು ಬೌಂಡರಿ ದಾಟಿಸುವ ಪ್ರಯತ್ನದಲ್ಲಿ ಮಂದಾನ ಅವರು ಆ್ಯಷ್ಲೆ ಗಾರ್ಡನರ್‌ಗೆ ಕ್ಯಾಚಿತ್ತರು. ರಿಚಾ ಘೋಷ್ ಕೇವಲ 6 ರನ್ ಗಳಿಸಿ ರನೌಟ್ ಆದರು.

ಆದರೆ ಆಲ್‌ರೌಂಡರ್ ದೀಪ್ತಿ (72; 58ಎ, 4X5, 6X2) ಅವರು ತಂಡದ ಗೆಲುವಿನ ಆಸೆಯನ್ನು ಜೀವಂತವಾಗಿಟ್ಟರು. 124.14ರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟ್ ಬೀಸಿದರು. ಸ್ನೇಹರಾಣಾ (35; 41ಎ) ಬಿಟ್ಟರೆ ಉಳಿದ ಬ್ಯಾಟರ್‌ಗಳಿಂದ ದೀಪ್ತಿಗೆ ಹೆಚ್ಚಿನ ಬೆಂಬಲ ಲಭಿಸಲಿಲ್ಲ.

ಮೂನಿ ಮಿಂಚು: ಭಾರತ ತಂಡದ ಬೌಲರ್‌ಗಳನ್ನು ಆಸ್ಟ್ರೇಲಿಯಾದ ಅಗ್ರಕ್ರಮಾಂಕದ ಬ್ಯಾಟರ್‌ಗಳು ದಂಡಿಸಿದರು. ಅದರಲ್ಲೂ ಬೆತ್ ಮೂನಿ ಅವರು ಬೌಂಡರಿಗಳ ಚಿತ್ತಾರ ಬಿಡಿಸಿದರು. ಕೇವಲ 56 ಎಸೆತಗಳಲ್ಲಿ ಶತಕದ ಗಡಿ ಮುಟ್ಟಿದರು.

ಆರಂಭಿಕ ಬ್ಯಾಟರ್ ಜಾರ್ಜಿಯಾ ವೋಲ್ (81; 68ಎ) ಅವರು 14 ಬೌಂಡರಿ ಬಾರಿಸಿದರು. ಟಾಸ್ ಗೆದ್ದು ಬ್ಯಾಟಿಂಗ್ ತೆಗೆದುಕೊಂಡ ನಾಯಕಿ ಲಿಸಾ ಹೀಲಿ (30; 18ಎ) ಮಿಂಚಿನ ಆರಂಭ ನೀಡಿದರು. ಎಲಿಸ್ ಪೆರಿ (68; 72ಎ) ಅವರು ಕೂಡ ಅರ್ಧಶತಕ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 47.5 ಓವರ್‌ಗಳಲ್ಲಿ 412 (ಜಾರ್ಜಿಯಾ ವೋಲ್ 81, ಎಲಿಸ್ ಪೆರಿ 68, ಬೆತ್ ಮೂನಿ 138; ರೇಣುಕಾ ಸಿಂಗ್ 79ಕ್ಕೆ2, ಅರುಂಧತಿ ರೆಡ್ಡಿ 86ಕ್ಕೆ3, ದೀಪ್ತಿ ಶರ್ಮಾ 75ಕ್ಕೆ2) ಭಾರತ: 47 ಓವರ್‌ಗಳಲ್ಲಿ 369 (ಸ್ಮೃತಿ ಮಂದಾನ 125, ಹರ್ಮನ್‌ಪ್ರೀತ್ ಕೌರ್ 52, ದೀಪ್ತಿ ಶರ್ಮಾ 72, ಮೇಗನ್ ಶುಟ್ 53ಕ್ಕೆ2, ಕಿಮ್ ಗಾರ್ಥ್ 69ಕ್ಕೆ3) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 43 ರನ್‌ಗಳ ಜಯ ಮತ್ತು ಸರಣಿಯಲ್ಲಿ 2–1ರ ವಿಜಯ. ಪಂದ್ಯದ ಆಟಗಾರ್ತಿ: ಬೆತ್ ಮೂನಿ. ಸರಣಿ ಆಟಗಾರ್ತಿ: ಸ್ಮೃತಿ ಮಂದಾನ

ಭಾರತ ಮಹಿಳಾ ಕ್ರಿಕೆಟ್ ತಂಡದ ಬ್ಯಾಟರ್ ಸ್ಮೃತಿ ಮಂದಾನ (ಎಡ) ಹಾಗೂ ಆಸ್ಟ್ರೇಲಿಯಾದ ಬೆತ್ ಮೂನಿ ಅವರು ಶತಕ ಗಳಿಸಿ ಸಂಭ್ರಮಿಸಿದರು ಪಿಟಿಐ ಚಿತ್ರಗಳು

ಮಹಿಳಾ ಕ್ರಿಕೆಟ್: ಏಕದಿನ ಮಾದರಿಯಲ್ಲಿ ತಂಡವೊಂದರ ಗರಿಷ್ಠ ರನ್

ತಂಡ	ಮೊತ್ತ	ಎದುರಾಳಿ	ವರ್ಷ	ತಾಣ
ನ್ಯೂಜಿಲೆಂಡ್	4ಕ್ಕೆ 491	ಐರ್ಲೆಂಡ್	2018	ಡಬ್ಲಿನ್
ನ್ಯೂಜಿಲೆಂಡ್	5ಕ್ಕೆ 455	ಪಾಕಿಸ್ತಾನ	1997	ಕ್ರೈಸ್ಟ್‌ಚರ್ಚ್
ನ್ಯೂಜಿಲೆಂಡ್	3ಕ್ಕೆ 440	ಐರ್ಲೆಂಡ್	2018	ಡಬ್ಲಿನ್
ಭಾರತ	5ಕ್ಕೆ 435	ಐರ್ಲೆಂಡ್	2025	ರಾಜ್‌ಕೋಟ್
ನ್ಯೂಜಿಲೆಂಡ್	418	ಐರ್ಲೆಂಡ್	2018	ಡಬ್ಲಿನ್
ಆಸ್ಟ್ರೇಲಿಯಾ	412	ಭಾರತ	2025	ದೆಹಲಿ
ಆಸ್ಟ್ರೇಲಿಯಾ	3ಕ್ಕೆ 412	ಡೆನ್ಮಾರ್ಕ್	1997	ಮುಂಬೈ

ಮಹಿಳಾ ಏಕದಿನ: ವೇಗದ ಶತಕಗಳು

ಆಟಗಾರ್ತಿ	ದೇಶ	ಎಸೆತ	ಎದುರಾಳಿ	ವರ್ಷ
ಮೆಗ್ ಲ್ಯಾನಿಂಗ್	ಆಸ್ಟ್ರೇಲಿಯಾ	45	ನ್ಯೂಜಿಲೆಂಡ್	2012-13
ಸ್ಮೃತಿ ಮಂದಾನ	ಭಾರತ	50	ಆಸ್ಟ್ರೇಲಿಯಾ	2025
ಬೆತ್ ಮೂನಿ	ಆಸ್ಟ್ರೇಲಿಯಾ	57	ಭಾರತ	2025
ಕರೆನ್ ರೋಲ್ಟನ್	ಆಸ್ಟ್ರೇಲಿಯಾ	57	ದಕ್ಷಿಣ ಆಫ್ರಿಕಾ	2000-01
ಸೋಫಿ ಡಿವೈನ್	ನ್ಯೂಜಿಲೆಂಡ್	59	ಐರ್ಲೆಂಡ್	2018
ಚಾಮರಿ ಅಟಪಟ್ಟು	ಶ್ರೀಲಂಕಾ	60	ನ್ಯೂಜಿಲೆಂಡ್	2023

ಚಿರಾಗ್–ಸಾತ್ವಿಕ್ ಜೋಡಿ ಫೈನಲ್‌ಗೆ

ಶೆಂಜೆನ್ (ಚೀನಾ), (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಚೀನಾ ಮಾಸ್ಟರ್ಸ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಫೈನಲ್‌ಗೆ ಲಗ್ಗೆ ಹಾಕಿದರು.


ಸಾತ್ವಿಕ್

ಚಿರಾಗ್ ಶೆಟ್ಟಿ

ಎಂಟನೇ ಶ್ರೇಯಾಂಕದ ಚಿರಾಗ್–ಸಾತ್ವಿಕ್ ಜೋಡಿ ಶನಿವಾರ ಸೆಮಿಫೈನಲ್ ಹಣಾಹಣಿಯಲ್ಲಿ 21-17, 21-14ರಿಂದ ಎರಡನೇ ಶ್ರೇಯಾಂಕದ ಆರನ್ ಚಿಯಾ ಮತ್ತು ಸೋಹ್ ವೂಯಿ ಯಿಕ್ ಅವರಿಗೆ ಆಘಾತ ನೀಡಿ, ಸತತ ಎರಡನೇ ಟೂರ್ನಿಯಲ್ಲಿ ಫೈನಲ್ ತಲುಪಿತು.

ಉತ್ತಮ ಲಯದಲ್ಲಿರುವ ಭಾರತದ ಆಟಗಾರರು ಕಳೆದ ತಿಂಗಳು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಮತ್ತು ಕಳೆದ ವಾರ ಹಾಂಗ್‌ಕಾಂಗ್ ಓಪನ್‌ನಲ್ಲಿ ರನ್ನರ್ಸ್ ಅಪ್ ಆಗಿದ್ದರು. ಅದರ ಬೆನ್ನಲ್ಲೇ ಮತ್ತೊಂದು ಪ್ರಶಸ್ತಿಗೆ ಹತ್ತಿರವಾದರು.

ಸಾತ್ವಿಕ್–ಚಿರಾಗ್ ಅವರು ತಮ್ಮ ದೀರ್ಘಕಾಲದ ಪ್ರತಿಸ್ಪರ್ಧಿಗಳಾದ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತ ಆರನ್ ಮತ್ತು ಸೋಹ್ ವಿರುದ್ಧ ಗೆಲುವಿನ ದಾಖಲೆಯನ್ನು 5–11ಕ್ಕೆ ಹೆಚ್ಚಿಸಿ ಕೊಂಡರು. ಪ್ಯಾರಿಸ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆಲ್ಲುವ ಹಾದಿಯಲ್ಲೂ ಭಾರತದ ಜೋಡಿ ಇದೇ ಆಟಗಾರರನ್ನು ಸೋಲಿಸಿತ್ತು. ಭಾನುವಾರ ಫೈನಲ್ ಹಣಾಹಣಿ ನಡೆಯಲಿದೆ.

ದಬಂಗ್ ಅಜೇಯ ಓಟಕ್ಕೆ ಪಟ್ನಾ ತಡೆ

ಜೈಪುರ (ಪಿಟಿಐ): ಅಂಕಿತ್ ಕುಮಾರ್ ರಾಣಾ ಅವರ ಅಮೋಘ ರೇಡಿಂಗ್ ಬಲದಿಂದ ಪಟ್ನಾ ಪೈರೇಟ್ಸ್ ತಂಡವು ಶನಿವಾರ ಪ್ರೊ ಕಬಡ್ಡಿ ಲೀಗ್‌ನಲ್ಲಿ 3 ಅಂಕಗಳಿಂದ ಡೆಲ್ಲಿ ಡಬಂಗ್ ತಂಡವನ್ನು ಮಣಿಸಿತು. ಇದರೊಂದಿಗೆ ದಬಂಗ್ ತಂಡದ ಅಜೇಯ ಓಟಕ್ಕೂ ತಡೆಬಿತ್ತು.

ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ನಡೆಯುತ್ತಿರು 'ಸಾಂಪ್ರದಾಯಿಕ ಎದುರಾಳಿಗಳ ಸಪ್ತಾಹ'ದ (ರೈವಲರಿ ವೀಕ್) ಹಣಾಹಣಿಯಲ್ಲಿ ಪಟ್ನಾ ತಂಡವು 33–30ರಿಂದ ದಬಂಗ್ ತಂಡವನ್ನು ಸದೆಬಡಿಯಿತು.

ಪಂದ್ಯದ ಮೊದಲಾರ್ಧದಲ್ಲಿ 9 ಅಂಕಗಳಿಂದ (10–19) ಹಿನ್ನಡೆಯಲ್ಲಿದ್ದ ಪಟ್ನಾ ತಂಡವು ದ್ವಿತೀಯಾರ್ಧದಲ್ಲಿ ಮರುಹೋರಾಟ ಸಂಘಟಿಸಿ ಗೆಲುವು ಸಾಧಿಸಿತು. ಅಂಕಿತ್ 12 ಅಂಕ ಗಳಿಸಿ ಮಿಂಚಿದರು. ದಬಾಂಗ್ ಪರ ನೀರಜ್ ನರ್ವಾಲ್ 8 ಅಂಕ ಕಲೆ ಹಾಕಿದರು.

ಏಳು ಪಂದ್ಯಗಳಲ್ಲಿ ಪಟ್ನಾಗೆ ಇದು ಎರಡನೇ ಗೆಲುವು. ಸತತ ಆರು ಪಂದ್ಯ ಗೆದ್ದ ದಬಂಗ್ ತಂಡಕ್ಕೆ ಮೊದಲ ಸೋಲು.

ದಿನದ ಮತ್ತೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡವು 38–36ರಿಂದ ತಮಿಳು ತಲೈವಾಸ್ ತಂಡವನ್ನು ಸೋಲಿಸಿ ಸತತ ನಾಲ್ಕನೇ ಗೆಲುವು ದಾಖಲಿಸಿತು.

ಈಶ ಗ್ರಾಮೋತ್ಸವ ಫೈನಲ್ ಇಂದು

ಬೆಂಗಳೂರು: ಭಾರತದ ಅತಿ ದೊಡ್ಡ ಗ್ರಾಮೀಣ ಕ್ರೀಡಾ ಉತ್ಸವ ಎನಿಸಿರುವ ಈಶ ಗ್ರಾಮೋತ್ಸವದ 17ನೇ ಆವೃತ್ತಿಯ ಅಂತಿಮ ಪಂದ್ಯಗಳು ಭಾನುವಾರ (ಸೆಪ್ಟೆಂಬರ್ 21) ಕೊಯಮತ್ತೂರಿನ ಈಶ ಯೋಗ ಕೇಂದ್ರದ ಆದಿಯೋಗಿಯ ಬಳಿ ಸಮ್ಮುಖದಲ್ಲಿ ನಡೆಯಲಿದೆ.

ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ, ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್, ಚೆಸ್ ಗ್ರ್ಯಾಂಡ್‌ಮಾಸ್ಟರ್ ವೈಶಾಲಿ ರಮೇಶ್‌ಬಾಬು, ಪ್ಯಾರಾಲಿಂಪಿಯನ್ ಭಾವಿನಾ ಪಟೇಲ್ ಅವರು 'ಗ್ರ್ಯಾಂಡ್ ಫಿನಾಲೆ' ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಅಂದಿನ ಕಾರ್ಯಕ್ರಮಗಳು ಈಶ ಫೌಂಡೇಷನ್‌ನ ಯೂಟ್ಯೂಬ್ ಚಾನೆಲ್‌ನಲ್ಲಿ ನೇರ ಪ್ರಸಾರವಾಗಲಿದೆ.

ಪುರುಷರ ವಾಲಿಬಾಲ್ ಫೈನಲ್‌ನಲ್ಲಿ ಬೆಂಗಳೂರು ಗ್ರಾಮಾಂತರದ ಹೆಗ್ಗಡಿ ಹಳ್ಳಿಯ ಇಬ್ಬನಿ ತಂಡ ಮತ್ತು ಚಿಕ್ಕಬಳ್ಳಾಪುರ ಗ್ರಾಮಾಂತರದ ಮರಸನಹಳ್ಳಿ ಪಂಚಾಯಿತಿಯ ಅಪ್ಪು ಬಾಯ್ಸ್ ತಂಡಗಳು ಸೆಣಸಲಿವೆ. ಮಹಿಳೆಯರ ಥ್ರೋಬಾಲ್ ಫೈನಲ್‌ನಲ್ಲಿ ಕೊಡಗು ಮರಗೋಡಿನ ಬ್ಲ್ಯಾಕ್ ಪ್ಯಾಂಥರ್ಸ್ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಬಡಗನ್ನೂರು ಶಾಸ್ತರ ಪಡುಮಲೆ–ಕುಡ್ಲಾ ಸ್ಟ್ರೈಕರ್ಸ್ ತಂಡಗಳು ಮುಖಾಮುಖಿಯಾಗಲಿವೆ. ಗ್ರಾಮೋತ್ಸವವು ಒಟ್ಟು ₹67 ಲಕ್ಷ ಬಹುಮಾನ ಮೊತ್ತ ಒಳಗೊಂಡಿದೆ.

2025ರ ಆವೃತ್ತಿಯ ಕ್ರೀಡಾ ಉತ್ಸವದಲ್ಲಿ ದೇಶಾದ್ಯಂತ ಒಟ್ಟು 63,220 ಆಟಗಾರರು ಪಾಲ್ಗೊಂಡರು ಎಂದು ಈಶ ಫೌಂಡೇಷನ್ ಪ್ರಕಟಣೆ ತಿಳಿಸಿದೆ.

ವೀಲ್‌ಚೇರ್ ಟೆನಿಸ್: ಶೇಖರ್‌ಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಶೇಖರ್ ವೀರಸ್ವಾಮಿ ಮತ್ತು ಶಿಲ್ಪಾ ಪುಟ್ಟರಾಜು ಅವರು ಇಲ್ಲಿ ನಡೆದ ಮೊದಲ ರಾಷ್ಟ್ರೀಯ ರ‍್ಯಾಂಕಿಂಗ್ ವೀಲ್ ಚೇರ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡರು.

ನಗರದ ಕೆಎಸ್‌ಎಲ್‌ಟಿಎ ಕೋರ್ಟ್‌ಗಳಲ್ಲಿ ಕರ್ನಾಟಕ ವೀಲ್ ಚೇರ್ ಟೆನಿಸ್ ಸಂಸ್ಥೆ (ಕೆಡಬ್ಲ್ಯುಟಿಎ), ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಸಹಯೋಗದಲ್ಲಿ ಬುಧವಾರದಿಂದ ನಡೆದ ಟೂರ್ನಿಯಲ್ಲಿ 50ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು.

ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಶೇಖರ್ 6-4, 6-3ರಿಂದ ತಮಿಳುನಾಡಿನ ಕಾರ್ತಿಕ್ ಕರುಣಾಕರನ್ ಅವರನ್ನು ಮಣಿಸಿದರು. ಮಹಿಳೆಯರ ವಿಭಾಗದಲ್ಲಿ ಶಿಲ್ಪಾ 6-4, 6-4ರಿಂದ ತಮ್ಮದೇ ರಾಜ್ಯದ ಪ್ರತಿಮಾ ರಾವ್ ಅವರನ್ನು ಸೋಲಿಸಿದರು. ಶೇಖರ್ ಅವರು ತಮಿಳುನಾಡಿನ ಬಾಲಚಂದರ್ ಸುಬ್ರಮಣಿಯನ್ ಅವರ ಜೊತೆಗೂಡಿ ಪುರುಷರ ಡಬಲ್ಸ್ ಪ್ರಶಸ್ತಿ ಗೆದ್ದರು. ಈ ಜೋಡಿ ಫೈನಲ್‌ನಲ್ಲಿ 6-4, 6-1ರಿಂದ ತಮಿಳುನಾಡಿನ ಮರಿಯಪ್ಪನ್ ದೊರೈ ಮತ್ತು ಕಾರ್ತಿಕ್ ಕರುಣಾಕರನ್ ಅವರನ್ನು ಮಣಿಸಿತು.

ಮಹಿಳಾ ವಿಭಾಗದ ಸಿಂಗಲ್ಸ್ ಪ್ರಶಸ್ತಿ ವಿಜೇತೆ ಶಿಲ್ಪಾ ಪುಟ್ಟರಾಜು

ಪುರುಷರ ಸಿಂಗಲ್ಸ್ ಪ್ರಶಸ್ತಿ ವಿಜೇತ ಶೇಖರ್ ವೀರಸ್ವಾಮಿ

ಶಿಲ್ಪಾ ಪುಟ್ಟರಾಜು ಅವರು ಶಿಲ್ಪಾ ಕುಡ್ಲಪ್ಪ ಅವರೊಂದಿಗೆ ಮಹಿಳೆಯರ ಡಬಲ್ಸ್‌ನಲ್ಲಿ ಚಾಂಪಿಯನ್ ಆದರು. ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಈ ಜೋಡಿ 6-3, 6-4 ಪ್ರತಿಮಾ ಮತ್ತು ಮುಬೀನಾ ಕೋಲ್ಕರ್ ಅವರನ್ನು ಸೋಲಿಸಿತು.

ಬಾಂಗ್ಲಾಕ್ಕೆ ಮಣಿದ ಶ್ರೀಲಂಕಾ

ದುಬೈ (ಪಿಟಿಐ): ಆರಂಭಿಕ ಆಟಗಾರ ಸೈಫ್ ಹಸನ್ (61 ರನ್; 45ಎ) ಹಾಗೂ ಮಧ್ಯಮ ಕ್ರಮಾಂಕದ ಬ್ಯಾಟರ್ ತೌಹಿದ್ ಹೃದಯ್ (58 ರನ್; 37ಎ) ಅವರ ಅರ್ಧಶತಕಗಳ ಬಲದಿಂದ ಬಾಂಗ್ಲಾದೇಶ ತಂಡವು ಏಷ್ಯಾಕಪ್ ಕ್ರಿಕೆಟ್ ಸೂಪರ್ ಫೋರ್ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು 4 ವಿಕೆಟ್‌ಗಳಿಂದ ಮಣಿಸಿತು.

ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಅಂತಿಮ ಓವರ್‌ವರೆಗೂ ತೀವ್ರ ಪೈಪೋಟಿ ಕಂಡುಬಂತು. ಲಂಕಾ ನೀಡಿದ್ದ 169 ರನ್‌ಗಳ ಸ್ಪರ್ಧಾತ್ಮಕ ಗುರಿಯನ್ನು ಬೆನ್ನಟ್ಟಿದ ಲಿಟನ್ ದಾಸ್ ಪಡೆಯು 18.2 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 159 ರನ್ ಗಳಿಸಿದ್ದಾಗ ಸುಲಭವಾಗಿ ಪಂದ್ಯ ಗೆಲ್ಲುವಂತೆ ಕಂಡಿತು. ಆದರೆ, 19ನೇ ಓವರ್‌ನಲ್ಲಿ ಬೌಲಿಂಗ್‌ಗೆ ಇಳಿದ ದುಷ್ಮಂತ ಚಮೀರ ಅವರು ತೌಹಿದ್ ಅವರ ವಿಕೆಟ್ ಪಡೆಯುವುದರ ಜೊತೆಗೆ ಕೇವಲ 7 ರನ್ ಬಿಟ್ಟುಕೊಟ್ಟರು. ಪಂದ್ಯ ರೋಚಕ ಹಂತ ತಲುಪಿತು.

ಬಾಂಗ್ಲಾ ಗೆಲುವಿಗೆ ಕೊನೆಯ ಓವರ್‌ನಲ್ಲಿ 5 ರನ್ ಬೇಕಿತ್ತು. ನಿಯಮಿತವಾಗಿ ವಿಕೆಟ್ ಕಳೆದುಕೊಂಡರೂ ಎದೆಗುಂದದೆ ಆಡಿದ ಬಾಂಗ್ಲಾ ಆಟಗಾರರು ಗುಂಪು ಹಂತದ ಸೋಲಿಗೆ ಪ್ರತೀಕಾರ ತೆಗೆದುಕೊಂಡರು.

ಗುಂಪು ಹಂತದಲ್ಲಿ ಎಲ್ಲ ಮೂರು ಪಂದ್ಯಗಳಲ್ಲಿ ಗೆಲುವು ಸಾಧಿಸಿ ಭರ್ಜರಿ ಆತ್ಮವಿಶ್ವಾಸದಲ್ಲಿದ್ದ ಚರಿತ ಅಸಲಂಕಾ ಬಳಗವು ಸೋಲಿನ ಆಘಾತ ಎದುರಿಸಿತು.

ಇದಕ್ಕೆ ಮೊದಲು, ಟಾಸ್ ಗೆದ್ದ ಬಾಂಗ್ಲಾದೇಶವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ಲಿಟನ್ ದಾಸ್ ಅವರ ಈ ನಿರ್ಧಾರಕ್ಕೆ ತಕ್ಕಂತೆ ಬೌಲಿಂಗ್ ಮಾಡಿದ ಮೆಹದಿ ಹಸನ್ (25ಕ್ಕೆ2) ಹಾಗೂ ಮುಸ್ತಫಿಜುರ್ ರೆಹಮಾನ್ (20ಕ್ಕೆ3) ಅವರು ಲಂಕಾ ತಂಡವನ್ನು 168 ರನ್‌ಗಳಿಗೆ ನಿಯಂತ್ರಿಸಿದರು.

ದಸುನ್ ಶನಾಕ (ಅಜೇಯ 64; 37ಎ) ಅವರು ಅರ್ಧಶತಕ ಗಳಿಸಿ ಲಂಕಾ ತಂಡಕ್ಕೆ ನೆರವಾದರು.

ಬಾಂಗ್ಲಾದೇಶದ ಸೈಫ್ ಹಸನ್ ಹಾಗೂ ತೌಹಿದ್ ಹೃದಯ್ ಜೊತೆಯಾಟ ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 168 (ಪಥುಮ್ ನಿಸಾಂಕ 22, ಕುಸಾಲ ಮೆಂಡಿಸ್ 34, ದಸುನ್ ಶನಾಕಾ ಔಟಾಗದೇ 64; ಮೆಹದಿ ಹಸನ್ 25ಕ್ಕೆ2, ಮುಸ್ತಫಿಜುರ್ ರೆಹಮಾನ್ 20ಕ್ಕೆ3) ಬಾಂಗ್ಲಾದೇಶ: 19.5 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 169 (ಸೈಫ್ ಹಸನ್ 61, ತೌಹಿದ್ ಹೃದಯ್ 58, ಲಿಟನ್ ದಾಸ್ 23; ವನಿಂದು ಹಸರಂಗ 22ಕ್ಕೆ2, ದಸುನ್ ಶನಾಕ 21ಕ್ಕೆ2)
ಫಲಿತಾಂಶ: ಬಾಂಗ್ಲಾದೇಶಕ್ಕೆ 4 ವಿಕೆಟ್‌ಗಳ ಜಯ
ಪಂದ್ಯದ ಆಟಗಾರ: ಸೈಫ್ ಹಸನ್

ಸಿಐಎಸ್‌ಸಿಇ ಚೆಸ್ ಟೂರ್ನಿ 23ರಿಂದ

ಬೆಂಗಳೂರು: ಸಿಐಎಸ್‌ಸಿಇ ಶಾಲೆಗಳ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್ ಇದೇ 23 ರಿಂದ 25ರವರೆಗೆ ಸರ್ಜಾಪುರ ರಸ್ತೆಯ ಗ್ರೀನ್‌ವುಡ್ ಅಂತರರಾಷ್ಟ್ರೀಯ ಶಾಲೆಯಲ್ಲಿ ನಡೆಯಲಿದೆ.

ಹೊರದೇಶದ ದುಬೈ ಮತ್ತು ದೇಶದ 13 ವಲಯಗಳ 400ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

ಹಿರಿಯ ಆಟಗಾರ್ತಿ ಡಬ್ಲ್ಯುಐಎಂ ಸರಿತಾ ರೆಡ್ಡಿ ಅವರು 22ರಂದು ಟೂರ್ನಿ ಉದ್ಘಾಟಿಸಲಿದ್ದಾರೆ. ಮ್ಯಾನೇಜಿಂಗ್ ಟ್ರಸ್ಟಿ ನೀರೂ ಅಗರವಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಾಂಶುಪಾಲ ಲೂಯಿಸ್ ಲೋಪೆಝ್ ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪುಣೆ ರೇಸ್
ಪೊಸಿಟಾನೊ ಗೆಲ್ಲುವ ನಿರೀಕ್ಷೆ

ಇಂಡಿಯನ್ ಸೇಂಟ್ ಲೆಗರ್ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪೊಸಿಟಾನೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 12:20ಕ್ಕೆ ಆರಂಭವಾಗಲಿರುವ ದಿನದ ಹತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಯೂಲ್‌ಟೈಡ್ 2, ನಾರ್ಥ್‌ಬೌಂಡ್ 1, ಮಾರ್ಲ್‌ಬೊರೊ ಮ್ಯಾನ್ 4
2ನೇ ರೇಸ್: ಅರಿಯಾನ ಸ್ಟಾರ್ 2, ಫ್ಲಾಶ್‌ಮ್ಯಾನ್ 3, ಸ್ಯಾಮ್ಸನ್ 8
3ನೇ ರೇಸ್: ಕಾವ್ಯ 2, ಚಾರ್ಡಿಕಲ 4, ಲಿಯಾಮ್ 1
4ನೇ ರೇಸ್: ಸಿಂಗರ್ ಸಾರ್ಜೆಂಟ್ 4, ಚಗಾಲ್ 1, ಪ್ರೈಡ್ ಪ್ರಿನ್ಸ್ 3
5ನೇ ರೇಸ್: ಸೋಷಿಯಲ್ ಬಟರ್‌ಫ್ಲೈ 7, ಬೀ ಮ್ಯಾಜಿಕಲ್ 4, ಡಿವೈನ್ ಇಂಟ್ಯೂಷನ್ 2
6ನೇ ರೇಸ್: ಜಾನಿ ಮ್ಯಾಕ್ 1, ಮೊಜೊ 3, ಅಶ್ವ ಜಿಪ್ಸಿ 1
7ನೇ ರೇಸ್: ಕಂಜುರರ್ 3, ಡಿಯೊಗೊ ಗಾರ್ಸಿಯಾ 2, ಹೇಜಲ್ 7
8ನೇ ರೇಸ್: ಪೊಸಿಟಾನೊ 5, ಡ್ಯೂಕ್ ಆಫ್ ಟಸ್ಕನಿ 2, ಥಲಸ್ಸ 9
9ನೇ ರೇಸ್: ಫೌಜಿಟ 6, ಸಿಂಡ್ರೆಲಾಸ್ ಡ್ರೀಮ್ 1, ಸ್ಟಾರ್ಮ್ ಕ್ಲೌಡ್ 2
10ನೇ ರೇಸ್: ಆಬ್ಸೊಲ್ಯೂಟ್ ಗಾರ್ಜಿಯಸ್ 4, ಸ್ಟಾರ್ಮ್ 3, ಸಸೆಕ 10

ಉತ್ತಮ ಬೆಟ್: ಅರಿಯಾನ ಸ್ಟಾರ್

1ನೇ ಜಾಕ್‌ಪಾಟ್‌ಗೆ **3,4,5,6,7**
2ನೇ ಜಾಕ್‌ಪಾಟ್‌ಗೆ **6,7,8,9,10**
1ನೇ ಟ್ರಿಬಲ್ **4,5,6**
2ನೇ ಟ್ರಿಬಲ್ **7,8,9**
3ನೇ ಟ್ರಿಬಲ್ **8,9,10**

ದಸರಾ ಕ್ರೀಡಾಕೂಟ: ವಿನೇಶ್ ಅತಿಥಿ

ಮೈಸೂರು: ಇಲ್ಲಿನ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಸೆ.22ರಂದು ಸಂಜೆ 5ಕ್ಕೆ ನಡೆಯಲಿರುವ 'ಸಿ.ಎಂ. ಕಪ್' ರಾಜ್ಯಮಟ್ಟದ ದಸರಾ ಕ್ರೀಡಾಕೂಟವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಒಲಿಂಪಿಯನ್ ಕುಸ್ತಿಪಟು ವಿನೇಶ್ ಫೋಗಟ್ ವಿಶೇಷ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ವಿನೇಶ್ ಮೂರು ಒಲಿಂಪಿಕ್ಸ್‌ನಲ್ಲಿ ಕುಸ್ತಿಯಲ್ಲಿ ಭಾರತವನ್ನು ಪ್ರತಿನಿಧಿಸಿದವರು. ಏಷ್ಯನ್ ಹಾಗೂ ಕಾಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿದವರು. 2024ರ ಪ್ಯಾರಿಸ್ ಒಲಿಂಪಿಕ್ಸ್‌ನ 50 ಕೆ.ಜಿ. ವಿಭಾಗದಲ್ಲಿ ಫೈನಲ್ಸ್ ಪ್ರವೇಶಿಸಿದ್ದ ಅವರು ನಿಗದಿಗಿಂತ ಕೊಂಚ ಹೆಚ್ಚು ದೇಹತೂಕದ ಕಾರಣಕ್ಕೆ ಟೂರ್ನಿಯಿಂದ ಹೊರಬಿದ್ದು, ಕುಸ್ತಿಗೆ ನಿವೃತ್ತಿ ಘೋಷಿಸಿದರು.

2024ರ ಅಕ್ಟೋಬರ್‌ನಲ್ಲಿ ಹರಿಯಾಣದ ಜುಲಾನ ವಿಧಾನಸಭಾ ಕ್ಷೇತ್ರದಿಂದ ಅವರು ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಆಯ್ಕೆಯಾಗಿದ್ದಾರೆ.

ಕೆನ್ಯಾದ ಚೆಬೆಟ್‌ಗೆ ಚಿನ್ನ 'ಡಬಲ್'

ಟೋಕಿಯೊ (ಎಎಫ್‌ಪಿ): ಕೆನ್ಯಾದ ಅಥ್ಲೀಟ್‌ಗಳಾದ ಇಮಾನ್ಯುಯೆಲ್ ವಾನ್ಯೋನಿ ಮತ್ತು ಬಿಯಟ್ರಸ್ ಚೆಬೆಟ್ ಅವರು ಶನಿವಾರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ 800 ಮೀಟರ್ ಮತ್ತು ಮಹಿಳೆಯರ 5,000 ಮೀಟರ್ ಓಟದಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

ಕಳೆದ ವರ್ಷ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಇದೇ ಸ್ಪರ್ಧೆಯಲ್ಲಿ ಚಾಂಪಿಯನ್ ಆಗಿದ್ದ ಈ ಇಬ್ಬರು ಅಥ್ಲೀಟ್‌ಗಳು ಮತ್ತೊಮ್ಮೆ ವಿಶ್ವ ಮಟ್ಟದ ಸ್ಪರ್ಧೆಯಲ್ಲಿ ಪಾರಮ್ಯ ಮೆರೆದರು. ಚೆಬೆಟ್ ಅವರು ಇಲ್ಲಿ 10,000 ಮೀಟರ್ ಸ್ಪರ್ಧೆಯಲ್ಲೂ ಸ್ವರ್ಣ ಗೆದ್ದಿದ್ದಾರೆ.

ಜಪಾನ್‌ನ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಸೇರಿದ್ದ 58,000ಕ್ಕೂ ಅಧಿಕ ಪ್ರೇಕ್ಷಕರ ಮುಂದೆ 25 ವರ್ಷದ ಚೆಬೆಟ್ (14 ನಿ. 54.36ಸೆ) ಅವರು ತಮಗೆ ಆದರ್ಶವಾಗಿರುವ ದಿಗ್ಗಜ ಅಥ್ಲೀಟ್ ಫೇತ್ ಕಿಪ್ಯೆಗಾನ್ (ಕೆನ್ಯಾ) ಅವರನ್ನು ಹಿಂದಿಕ್ಕಿದರು. ಒಂದೇ ಚಾಂಪಿಯನ್‌ಷಿಪ್‌ನಲ್ಲಿ ದೂರ ಅಂತದ ಓಟದಲ್ಲಿ 'ಡಬಲ್' ಚಿನ್ನ ಗೆದ್ದ ಮೂರನೇ ಮಹಿಳಾ ಅಥ್ಲೀಟ್ ಎಂಬ ಹಿರಿಮೆಗೆ ಚೆಬೆಟ್ ಪಾತ್ರರಾದರು.

ಮಹಿಳೆಯರ 1500 ಮೀ. ಓಟದಲ್ಲಿ ಅಭೂತಪೂರ್ವ ನಾಲ್ಕನೇ ಸಲ ಚಿನ್ನ ಗೆದ್ದ ಕಿಪ್ಯೆಗಾನ್ (14:55.07) ಅವರು ಈ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದರು. ಇಟಲಿಯ ನಾಡಿಯಾ ಬ್ಯಾಟೊಕ್ಲೆಟ್ಟಿ (14:55.42) ಕಂಚು ಗೆದ್ದರು.

5000 ಮೀಟರ್ ಓಟದಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದ ಕೆನ್ಯಾದ ಬಿಯಟ್ರಸ್ ಚೆಬೆಟ್ ಮತ್ತು ಫೇತ್ ಕಿಪ್ಯೆಗಾನ್ ಎಪಿ/ಪಿಟಿಐ ಚಿತ್ರ

21 ವರ್ಷದ ಇಮಾನ್ಯುಯೆಲ್ ಅವರು 800 ಮೀ. ಫೈನಲ್‌ನಲ್ಲಿ 1 ನಿ. 41.86 ಸೆ.ಗಳಲ್ಲಿ ಗುರಿ ತಲುಪಿ, ಕೂಟ ದಾಖಲೆ ನಿರ್ಮಿಸಿದರು.

ಭಾರತದ ಗುಲ್ವೀರ್ ಸಿಂಗ್ ಮತ್ತು ಅನ್ನು ರಾಣಿ ಅವರು ಕ್ರಮವಾಗಿ ಪುರುಷರ 5000 ಮೀಟರ್ ಓಟ ಮತ್ತು ಮಹಿಳೆಯರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಫೈನಲ್‌ಗೆ ಅರ್ಹತೆ ಪಡೆಯುವಲ್ಲಿ ವಿಫಲರಾದರು.

OFFICE OF THE CHIEF ELECTORAL OFFICER KARNATAKA
Nirvachana Nilaya, Sheshadri Road, Bengaluru-560 001.
No. DPAR/ 10 RUPPs (Chuvebha) 2025 P2 Date:20.09.2025

SHOW CAUSE NOTICE

Whereas, the registration of an Association/Body of individual citizens of India as a political party is governed by the provisions of Section 29A of the Representation of the People Act, 1951; and

Whereas, the purpose of registration of an association as a political party with the Election Commission under the aforesaid Section 29A is stated in that Section itself, i.e. to avail of the provisions of that part for the purposes of the Representation of the People Act, 1951, which means participation in elections conducted by the Commission under the said Act; and

Whereas, **Registered Unrecognized Political Parties** were registered as a political party under the said Section 29A, on an application made by the party under the said Section; and

Whereas, the Commission, in exercise of powers vested under Article 324 of the Constitution of India and Section 29 A of the Representation of the People Act, 1951 has issued Guidelines for Registration of Political Parties that are binding on all political parties; and

Whereas, para 3 (xix) of the Guidelines for Registration of Political Parties mandates that the applicant for registration as a political party, undertakes that it must declare in the party constitution that the party shall submit its Annual Audited Accounts to the Commission; and

Whereas, as per the records of the Commission, the **Registered Unrecognized Political Parties** did not submit its Annual Audited Accounts for the financial year 2021-22, 2022-23 and 2023-24 within the stipulated time period; and

Whereas, the Commission has issued guidelines on transparency and accountability in party funds and election expenditure in pursuance of the direction of Hon'ble Supreme Court of India in the case of Common Cause vs Union of India & Others (AIR 1996 SC 3081), mandating all political parties to submit the statement of all the Election Expenditure incurred by the party from the date of announcement of election to the date of completion of election. The Statement has to be submitted in the proforma specified by the Commission within 75 days of completion of election in the case of General Election to the Legislative Assembly and within 90 days of completion of election in the case of General Election to the House of the People; and

Whereas, as per the records of the Commission, the **Registered Unrecognized Political Parties** have contested General Election but did not submit in the proforma specified by the Commission, the statement of all the Election Expenditure incurred by them within the stipulated time period; and

Whereas, in the above circumstances, the Commission, in exercise of its powers under Article 324 of the Constitution of India and Section 29A of the Representation of the People Act, 1951, proposes to delist the Political Party **Registered Unrecognized Political Parties** from the list of registered parties and

Whereas, before taking action as proposed above, the Commission has decided to provide to the said party an opportunity of making a representation/ showing cause, if any, as to why the proposed action may not be taken;

Now, therefore, the Political Party **Registered Unrecognized Political Parties** are called upon to make a written representation to the undersigned in this behalf if it so desires. The representation, if any, should be duly accompanied by an affidavit from the President or General Secretary of the party, and all supporting documents on which the party proposes to rely, and should reach the undersigned latest by **14.10.2025.**

It is also stated that the date of hearing for the party has been scheduled on **14.10.2025.** Such hearing should mandatorily be attended by the President/ General Secretary/ Head of the Party. If no reply is received from the party by the aforesaid date, it will be presumed that the party has nothing to say in the matter and the Commission will pass appropriate orders without any further reference to the party.

By Order
Sd/-
V. Anbukkumar, IAS
Chief Electoral Officer, Karnataka

To,
The President/ General Secretary,

1. All India Janaraksha Party, K. No.1403 /VS-17/1404/VS 18, Gangadharpura, Doddaballapura Town, Bangalore Rural District, Karnataka.
2. Bharatiya Dr. B.R Ambedkar Janata Party, No.18, 12th Cross, MTS Layout, Kengeri Upanagara, Bengaluru- 560060, Karnataka.
3. Challengers Party, Durgesh Nivas, Opp. Vithoba Temple, 68/XX, Tailor Street, Cowl Bazaar, Bellary-583102, Karnataka.
4. Democratic Prajakranthi Party Secularist, Ummathur Post 86 Village, Hunsur Taluk, Mysore District -571105, Karnataka.
5. Dr. Ambedkar People's Party, 106, 4th Cross, K.H. Ranganath Colony, Opposite BHEL Factory, Mysore Road, Bangalore-560026, Karnataka.
6. Engineers Party, Bhoothana Hosur, Post- Sunagahalli, District - Mandya - 571403, Karnataka.
7. Indian New Congress Party, Office No. 107, 2nd Floor, 1st Cross, 'A' Block, A.K. Colony Road, Ghousia Nagar, Mysore City- 570 019, Karnataka.
8. Kannada Chalavali Vatal Paksha, 154, Rangswamy Temple Street, Bangalore- 560053, Karnataka.
9. Kannada Paksha, No. 259/1, 1st Floor, Ranghswamy Temple Street (Opp. to Jain Temple) Bangalore- 560053, Karnataka.
10. Karnataka Karmikara Paksha, No. 120, 1st Floor, St. Johns Church Road, Near Coles Park, Bangalore- 560005, Karnataka.
11. Karnataka Praja Party (Raitha Parva), Adith Apartment, Flat No. 104, SJCE College Road, Telecom Layout, Vagdevinagar, Mysore- 570009, Karnataka.
12. Karnataka Rajya Ryota Sangha, 636, Ideal Homes Layout, Rajarajeshwarinagar, Bangalore-560098, Karnataka.
13. National Development Party, House No. A-8-2, Multani Colony, Bidar 585401, Karnataka.

DIPR/CP/JA/ /2025-26

ಭತ್ತದ ಪೈರಿನಲ್ಲಿ ಕಲೆ
ಜಪಾನ್‌ನಲ್ಲಿ ಖ್ಯಾತಿ ಪಡೆದಿರುವ 'ರೈಸ್ ಫೀಲ್ಡ್ ಆರ್ಟ್'ನ ಬಗ್ಗೆ ಒಂದು ಕುತೂಹಲಕಾರಿ ಲೇಖನ 13



ಇರುಳ ಬೆಳಕಿನ ದಸರೆ

• ಕೆ.ನರಸಿಂಹಮೂರ್ತಿ

ಮೈಸೂರು ದಸರಾದಲ್ಲಿ ಯಾವುದು ಬಹು ದೊಡ್ಡ ಹೈಲೈಟ್? 'ಅಷ್ಟೂ ಗೊತ್ತಿಲ್ಲವೇ, ಜಂಬೂಸವಾರಿ' ಎನ್ನುತ್ತೀರಿ. ನಿಮ್ಮ ಮಾತೇನೋ ಸರಿ. ಆದರೆ ಅದು ಉತ್ಸವದ ಕೊನೇ ಘಟ್ಟ. ಅದಾದ ಮೇಲೆ, ಸಂಜೆ ಬನ್ನಿಮಂಟಪ ಮೈದಾನದಲ್ಲಿ ನಡೆಯುವ ಸಾಹಸಮಯ ಟಾರ್ಚ್‌ಲೈಟ್ ಪರೇಡ್ ಮರೆಯೋದುಂಟೆ? ಇವೆರಡನ್ನೂ ಕಣ್ತುಂಬಿಕೊಳ್ಳಲು ಲಕ್ಷಾಂತರ ಮಂದಿ ದೇಶ–ವಿದೇಶಗಳಿಂದ ಧಾವಿಸಿ ಬರುತ್ತಾರೆ. ನಿಮ್ಮದೂ ಅದೇ ತವಕ.

ಇರಲಿ, ಇದೇ ಪ್ರಶ್ನೆಯನ್ನು ಜೆನ್ ಝೀ ತಲೆಮಾರಿನ ಯುವಕ–ಯುವತಿಯರ ಬಳಿ ಕೇಳಿದರೆ, 'ದಸರಾ ಲೈಟಿಂಗ್ಸ್' ಇನ್ನೇನು?' ಎನ್ನುತ್ತಾರೆ. 'ಲೈಟಿಂಗ್ಸ್‌ನಲ್ಲಿ ಹೊಳೆಯುವ ರಸ್ತೆಗಳಲ್ಲಿ ಜೋರಾಗಿ 'ಹ್ಹೋ' ಎಂದು ಕೂಗುತ್ತಾ ಬೈಕ್‌ಗಳಲ್ಲಿ ತೂರಿ ಹೋಗುವ ಖುಷಿ ಇಲ್ಲಲ್ಲದೇ ಇನ್ನೆಲ್ಲಾದರೂ ಸಿಗುತ್ತಾ' ಎನ್ನುತ್ತಾರೆ. ಹಾಗೆ ಹೇಳುವಾಗ ಅವರ ಕಣ್ಣುಗಳಲ್ಲಿ ಹೊಸ ಮಿಂಚು ಹೊಳೆಯುತ್ತದೆ.

ಭೂಮಿಯೂ ಒಂದು ಆಕಾಶವೆಂಬಂತೆ, ಆಕಾಶಕ್ಕೇ ಇರುಳ ಇಂದ್ರವೈಭವದ ಬೆಳಕಿನ ತೋರಣಗಳೆಂಬಂತೆ ಉತ್ಸವದುದ್ದಕ್ಕೂ ರಾತ್ರಿ ವೇಳೆ ಅತ್ಯದ್ಭುತ ರಮ್ಯಲೋಕವನ್ನು ಸೃಷ್ಟಿಸಿ ಜನರನ್ನು ಸೆಳೆಯುವ, ಮೈಮರೆಸುವ, ಖುಷಿಪಡಿಸುವ ವಿಶೇಷವೇ ಅದು. ಚರಿತ್ರೆಯ ಸಾಕ್ಷಿಗಳಾದ ಪಾರಂಪರಿಕ ಕಟ್ಟಡಗಳು, ನಗರದ ಅಭಿವೃದ್ಧಿಯ ದ್ಯೋತಕವೆಂಬಂತೆ ಹರಡಿರುವ ನೂರಾರು ಕಿಲೋಮೀಟರ್ ಉದ್ದದ ರಸ್ತೆಗಳು, ನೂರಾರು ವೃತ್ತಗಳ ದೀಪಾಲಂಕಾರ, ಅಲ್ಲಲ್ಲಿ ಬೆಳಕಿನ ಕಮಾನುಗಳು, ಕಂಬಗಳು, ಪ್ರತಿಕೃತಿಗಳಿಂದಲೂ ಝಗಮಗಿಸುತ್ತದೆ ಮೈಸೂರು ನಗರ.

ಇತ್ತೀಚಿನ ವರ್ಷಗಳಲ್ಲಿ, ಸಾವಿರಾರು ಡ್ರೋನ್‌ಗಳನ್ನು ಬಳಸಿ ಆಗಸದಲ್ಲಿ ಹೊಮ್ಮಿಸುವ ಬೆಳಕಿನ ಚಿತ್ತಾರಗಳು ಉತ್ಸವದ ಸಂಭ್ರಮಕ್ಕೆ ಬಹುರಂಗಿನ ಭಾಷ್ಯ ಬರೆಯುತ್ತವೆ. ಈ ಬಾರಿ ಮೂರು ಸಾವಿರ ಡ್ರೋನ್‌ಗಳನ್ನು ಬಳಸುತ್ತಾರೆ. ಎಷ್ಟು ನೋಡಿದರೂ ತಣಿಯದ ಬೆಳಕಿನ ಚಿತ್ತಾರದಲ್ಲಿ ಜನ ಮಿಕ್ಕೆಲ್ಲವನ್ನೂ ಮರೆಯುತ್ತಾರೆ. ಕನಸಿನಲ್ಲೂ, ಮನಸಿನಲ್ಲೂ ಬೆಳಕಿನ ಚಿತ್ತಾರ ಚಿಗುರುತ್ತಲೇ ಇರುತ್ತದೆ. ಇದು ಇರುಳ ಬೆಳಕಿನ ದಸರೆಯ ಸೊಗಸು.

ಪುಟಾಣಿಗಳು, ಅಣ್ಣ–ತಂಗಿಯರು, ಸ್ನೇಹಿತರು, ಸಹಪಾಠಿಗಳು, ಪ್ರೇಮಿಗಳು, ನವದಂಪತಿಗಳು, ಮಕ್ಕಳೊಂದಿಗರು ತನ್ಮಯರಾಗಿ ತೆಗೆದುಕೊಳ್ಳುವ ಬಗೆಬಗೆಯ ಸೆಲ್ಫಿಗಳು, ರೀಲ್ಸ್ ಮಾಡುವ ಉಮೇದು.. ಎಲ್ಲವೂ ಎಲ್ಲೆಡೆ ಮೇಳೈಸುತ್ತವೆ. ತೂಗುಬಿಟ್ಟ ಸಾಲುದೀಪಗಳಡಿ ಮಿಂಚು ಹುಳುಗಳಂತೆ ಕಣ್ಣು ಕೋರೈಸುವ ಸಣ್ಣ ಸಣ್ಣ ನೂರಾರು ಬಲ್ಬ್‌ಗಳು ಸೃಷ್ಟಿಸುವ ಚಿತ್ತಾರದ ಬಳಿಗೆ ನಡೆದು ಬಂದು, ಮೆಲ್ಲಗೆ ಮುಖ ತಂದು, ಕ್ಯಾಮೆರಾಗೆ ಪೋಸು ಕೊಟ್ಟು ತರೇವಾರಿ ನಗು ಹೊಮ್ಮಿಸುವ ಖುಷಿಗೆ ಬೇರೆ ಸಾಟಿಯುಂಟೇ? ಫೋಟೊ, ವಿಡಿಯೊ ಸರಿಯಾಗಿ ಬರಲಿಲ್ಲವೇ. ಮತ್ತೊಂದು ಶಾಟ್‌ಗೆ ಸಿದ್ಧತೆ ಶುರು. ಇದೇ ದಸರೆಯ ಹೈಲೈಟ್. ಇದು ಮಿಸ್ ಆದರೆ ಇನ್ನೊಂದು ವರ್ಷ ಕಾಯಬೇಕಷ್ಟೇ.

ದಸರೆಯೂ ಚಾಮುಂಡಿಬೆಟ್ಟವೂ..

ಅಂಬಾ ವಿಲಾಸ ಅರಮನೆ ಒಂದೆಡೆ ಇದ್ದರೆ, ಇಡೀ ನಗರವೇ ಇನ್ನೊಂದು ತೆರೆದ ಅರಮನೆ ಎಂಬಂತೆ ಹೊಳೆಯುತ್ತದೆ. ಆದರೆ ಅದನ್ನು ಕಣ್ತುಂಬಿಕೊಳ್ಳುವ ಅವಕಾಶ ಎಲ್ಲಿ ಸಿಗುತ್ತದೆ ನಿಮಗೆ ಗೊತ್ತೇ? ನಿಮ್ಮ ಊಹೆ ನಿಜ, ಚಾಮುಂಡಿಬೆಟ್ಟದಲ್ಲಿ.

ಬೆಟ್ಟದ ವೀಕ್ಷಣಾ ಗೋಪುರದಲ್ಲಿ, ಬೆಟ್ಟವೇರುವ ದಾರಿಯ ಕಲ್ಲು ಕಟ್ಟೆಗೆ ಒರಗಿ ನಿಂತು ನಗರವನ್ನು ಕಣ್ತುಂಬಿಕೊಳ್ಳಲೆಂದೇ ಸಾವಿರಾರು ಮಂದಿ ಸಂಜೆಯಿಂದಲೇ ಸಾಲುಗಟ್ಟುತ್ತಾರೆ. ದಸರೆ ವೇಳೆಯಲ್ಲಿ ಬೆಟ್ಟದ ರಸ್ತೆಯಲ್ಲಿ ಸಾಗುವುದೇ ಒಂದು ವಿಶೇಷ, ರೋಮಾಂಚಕ ಅನುಭವ. ಬೆಟ್ಟದ ಮೇಲಿಂದ ನಗರವನ್ನು ನೋಡುವುದು ಇನ್ನೊಂದು ಕಿನ್ನರಲೋಕಕ್ಕೆ ಎದುರಾದಂತೆ.

ಭೂಮಿಯೂ ಆಕಾಶ ಎಂಬ ಮಾತಿಗೆ ಅನ್ವರ್ಥವಾಗಿ, ನಗರವನ್ನು ಆವರಿಸಿದ ದೀಪಗಳು ನಕ್ಷತ್ರಲೋಕವನ್ನು ಸೃಷ್ಟಿಸಿರುತ್ತವೆ. ನೋಡುವಷ್ಟೂ ಸೊಗಸು. ದಣಿಯದು ಮನಸು. ಎಷ್ಟು ದೂರ? ಅದು ನಿಮ್ಮ ಸಾಮರ್ಥ್ಯಕ್ಕೆ ಬಿಟ್ಟಿದ್ದು.

ಬೆಟ್ಟಕ್ಕೆ ಹೋಗಲಾಗದವರು ಅಂಬಾರಿ ಡಬ್ಬಲ್ ಡೆಕ್ಕರ್ ಬಸ್‌ನಲ್ಲಿ, ಟಾಂಗಾಗಳಲ್ಲಿ ಕುಳಿತು ನಗರದ ದೀಪಾಲಂಕಾರವನ್ನು ಕಣ್ತುಂಬಿಕೊಳ್ಳುವ ಅವಕಾಶವೂ ಇದೆ. ದರ ಮಾತ್ರ ದುಬಾರಿ.

ಇಲ್ಲಿ ವಿಶೇಷ ಎನ್ನಿಸುವುದೇ ಲೈಟಿಂಗ್ಸ್. ಏಕೆ ಗೊತ್ತೇ?

ಇವೆಲ್ಲದ್ದರ ಕಡೆಗೆ ಈ ದೀಪಾಲಂಕಾರವೇ ನಮ್ಮನ್ನು ಕರೆದೊಯ್ಯುತ್ತದೆ. ಹೆಜ್ಜೆ ಇಟ್ಟಲ್ಲೆಲ್ಲ, ನೋಟ ಹರಿದಲ್ಲೆಲ್ಲಾ ಬೆಳಕೋ ಬೆಳಕು. ದೀಪಾಲಂಕಾರ ನೋಡುವುದೋ, ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದೋ ಎಂಬ ಗೊಂದಲವೂ ಮರೆಯಾಗಿ, ಒಂದರೊಳಗೊಂದು ಬೆರೆತು ಹೋಗುತ್ತವೆ.

ಹೀಗೆ, ದಸರೆಯು ಹಗಲಿನಲ್ಲಿ ಒಂದು ರೀತಿ, ಇರುಳಿನಲ್ಲಿ ಇನ್ನೊಂದು ರೀತಿ ರೂಪಾಂತರಗೊಳ್ಳುತ್ತದೆ! ದಸರೆಯಷ್ಟೇ ಅಲ್ಲ, ಇಡೀ ಮೈಸೂರು ನಗರವೇ ಬಣ್ಣದ ಚಿಟ್ಟೆಯಂತೆ ಬದಲಾಯಿಸಿಕೊಳ್ಳುತ್ತದೆ. ಹೀಗಾಗಿಯೇ ಮೈಸೂರಿಗೆ ಎರಡು ದಸರಾ. ಒಂದು ಹಗಲಿನದ್ದು, ಇನ್ನೊಂದು ಇರುಳಿನದ್ದು. ಹಗಲಿನಲ್ಲಿ ಸಾಮಾನ್ಯವೆಂಬಂತೆ ಕಾಣುವ ಮೈಸೂರು ನಗರ ಇರುಳಿನಲ್ಲಿ ಇಂದ್ರಲೋಕವೇ.

ದಸರೆಯನ್ನು ಸಂಜೆ ಬಳಿಕ ಅಸಾಮಾನ್ಯವೆನ್ನಿಸುವಂತೆ ಮಾಡುವುದೇ ಈ ಲೈಟಿಂಗ್ಸ್. ಬೆಳಕಿನ ಹಾದಿಯೆನ್ನಿ, ಬೆಳಕಿನ ಲೋಕವೆನ್ನಿ, ಬೆಳಕಿನ ಬೆರಗೆನ್ನಿ. ಬೆರಗಿನ ಬೆಳಕೆನ್ನಿ, ನೀವು ಯಾವ ಹೆಸರಿಟ್ಟರೂ ಸೈ. ಆದರೆ, ನಿಮ್ಮೊಳಗೂ ಬೆಳಕು ವಿಜೃಂಭಿಸುವುದೂ ನಿಮ್ಮ ಅನುಭವಕ್ಕೆ ಬರುತ್ತದೆ.

ರಸ್ತೆ, ವೃತ್ತಗಳಲ್ಲಿರುವ ಮರಗಳ ಮೈಗೆ ವಿದ್ಯುತ್ ದೀಪದ ಬಳ್ಳಿಗಳನ್ನು ಸುತ್ತುವ ಪದ್ಧತಿ ಕೆಲವು ವರ್ಷಗಳ ಹಿಂದೆ ಶುರುವಾಯಿತು. ಅದಕ್ಕೂ ಮುನ್ನ ರೆಂಬೆ–ಕೊಂಬೆಗಳಿಗಷ್ಟೇ ಈ ಬಳ್ಳಿಗಳನ್ನು ತೂಗುಬಿಟ್ಟು ಅಲಂಕರಿಸಲಾಗುತ್ತಿತ್ತು. ಜೊತೆಗೆ ಬಣ್ಣ ಬಣ್ಣದ ಸ್ಪಾಟ್‌ಲೈಟ್‌ಗಳನ್ನಿಟ್ಟು ಬೆಳಗಿಸಲಾಗುತ್ತಿತ್ತು. 'ಈ ಬಗೆಯ ಅಲಂಕಾರಗಳಿಂದ ಮರಗಳೂ ಸೇರಿದಂತೆ ಅಲ್ಲಿರುವ ಹಾಗೂ ಸುತ್ತಮುತ್ತಲಿನ ಜೀವಸಂಕುಲಕ್ಕೆ ತೊಂದರೆಯಾಗುತ್ತದೆ' ಎಂಬ ಪರಿಸರ ಪ್ರಿಯರ ಹಸಿರು ಕಾಳಜಿ ಮುಂದುವರಿದಿದೆ.

ಒಂದು ಕಾಲಕ್ಕೆ ದಸರೆಯ ದೀಪಾಲಂಕಾರವೆಂದರೆ ಅದು ಅಂಬಾವಿಲಾಸ ಅರಮನೆ ಕೇಂದ್ರಿತವಾಗಿತ್ತು. ಜಂಬೂಸವಾರಿ ಸಾಗುವ ಸಯ್ಯಾಜಿರಾವ್ ರಸ್ತೆಗಷ್ಟೇ ಸೀಮಿತವಾಗಿತ್ತು. ರಸ್ತೆ, ವೃತ್ತಗಳನ್ನು ದೀಪಗಳಿಂದ ಸಿಂಗರಿಸುವ ಪದ್ಧತಿ ಇರಲಿಲ್ಲ. ಜನ ದೀಪಾಲಂಕಾರ ನೋಡಲು ಅಲ್ಲಿಗೇ ಬರುತ್ತಿದ್ದರು ಎಂದು ಹಿರಿಯರು ನೆನಪಿಸಿಕೊಳ್ಳುತ್ತಾರೆ. ಈಗಲೂ ಅರಮನೆಯ ದೀಪಾಲಂಕಾರದ ವೈಭವವೇ ಒಟ್ಟಾರೆ ದೀಪಾಲಂಕಾರದ ಕೇಂದ್ರಾಕರ್ಷಣೆಯಾಗಿ ಉಳಿದಿದೆ. ಅದರ ವಿನ್ಯಾಸವೇ ಹಾಗೆ. ಹಗಲಿನಲ್ಲೂ ಆಕರ್ಷಕ. ಇರುಳಿನಲ್ಲೂ ಆಕರ್ಷಕ. ಈಗ ಎಲ್ಲ ಕಡೆ ದೀಪಾಲಂಕಾರಗಳನ್ನು ನೋಡಿಕೊಂಡು ಕೊನೆಗೆ ಜನ ಅರಮನೆಯತ್ತ ಬರುತ್ತಾರೆ. ಅದುವರೆಗೆ ನೋಡಿದ್ದೆಲ್ಲವನ್ನೂ ಅರಮನೆ ಮರೆಯುವಂತೆ ಮಾಡುತ್ತದೆ!

ನಿಮಗೆ ಗೊತ್ತಿರಲಿ, ಈ ಅರಮನೆಯು ಜಗಮಗಿಸುವಂತೆ ಮಾಡಲು ಒಂದು ಲಕ್ಷ ಇನ್‌ಕ್ಯಾಂಡಿಸೆಂಟ್ ವಿದ್ಯುತ್ ಬಲ್ಬ್‌ಗಳಿವೆ. ಅವುಗಳನ್ನು ದೆಹಲಿಯಿಂದ ತರಿಸಲಾಗಿದೆ. ಈ ಬಾರಿ 18 ಸಾವಿರ ಹೊಸ ಬಲ್ಬ್‌ಗಳನ್ನು ಅಳವಡಿಸಲಾಗಿದೆ. ತಿರುಪಿನ ಬುರುಡೆಯ ಬಲ್ಬ್‌ಗಳನ್ನು ಅರಮನೆಗೆಂದೇ ವಿಶೇಷವಾಗಿ ತಯಾರಿಸಲಾಗುತ್ತದೆ.

11ನೇ ಪುಟಕ್ಕೆ...

> ಮೈಸೂರು ದಸರೆಯ ಸಂಭ್ರಮದಲ್ಲಿ ಮುಳುಗೇಳುತ್ತಿದೆ. ಇಡೀ ನಗರ ಸಂಜೆ ಆಗುತ್ತಿದ್ದಂತೆ ಬೆಳಕನ್ನೇ ಮುಡಿದಂತೆ ಕಂಗೊಳಿಸುತ್ತದೆ. ಇರುಳ ಬೆಳಕನ್ನು ಕಣ್ತುಂಬಿಕೊಳ್ಳಲು ಜನರು ಮುತ್ತಿಕೊಳ್ಳುತ್ತಾರೆ. ಇದೇ ದಸರೆ ಸೃಜನಶೀಲ ಯುವ ಮನಸ್ಸುಗಳಿಗೂ ಪ್ರೇರಣೆಯಾಗಿ, ಹೊಸ ಹೊಸ ಗೀತೆಗಳ ಸೃಷ್ಟಿಗೂ ನೆಪವಾಗಿದೆ.

ದೀಪಾಲಂಕಾರದಲ್ಲಿ ಜಗಮಗಿಸಿದ ಮೈಸೂರಿನ ಆಲ್ಬರ್ಟ್ ವಿಕ್ಟರ್ ರಸ್ತೆ

ಚಿತ್ರಗಳು: ಅನೂಪ್ ರಾಘ.ಟಿ.

ಹಾಡುಕಟ್ಟುವವರ ತವರು ಮೈಸೂರು

• ಮೋಹನ್ ಕುಮಾರ ಸಿ.

ಅದು 2010ರ ದಸರೆ. 'ಲೂಸಿಯಾ' ಸಿನಿಮಾದ ಸಂಗೀತ ನಿರ್ದೇಶಕ ಎಸ್.ವಿ.ಪೂರ್ಣಚಂದ್ರ ತೇಜಸ್ವಿ ಆಗಷ್ಟೆ ಸಂಗೀತ ಕ್ಷೇತ್ರದಲ್ಲಿ ಪುಟ್ಟ ಹೆಜ್ಜೆಗಳನ್ನು ಇಡುತ್ತಿದ್ದರು. ಅವರ ಮೊದಲ ರಾಗ ಸಂಯೋಜನೆಯೇ ಮೈಸೂರು ಬಗೆಗಿನದು. ಆಗ 'ದಸರಾ ಹಬ್ಬ ನಾಡಿನ ತುಂಬಾ' ಎಂಬ ಸ್ವಾಗತಗೀತೆಯನ್ನು ಮಾಡಿದ್ದರು. ಅದು ಪ್ರತಿ ವರ್ಷವೂ 'ಪಂಜಿನ ಕವಾಯತು' ನಡೆಯುವಾಗ ಮೊಳಗುತ್ತದೆ. 'ದಸರಾ ಹಬ್ಬ ನಾಡಿನ ತುಂಬಾ..ನಾಡ ಹಬ್ಬಕೆ.. ನಮ್ಮ ದಸರಕೆ ಬನ್ನಿ ಸೇರುವ..ಕರುನಾಡ ಹಬ್ಬದಿ ನಮ್ಮ ದಸರದಿ ಎಲ್ಲ ಬೆರೆಯುವ' ಎಂದಿದ್ದರು. ಜನಪದ ದಾಟಿಯಲ್ಲಿದ್ದ ಗೀತೆಯು ಎಲ್ಲರನ್ನೂ ಸೆಳೆದಿತ್ತು.

2016ರ ದಸರೆ ಸಂದರ್ಭದಲ್ಲಿ 'ಜಂಬೂ ಸವಾರಿ..ನೋಡಕ್ಕೆ ನೀವು ಮೈಸೂರಿಗೆ ಬನ್ರೀ' ಎಂದು 'ನಾವು' ಬ್ಯಾಂಡ್ ಪ್ರೀತಿಯಿಂದ ಆಹ್ವಾನ ನೀಡಿತು. ಬ್ಯಾಂಡ್‌ನ ಮೊದಲ ವಿಡಿಯೊ ಹಾಡಿದು. ಜಂಬೂ ಸವಾರಿಯ ಸಿದ್ಧತೆ ಜೊತೆಗೆ ಮೈಸೂರಿನ ಜನಜೀವನ ದಾಖಲಿಸಿತ್ತು. ಪ್ರವಾಸಿಗರನ್ನೂ ಕರೆದಿತ್ತು.

'ಆನೆ ಮೇಲೊಂದ್ ಅಂಬಾರಿ.. ನೋಡಕ್ಕಲ್ಲ ದುಬಾರಿ.. ಲಕ್ಷಾಂತರ ಜನ ಸೇರ್ತಾರ್ರೀ ಪ್ರೋಗ್ರಾಮ್ಸೆಲ್ಲ ತರಾವರಿ' ಎನ್ನುತ್ತಲೇ ರ್‍ಯಾಪ್ ಶೈಲಿಯಲ್ಲಿ 'ಜಟ್ಟಿ ಕಾಳಗ ನೋಡೊದಕ್ಕೆ ಅರಮನೆಗೆ ನುಗ್ಗಿಬೀಳು.. ಬನ್ನಿಮಂಟಪಕ್ ಭೇಟಿ ನೀಡಿ ಟಾರ್ಚುಲೈಟು ಪೆರೇಡ್ ನೋಡು'... ಹೀಗೆ ಗೀತೆ ಸಾಗುತ್ತದೆ. 'ಜಂಬೂಸವಾರಿಯನ್ನು ಕಣ್ತುಂಬಿಕೊಳ್ಳಲು ಕುರ್ಚಿ ಬೇಕಿಲ್ಲ. ಟಿಕೆಟ್ ಕಾಯ್ದಿರಿಸಬೇಕಿಲ್ಲ. ಎಲ್ಲೆಂದರಲ್ಲಿ ಟವೆಲ್ ಹಾಸಿ ಕೂತು ನೋಡಬಹುದು' ಎನ್ನುವ ಸಾಲುಗಳು 'ಜನಸಾಮಾನ್ಯರ ದಸರೆಯಿದು' ಎನ್ನುವಂತೆ ಮಾಡುತ್ತದೆ. ಫೋಕ್ ಆರ್ಟ್ ರಾಕ್ ಶೈಲಿಯಲ್ಲಿ ಸಂಯೋಜಿಸಲಾಗಿದ್ದು, ಶಾಸ್ತ್ರೀಯ ಸಂಗೀತದ ಮಿಳಿತವೂ ಇದೆ. ತ್ಯಾಗರಾಜರ 'ಎಂದರೊ ಮಹಾನುಭಾವುಲು' ಕೃತಿಯನ್ನು ಬಳಸಿಕೊಂಡಿರುವುದು ವಿಶೇಷ.

'ಚಿಕ್ಕಂದಿನಲ್ಲಿ ಅಪ್ಪ–ಅಮ್ಮ ಜೊತೆ ದಸರೆಯನ್ನು ಜನಸಮೂಹದೊಡನೆ ನಿಂತು ನೋಡುವ ಅನುಭವವನ್ನೇ ಗೀತೆಯಾಗಿಸಿದ್ದೇವೆ' ಎನ್ನುತ್ತಾರೆ ಬ್ಯಾಂಡ್‌ನ ತಬಲಾ, ಮೃದಂಗ ವಾದಕ ಅನುಷ್ ಎ. ಶೆಟ್ಟಿ. ಅನುಷ್ ಶೆಟ್ಟಿ, ಸುಂದರೇಶ್ ದೇವಪ್ರಿಯಂ, ಶಾಲೋಮ್ ಸನ್ನುತಾ, ಬಿ.ಕೆ.ಕಿರಣ್ ಈ ಹಾಡನ್ನು ಹಾಡಿದ್ದಾರೆ. ಶೇಖರ್ ಎಸ್. ಡಿಎಫ್‌ಡಿ ಛಾಯಾಗ್ರಹಣ, ಸಂಕಲನದ ಜೊತೆ ನಿರ್ದೇಶನ ಮಾಡಿದ್ದಾರೆ.

ಪೂರ್ಣಚಂದ್ರ ತೇಜಸ್ವಿ

ಎಂದೆಂದೂ ನಮ್ಮೂರು ಮೈಸೂರು

2018ರ ದಸರೆಯಲ್ಲಿ ವಾಸು ದೀಕ್ಷಿತ್ ಬರೆದು, ಸಂಯೋಜಿಸಿದ 'ಮೈಸೂರು' ಹಾಡು ಎಲ್ಲೆಲ್ಲೂ ರಿಂಗಣಿಸುತ್ತದೆ. 'ಬೆರೆತರೂ ನಮ್ಮೂರು.. ಮರೆತರೂ ನಮ್ಮೂರು.. ಎಂದೆಂದೂ ನಮ್ಮೂರು ಮೈಸೂರು...' ಹೀಗೆ ಆರಂಭವಾಗುವ ಗೀತೆ ಮೈಸೂರಿನ ಸೊಬಗನ್ನು ಕಟ್ಟಿಕೊಟ್ಟಿತ್ತು. ಈ ವಿಡಿಯೊ ಹಾಡು ಮೈಸೂರನ್ನು ತಾಯಂತೆ ಪ್ರೀತಿಸುವವರಲ್ಲಿ ಸಂತಸವನ್ನು ಉಕ್ಕಿಸುತ್ತದೆ. ಪ್ರತಿ ದಸರಾದಲ್ಲೂ ಮೈಸೂರಿಗರಿಗೆ ಮುದ ನೀಡುತ್ತದೆ. ಸುಗಮ ಸಂಗೀತ, ಶಾಸ್ತ್ರೀಯ, ಜನಪದದ ಹೂರಣವುಳ್ಳ ಹಾಡಿಗಾಗಿ ಮ್ಯಾಂಡಲಿನ್, ಸ್ಯಾಕ್ಸೋಫೋನ್, ಹಾರ್ಮೋನಿಯಂ ಜೊತೆಗೂಡಿವೆ. ಅರಮನೆ ಬ್ಯಾಂಡ್‌ನ ಮರುಸೃಷ್ಟಿಯಂತೆ ಫ್ಯೂಷನ್ ನಾದವೂ ಹೃದ್ಯವಾಗುತ್ತದೆ.

'ಕಾವೇರಿ ತಾಯಿ ತಂಪು ಒಡಲಲ್ಲಿ, ಚಾಮುಂಡಿ ಒಲುಮೆ ನೆತ್ತಿಲಿ. ಅರಮನೆಯ ಬೆಳಕು ಜನಮನದ ಸೊಬಗು ನಿನ್ನಲ್ಲೇ...' ಎನ್ನುತ್ತಲೇ, 'ಬೆಳೆದರೂ ಬಾಗದಿರೂ ಅರಳಿಯೂ ಬಾಡದಿರು ನೀ ಎಂದೆಂದೂ. ಬಿರುಕದಿರು, ಬದಲಾಗದಿರು, ಮರೆಯಾಗದಿರು ಮೈಸೂರು' ಎಂದು ಬಿನ್ನವಿಸಿಕೊಳ್ಳುವ ಸಾಲುಗಳು, ಬದಲಾಗುತ್ತಿರುವ ಊರಿನ ಕುರಿತ ಅಹವಾಲನ್ನು ಮಂಡಿಸುತ್ತವೆ. 'ಮೈಸೂರು' ಕುರಿತ ಹಾಡೆಂದರೆ ದೀಕ್ಷಿತ್‌ಗೆ ವಿಶೇಷ ಪ್ರೀತಿ.

'ಮೈಸೂರು ಕ್ರಿಯೇಟಿವಿಟಿಯ ಅಂಗಳ. ಮಗುವಿನ ಕಲಿಕೆಗಾಗಿ ತಾಯಿಯೇ ಮಗುವಾಗುವಂತೆ ಮೈಸೂರು. ಇದು ನನ್ನ ಜೀವನವನ್ನು ರೂಪಿಸಿದೆ. ಹುಟ್ಟಿದೂರಿನ ಭಾವುಕತೆ ಇದ್ದರೂ, ಅದನ್ನು ಉಳಿಸುವ ಕಾಳಜಿಯೇ ಹಾಡಾಗಿದೆ' ಎನ್ನುತ್ತಾರೆ ವಾಸು ದೀಕ್ಷಿತ್.

ನಾವೇನೇ ರಾಜರು

'ಕರುನಾಡಿನ ಹೆಮ್ಮೆಯ ಊರು ನಮ್ಮ ಮೈಸೂರು...' ಹಾಗೂ 'ನಮ್ಮೂರು ಮೈಸೂರು ನಾವೇನೇ ರಾಜರು' ಎಂಬ ಎರಡು ಹಾಡುಗಳನ್ನು ಮೈಸೂರಿನವರೇ ಆದ ಸಂಗೀತ ನಿರ್ದೇಶಕ ಹರಿಕಾವ್ಯ ಹಾಡಿದ್ದಾರೆ. 'ನಮ್ಮ ಮೈಸೂರು...' ಅವರೇ ಬರೆದು, ರಾಗ ಸಂಯೋಜಿಸಿ ಹಾಡಿದ್ದು, ನವರಾತ್ರಿಯ ಸೊಬಗನ್ನು ಪ್ರಜ್ವಲ್ ಅರಸ್ ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದಾರೆ.

11ನೇ ಪುಟಕ್ಕೆ...

ಲವ್ ಯೂ ಮೈಸೂರು

ಮೈಸೂರಿನವರೇ ಆದ ಬಹುಭಾಷಾ ಹಿನ್ನೆಲೆ ಗಾಯಕ ವಿಜಯಪ್ರಕಾಶ್ ಹಾಡಿರುವ 'ಲವ್ ಯೂ ಮೈಸೂರು' ನಗರದ ಸೊಬಗಿನ ಜೊತೆಗೆ ಮೈಸೂರಿಗರ ಹೃದಯವಂತಿಕೆ, ಕಲಾಪ್ರೀತಿಯನ್ನು ಕಟ್ಟಿಕೊಡುತ್ತದೆ. 2019ರ ದಸರೆಯಲ್ಲಿ ಬಿಡುಗಡೆಯಾದ ಈ ಹಾಡು ದಸರೆ ಬಂದಾಗಲೆಲ್ಲ ಸಾಮಾಜಿಕ ಜಾಲತಾಣಗಳಲ್ಲಿ ಜೋರಾಗಿ ಸದ್ದು ಮಾಡುತ್ತದೆ.

'ರಾಜಾಧಿರಾಜರ ತವರೂರಿದು... ಸ್ವರ್ಗಕ್ಕೆ ಕಿಚ್ಚು ಹಚ್ಚುವ ಮೈಸೂರಿದು..' ಎಂದು ಆರಂಭವಾಗುವ ಹಾಡು 'ಚಾಮುಂಡಿ ಗಿರಿಯಿಂದ ನಮ್ಮೂರ ಅಂದ ಚಂದ ನೋಡೋದೆ ಆನಂದ.. ಲವ್ ಯೂ ಮೈಸೂರು. ಶ್ರೀಗಂಧ ನಮ್ಮೂರು..' ಎನ್ನುತ್ತದೆ.

ದಸರೆಯನ್ನು ಕ್ಯಾಮೆರಾದಲ್ಲಿ ಸೆರೆಹಿಡಿದವರು ಜಾಲತಾಣದಲ್ಲಿ ಹಂಚುವಾಗ ಹಿನ್ನೆಲೆ ಹಾಡಾಗಿ ಇದನ್ನು ಬಳಸುತ್ತಾರೆ. ದಸರೆಯ ದೀಪಾಲಂಕಾರ, ಬೃಂದಾವನ ಸೇರಿದಂತೆ ಮೈಸೂರಿನ ವಿಶೇಷಗಳನ್ನು ಬಿತ್ತರಿಸುವ ಹಾಡು ವಿಜಯಪ್ರಕಾಶ್ ಅವರ ಮೆಚ್ಚಿನ ಹಾಡುಗಳಲ್ಲೊಂದು. ಅದಕ್ಕೆ ಆಕಾಶ್ ಪರ್ವ ಸಂಗೀತ ನೀಡಿದ್ದರೆ, ಈಶ್ವರ್ ಶ್ಯಾಮರಾವ್ ಸಾಹಿತ್ಯ ಬರೆದಿದ್ದಾರೆ.

ಎಂದೆಂದೂ ನಮ್ಮೂರು ಮೈಸೂರು ಎನ್ನುವ ವಾಸು ದೀಕ್ಷಿತ್

ಆಶ್ರಮ ಭಗ್ನಮೂರ್ತಿಗಳಿಗೆ ಆಶ್ರಯ

• ಚಂದ್ರಶೇಖರ ಎಸ್ ಚಿನಕೇಕರ

'ಏನು ಅನಾಹುತ ಆಗುತ್ತೋ ಕಾಣೆ. ಈ ವರ್ಷ ರಥೋತ್ಸವದಲ್ಲಿ ದೇವರ ಮೂರ್ತಿ ಭಗ್ನಗೊಂಡಿದೆ. ಇದರಿಂದ ನಮ್ಮೂರಿಗೆ ಕೇಡು ಆಗಬಹುದು'- ಯಾವುದೇ ಊರು ಇರಲಿ, ದೇವರ ಮೂರ್ತಿಗಳು ಭಗ್ನಗೊಂಡಲ್ಲಿ ಇಂತಹ ಮಾತು ಕೇಳಿ ಬರುವುದು ಸಾಮಾನ್ಯ. ಆದರೆ, ಈ ರೀತಿಯ ಮೌಢ್ಯಕ್ಕೆ ತಿಲಾಂಜಲಿ ಇಡುವಂತಹ ದಿಟ್ಟ ಹೆಜ್ಜೆಯೊಂದನ್ನು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ನಿಡಸೋಸಿ ಮಠದ ಮಠಾಧೀಶ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ ಇಟ್ಟಿದ್ದಾರೆ.

ಮೂರು ಶತಮಾನಗಳ ಇತಿಹಾಸ ಹೊಂದಿರುವ ನಿಡಸೋಸಿಯ ದುರುದಂಡೀಶ್ವರ ಸಿದ್ಧಸಂಸ್ಥಾನ ಮಠವು ಉತ್ತರ ಕರ್ನಾಟಕ ಹಾಗೂ ಪಶ್ಚಿಮ ಮಹಾರಾಷ್ಟ್ರದಲ್ಲಿ ಅಪಾರ ಸಂಖ್ಯೆ ಭಕ್ತಸಮೂಹ ಹೊಂದಿದೆ. ಎಲ್ಲೆಡೆಯಂತೆ ಇಲ್ಲಿಯೂ ಪೂಜೆ, ಭಜನೆ, ಪುರಾಣ, ಪ್ರವಚನ ಸೇರಿದಂತೆ ತ್ರಿವಿಧ ದಾಸೋಹ ನಡೆಯುತ್ತವೆ. ಇದರ ನಡುವೆಯೂ ಹತ್ತು ಹಲವು ಗೊಡ್ಡು ಸಂಪ್ರದಾಯಗಳಿಗೆ ಸೆಡ್ಡು ಹೊಡೆದು ಹೊಸ ಮನ್ವಂತರಕ್ಕೆ ಸ್ವಾಮೀಜಿ ನಾಂದಿ ಹಾಡಿದ್ದಾರೆ.

ಹಿಂದೂ ಧರ್ಮದಲ್ಲಿ ದೇವಾಲಯ, ಮಠ ಸೇರಿದಂತೆ ವಿವಿಧ ಧಾರ್ಮಿಕ ಕ್ಷೇತ್ರಗಳಲ್ಲಿ ಮೂರ್ತಿ ಪ್ರತಿಷ್ಠಾಪಿಸಿ ಪೂಜಿಸಲಾಗುತ್ತದೆ. ಹೀಗೆ ಪೂಜೆ ಮಾಡಿದ ಹಲವು ಮೂರ್ತಿಗಳು ಆಯಾ ಕಲ್ಲಿನ ಆಯುಷ್ಯದಂತೆಯೋ, ಆಕಸ್ಮಿಕವಾಗಿಯೋ ಭಗ್ನಗೊಳ್ಳುವುದು ಸಾಮಾನ್ಯ. ಭಗ್ನಗೊಂಡ ಮೂರ್ತಿಗಳಿದ್ದರೆ ಅಪಶಕುನ. ಇದರಿಂದ ತೊಡಕು, ತೊಂದರೆ ಬರುತ್ತದೆ. ಪಾಪ ಸುತ್ತಿಕೊಳ್ಳುತ್ತದೆ ಎಂಬ ಮೌಢ್ಯ ಜನರಲ್ಲಿ ಬೇರೂರಿದೆ. ಹೀಗಾಗಿಯೇ ಕೆರೆ, ಬಾವಿ, ಹೊಳೆ, ಹಳ್ಳಗಳಿಗೆ ಭಗ್ನ ಮೂರ್ತಿಗಳನ್ನು ಎಸೆಯುವುದನ್ನು ಕಾಣುತ್ತೇವೆ.

ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ ಪ್ರಯತ್ನದಿಂದ ನೂರಾರು ಭಗ್ನಮೂರ್ತಿಗಳು ದುರದುಂಡೀಶ್ವರ ಸಿದ್ಧಸಂಸ್ಥಾನ ಮಠಕ್ಕೆ ಸೇರಿದ ಮೂರು ಎಕರೆ ಪ್ರದೇಶದಲ್ಲಿ ತಲೆ ಎತ್ತಿದ ಬಿಲ್ವಾಶ್ರಮದಲ್ಲಿ ಇರಿಸಲಾಗಿದೆ. ಬೃಹದಾಕಾರದ ಹುಣಸೆಮರ ಹಾಗೂ 260ಕ್ಕೂ ಹೆಚ್ಚು ಬಿಲ್ವಪತ್ರೆಯ ಮರಗಳು ಇಲ್ಲಿವೆ. ಈ ಬಿಲ್ವಾಶ್ರಮದ ಆವರಣದಲ್ಲಿಯೇ 15 ವರ್ಷಗಳಿಂದ ಸಾವಿರಕ್ಕೂ ಹೆಚ್ಚು ಭಗ್ನಗೊಂಡ ವಿವಿಧ ದೇವರ ಮೂರ್ತಿಗಳನ್ನು ಸಂಗ್ರಹಿಸಿಡಲಾಗಿದೆ.

ಕರ್ನಾಟಕ-ಮಹಾರಾಷ್ಟ್ರ ರಾಜ್ಯಗಳ ವಿವಿಧ ದೇವಸ್ಥಾನಗಳಲ್ಲಿ ಭಗ್ನಗೊಂಡ ನಂದಿ, ಗಣೇಶ, ದುರ್ಗಾ, ಲಕ್ಷ್ಮಿ, ಹನುಮಂತ, ಶಿವ, ವಿಠ್ಠಲ-ರುಕ್ಮಿಣಿ, ಶಿವಲಿಂಗ, ನಾಗರಮೂರ್ತಿಗಳ ಸಾಲೇ ಇಲ್ಲಿದೆ. ಭಗ್ನಗೊಂಡ ಮೂರ್ತಿಗಳನ್ನು ಹೊಳೆ, ಹಳ್ಳ, ಕೆರೆಗಳಲ್ಲಿ ಎಸೆಯುವುದನ್ನು ತಪ್ಪಿಸುವುದು ಹಾಗೂ ದೇವರಮೂರ್ತಿಗಳನ್ನು ಎಲ್ಲೆಂದರಲ್ಲಿ ಎಸೆಯುವುದರಿಂದ ಅವುಗಳಿಗೆ ಅಪಮಾನ ಮಾಡಿದಂತಾಗುತ್ತದೆ ಎಂಬ ಉದ್ದೇಶವೂ ಭಗ್ನಮೂರ್ತಿಗಳ ಸಂಗ್ರಹದ ಹಿಂದಿದೆ.

ಎಲ್ಲದಕ್ಕೂ ಮಿಗಿಲಾಗಿ ಭಗ್ನಗೊಂಡ ಮೂರ್ತಿಗಳು ಇದ್ದರೆ ಅಪಶಕುನ ಎಂಬ ಮೌಢ್ಯತೆಯು ಸಾಕಷ್ಟು ಜನರಲ್ಲಿ ಮನೆ ಮಾಡಿದೆ. ಇದರಿಂದ ತೊಂದರೆ ತಪ್ಪಿದ್ದಲ್ಲ ಎಂಬ ಮೂಢನಂಬಿಕೆಯನ್ನು ಜನರ ಮನದಿಂದ ಕಿತ್ತು ಹಾಕಲು ಇಂತಹ ಪ್ರಯತ್ನಕ್ಕೆ ಕೈ ಹಾಕಿ ಪಂಚಮ ಶಿವಲಿಂಗ ಸ್ವಾಮೀಜಿ ಯಶಸ್ವಿಯಾಗಿದ್ದಾರೆ. ಮೊದಲು ಸ್ವಾಮೀಜಿ ಸ್ವ ಇಚ್ಛೆಯಿಂದ ಎಲ್ಲೆಂದರಲ್ಲಿ ಬಿಸಾಕಿದ್ದ ಭಗ್ನ ಮೂರ್ತಿಗಳನ್ನು ತಂದು ಬಿಲ್ವಾಶ್ರಮದಲ್ಲಿ ಇರಿಸುತ್ತಿದ್ದರು. ಅಲ್ಲದೇ, ಮೂರ್ತಿ ಪ್ರತಿಷ್ಠಾಪನೆ ಮಾಡಲು ತೆರಳಿದ ಸಂದರ್ಭದಲ್ಲಿ ಭಕ್ತರಿಗೆ ಭಗ್ನಮೂರ್ತಿಗಳನ್ನು ಎಲ್ಲೆಂದರಲ್ಲಿ ಎಸೆಯಬಾರದು ಎಂಬ ಕಿವಿಮಾತುಗಳನ್ನೂ ಹೇಳುತ್ತಿದ್ದರು.

ದಿನ ಕಳೆದಂತೆ ಸ್ವಾಮೀಜಿ ಪ್ರೇರಣೆಯ ಮಾತುಗಳಿಂದ ಮಹಾರಾಷ್ಟ್ರದ ಕೊಲ್ಹಾಪುರ, ಸಾಂಗ್ಲಿ, ರತ್ನಾಗಿರಿ, ಸಾತಾರಾ, ಸೊಲ್ಲಾಪುರ ಹಾಗೂ ನಮ್ಮ ರಾಜ್ಯದ ಬೆಳಗಾವಿ, ಬಾಗಲಕೋಟೆ, ವಿಜಯಪುರ, ಧಾರವಾಡ, ಗದಗ ಮುಂತಾದ ಜಿಲ್ಲೆಗಳಿಂದ ಜನರು ಭಗ್ನಮೂರ್ತಿಗಳನ್ನು ಎಲ್ಲೆಂದರಲ್ಲಿ ಎಸೆಯುವ ಬದಲಾಗಿ ಇಲ್ಲಿಗೆ ತಂದಿಡುತ್ತಿದ್ದಾರೆ. ಕೆಲವೊಂದಿಷ್ಟು ಜನರಂತೂ ತಂದು ಇರಿಸಿದ ಮೂರ್ತಿಗಳನ್ನು ಆಗಾಗ ಬಂದು ನೋಡಿಕೊಂಡು ಕಣ್ತುಂಬಿಕೊಳ್ಳುತ್ತಾರೆ. ಇನ್ನು ಕೆಲವರು ತಮ್ಮೂರಲ್ಲಿ ಯಾವಾಗೆಲ್ಲ ಜಾತ್ರೆ ಉತ್ಸವಗಳು ನಡೆಯುತ್ತಿರುತ್ತವೆಯೋ ಆಗೆಲ್ಲ ಇಲ್ಲಿಗೆ ಬಂದು ಪೂಜೆ ಮಾಡಿ ನಮಿಸುವ ರೂಢಿ ಇದೆ.

ಮ್ಯೂಸಿಯಂ ರೂಪ?

ಹೀಗೆ ಭಗ್ನಮೂರ್ತಿಗಳನ್ನು ಬೃಹತ್ ಪ್ರಮಾಣದಲ್ಲಿ ಸಂಗ್ರಹಿಸಿ ದೊಡ್ಡದೊಂದು ಮ್ಯೂಸಿಯಂ ಮಾಡುವ ಉದ್ದೇಶವನ್ನು ಸ್ವಾಮೀಜಿ ಹೊಂದಿದ್ದಾರೆ. ಇದರಿಂದ ಆ ಕಾಲದ ಶಿಲ್ಪ ಕೆತ್ತನೆಯ ಶೈಲಿ ಹೇಗೆಲ್ಲ ಇತ್ತು ಎಂಬುವುದು ಮುಂದಿನ ಪೀಳಿಗೆಗೆ ತಿಳಿಸಿಕೊಡುವ ಉದ್ದೇಶವಿದೆ. ಎಲ್ಲದಕ್ಕೂ ಮಿಗಿಲಾಗಿ ಭಗ್ನಮೂರ್ತಿಗಳಿಂದ ಯಾವುದೇ ವಿಘ್ನಗಳು ಇಲ್ಲ ಎಂಬ ಸಂದೇಶ ಸಾರುವುದಾಗಿದೆ. ಭಗ್ನಗೊಂಡ ಮೂರ್ತಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಇಲ್ಲಿ ಹೆಚ್ಚುತ್ತಲೇ ಇವೆ. ಯಾರೇ ಆಗಲಿ ಭಗ್ನಮೂರ್ತಿಗಳನ್ನು ಎಲ್ಲೆಂದರಲ್ಲಿ ಎಸೆಯುವ ಬದಲು ತಮ್ಮ ಆಶ್ರಮದಲ್ಲಿ ತಂದು ಇಡಬಹುದೆಂಬ ಮುಕ್ತ ಅವಕಾಶವನ್ನು ಕಲ್ಪಿಸಿದ್ದಾರೆ ❖

ಭಗ್ನಗೊಂಡ ಮೂರ್ತಿಗಳೊಂದಿಗೆ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ

> **ಇಲ್ಲಿ ಭಗ್ನಮೂರ್ತಿಗಳನ್ನು ಬೃಹತ್ ಪ್ರಮಾಣದಲ್ಲಿ ಸಂಗ್ರಹಿಸಿ ದೊಡ್ಡದೊಂದು ಮ್ಯೂಸಿಯಂ ಮಾಡುವ ಉದ್ದೇಶವಿದೆ. ಮ್ಯೂಸಿಯಂನಿಂದಾಗಿ ಆ ಕಾಲದ ಶಿಲ್ಪಕಲೆಯನ್ನು ಉಳಿಸಿಕೊಂಡು ಬಂದಂತಾಗುತ್ತದೆ. ಜನರಲ್ಲಡಗಿದ ಮೌಢ್ಯತೆ ದೂರ ಮಾಡಲು ಹತ್ತು ಹಲವು ಜಾಗೃತಿ ಕಾರ್ಯಕ್ರಮಗಳನ್ನೂ ಆಯೋಜಿಸಲಾಗುತ್ತಿದೆ**
> **ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ,** ಪೀಠಾಧೀಶ, ದುರದುಂಡೀಶ್ವರ ಸಿದ್ಧಸಂಸ್ಥಾನ ಮಠ, ನಿಡಸೋಸಿ



ಆಶ್ರಮದ ಆವರಣದಲ್ಲಿರುವ ಭಗ್ನಗೊಂಡ ಮೂರ್ತಿ

ಮೂರನೇ ಕಿವಿ

ಶಬ್ದ-ನಿಶ್ಯಬ್ದದ ಜೊತೆಯಾಟ

• ಕೆ.ಎನ್ ಮೂರ್ತಿ

ಶ್ರವಣದೋಷವುಳ್ಳ ಮಗನಿಗೆ ಮನೆಯವರೆಲ್ಲರೂ ಸೇರಿ ಮಾತು ಕಲಿಸಲು ಪಟ್ಟ ಪ್ರಯತ್ನಗಳ ಕುರಿತು 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ದಾಖಲಿಸಿದ ಅನುಭವ ಕಥನ 'ಮೂರನೇ ಕಿವಿ' ಮುದ್ರಣ ಕಂಡು ಒಂದೂವರೆ ದಶಕದ ಬಳಿಕ ರಂಗರೂಪ ಪಡೆದಿದೆ.

ಮೈಸೂರಿನಲ್ಲಿದ್ದಾಗ ಮಾತು ಕಲಿತ ಅವರ ಮಗ ನಿರಂಜನ ಭಟ್ಟ 25 ವರ್ಷ ಪೂರೈಸುತ್ತಿರುವ ಹೊತ್ತಿನಲ್ಲಿ 'ಪರಿವರ್ತನ ರಂಗಸಮಾಜ' ಇದನ್ನು ಪ್ರಸ್ತುತಪಡಿಸಿದೆ. 'ಈ ಕಥನದ ಭಿನ್ನ ವಸ್ತು, ನಿರೂಪಣೆ ಹಲವು ವರ್ಷಗಳಿಂದ ತೀವ್ರವಾಗಿ ಕಾಡಿದೆ' ಎನ್ನುವ ಪ್ರೊ.ಎಸ್.ಆರ್. ರಮೇಶ್, ಕೃತಿಯನ್ನು ರಂಗರೂಪಕ್ಕೆ ತಂದು ನಿರ್ದೇಶಿಸಿದ್ದಾರೆ. ಈ ಕೃತಿಯ ಆಯ್ದ ಭಾಗ ಕೆಲವು ವರ್ಷಗಳ ಹಿಂದೆ ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಪಠ್ಯವೂ ಆಗಿತ್ತು. ಇತ್ತೀಚೆಗೆ ನಡೆದ ಮೈಸೂರು ವಿಜ್ಞಾನ ನಾಟಕೋತ್ಸವದಲ್ಲಿ ಮೊದಲ ಪ್ರದರ್ಶನ ಕಂಡಿದ್ದ ನಾಟಕ, ಬೆಂಗಳೂರಿನಲ್ಲೂ ಪ್ರದರ್ಶನಗಳನ್ನು ಕಂಡಿದೆ.

ಬಹಳ ಮುಖ್ಯವಾಗಿ ಇದು ಕಿವಿ ಕೇಳದ, ಮಾತು ಬಾರದ ಮಗನಿಗೆ ಹಲವು ಪ್ರಯೋಗಗಳ ಮೂಲಕ ಮಾತು ಕಲಿಸುತ್ತಲೇ ಲೋಕಜ್ಞಾನವನ್ನೂ ಹೇಳಿಕೊಟ್ಟ ದಂಪತಿಯ ಸಕ್ಸಸ್ ಸ್ಟೋರಿ. ಆ ಯಶಸ್ಸಿನ ಕಡೆಗೆ ದಂಪತಿ ಸೇರಿ ಮನೆಯವರೆಲ್ಲರ ಪ್ರಯೋಗಶೀಲ ಪಯಣ ಮಾತ್ರ ಅತ್ಯಂತ ಕಷ್ಟಕರವಾದದ್ದು ಎಂಬುದು ಕೃತಿಯ ಉದ್ದಕ್ಕೂ ಎದ್ದುಕಾಣುವ ಅಂಶ. ತಾಯಿ ದೀಪಾ ಭಟ್ಟ ಅವರ ಪರಿಶ್ರಮವೇ ಹೈಲೈಟ್. ಸಮಸ್ಯೆ ಇದೆ ಎಂದು ಕೊರಗುವುದಕ್ಕಿಂತಲೂ, ಪರಿಹಾರ ಕಂಡುಕೊಳ್ಳುವುದೇ ಮುಖ್ಯವೆಂಬಂತೆ, ಕಥನದ ನಿರೂಪಣೆ ಇದೆ. ಕೊನೆಗೆ ಉಳಿಯುವುದು ಆ ಯಶಸ್ಸಿನ ಸಂತೃಪ್ತಿ. ಇದು ಕೃತಿಯನ್ನು ಓದಿರುವ ಎಲ್ಲರಿಗೂ ಆಗಿರುವ ಅನುಭವ.

ನಾಟಕವನ್ನು ನೋಡುವ ಸಂದರ್ಭದಲ್ಲೂ ಈ ಅನನ್ಯ ಅನುಭವಕ್ಕಾಗಿಯೇ ಓದುಗ, ಪ್ರೇಕ್ಷಕರು ಎದುರು ನೋಡುತ್ತಾರೆ. ಅದನ್ನು ರಂಗಭೂಮಿಗೆ ತಂದವರದ್ದೂ ಅದೇ ಉದ್ದೇಶ. 'ಇದು ಕಟ್ಟು ಕಥೆಯಲ್ಲ!' ಎಂಬುದು ಲೇಖಕ ಕೃತಿಯ ಶೀರ್ಷಿಕೆಯೊಂದಿಗೆ ಕೊಟ್ಟಿರುವ ಅಡಿಸಾಲು. ಇದೊಂದು ವಾಸ್ತವ ಕಥೆ. ಕಲ್ಪನೆ ಎಂಬುದೇನೂ ಇಲ್ಲ. ಬಾಲಕನಿಗೆ ಐದಾರು ವರ್ಷದ ಅವಧಿಯಲ್ಲಿ ದಂಪತಿ ಶ್ರಮವಹಿಸಿ ಮಾತು ಕಲಿಸಲು ಪಟ್ಟ ಪ್ರಯತ್ನಗಳ ಗುಚ್ಛ. ಮುಖ್ಯವಾಗಿ ಮನೆ, ಆಸ್ಪತ್ರೆ ಹಾಗೂ ಶಾಲೆ ಕೇಂದ್ರಿತವಾದ, ತಾಯ್ತನ, ತಂದೆತನ ಹಾಗೂ ಮಗುತನದ ವಿಕಾಸದ ಕಥೆ. ಇದೆಲ್ಲವನ್ನೂ ಶ್ರವಣದೋಷ ಎಂಬ ಅಂಶವೇ ಒಟ್ಟುಗೂಡಿಸಿರುವುದು ವಿಶೇಷ.

ದಾವಣಗೆರೆಯಿಂದ ಮೈಸೂರಿಗೆ ಬಂದು, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಸಲಹೆ ಪಡೆದು, ಶ್ರವಣ ದೋಷವುಳ್ಳ ಮಕ್ಕಳ ತಾಯಂದಿರ ಸಂಸ್ಥೆಯಲ್ಲಿ ತಾಯಿ, ಮಗ ಇಬ್ಬರೂ ವಿದ್ಯಾರ್ಥಿಗಳಾಗಿ ಮಾತು ಕಲಿಯುವ, ಕಲಿಸುವುದೇ ಕಥನದ ಸಾರಲೇಖ. ನಾಟಕವೂ ಇದನ್ನೇ ನೆಚ್ಚಿಕೊಂಡಿದೆ.

ತಾಯಿ ಪಾತ್ರಧಾರಿ ಭುವನೇಶ್ವರಿ ತನ್ಮಯತೆಯ ಅಭಿನಯದಿಂದ, ಪತಿಯ ಪಾತ್ರಧಾರಿ ಕರ್ನಲ್ ಸತೀಶ್ ಅವರನ್ನು ಹಿಂದಿಕ್ಕುತ್ತಾರೆ. ಮೂಲ ಕಥೆಯಲ್ಲಿ ತಾಯಿ ತಾನು ಗಾಯಕಿ, ಸಿ.ಎ. ಆಗುವ ಆಸೆಯನ್ನು ಅದುಮಿಟ್ಟುಕೊಂಡರೆ, ನಾಟಕದ ತಾಯಿ ನೃತ್ಯಗಾತಿಯಾಗಬೇಕೆಂಬ ಆಸೆಯನ್ನು ಮಗನಿಗಾಗಿ ತ್ಯಜಿಸಿದಾಕೆ. ತಂದೆ ಮಾತ್ರ ಎರಡೂ ಕಡೆ ಪತ್ರಕರ್ತ. ಭುವನೇಶ್ವರಿ ನೃತ್ಯಪಟುವೂ ಆಗಿರುವುದರಿಂದ, ಸಂಕಟ, ಹತಾಶೆ, ಸಂಭ್ರಮಗಳನ್ನು ನೃತ್ಯಾಭಿನಯದಲ್ಲಿ ಪ್ರಸ್ತುತಪಡಿಸುವುದು ನಾಟಕದ ನಿರಂತರತೆಗೆ ನೆರವಾಗಿದೆ.

ಬಾಲಕನ ಪಾತ್ರವನ್ನು ಅಭಿನಯಿಸಿರುವ 6ನೇ ತರಗತಿಯ ಅಭಯಸಿಂಹ ಇಡೀ ಪ್ರಯೋಗದ ಕೇಂದ್ರ ಬಿಂದು. ಈ ತಂಡ ಕೆಲವು ತಿಂಗಳ ಹಿಂದೆ ರೂಪಿಸಿದ್ದ 'ವಿಕಾಸವಾದ' ನಾಟಕದಲ್ಲಿ ಅಭಿನಯಿಸಿದ್ದ. ಆರಂಭದ ಸನ್ನಿವೇಶಗಳಲ್ಲಿ ಮೌನಿಯಾಗಿರದೆ, ಪ್ರತಿ ಸದ್ದಿಗೂ ಕದಲುತ್ತಾ, ಮಾತಾಡಿಬಿಡುತ್ತಿದ್ದ ಆತನಿಂದ, 'ಏನೂ ಕೇಳಿಸುತ್ತಿಲ್ಲವೆಂದುಕೊಂಡು' ಅಭಿನಯಿಸುವಂತೆ ಮಾಡುವ ಸವಾಲನ್ನು ತಂಡ ಗೆದ್ದಿದೆ.

ಆದರೆ, ಬಾಲಕನಿಗೆ ಮಾತು ಕಲಿಸುವ ಪಯಣದಲ್ಲಿ ಜೊತೆಯಾದ ಆತನ ಅಜ್ಜಿ ಮತ್ತು ಅಣ್ಣನನ್ನು ಈ 'ಪ್ರಯೋಗ' ಮರೆಯಬಾರದಿತ್ತು.

ಓದುಗರು ಹಾಗೂ ಪೋಷಕರ ಮೇಲೆ ಸಕಾರಾತ್ಮಕವಾಗಿ ಬಹುಪರಿಣಾಮ ಬೀರಿರುವ ಈ ಯಶೋಗಾಥೆಯನ್ನು ರಂಗರೂಪಕ್ಕೆ ತರುವಲ್ಲಿ 'ಪರಿವರ್ತನ ರಂಗಸಮಾಜ' ತಂಡದ ಇಂಥ ಪರಿಶ್ರಮ ಮೆಚ್ಚಬೇಕಾದ್ದೇ. ನಟ, ನಿರ್ದೇಶಕರಾದಿಯಾಗಿ ಎಲ್ಲರೂ ಇಲ್ಲಿನ ಭಿನ್ನ ಕಥಾವಸ್ತು, ನಿರೂಪಣೆಯನ್ನು ಉದ್ದಕ್ಕೂ ಸಂಭ್ರಮಿಸಿದ್ದಾರೆ. ಕಥನವನ್ನು ರಂಗಮಂದಿರದೊಳಕ್ಕೆ ತರಲೆಂದು ರಂಗಮಂದಿರದಾಚೆಗೂ ತಮ್ಮನ್ನು ಒಡ್ಡಿಕೊಂಡು ಹೆಚ್ಚು ಶ್ರಮವನ್ನೂ ಹಾಕಿದ್ದಾರೆ. ಕೃತಿಯಲ್ಲಿ ಉಲ್ಲೇಖಿಸಿರುವ ಸಂಸ್ಥೆ, ಶಾಲೆಗಳಿಗೆ ಭೇಟಿ ನೀಡಿದ್ದಾರೆ. ಚಿಕಿತ್ಸಕರನ್ನು, ಶಿಕ್ಷಕರನ್ನು, ತಾಯಂದಿರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ.

ವಸ್ತುವಿನ ಕಾರಣದಿಂದ ಕನ್ನಡದ ರಂಗಭೂಮಿಯ ಮಟ್ಟಿಗೆ ಇದು ವಿಶೇಷ ಪ್ರಯೋಗ. ಆದರೆ, ನಿರೂಪಣೆಯ ದೃಷ್ಟಿಯಿಂದ ಸಾಮಾನ್ಯ ಸಾಮಾಜಿಕ ನಾಟಕಗಳ ನೆರಳನ್ನೇ ನೆಚ್ಚಿಕೊಂಡ ನಾಟಕ. ಪ್ರಯತ್ನಗಳ ಒರತೆಯಂತೂ ಇದೆ. ಆದರೆ, ಹೊಸ ವಸ್ತುವಿಗೆ ತಕ್ಕ ಪ್ರಯೋಗಶೀಲತೆಯ ಕೊರತೆಯೂ ಇದೆ. ಮೂಲಕೃತಿಯಲ್ಲಿ ಪ್ರಥಮ ಪುರುಷ ನಿರೂಪಣೆಯಲ್ಲಿ ಓದುಗರನ್ನೂ ಸೆಳೆಯುತ್ತಾ ಸೊಗಸಾಗಿ ಓದಿಸಿಕೊಂಡು ಹೋಗುವ ಹೃದ್ಯಂಗಮವಾದ ಗದ್ಯವು ನಾಟಕದಲ್ಲಿ ತಂದೆ ಪಾತ್ರಧಾರಿಯ ಸ್ವಗತವಷ್ಟೇ ಆಗುತ್ತದೆ.

ಕೃತಿಯಲ್ಲಿರುವ ಕೌಟುಂಬಿಕ, ಸಾಮಾಜಿಕ ಮತ್ತು ವೈದ್ಯಕೀಯ ವಿಜ್ಞಾನದ ಚೌಕಟ್ಟಿನಲ್ಲೇ ನಾಟಕ ಶುರುವಾಗಿ ಮುಗಿಯುತ್ತದೆ. ಅತ್ಯಂತ ಪರಿಣಾಮಕಾರಿಯಾದ ಮಾತುಗಳು ನಾಟಕವನ್ನೂ ಆವರಿಸಿವೆ. ಮಗುವಿಗೆ ಭಾಷೆ, ಮಾತು ಕಲಿಸುವ ಸಾಲುಸಾಲು ದೃಶ್ಯಗಳು ವಾಚ್ಯವಾಗಿ, ನಾಟಕ ಪ್ರಕಾರದ ಸೃಜನಶೀಲ ಸಾಧ್ಯತೆಗಳೂ ಪಕ್ಕಕ್ಕೆ ಸರಿದವೇ ಎಂಬ ಅನುಮಾನವೂ ಮೂಡುತ್ತದೆ. ಅಷ್ಟು ಹೊತ್ತಿಗೆ ಬರುವ ಹಿನ್ನೆಲೆ ಸಂಗೀತ, ಕೆಲವು ಹಾಡುಗಳು ಏಕತಾನತೆಯ ಭಾವವನ್ನು ದೂರ ಮಾಡುತ್ತವೆ.

ಮೈಸೂರಿನಲ್ಲಿ 'ಪೇರೆಂಟ್ಸ್ ಅಸೋಸಿಯೇಶನ್ ಆಫ್ ಡೆಫ್ ಚಿಲ್ಡ್ರನ್' ಸ್ಥಾಪಿಸಿದ ನಿವೃತ್ತ ವಿಂಗ್ ಕಮಾಂಡರ್ ಕೆ.ಕೆ.ಶ್ರೀನಿವಾಸನ್ ಅವರ ಕುರಿತ ಅಧ್ಯಾಯ 'ಮಾತು ಕಲಿಸಿದ ಮಾಮಾ'ದಲ್ಲಿ ಬರುವ ಅವರ ಮಗ ರಾಜನ ಪಾತ್ರ ಇಲ್ಲಿ ದಂಪತಿಯ ಮಗನ ಪಾತ್ರದಲ್ಲಿ ಒಂದಾಗಿದೆ. ಆತ ಟೆಕ್ಸಾಸ್‌ಗೆ ಹೋಗಿ ಅಲ್ಲಿಂದ ತಾಯಿಗೆ ಕರೆ ಮಾಡಿ ಮಾತಾಡುವ ದೃಶ್ಯದ ಮೂಲಕ ನಾಟಕ ಶುರುವಾಗುತ್ತದೆ. ಶಬ್ದ-ನಿಶ್ಯಬ್ದದ ಜೊತೆಯಾಟದೊಂದಿಗೆ ಯಶಸ್ಸಿನ ಕಥನವೂ ಶುರುವಾಗುತ್ತದೆ.

'ಮೂರನೇ ಕಿವಿ'ಯ ಮೂಲಕ ಒಡಮೂಡಿದ ಈ 'ಯಶೋಗಾಥೆ'ಯನ್ನು ಈ ರಂಗಪ್ರಯೋಗ ಇನ್ನೂ ವೃತ್ತಿಪರವಾಗಿ ದುಡಿಸಿಕೊಳ್ಳಲು ಸಾಧ್ಯವಿತ್ತು. ಕಥನದಲ್ಲಿ ಅಷ್ಟೇನೂ ಮುಖ್ಯವಾಗಿರದ ಅನುಕಂಪದ ಭಾವದಲ್ಲೇ ನಾಟಕವನ್ನು ರೂಪಿಸಿರುವುದರಿಂದ ಗೋಳಿನ ಕಥೆಯಾಗಿ ಮಾರ್ಪಟ್ಟಿದೆ. ರಂಗಭೂಮಿಗೆ ಒಬ್ಬ 'ಚಿನ್ನಾರಿ ಮುತ್ತ'ನನ್ನು ತರುವ ಅವಕಾಶವಂತೂ ಇತ್ತು. ❖

'ಮೂರನೇ ಕಿವಿ' ನಾಟಕದ ದೃಶ್ಯ

ಇರುಳ ಬೆಳಕಿನ ದಸರೆ



ದಸರಾ ಪ್ರಯುಕ್ತ ದೀಪಗಳಿಂದ ಕಂಗೊಳಿಸುತ್ತಿರುವ ಮೈಸೂರಿನ ಕೆ ಆರ್ ವೃತ್ತ

10ನೇ ಪುಟದಿಂದ...

ಈ ಮೊದಲು ಅರಮನೆಗೆ 20 ವ್ಯಾಟ್‌ನ ಬಲ್ಬ್‌ಗಳನ್ನು ಹಾಕಲಾಗಿತ್ತು. ಅವು ಮೈಸೂರು ಲ್ಯಾಂಪ್ಸ್ ಕಾರ್ಖಾನೆಯ ಬಲ್ಬ್‌ಗಳು. ಅದು ಮುಚ್ಚಿ ದಶಕವಾಗಿದೆ. ಈಗ ಕಣ್ಣು ಕೋರೈಸುವುದನ್ನು ಕಡಿಮೆ ಮಾಡಲು, ಅರಮನೆಯ ವಾಸ್ತುಶಿಲ್ಪ ಸರಿಯಾಗಿ ಗೋಚರಿಸಲು 15 ವ್ಯಾಟ್‌ಗೆ ಇಳಿಸಲಾಗಿದೆ. ಇದೆಲ್ಲ ಸೇರಿ ಅರಮನೆಯ ಮುಖ್ಯ ಕಟ್ಟಡ, ಒಳಾಂಗಣವಲ್ಲದೇ ಬಲರಾಮ, ವರಾಹ, ಜಯಮಾರ್ತಾಂಡ ದ್ವಾರಗಳು, ಆವರಣದ ಎಲ್ಲ ದೇಗುಲಗಳು, ಕೋಟೆ ನವರಾತ್ರಿಯಲ್ಲಿ ಜಗಮಗಿಸಲಿದೆ.

ಇಡೀ ನಗರದ ದೀಪಾಲಂಕಾರಕ್ಕಾಗಿ ಸೆಸ್ಕ್‌ನಿಂದ ನಿಯೋಜಿತರಾದ ನೂರೈವತ್ತು ಗುತ್ತಿಗೆದಾರರು ಹಾಗೂ ಅವರ ಸಾವಿರಾರು ಉದ್ಯೋಗಿಗಳು ಹಗಲಿರುಳು ದುಡಿದಿದ್ದಾರೆ. ದೀಪಾಲಂಕಾರಕ್ಕೆ 300 ಕೆ.ವಿಯ, ಎರಡೂವರೆ ಲಕ್ಷಕ್ಕೂ ಹೆಚ್ಚು ಯುನಿಟ್ ವಿದ್ಯುತ್ ಬಳಕೆಯಾಗಲಿದೆ. ಈ ಬಾರಿ ದಸರೆಗೆ ಬಂದರೆ ಇದನ್ನೆಲ್ಲ ಒಮ್ಮೆ ನೆನಪಿಸಿಕೊಳ್ಳಿ.

ಬೆಳಕೆಂಬುದು ಜ್ಞಾನ, ಸಂಭ್ರಮ, ಎಚ್ಚರದ ಸಂಕೇತ. ಬೆಳಕೆಂದರೆ ವಿಜ್ಞಾನವೋ, ತತ್ವಜ್ಞಾನವೋ ಎಂಬುದು ಕೊನೆ ಇರದ ಚರ್ಚೆ. ದಸರೆ ಎಂದರೆ ಇವೆಲ್ಲವೂ ಸೇರಿಕೊಂಡ ಹೊಸ ಬೆಳಕಷ್ಟೇ. 'ದೀಪವು ನಿನ್ನದೆ ಗಾಳಿಯು, ನಿನ್ನದೆ ಆರದಿರಲಿ ಬೆಳಕು' ಎಂಬುದು ಕವಿ ಮಾತು. ಇದೊಂದು ಪ್ರಾರ್ಥನೆಯೂ ಹೌದು. ದಸರೆಯೂ ನವರಾತ್ರಿಗಳಲ್ಲಿ ಶಕ್ತಿದೇವಿಯರಿಗೆ ಆಸ್ತಿಕರು ಸಲ್ಲಿಸುವ ಸುದೀರ್ಘ ಪೂಜೆ-ಪ್ರಾರ್ಥನೆಯೇ. ಏಕಾಂತದ ಮೌನ ಪ್ರಾರ್ಥನೆಯು ಲೋಕಾಂತದಲ್ಲಿ ಸಂಭ್ರಮವಾಗಿ, ಸಡಗರವಾಗಿ ಮಾರ್ಪಾಡುವುದು ಸಹಜ. ಅದಕ್ಕೇ ನಾವು ಗರ್ಭಗುಡಿಯಲ್ಲಿ ಮಂದ ಬೆಳಕಿನಲ್ಲಿ ಹೊಳೆಯುವ ಮೂರ್ತಿಯ ಮುಂದೆ ಮೌನವಾಗಿ ಪ್ರಾರ್ಥಿಸುತ್ತೇವೆ. ಉತ್ಸವದಲ್ಲಿ ಮೌನ ನೂಕಿ ವಿಜೃಂಭಿಸುತ್ತೇವೆ. ಅದು ಸಾಮೂಹಿಕ ಪ್ರಾರ್ಥನೆ. ಅಲ್ಲಿ ಗದ್ದಲ, ಕೇಕೆ, ಸಂಭ್ರಮ, ಕುಣಿತ ಎಲ್ಲವೂ ಇರುತ್ತದೆ. ದಸರೆ ಲೈಟಿಂಗ್ಸ್ ಇವೆಲ್ಲಕ್ಕೂ ಟಾನಿಕ್‌ನಂತೆ.

ಈ ಬಾರಿ ಈ ಸಂಭ್ರಮಕ್ಕೆ ಮಹಾತ್ಮಾ ಗಾಂಧೀಜಿಯ ಸಾಥ್ ಕೂಡ ಸಿಗಲಿದೆ. ಅವರ ಜನ್ಮದಿನವಾದ ಅಕ್ಟೋಬರ್ 2ರಂದೇ ವಿಜಯ ದಶಮಿ ಬಂದಿರುವುದರಿಂದ, ಗಾಂಧೀಜಿಯ ವೈವಿಧ್ಯಮಯ ಕಟೌಟ್‌ಗಳೂ ದೀಪಾಲಂಕಾರದಲ್ಲಿ ಕಂಗೊಳಿಸಲಿವೆ.

ದಸರೆಯಲ್ಲಿ ದೀಪಾಲಂಕಾರವೆಂಬುದು ಅರಮನೆಗಷ್ಟೇ ಸೀಮಿತವಾಗಿದ್ದ ಕಾಲ ಹೋಗಿ ದಶಕಗಳಾದವು. ದಸರೆಯು ನಾಡಹಬ್ಬವಾದ ಬಳಿಕ ದೀಪವೆಂಬುದು ಒಂದು ಸಂಕೇತವಾಗಷ್ಟೇ ಉಳಿದಿದೆ. ಅದು ದೊರೆ ಮನೆಯ ಸಂಭ್ರಮದ ಜೊತೆಗೆ ನಾಡ ಜನತೆಯ ಸಂಭ್ರಮವೂ ಹೌದು. ನಾಡು ವಿಸ್ತರಣೆಯಾದಂತೆ ಸಂಭ್ರಮವೂ ವಿಸ್ತರಣೆಯಾಗಲೇಬೇಕು. ದಸರಾ ಲೈಟಿಂಗ್ಸ್ ಈ ಬಾರಿ ನಗರದ ಆಚೆ-ಈಚೆಗೆ 136 ಕಿಲೋಮೀಟರ್ ಉದ್ದಕ್ಕೂ ಹರಡಿಕೊಂಡು, 118 ವೃತ್ತಗಳಲ್ಲಿ ಜಗಮಗಿಸಲಿದೆ ಎಂಬುದನ್ನು ಒಮ್ಮೆ ಕಲ್ಪಿಸಿಕೊಳ್ಳಿ. ಮೈಸೂರು ನಗರ ಈಗ ಎಷ್ಟು ಬೆಳೆದಿದೆ ಎಂಬ ಅಂದಾಜು ಸಿಕ್ಕಿತೇ? ಅದನ್ನು ಬಿಡಿ. ದಸರೆಯನ್ನು ಕಣ್ತುಂಬಿಕೊಳ್ಳಲು ನವರಾತ್ರಿಯೇ ಬೆಸ್ಟ್ ಎಂಬುದನ್ನು ಮರೆಯದಿರಿ.

ದಸರೆ ಅಂದ್ರೆ ವೈವಿಧ್ಯ...

ದಸರೆ ಪ್ರತಿ ವರ್ಷವೂ ವೈವಿಧ್ಯದ ಆಗರ. ಮನೆ-ಗುಡಿಯಲ್ಲಿ ನವರಾತ್ರಿಯುದ್ದಕ್ಕೂ ದೇವಿಯರನ್ನು ಪೂಜಿಸುವ ವ್ರತನಿಷ್ಠ ಭಕ್ತಿ, ಅಂಕೆ ತಪ್ಪದ ಧಾರ್ಮಿಕತೆ, ಅದನ್ನು ಅನುಸರಿಸಿ ಬರುವ ಮಿಕ್ಕೆಲ್ಲವೂ ಉತ್ಸವವನ್ನುವೈವಿಧ್ಯಮಯಗೊಳಿಸುತ್ತವೆ.

ಕುಸ್ತಿ ಪಂದ್ಯಾವಳಿಗಳ ರೋಚಕತೆ, ಉತ್ಸಾಹ ಇಮ್ಮಡಿಸುವ ಕ್ರೀಡಾಕೂಟಗಳು, ಕವಿಗೋಷ್ಠಿಗಳು ಉಣಬಡಿಸುವ 'ಕಾವ್ಯ ರಸದೌತಣ', ಯುವಜನರ ಕಿಚ್ಚೆಬ್ಬಿಸುವ ಯುವ ಸಂಭ್ರಮದ ಡಾನ್ಸ್‌ಗಳು, 'ಲೋಕವೆಲ್ಲಾ ನಾದಮಯ' ಎನ್ನಿಸುವ ಅರಮನೆಯ ಸಂಗೀತ ಕಛೇರಿಗಳು, ಆಕರ್ಷಕ ಹೂಲೋಕ, ರುಚಿ ಅಭಿರುಚಿಗಳ ಸಂಗಮವಾದ ಆಹಾರ ಮೇಳ, ಪುಸ್ತಕ ಮೇಳ, ಚರಿತ್ರೆಯನ್ನು ನೆನಪಿಸುವ ಪಾರಂಪರಿಕ ನಡಿಗೆ, ಟಾಂಗಾ ಸವಾರಿ, ಸ್ಪರ್ಧೆಗಳಲ್ಲಿ ಮಿಂಚುವ ಚಿಣ್ಣರು, ಉತ್ಸವಕ್ಕೆಂದೇ ರೂಪುಗೊಳ್ಳುವ ಕಲಾಕೃತಿಗಳ ಲೋಕ, ಶ್ರೇಷ್ಠ ಸಿನಿಮಾಗಳ ಪ್ರದರ್ಶನ, ಇದರೊಂದಿಗೆ ಯೋಗ ದಸರೆ, ರೈತರ ದಸರೆ, ಮಹಿಳಾ ದಸರೆಯೂ ಸೇರಿಕೊಂಡಿದೆ. ಇದರ ಭಾಗವಾಗಿ ಯೋಗ ಚಾರಣವೂ, ಬೆಟ್ಟದ ಮೇಲೆ 'ಚಾಮುಂಡಿ ನಮಸ್ಕಾರ'ವೂ ಇದೆ ಈ ಬಾರಿ.

ಚಾಮುಂಡಿ ಬೆಟ್ಟದಿಂದ ಕಾಣುವ ಮೈಸೂರು

ಕಥೆ
ಮೂಲ: ದಿನಕರ್ ಜೋಶಿ
ಕನ್ನಡಕ್ಕೆ: ಡಿ.ಎನ್. ಶ್ರೀನಾಥ್ ಅವರ **ಹೊಳೆಯುವ ಮುಖಗಳು**
prajavani.net/short-story

ಕವನ
ನಂದಿನಿ ಹೆದ್ದುರ್ಗ ಅವರ **ಸತ್ಯದ ಫ್ಯಾಕ್ಟರಿ**
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು bhanuvara@prajavani.co.in

ಹಾಡುಕಟ್ಟುವವರ ತವರು ಮೈಸೂರು

'ನಾವು' ನಮ್ಮ ಬ್ಯಾಂಡ್ ತಂಡ

10ನೇ ಪುಟದಿಂದ...

ಪಾಶ್ಚಾತ್ಯ ಸಂಗೀತ ದಾಟಿಯಲ್ಲಿ ಆರಂಭವಾಗುವ ಹಾಡಿಗೆ ಜನಪದ ತಾಳವಾದ್ಯಗಳ ಮಿಳಿತವಿದೆ. ಶಾಸ್ತ್ರೀಯ ಸಂಗೀತದ ಪ್ರಭಾವವೂ ಇದೆ. ಮೈಸೂರು ಸಂಸ್ಥಾನ ಗೀತೆ 'ಕಾಯೌ ಶ್ರೀಗೌರಿ.. ಕರುಣಾ ಲಹರಿ' ಹಾಡಿನ ಕೊನೆಯಾರ್ಧದಲ್ಲಿ ಬರುತ್ತದೆ. ಹಳೆಯ ಮೈಸೂರಿನ ಫೋಟೊಗಳನ್ನು ಬಳಸಲಾಗಿದೆ.

ಸುಶ್ರಾವ್ಯತೆಯ ಜೊತೆಗೆ ದೃಶ್ಯ ಸಿರಿವಂತಿಕೆಯಿಂದ ಕೂಡಿದ ಹಾಡಿನ ಸಾಹಿತ್ಯ ಸರಳವಾಗಿದ್ದರೂ ಸಂಯೋಜನೆ, ಚಿತ್ರೀಕರಣ ಗುಣಮಟ್ಟದಿಂದ ಕೂಡಿದೆ. ಆರಂಭದಲ್ಲಿ ಕುಣಿಯುವಂತೆ ಮಾಡುವ ಗೀತೆಯು ಕೊನೆಯಲ್ಲಿ ಭಕ್ತಿರಸವನ್ನು ಉಕ್ಕಿಸುತ್ತದೆ.

'ಚೆನ್ನೈನಲ್ಲಿ ಬಹುಭಾಷೆಯ ಸಿನಿಮಾಗಳಿಗೆ ಹಿನ್ನೆಲೆ ಸಂಗೀತವನ್ನು ನೀಡುತ್ತಿದ್ದ ದಿನಗಳಲ್ಲಿ, 2018ರ ದಸರೆ ವೇಳೆಯಲ್ಲಿ ಹಾಡು ಹುಟ್ಟಿತು. ಹುಟ್ಟೂರು ಕೆ.ಆರ್.ನಗರ, ಓದಿದ್ದು ಮೈಸೂರಿನ ಕಾವಾ. ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಿತೆ. ಸಿನಿಮಾ ಸಂಗೀತ ನಿರ್ದೇಶಕನಾದೆ. ಅದಕ್ಕೆ ಮೈಸೂರೇ ಕಾರಣ' ಎನ್ನುತ್ತಾರೆ ಹರಿಕಾವ್ಯ.

ಹಿನ್ನೆಲೆ ಗಾಯಕಿ ಅನನ್ಯ ಭಟ್, ಹರಿಕಾವ್ಯ, ಶಶಾಂಕ್ ಶೇಷಗಿರಿ, ವಿಜೇತ್ ಕೃಷ್ಣ ಹಾಡಿದ ಮೈಸೂರು ಕುರಿತ ಗೀತೆ 'ನಮ್ಮೂರು ಮೈಸೂರು ನಾವೇನೆ ರಾಜರು'. ಇದು 2019ರ ದಸರೆಯಲ್ಲಿ ಬಿಡುಗಡೆಗೊಂಡಿದ್ದು, ನಗರದ ಪ್ರಸಿದ್ಧ ಸ್ಥಳಗಳು ಸೆರೆಯಾಗಿವೆ. ಚಲನಚಿತ್ರ ನಟ ಸತೀಶ್ ಪೊನ್ನಾಚಿ ನಿರ್ದೇಶಿಸಿದ್ದರೆ, ಸಾಗರ್ ತೊರೆಮಾವು ಹಾಗೂ ಟಿ.ಆರ್. ಪ್ರದೀಪ್ ಕುಮಾರ್ ಛಾಯಾಚಿತ್ರಗ್ರಹಣ ಮಾಡಿದ್ದಾರೆ. ಸತೀಶ್ ಸೋಲೂರು ಸಾಹಿತ್ಯ ಬರೆದಿದ್ದು, ಎಸ್. ಪ್ರಶಾಂತ್ ನಿರ್ಮಿಸಿದ್ದಾರೆ.

ಕರುಣೆಯ ಕಡಲು

ದಸರಾ ಯುವ ಸಂಭ್ರಮದಲ್ಲಿ ಹಾಡುತ್ತಿರುವ ಸಂಗೀತ ನಿರ್ದೇಶಕ ನೀತು ನಿನಾದ್

2022 ರಲ್ಲಿ 'ನಾಡದೇವತೆಯ ಸಿರಿ ತವರು.. ನಮ್ಮೂರು' ಎಂಬ ಗೀತೆಯನ್ನು ಮಾಡಿದ್ದ ಸಂಗೀತ ನಿರ್ದೇಶಕ ನೀತು ನಿನಾದ್ ಈ ಬಾರಿ ಎರಡು ಹಾಡುಗಳನ್ನು ಮಾಡಿದ್ದಾರೆ. ಜಿಲ್ಲಾಡಳಿತವೇ ಅವರಿಗೆ ಜೊತೆಯಾಗಿದೆ. 'ಕರುನಾಡ ಕರುಣೆಯ ಕಡಲಿನಲಿ.. ಮೈಸೂರು ಮಮತೆಯ ಮಡಿಲಿನಲಿ' ಎಂಬ ದಸರಾ ಥೀಮ್ ಗೀತೆ ಜನರ ಮನಗೆದ್ದಿದೆ.

'ಕನ್ನಡದ ಸಂಭ್ರಮದ ನಾಡಹಬ್ಬ.. ನಾಡದೇವತೆಯ ಸಿರಿ ದಸರಾ ಹಬ್ಬ..' ಎನ್ನುತ್ತಲೇ 'ಅರಮನೆಯ ಅಂಗಳದಿ ಅಂಬಾರಿಯ ಸೊಬಗು.. ಮೆರವಣಿಗೆಯ ಸಡಗರದಿ ಜನಮನದ ಮೆರುಗು.. ಮೈಸೂರಿದು ಕರುನಾಡಿಗೆ ಸಂಸ್ಕೃತಿಯ ಹಿರಿಮೆ.. ಪರಂಪರೆಯ ಸಂಭ್ರಮದ ಅಸ್ಮಿತೆಯ ಗರಿಮೆ' ಎಂಬ ಸಾಲುಗಳು ಸೆಳೆಯುತ್ತವೆ. ಖ್ಯಾತ ಹಿನ್ನೆಲೆ ಗಾಯಕ ರಾಜೇಶ್ ಕೃಷ್ಣನ್ ಹಾಡಿರುವ, ನೀತು ನಿನಾದ್ ಸಂಗೀತ ನೀಡಿರುವ ಗೀತೆಗೆ ಹೆಚ್ಚುವರಿ ಜಿಲ್ಲಾಧಿಕಾರಿ ಪಿ.ಶಿವರಾಜು ಸಾಹಿತ್ಯವಿದೆ.

ನೀತು ನಿನಾದ್ ಅವರೇ 'ಯುವ ಸಂಭ್ರಮ'ದ ಬಗ್ಗೆ ಮತ್ತೊಂದು ಗೀತೆ ಸಂಯೋಜಿಸಿದ್ದು, ವಿಜಯಪ್ರಕಾಶ್ ದನಿಯಾಗಿದ್ದಾರೆ.

'ಹೆಜ್ಜೆ ಮೇಲೆ ಹೆಜ್ಜೆ ಸೇರಿದೆ.. ಸದ್ದು ಊರ ತುಂಬಾ ಕೇಳಿದೆ.. ಎದ್ದು ಕುಣಿಯುವ ಹಾಗೆ ಮಾಡಿದೆ.. ನಾಡಹಬ್ಬ ಶುರುವಾಗಿದೆ'-ಗೀತೆ ಎಲ್ಲರ ಗೀತೆಯಾಗಿದೆ. ಮೈಸೂರು ತುಂಬಿಕೊಂಡಿದೆ. ❖

ಮುನ್ನೋಟ 21-09-2025 ರಿಂದ 27-09-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮಲ್ಲಿ ಮುನ್ನುಗ್ಗುವ ಶಕ್ತಿ ಮತ್ತು ಉತ್ಸಾಹವಿರುತ್ತದೆ. ಆದಾಯವು ಸ್ವಲ್ಪ ಕಡಿಮೆ ಇರುತ್ತದೆ. ನಿಮ್ಮ ಮತ್ತು ಹಿರಿಯರ ಜತೆಗಿನ ಸಂಬಂಧ ಉತ್ತಮವಾಗಿರುತ್ತದೆ. ಕೃಷಿಭೂಮಿಯನ್ನು ಕೊಳ್ಳಲು ಬಹಳ ಉತ್ಸಾಹ ತೋರುವಿರಿ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ತಾಳ್ಮೆ ಮತ್ತು ಸಮಾಧಾನ ಚಿತ್ತದಿಂದ ವ್ಯವಹರಿಸುವುದು ಬಹಳ ಒಳ್ಳೆಯದು. ಈಗ ಆದಾಯವು ಉತ್ತಮವಾಗಿರುತ್ತದೆ. ಭಾಷಣಕಾರರಿಗೆ ಉತ್ತಮ ವೇದಿಕೆಗಳು ದೊರೆತು ಆದಾಯ ಹೆಚ್ಚುತ್ತದೆ. ಮೂಳೆ ವೈದ್ಯರಿಗೆ ಬೇಡಿಕೆ ಹೆಚ್ಚುತ್ತದೆ. ಅನಗತ್ಯ ಖರ್ಚುಗಳು ಬರಬಹುದು. ಆಹಾರದ ವ್ಯತ್ಯಾಸದಿಂದ ಸ್ವಲ್ಪ ಅಜೀರ್ಣವಾಗಬಹುದು. ಹಿರಿಯರಿಂದ ಆರ್ಥಿಕ ಸಹಾಯ ಸಿಗಬಹುದು. ಪ್ರೀತಿ, ಪ್ರೇಮ ಸಫಲವಾಗುತ್ತವೆ. ಅಧ್ಯಾಪಕರಿಗೆ ಸ್ವಲ್ಪ ಏಳಿಗೆ ಇರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಮನಸ್ಸಿನಲ್ಲಿ ಸ್ಥಿರತೆ ಇರುತ್ತದೆ. ಆದಾಯವು ನಿರೀಕ್ಷೆಯ ಹಂತವನ್ನು ತಲುಪುತ್ತದೆ. ವಾಹನ ಖರೀದಿ ಯೋಗವಿದೆ. ಸ್ವಯಂ ಉದ್ಯೋಗವನ್ನು ಆರಂಭಿಸಬೇಕೆಂದುಕೊಂಡವರು ಮುಂದುವರಿಯಬಹುದು. ಗುಡಿ ಕೈಗಾರಿಕೆ ಮಾಡುವವರಿಗೆ ಬೇಡಿಕೆ ಹೆಚ್ಚುತ್ತದೆ. ಬಹಳ ಹಿಂದೆ ಕೊಟ್ಟಿದ್ದ ಸಾಲ ಹಂತ ಹಂತವಾಗಿ ಮರಳಿ ಬರುವ ಸಾಧ್ಯತೆಗಳಿವೆ. ಸರ್ಕಾರಿ ಕಚೇರಿಯ ಕೆಲಸಗಳು ಫಲಪ್ರದವಾಗುತ್ತವೆ. ವೃತ್ತಿಯಲ್ಲಿ ಸ್ವಲ್ಪ ಏಳಿಗೆಯನ್ನು ಕಾಣಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ದೂರ ಪ್ರಯಾಣದಿಂದ ಆಗಬೇಕಿದ್ದ ಕೆಲಸಗಳು ಈಗ ಸುಗಮವಾಗಿ ಆಗುತ್ತವೆ. ಆದಾಯವು ಸಾಮಾನ್ಯ ಸ್ಥಿತಿಯಲ್ಲಿ ಇರುತ್ತದೆ. ನಿಮ್ಮ ವ್ಯವಹಾರಗಳ ಬಗ್ಗೆ ಸರಿಯಾಗಿ ಮೇಲ್ವಿಚಾರಣೆ ಮಾಡುವುದು ಬಹಳ ಮುಖ್ಯ. ಹಿರಿಯರೊಂದಿಗಿನ ವಾದ-ವಿವಾದಗಳು ನಿಮಗೆ ಹಿನ್ನಡೆಯುಂಟುಮಾಡಬಹುದು. ಆಸ್ತಿ ಮಾಡುವ ಯೋಗವಿದೆ. ನಿಮ್ಮ ಹುಡುಗಾಟದ ನಡವಳಿಕೆ ನಿಮ್ಮನ್ನು ಅಪಹಾಸ್ಯಕ್ಕೆ ಗುರಿ ಮಾಡಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಮಕ್ಕಳ ವಿದ್ಯಾಭ್ಯಾಸದ ಪ್ರಗತಿ ಉತ್ತಮವಾಗಿರುತ್ತದೆ. ಆದಾಯವು ನಿರೀಕ್ಷಿತ ಹಂತದಲ್ಲಿರುತ್ತದೆ. ಬಂಧುಗಳ ಸಹಕಾರ ಸಿಗುವುದಿಲ್ಲ. ಅರ್ಥಪೂರ್ಣ ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿ ವಿಚಾರ ವಿನಿಮಯ ಮಾಡುವಿರಿ. ಭೂಮಿಯ ವ್ಯವಹಾರ ಮಾಡುವವರಿಗೆ ಆದಾಯವಿರುತ್ತದೆ. ಪ್ರಮುಖ ಯೋಜನೆಗಳನ್ನು ಆರಂಭ ಮಾಡುವ ಮುನ್ನ ಪರಿಣಿತ ವ್ಯಕ್ತಿಗಳೊಡನೆ ಸೂಕ್ತ ಸಮಾಲೋಚಿಸುವುದು ಅತ್ಯವಶ್ಯಕ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಮ್ಮಲ್ಲಿ ಅಹಂ ತುಂಬಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಭೂಮಿಯ ಅಭಿವೃದ್ಧಿ ಕೆಲಸಗಳನ್ನು ಮಾಡುವವರಿಗೆ ಸಾಕಷ್ಟು ಮುನ್ನಡೆ ಇರುತ್ತದೆ. ಸಾರ್ವಜನಿಕ ಕೆಲಸಗಳನ್ನು ಮಾಡುವಾಗ ಅಪವಾದ ಬರುವ ಸಾಧ್ಯತೆಗಳಿವೆ. ನಿಮ್ಮ ಆದಾಯದಷ್ಟೇ ಖರ್ಚು ಇರುವುದರಿಂದ ಹಣದ ನಿರ್ವಹಣೆಯನ್ನು ಸರಿಯಾಗಿ ಮಾಡಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನಿಮ್ಮ ಹಿಂಬಾಲಕರು ನಿಮಗೆ ಶತ್ರುಗಳಾಗಬಹುದು. ನಿಮ್ಮ ಒರಟು ಮಾತಿನಿಂದ ಕೆಲವು ಸಂಬಂಧಗಳು ಕಳೆದುಹೋಗಬಹುದು. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಸ್ವಲ್ಪ ನಿರುತ್ಸಾಹ ಮೂಡಬಹುದು. ಬೆನ್ನು ನೋವು ಅಥವಾ ಮೂಳೆ ನೋವು ಕಾಣಿಸಬಹುದು. ಹಿರಿಯರ ಮಾತಿಗೆ ಮನ್ನಣೆ ನೀಡುವುದರಿಂದ ಬರಲಿರುವ ಅವಘಡ ತಪ್ಪುತ್ತದೆ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಮುನ್ನಡೆ ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ನಿಮ್ಮ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಪ್ರಗತಿಯನ್ನು ಕಾಣಬಹುದು. ಉದ್ಯೋಗಾಂಕ್ಷಿಗಳಿಗೆ ಹೊಸ ಉದ್ಯೋಗಕ್ಕಾಗಿ ದೂರದೂರಿಗೆ ಹೋಗಬೇಕಾದ ಸಂದರ್ಭವಿದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಒಡಹುಟ್ಟಿದವರಿಂದ ನಿಮಗೆ ಸಾಕಷ್ಟು ಸಹಾಯ ಸಿಗುತ್ತದೆ. ಸಂಸಾರದಲ್ಲಿ ಕಾವೇರಿದ ವಾತಾವರಣ ಮೂಡುತ್ತದೆ. ಕಬ್ಬಿಣದ ಉಪ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ನಿರೀಕ್ಷಿತ ಕಾರ್ಯಗಳಲ್ಲಿ ಪ್ರಗತಿಯನ್ನು ಕಾಣುವಿರಿ. ವಿದೇಶದಲ್ಲಿ ಓದು ಮುಗಿಸಿ ಉದ್ಯೋಗ ಹುಡುಕುತ್ತಿರುವವರಿಗೆ ಶುಭ ಸಮಾಚಾರವಿರುತ್ತದೆ. ಹಣದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ಸ್ತ್ರೀಯರಿಗೆ ಸಂತೋಷವಿರುತ್ತದೆ. ನಿಮ್ಮ ಸಂಗಾತಿಯ ಆದಾಯದಲ್ಲಿ ಸ್ವಲ್ಪ ಏರಿಕೆಯನ್ನು ಕಾಣಬಹುದು. ಬಂಧುಗಳೊಡನೆ ಸಂತೋಷ ಕೂಟಗಳಲ್ಲಿ ಭಾಗವಹಿಸುವ ಯೋಗವಿದೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಸಾಮಾನ್ಯ ಫಲಿತಾಂಶವಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಆರ್ಥಿಕ ಪರಿಸ್ಥಿತಿಯಲ್ಲಿ ಸ್ವಲ್ಪ ಪ್ರಗತಿಯನ್ನು ಕಾಣಬಹುದು. ನಿಮ್ಮ ಶತ್ರುಗಳು ಯಾರೆಂದು ಗೊತ್ತಾಗಿ ಅವರ ಮೇಲೆ ಕ್ರಮ ಕೈಗೊಳ್ಳುವ ಅವಕಾಶ ಒದಗಿಬರುತ್ತದೆ. ನಿಮ್ಮ ವ್ಯವಹಾರಗಳು ವಿಸ್ತರಣೆಯಾಗುವ ಲಕ್ಷಣಗಳಿವೆ. ವಿದೇಶಿ ಭಾಷಾ ಕಲಿಕೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳಿಗೆ ಸಾಕಷ್ಟು ಪ್ರಗತಿ ಇರುತ್ತದೆ. ಭೂಮಿಯ ವ್ಯವಹಾರ ಮಾಡುವ ಮಧ್ಯವರ್ತಿಗಳ ಆದಾಯ ಹೆಚ್ಚುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹಿಂದೆ ನೀವು ನಿಮ್ಮ ವ್ಯವಹಾರದಲ್ಲಿ ಕೈಗೊಂಡ ನಿರ್ಣಯಗಳು ಈಗ ಉತ್ತಮ ಫಲವನ್ನು ಕೊಡುತ್ತವೆ. ಆರ್ಥಿಕ ಸ್ಥಿತಿಯು ಸಮತೋಲನದಲ್ಲಿರುತ್ತದೆ. ಹೊಸ ವಾಹನವನ್ನು ಕೊಳ್ಳುವ ಯೋಗವಿದೆ. ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಆದಾಯದಲ್ಲಿ ಸ್ವಲ್ಪ ಹೆಚ್ಚಳವಿರುತ್ತದೆ. ಕೃಷಿ ಸಂಬಂಧಿತ ಯಂತ್ರೋಪಕರಣಗಳನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಖಾದ್ಯ ತೈಲಗಳನ್ನು ಮಾರಾಟ ಮಾಡುವವರ ವ್ಯಾಪಾರ ಹೆಚ್ಚಾಗಿ ಲಾಭ ಕೂಡ ಹೆಚ್ಚಾಗುತ್ತದೆ. ಆರ್ಥಿಕ ಸ್ಥಿತಿಯು ಹೇಳಿಕೊಳ್ಳುವಂತೆ ಇರುವುದಿಲ್ಲ. ಸ್ವಂತ ಆರೋಗ್ಯದಲ್ಲಿ ವ್ಯತ್ಯಯವನ್ನು ಕಾಣಬಹುದು. ದ್ರವ ರೂಪದ ವಸ್ತುಗಳನ್ನು ಮಾರಾಟ ಮಾಡುವವರ ವ್ಯವಹಾರ ವೃದ್ಧಿಸುತ್ತದೆ.

ಪದಬಂಧ 2910

ಮೇಲಿನಿಂದ ಕೆಳಕ್ಕೆ

1. ತಾವರೆದಂಟಿನ ಬಳ್ಳಿಯಂತಹ ಹುಡುಗಿ	4
2. ಭಾರಿ ದೊಡ್ಡ ಗುಂಪು, ಕಾವ್ಯ ಮಾತ್ರೆಗಳ ಸಮೂಹ	4
3. ಹಕ್ಕಿಗಳ ಕೊರಳ ನಿನಾದ	4
4. ಪುರುಷರನ್ನು ಬಂಧಿಸುವ ಹೆಂಡತಿಯ ಮೇಲಿನ ಅಪಾರ ಪ್ರೀತಿ	4
7. ಸಂತ ಮುನಿಗಳ ನಿರ್ವಾಣದ ಉನ್ನತ ಸ್ಥಿತಿ	5
8. ಮಾರ್ಗದರ್ಶಕನ ಪವಾಡ ಸಿದ್ಧಿ	5
10. ಸದಸ್ಯರ ಮೀಟಿಂಗ್‌ಗಳಲ್ಲಿ ನಡೆವ ಚರ್ಚಾಲಾಪ	5
11. ಹೊಸ ಮನೆಗೆ ಪಾದಾರ್ಪಣೆ ಮಾಡುವ ಸಮಾರಂಭ	5
14. ಸುಲಭವಾದ ಈ ಪದಕ್ಕೆ ಆಯಾಸ ಪಡಬೇಡಿ	4
15. ಪಕ್ಕಕ್ಕೆ ಜರುಗಿದರೂ ಸಮನಾದವರು ಸಿಗುವುದಿಲ್ಲ	4
16. ಹಾರಿಬಂದು ಹುಟ್ಟಿದ ಹೂವೇ ಇದು	4
17. ನೀವು ಕಿವಿಗೊಟ್ಟರೆ ಮಹಾಭಾರತದ ಸೂರ್ಯಪುತ್ರನ ಕೊಡುಗೆಯನ್ನು ನೆನೆಯುವಿರಿ	4

ಎಡದಿಂದ ಬಲಕ್ಕೆ

1. ಕೊಡಲಿ ಹಿಡಿದ ಜಮದಗ್ನಿ ತನಯ	5
3. ಅಂತಃಕರಣದ ದಯೆ ದ್ರವವಾಗಿ ಹರಿದಿದೆ	5
5. ಏನೂ ತಿಳಿಯದ ಹಳ್ಳಿಯ ಪೆದ್ದ	3
6. ಗುಣತ್ರಯಗಳಲ್ಲಿ ಆಲಸಿ ಸ್ವಭಾವ	5
9. ಸತಿ ಬಂದು ವಾಸಿಸುವ ಮನೆಯೇ ಇದು?	5
12. ದ್ರವ ಮತ್ತು ಶೃಂಗಾರದಿಂದ ಕೂಡಿದ ಮಧುರ ಕ್ಷಣ	5
13. ಇದು ಮೂಲ ದಾಖಲೆಯಲ್ಲ, ಅದರಂತೆ ಕಾಣುವಂತದ್ದು	5
14. ದುರ್ಭಿಕ್ಷದಲ್ಲಿ ಬರುವ ಹೆಚ್ಚುವರಿ ತಿಂಗಳು	5
16. ಪುಣ್ಯಕ್ಕೆ ವ್ಯತಿರಿಕ್ತವಾದ ಮಗುವನ್ನು ಕೊಲ್ಲುವವ	5
18. ರಾಗಾಲಾಪನೆಯಲ್ಲಿ ರಿಷಭಗಳ ಮಧ್ಯೆ ಸೇರಿದ ಶಡ್ಜ	3
19. ಎಣಿಕೆಗೆ ನಿಲುಕದ ಸಾವಿರ ಸಾವಿರ ನೂರು ಲಕ್ಷ	5
20. ದಾರ್ಶನಿಕನಿಗೆ ದ್ರಷ್ಟವಾಗುವ ಸಿದ್ಧಾಂತ ಸಾರ	5



ಪದಬಂಧ ಉತ್ತರ -2909

ಮೇಲಿಂದ ಕೆಳಕ್ಕೆ

1.ಧಾತ್ರಿ 2.ನಲ್ನುಡಿ 3.ರಸಂ 4.ನಕಾರ 6.ನಿಲಯ 7.ಮರ 8.ಕೆರ 10.ವಿಶ್ವಜನನಿ 11.ದಿಗ್ದಿಗಂತರ 13.ಸಿಗಡಿಮೀನು 14.ಪ್ರಿಯದರ್ಶಿನಿ 16.ಹಾಸಿಗೆ 17.ಕತೆ 18.ಅಳು 19.ಸುಜಯ 21.ರಥಾಂಗ 23.ರಜಾ 24.ಮತಿ

ಎಡದಿಂದ ಬಲಕ್ಕೆ

1.ಧಾರಾನಗರ 4.ನವರಾತ್ರಿ 5.ಸಂಜೀವಿನಿ 7.ಮಡಿಕೆ 9.ರವಿಚಂದಿರ 12.ರಸಿಕಪ್ರಿಯ 15.ಗಂಧದಗುಡಿ 16.ಹಾನಿಕಾರಕ 18.ಅನುಮಾನಿಸು 20.ತೆರಳು 22.ಗೆಣೆಕಾರ 24.ಮಹಾಲಯ 25.ಜಾತಿಗಣತಿ

ಇಲ್ಲಿ ಗುಬ್ಬಿಗಳು ಸಂಭಾಷಿಸುತ್ತಿವೆ...

• ಈರಣ್ಣ ಬೆಂಗಾಲಿ

ಕ್ಯಾನ್ವಾಸ್, ಬಣ್ಣ, ಕುಂಚಗಳ ಜೊತೆಗೆ ಸೃಜನಶೀಲತೆಯ ಒಂದಂಶ ಹೊಳೆದರೆ ಸಾಕು, ನುರಿತ ಚಿತ್ರಕಲಾವಿದರಿಂದ ಅತ್ಯುತ್ತಮವಾದ ಕಲಾಕೃತಿಗಳು ಜೀವತಳೆಯುತ್ತವೆ. ಇದರಂತೆ ಒಬ್ಬೊಬ್ಬ ಕಲಾವಿದ ಒಂದೊಂದು 'ವಸ್ತು'ವಿನ ಮೇಲೆ ಸರಣಿ ಕಲಾಕೃತಿಗಳನ್ನು ರಚಿಸಿ ಜನಮನ ಸೆಳೆದ ಕಲಾವಿದರು ಅನೇಕರು. ರಾಯಚೂರಿನ ಯುವ ಕಲಾವಿದ ಭೀಮರಾವ್ ಅವರು ಗುಬ್ಬಿಯನ್ನು 'ವಸ್ತು'ವನ್ನಾಗಿಸಿಕೊಂಡು ತಮ್ಮ ಮನೋಲಹರಿಯನ್ನು ಕ್ಯಾನ್ವಾಸ್ ಮೇಲೆ ಹರಡಿದ್ದಾರೆ.

ಸ್ವಚ್ಛಂದವಾಗಿ ಹಾರಾಡುವ ಗುಬ್ಬಿಯು ಕ್ಯಾನ್ವಾಸ್‌ನಲ್ಲಿ ಬಂಧಿಯಾಗಿ ಸಮಾಜದಲ್ಲಿನ ಆಗುಹೋಗುವ ಅನೇಕ ಜ್ವಲಂತ ಸಮಸ್ಯೆಗಳನ್ನು ಅನಾವರಣ ಮಾಡುತ್ತಾ ಹೋಗಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು. ತಂತ್ರಜ್ಞಾನದ ದುಷ್ಪರಿಣಾಮ, ಮಹಿಳಾ ಲೋಕದ ತಲ್ಲಣಗಳು, ನಿಸರ್ಗದ ಮೇಲೆ ಆಗುತ್ತಿರುವ ದೌರ್ಜನ್ಯ, ವನ್ಯಜೀವಿಗಳ ಅವಸಾನ, ಮೂಢನಂಬಿಕೆಗಳಿಂದ ಪಕ್ಷಿಸಂಕುಲದ ನಾಶ, ನೀರಿನ ಉಳಿತಾಯ, ಕಾರ್ಪೊರೇಟ್ ವ್ಯವಸ್ಥೆಯ ಕುಟಿಲತೆ...ಹೀಗೆ ಗುಬ್ಬಿ ಪ್ರಚಲಿತ ವಿದ್ಯಮಾನಗಳ ಸಂಕೇತವಾಗಿದೆ. ಅವರು ಇಪ್ಪತ್ತೈದಕ್ಕೂ ಹೆಚ್ಚು ವಿಶೇಷ ಕಲಾಕೃತಿಗಳನ್ನು ರಚನೆ ಮಾಡಿದ್ದು ಅವು ಕಲಾಸಕ್ತರ, ನೋಡುಗರ ಮನಸೆಳೆದಿವೆ.

ಭೀಮರಾವ್

ಮನುಷ್ಯರಿಗೆ ಹತ್ತಿರವಾದ ಗುಬ್ಬಿಯನ್ನು ಇಟ್ಟುಕೊಂಡು ಪ್ರಾಯೋಗಿಕವಾಗಿ ಗಂಭೀರವಾದ ವಿಚಾರಗಳನ್ನು ಕ್ಯಾನ್ವಾಸ್ ಮೇಲೆ ಅಭಿವ್ಯಕ್ತಗೊಳಿಸುತ್ತಾ ಹೋಗಿದ್ದಾರೆ. ಅಕ್ರಲಿಕ್, ಆಯಿಲ್ ಕಲರ್, ವಾಟರ್ ಕಲರ್, ಮಿಕ್ಸ್ ಮೀಡಿಯಾದಲ್ಲಿ ಅರಳಿದ ಈ ಕಲಾಕೃತಿಗಳನ್ನು ಹತ್ತು ವರ್ಷಗಳಿಂದ ಮಾಡುತ್ತಾ ಬಂದಿದ್ದಾರೆ. ಕಲಾವಿದ ಭೀಮರಾವ್ ಆರಂಭದಲ್ಲಿ ಮಹಿಳಾ ಸಮಸ್ಯೆಗಳ ಸರಣಿಯನ್ನು ಮಾಡುತ್ತಿದ್ದರು. ಹಿರಿಯ ಕಲಾವಿದರ ಸಲಹೆಯಂತೆ ಸೃಜಶೀಲತೆಯ ನಿಟ್ಟಿನಲ್ಲಿ ಗುಬ್ಬಿಯ ಮೂಲಕ ಸ್ತ್ರೀಸಂವೇದನೆ ಸೇರಿದಂತೆ ಜಗತ್ತಿನ ಮನುಕುಲದ, ವನ್ಯಜೀವಿಗಳ ಬವಣೆಗಳನ್ನು ಹೇಳುತ್ತಾ ಹೊರಟಿದ್ದಾರೆ.

ಚಿತ್ರಕಲೆಯಲ್ಲಿ ಎಂ.ವಿ.ಎ ಅಭ್ಯಾಸ ಮಾಡಿದ ಭೀಮರಾವ್, ವಿವಿಧ ವಿಶ್ವವಿದ್ಯಾಲಯಗಳು ಏರ್ಪಡಿಸಿದ್ದ ಚಿತ್ರಕಲಾ ಶಿಬಿರಗಳು, ಕಾರ್ಯಗಾರಗಳಲ್ಲಿ ಪಾಲ್ಗೊಂಡು ತಮ್ಮ ಕೌಶಲವನ್ನು ಹೆಚ್ಚಿಸಿಕೊಂಡಿದ್ದಾರೆ. ತಮ್ಮ ಗುಬ್ಬಿ ಕಲಾಕೃತಿಗಳನ್ನು ಹಂಪಿ, ಹಾವೇರಿ, ಕಲಬುರಗಿ, ಬೀದರ್, ರಾಯಚೂರು, ಬೆಂಗಳೂರು ಅಲ್ಲದೇ ಕೊಚ್ಚಿ, ಕೊಯಮತ್ತೂರು, ಹೈದರಾಬಾದ್, ಉಜ್ಜಯಿನಿ, ಮಧ್ಯಪ್ರದೇಶ–ಹೀಗೆ ಹೊರನಾಡುಗಳಲ್ಲಿಯೂ ಪ್ರದರ್ಶನ ಮಾಡಿದ್ದಾರೆ. ಆನ್‌ಲೈನ್ ಚಿತ್ರಕಲಾ ಸ್ಪರ್ಧೆಗಳಲ್ಲಿ ಇವರ ಕಲಾಕೃತಿಗಳಿಗೆ ಪ್ರಶಸ್ತಿ, ಪುರಸ್ಕಾರಗಳು ಒಲಿದು ಬಂದಿವೆ. ಮುಖ್ಯವಾಗಿ ದೇಶದ ಅನೇಕ ರಾಜ್ಯಗಳಲ್ಲಿನ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಅಲ್ಲಿಯೂ ಸ್ಥಳದಲ್ಲೇ ಗುಬ್ಬಿಯ 'ವಸ್ತು' ಇಟ್ಟುಕೊಂಡು ಮಾಡಿದ ಕಲಾಕೃತಿಗಳಿಗೆ ಬಹುಮಾನಗಳು ಸಂದಿವೆ.

ಸಾಮಾನ್ಯವಾಗಿ ಪ್ರಾಣಿ, ಪಕ್ಷಿಗಳು ಎಂಥವರನ್ನಾದರೂ ತನ್ನತ್ತ ತಿರುಗಿ ನೋಡುವಂತೆ ಮಾಡುತ್ತವೆ. ಇದೇ ವಿಚಾರವನ್ನು ಇಟ್ಟುಕೊಂಡು, ಗುಬ್ಬಿಗಳ ಮೂಲಕ ಈ ಯುಗದ ಕಥೆ–ವ್ಯಥೆಯನ್ನು ಹೇಳುವ ಯುವ ಕಲಾವಿದ ಭೀಮರಾವ್ ಅವರ ಕಳಕಳಿ, ಚಿತ್ರಕಲಾ ನೈಪುಣ್ಯತೆ ನಿಜಕ್ಕೂ ಶ್ಲಾಘನೀಯ.

ಅಳಿವಿನ ಅಂಚಿನಲ್ಲಿ 'ಅವ್ಲ ಮೀನು'

• ಬೀರಣ್ಣ ನಾಯಕ ಮೊಗಟಾ

ಅವ್ಲ ಮೀನು

ಬಾಣಂತಿ ಚಾಕರಿಕೆ,
ಕಡು ಕಷ್ಟ ಮಾಹಾ ತಾಯಿ.
ಗುಂಡಿಯ ಹುಡುಕಾಡಿ,
ಅವ್ಲ ಮೀನ ತರು ತಾಯಿ

ಎನ್ನುವ ಜನಪದ ಹಾಡಿನಲ್ಲಿ ಅವ್ಲ ಮೀನಿನ ಪ್ರಸ್ತಾಪ ಬರುತ್ತದೆ. ಇದರ ರುಚಿ ನೋಡಿದ ಮೀನುಪ್ರಿಯರು ವಿರಳ. ಕಾರಣ ಯಾವ ಮಾರುಕಟ್ಟೆಯಲ್ಲೂ ಮಾರಾಟಕ್ಕೆ ಸಿಗದ ಈ ಮೀನುಗಳು ಈಗ ಅಳಿವಿನ ಅಂಚಿನಲ್ಲಿವೆ.

ಹೆಚ್ಚು ಮುಳ್ಳಿರದ, ಮುಟ್ಟಿದರೆ ಜಾರುವ, ನೀರಿನಿಂದ ತೆಗೆದ ಮೇಲೂ ಬಹಳ ಸಮಯ ಜೀವಂತವಾಗಿರುವ, ನಂಜಿನ ಅಂಶ ಇಲ್ಲದ, ಬಾಣಂತಿಯರಿಗೆ ಉಣ ಬಡಿಸುವ ಈ ಮೀನನ್ನು ವಾಡಿಕೆಯಲ್ಲಿ 'ಪಥ್ಯದ ಮೀನು' ಎಂದೇ ಕರೆಯುತ್ತಾರೆ.

ಮುರ್ರೆಲ್ ಮೀನಿನ ಜಾತಿಗೆ ಸೇರಿದ ಈ ಮೀನುಗಳು ದುಂಡು, ಮುರ್ದುಂಡು ಜಾತಿಯ ಮೀನುಗಳನ್ನು ಹೋಲುತ್ತವೆ. ಗುಡ್ಡದ ಇಳಿಜಾರಿನಿಂದ ಹರಿದು ಬರುವ ಶುದ್ಧ ನೀರಿನ ಸಣ್ಣ ಹಳ್ಳಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಬಹಳ ಸೂಕ್ಷ್ಮ ಜಾತಿಯ ಮೀನಿನ ವರ್ಗಕ್ಕೆ ಸೇರಿದ ಇವುಗಳನ್ನು ಜಾಗ್ರತೆಯಿಂದ ಗಾಳ, ಬಲೆ, ಬಂದೂಕು ಬಳಸಿ ಬೇಟೆಯಾಡುತ್ತಿದ್ದರು.

ಎರಡು ಅಡಿಯವರೆಗೆ ಬೆಳೆಯುವ ಇವು ಐದು ಕೆ.ಜಿ.ಯವರೆಗೆ ತೂಗುತ್ತವೆ. ಹಳ್ಳಿಗಳಲ್ಲಿ ಈ ಮೀನುಗಳನ್ನು ಸ್ವಚ್ಛ ಮಾಡುವಾಗ ಜಾರುವುದರಿಂದ ಬೂದಿಯನ್ನು ಬಳಸಿ ತುಂಡರಿಸುತ್ತಾರೆ. ಸಾಕಷ್ಟು ಔಷಧೀಯ ಗುಣ ಹೊಂದಿರುವ ಈ ಅವ್ಲ ಮೀನುಗಳನ್ನು ಹಿಂದೆ ಸಾರು, ಫ್ರೈ, ಮಸಾಲೆ ಫ್ರೈ ಮಾಡಿ ಸೇವಿಸುತ್ತಿದ್ದರು.

ಮೊದಲ ಓದು

ನೆಲದ ವಿವೇಕದ ಕಣ್ಣಲ್ಲಿ ಕಂಡ ಬುದ್ಧ



ಬುದ್ಧಯಾನ
ಲೇ: ಕಂನಾಡಿಗಾ ನಾರಾಯಣ
ಪ್ರ: ನವಕರ್ನಾಟಕ
ಸಂ: 08022161900

ಜಗತ್ತಿಗೆ ಶಾಂತಿಯ ಸಂದೇಶ ನೀಡಿರುವ ಮಹಾಸಂತ ಬುದ್ಧನ ಕುರಿತ ಸಾಹಿತ್ಯ ಪ್ರಪಂಚದ ಅನೇಕ ಭಾಷೆಗಳಲ್ಲಿ ವಿಪುಲವಾಗಿ ಸಿಗುತ್ತವೆ. ಕನ್ನಡದಲ್ಲೂ ಗದ್ಯ, ಕಾವ್ಯ, ಕಥೆ, ನಾಟಕ, ಮಹಾಕಾವ್ಯ ಪ್ರಕಾರದಲ್ಲಿ ಹೇರಳವಾಗಿ ದೊರೆತರೂ ಬುದ್ಧನ ಜೀವನ ಕುರಿತಾಗಿ ಕಾದಂಬರಿಗಳು ಅಷ್ಟಾಗಿ ಪ್ರಕಟಗೊಂಡಿಲ್ಲ. ಈ ಕೊರತೆಯನ್ನು ನೀಗಿಸುವ ಕಾದಂಬರಿಯೇ ಕಂನಾಡಿಗಾ ನಾರಾಯಣ ಅವರ 'ಬುದ್ಧಯಾನ'.

ಈ ಕೃತಿಯು ಬುದ್ಧನನ್ನು ನೆಲದ ವಿವೇಕದಿಂದ ಚಿತ್ರಿಸುತ್ತದೆ. ಆತನನ್ನು ಅವತಾರ ಪುರುಷನೆಂಬ ಪೌರಾಣಿಕ ಚೌಕಟ್ಟಿನಿಂದ ಹೊರತಂದು, ಸಾಮಾನ್ಯ ಮನುಷ್ಯನೊಬ್ಬನ ಜ್ಞಾನದಾಹದ ಸಂಕೇತದಂತೆ ಚಿತ್ರಿಸುವ ಉಮೇದನ್ನು ಕಾದಂಬರಿಕಾರರು ಎಲ್ಲ ಹಂತಗಳಲ್ಲಿಯೂ ಪ್ರಕಟಿಸಿದ್ದಾರೆ.

ಸಿದ್ಧಾರ್ಥನನ್ನು ಹೆತ್ತು ತನ್ನ ಕರ್ತವ್ಯ ಮುಗಿಯಿತೆಂಬಂತೆ ಮಿಂಚಿನಂತೆ ನಿರ್ಗಮಿಸುವ ಮಾಯಾದೇವಿ ಮತ್ತು ಹೆತ್ತ ಮಗನಿಗಿಂತಲೂ ಹೆಚ್ಚಾಗಿ ಪೊರೆವ ಗೌತಮಿ ಹಾಗೂ ಗೌತಮನ ಪತ್ನಿ ಯಶೋಧರೆ, ಮುಂದೆ ಬರುವ ಕಿಸಾಗೋತಮಿ, ಆಮ್ರಪಾಲಿ ಮುಂತಾದ ಸ್ತ್ರೀಪಾತ್ರಗಳ ಪೋಷಣೆ ದೀರ್ಘಕಾಲ ಮನಸ್ಸನ್ನು ಆವರಿಸಿಕೊಳ್ಳುವಷ್ಟು ಸಶಕ್ತವಾಗಿ ಮೂಡಿಬಂದಿವೆ. ಶುದ್ಧೋದನ, ಆನಂದ ಮುಂತಾದ ಪುರುಷ ಪಾತ್ರ ಚಿತ್ರಣಕ್ಕಿಂತಲೂ ಹೆಚ್ಚು ತೀವ್ರವಾಗಿ ಲೇಖಕ ಹೆಣ್ಣುಜೀವದ ಒಳತೋಟಿಯನ್ನು ಹಿಡಿಯಬಲ್ಲರೆಂಬುದಕ್ಕೆ ಮಾಯಾದೇವಿ, ಪ್ರಜಾಪತಿದೇವಿ, ಯಶೋಧರೆ, ಪಥಾಚರಿ, ಆಮ್ರಪಾಲಿ, ಕಿಸಾಗೋತಮಿಯರ ಅಂತರಂಗ ತೆರೆದುಕೊಳ್ಳುವ ಅಧ್ಯಾಯಗಳನ್ನು ಉದಾಹರಣೆಯಾಗಿ ಗಮನಿಸಬಹುದು.

ಕಥೆಯ ಕೇಂದ್ರವಾದ ಸಿದ್ಧಾರ್ಥನನ್ನು ಅಸಾಮಾನ್ಯತೆಯ ಚೌಕಟ್ಟಿನಿಂದ ಬಿಡಿಸಿ, ಸಾಮಾನ್ಯತೆಯೊಂದಿಗೇ ಜ್ಞಾನದತ್ತ ಸಾಗುವ ಪಯಣಿಗನಂತೆ ಕಾದಂಬರಿ ಚಿತ್ರಿಸುತ್ತದೆ. ದಾಯಾದಿ ಮಾತ್ಸರ್ಯವನ್ನು ಸಿದ್ಧಾರ್ಥ ಎದುರಿಸುವ ಬಗೆ, ನದಿ ನೀರಿನ ಗಲಭೆಯು ಕದನಕ್ಕೆ ಹೊರಳುವ ಸಂದರ್ಭದಲ್ಲಿ ಯುದ್ಧ ವಿರೋಧಿ ನಿಲುವಿನಿಂದ ಅದನ್ನು ನಿವಾರಿಸುವ ಬಗೆ, ಮಡದಿ– ಮಗನ ಮೋಹವು ಆವರಿಸಿಕೊಂಡು ತನ್ನ ಧ್ಯೇಯೋದ್ದೇಶಕ್ಕೆ ಅಡ್ಡಿಯಾಗದಂತೆ ವಹಿಸುವ ಎಚ್ಚರ, ಅರಮನೆಯನ್ನು ಬಿಟ್ಟು ಹೊರಡುವಾಗಲೂ ಕಟು ವಾಸ್ತವದ ಆಲೋಚನೆಗಳಿಂದ ದೂರಾಗದಿರುವುದು, ವರ್ಷಗಟ್ಟಲೆ ಮಾಡುವ ದೇಹದಂಡನೆ ಮತ್ತು ಮನೋನಿಗ್ರಹಗಳ ತಪಸ್ಸು ಹೀಗೆ ಎಲ್ಲೆಡೆಯೂ ಸಿದ್ಧಾರ್ಥ ಮನುಷ್ಯ ಪ್ರಯತ್ನದ ಪ್ರತಿರೂಪದಂತೆಯೇ ಕಾಣುತ್ತಾನೆ. ಪುರಾಣದ ಚೌಕಟ್ಟನ್ನು ಕಳಚಿಕೊಂಡು ಸಾಮಾನ್ಯತೆಯ ಚೌಕಟ್ಟಿನೊಳಗೆ ಚಿತ್ರಿತನಾಗುವ ಸಿದ್ಧಾರ್ಥ ಓದುಗರಿಗೆ ಹೆಚ್ಚು ಆಪ್ತನಾಗುತ್ತಾ ಹೋಗುತ್ತಾನೆ.

ಪುಟ: 136 ₹170

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ನೆಲದಪಡೆ, ನೀರಪಡೆ, ಗಾಳಿಪಡೆ

ನೆಲದಪಡೆ (ನಾ). ಭೂಸೈನ್ಯ
ನೀರಪಡೆ (ನಾ). ನೀರಿನ ಮೇಲೆ ಸಂಚರಿಸುವ ಸೈನ್ಯ; ನೌಕಾಪಡೆ
ಗಾಳಿಪಡೆ (ನಾ). ವಾಯುಸೈನ್ಯ

ರಾವಣೇಶ್ವರನು ಯುದ್ಧ ಕುರಿತು ಚರ್ಚಿಸಲು ಸಭೆ ಕರೆಯುವನು. ಅದರಲ್ಲಿ ಪ್ರಥಮ ಸೇನಾನಿ ಪ್ರಹಸ್ತನು ತಮ್ಮಲ್ಲಿರುವ ಯುದ್ಧ ಸನ್ನದ್ಧ ಪಡೆಗಳನ್ನು ತಿಳಿಸುವಾಗ ಅವುಗಳನ್ನು ಕುವೆಂಪು ಅವರು ನೆಲದಪಡೆ, ನೀರಪಡೆ, ಗಾಳಿಪಡೆಗಳೆಂದು ಕರೆದು ಹೀಗೆ ಬಣ್ಣಿಸಿರುವರು.

'ನೆಲದಪಡೆ,
ನೀರಪಡೆ, ಗಾಳಿಪಡೆಗಳ್-ಕೋಟಿ
ಕೋಟಿಗಳ್-
ಸಿದ್ಧವಾಗಿಹವಿಂದು ಯುದ್ಧಲೀಲಾ ವಿಲಯ
ಕಲೆಗೆ'



ಕುರಿಗೊಲೆ

ಕುರಿಗೊಲೆ (ನಾ). (ಆಲಂ) ಅಸಹಾಯ ಸ್ಥಿತಿಯಲ್ಲಿರುವವರ ಕೊಲೆ; ಭೀಕರವಾದ ಕೊಲೆ; ಕಗ್ಗೊಲೆ. ರಾಮರಾವಣರ ಯುದ್ಧದಲ್ಲಿ ರಾವಣನು ತಾಮತಾಸ್ತ್ರ ಪ್ರಯೋಗಿಸುವನು. ಅದು ವಾನರರ ಪ್ರಾಣಗಳನ್ನು ಹೀರಿ ದುರ್ಮರಣ ತರಲು, ವಾನರರು ಕೆಟ್ಟು ಓಡುವರು. ಆಂಜನೇಯ, ನಳ, ನೀಲರು ಅವರನ್ನು ತಡೆಯುತ್ತಿರಲು ಸುಗ್ರೀವನನ್ನುದ್ದೇಶಿಸಿ ರಾಮನು ಹೇಳುವ ನುಡಿಯಲ್ಲಿ ಕುವೆಂಪು ಅವರು 'ಕುರಿಗೊಲೆ' ಎಂಬ ಪದವನ್ನು ಆಲಂಕಾರಿಕವಾಗಿ ಹೀಗೆ ಪ್ರಯೋಗಿಸಿದ್ದಾರೆ.

'ಹನುಮ ಮೈಂದಾದಿ
ಕಲಿಗಳಿಂದೀ ಮಹಾ ದೈತ್ಯ
ರಣರುದ್ರನಂ
ಕೆಣಕಿ ಬಾಳ್ವೆರಸಿ ಪಿಂತಿರುಗಲರಿಯರ್ ಕಣಾ!
ಮತ್ತೇತಕಿತರರಂ
ನೂಂಕುತಿರ್ಪರು ಬರಿದೆ
ಕುರಿಗೊಲೆಗೆ?'

ಬಾನಲೆವರು

ಬಾನಲೆವರು (ನಾ). ಆಕಾಶದಲ್ಲಿ ಸಂಚರಿಸುವವರು; ದೇವತೆಗಳು

ಕುವೆಂಪು ಅವರು ಆಕಾಶದಲ್ಲಿ ಸಂಚರಿಸುವ ದೇವತೆಗಳನ್ನು ತಮ್ಮ 'ಉದಯರವಿ' ಮನೆಯ ತೋಟಕ್ಕೆ ಬರಲು ಹೀಗೆ ಆಹ್ವಾನಿಸಿದ್ದಾರೆ:

'ಬನ್ನಿ, ಓ ಬಾನಲೆವರೆ, ನಮ್ಮ ತೋಟಕೆ,
ನಂದನವನೆ ಮೀರಿಸುವೀ ದಿವ್ಯ ನೋಟಕೆ.'
(ಸೌಂದರ್ಯಯಾಜಿ : ಅನಿಕೇತನ)

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಬಾಲ ವಿಜ್ಞಾನ

ಈಗ ಮಳೆಗಾಲ. ಈ ಅವಧಿಯಲ್ಲಿ ಒಂದು ವಿಷಯ ನಿನ್ನನ್ನು ಕಾಡುವುದು ಸಹಜ. ನಮ್ಮ ಭೂಮಿಯ ಮೇಲೆ ತೇಲಾಡುವ ಮೋಡಗಳು ನೆಲದಿಂದ ಎಷ್ಟು ಎತ್ತರದಲ್ಲಿರುತ್ತವೆ ಎಂಬುವುದು ನಿಮಗೆ ತಿಳಿದಿದೆಯೇ? ಈ ಮೋಡಗಳು ನೀರಿನ ಆವಿ ಮತ್ತು ಸಣ್ಣ ನೀರಿನ ಕಣಗಳು. ಇವು ಗಾಳಿಯಲ್ಲಿ ಮೇಲೇರಿ ಸುಮಾರು 150 ಮೀ.ಗಳಿಂದ ಹಿಡಿದು 10 ಕಿ.ಮೀ.ವರೆಗೂ ಎತ್ತರದಲ್ಲಿ ಮೋಡದ ರೂಪದಲ್ಲಿರುತ್ತವೆ.

ಪದ ಪರಿಚಯ ಪರೀಕ್ಷೆ

ಇಲ್ಲಿ ಕೊಟ್ಟಿರುವ ಸುಳಿವಿಗನುಗುಣವಾಗಿ ನೀವು ಕೆಳಗೆ ಕೊಟ್ಟಿರುವ ಉದ್ದನೆಯ ವಾಕ್ಯದಲ್ಲಿ ಅಕ್ಷರಗಳನ್ನು ಆಯ್ದುಕೊಂಡು 10 ಪದ ರಚಿಸಿ.

ವಾಕ್ಯ: ಶಾಸಕರ ಮತದಾನದ ವಿಚಾರ

1		ಮನೆ
2		ಓರ್ವ ಪ್ರಾಚೀನ ಕವಿ
3		ದೂಳು
4		ಅಭಿಪ್ರಾಯ
5		ಸೊಕ್ಕು
6		ಸೂರ್ಯ
7		ಬೀಸಣಿಕೆ
8		ಮೊಸಳೆ
9		ವಿನಂತಿ
10		ಕೊಡುಗೆ

ಗಣಿತದಲ್ಲಿ ಗರ್ದಿಗಮ್ಮತ್ತು

ಏಜು–ಮೋಜು

13837ಕ್ಕೆ ನಿನ್ನ ವಯಸ್ಸಿನ ಸಂಖ್ಯೆಯಿಂದ ಗುಣಿಸಿ ಬಂದ ಉತ್ತರಕ್ಕೆ ಮಾಯಾ ಸಂಖ್ಯೆ 73ರಿಂದ ಮತ್ತೆ ಗುಣಿಸಿದರೆ ಉತ್ತರದಲ್ಲಿ ನಿನ್ನ ವಯಸ್ಸಿನ ಸಂಖ್ಯೆಗಳೇ ಬರುತ್ತವೆ.

ಉದಾ: 13837X12 (ನಿನ್ನ ವಯಸ್ಸು)

ಉತ್ತರ = 166044

ಈ ಉತ್ತರಕ್ಕೆ (166044)73 ರಿಂದ (ಮಾಯಾ ಸಂಖ್ಯೆ) ಗುಣಿಸಿದಾಗ = 12121212

(ಸೂಚನೆ 10 ವರ್ಷದೊಳಗಿನವರಾಗಿದ್ದರೆ ವಯಸ್ಸಿನ ಹಿಂದೆ ಒಂದು 0 ಸೇರಿಸಿ)



ಕೊನೆ ಕಂಡ ಗೊನೆ!

ತೋಟದಲ್ಲಿ ಬೆಳೆದಿದ್ದ ಬಾಳೆ ಹಣ್ಣಿನ ಗೊನೆಯನ್ನು ಗುಂಡ ಮಾರುಕಟ್ಟೆಗೆ ಕೊಂಡೊಯ್ಯುತ್ತಿದ್ದ. ದಾರಿಯಲ್ಲಿ ಆ ಬಾಳೆಗೊನೆಯನ್ನು ಪಕ್ಷಿಗಳ ಹಿಂಡೊಂದು ನೋಡಿತು. ಗುಂಡನಿಗೆ ತಿಳಿಯದಂತೆ ಆ ಪಕ್ಷಿಗಳು ಮೆಲ್ಲನೆ ಹಾರಿಬಂದು ಒಂದೊಂದೇ ಬಾಳೆ ಹಣ್ಣನ್ನು ಕೊಕ್ಕಿನಲ್ಲಿ ಕಚ್ಚಿ ಹಿಡಿದೊಯ್ದಿತು. ಎಲ್ಲಾ ಹಕ್ಕಿಗಳು ಹಾರಿ ಹೋದಾಗ ಆ ಗೊನೆಯಲ್ಲಿ ನಾಲ್ಕೈದು ಬಾಳೆಹಣ್ಣುಗಳಷ್ಟೇ ಉಳಿದಿದ್ದವು.

ಮೋGನ ಇಂಗ್ಲಿಷ್

ಒಂದು ಪದ–ಮೂರು ವಿಧ

ಇಲ್ಲಿ ಕೊಟ್ಟಿರುವ ಇಂಗ್ಲಿಷ್ ಪದದ ಅಕ್ಷರಗಳನ್ನು ಬಳಸಿಕೊಂಡು ಮೂರು ಪದ ಮಾಡಬಹುದು. ಎರಡು ಪದ ಈಗಾಗಲೇ ಇವೆ. ಇನ್ನೊಂದು ಪದ ನೀವು ಮಾಡಿ.

1	STEAL	LEAST	_
1	GLARE	LARGE	_

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ನಯ	+	ಮಾಲಾ	+	ಡೋ	=	
2	ಪಾದ	+	ಕರ	+	ರ್ಶ	=	
3	ಜಾಣ	+	ಗತಿ	+	ತಿ	=	
4	ನಲಿ	+	ಕನ್ನ	+	ಚಿ	=	
5	ನೆಡು	+	ಬಲ	+	ರ	=	

ಕೊಂಚ ತಂತ್ರ

ಇಂದು ಸೂರ್ಯಗ್ರಹಣ. ಸೂರ್ಯ, ಚಂದ್ರ, ಪೃಥ್ವಿ ಒಂದೇ ಸರಳರೇಖೆಯಲ್ಲಿ ಬಂದಾಗ ಸೂರ್ಯಗ್ರಹಣವಾಗುತ್ತದೆ. ಈ ಸಂಗತಿಯನ್ನು ನೆನಪಿಡಲು SMELL ಪದವನ್ನು ನೆನಪಿಡಬೇಕು.

S = Sun, M = Moon, E = Earth

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಕಾಡಿಗೆಹೋಗು 2.ಗಾಯತ್ರಿಮಂತ್ರ 3.ಗೊಲ್ಲರಮನೆ 4.ಕಲ್ಲುನಾಗರ 5.ವಸಂತಮಾಸ
ಜಾಣಪದ ಆಟ: 1.ಅವನತಿ 2.ಸಡಗರ 3.ವರಮಾನ 4.ರಹದಾರಿ 5.ಕಲರವ 6.ಆಪಾದನೆ 7.ಕರಿಮಣಿ 8.ಸರಸ್ವತಿ 9.ನಲವತ್ತು 10.ಹಟಮಾರಿ
ಮೋಜಿನ ಇಂಗ್ಲಿಷ್: 1.MAIN 2.WORLD 3.BLANK 4.BLACK 5.COAT 6.BOAT 7.GOLD 8.BEAT 9.TWIN 10.MANY
ಅದಲು–ಬದಲು: 1.ಬೇಗ ವಿಶ್ರಾಂತಿ ಮುಗಿಸಿರಿ 2.ತಾಟಿನಲ್ಲಿ ಕೈ ತೊಳೆಯಬಾರದು 3.ಸಾಲಾಗಿ ಬನ್ನಿರಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಅನಿಕೇತ ಅಂಬರೀಶ ಪೂಜಾರಿ, ಕೊಪ್ಪಳ

ಶಿವಕುಮಾರ್
ಪಾವಗಡ

ರೋಹಿತ್ ಹಿರೇಮಠ
ದಾವಣಗೆರೆ

ಅದಿತಿ ಕೆ.
ಹರಪನಹಳ್ಳಿ

ಪ್ರಧ್ಯುಮ್ನ ಪಿ.ಎಸ್.
ಧಾರವಾಡ

ಸೋಹಾ ಎಂ.ಖಾದ್ರಿ
ಬಾಗಲಕೋಟೆ

ಪ್ರವಾಸ

ಭತ್ತದ ಪೈರೂ... ಚಿತ್ರಕಲೆಯ ಬೆರಗೂ...

ಜಪಾನ್‌ನಲ್ಲಿ 'ರೈಸ್ ಫೀಲ್ಡ್ ಆರ್ಟ್' ಜನಪ್ರಿಯವಾಗಿದೆ. ಇದು ವಾರ್ಷಿಕ ಸಂಭ್ರಮವೂ ಆಗಿದೆ. ಗ್ಯೋದಾ ಪ್ರದೇಶದ ಭತ್ತದ ಗದ್ದೆಯಲ್ಲಿ ಅರಳು ಈ ಕಲೆ ಪ್ರವಾಸೋದ್ಯಮವನ್ನು ಉತ್ತೇಜಿಸುತ್ತಿದೆ. ಟೋಕಿಯೊದಲ್ಲಿ ಅಕೌಂಟೆಂಟ್ ಆಗಿರುವ ಕನ್ನಡತಿ ಈ ಕಲೆಯ ಪ್ರಕ್ರಿಯೆ ಅರಿಯಲು ಸ್ವಯಂಸೇವಕಿಯಾಗಿ ಭಾಗಿಯಾಗಿದ್ದರು.

• ಚಿತ್ರ–ಬರಹ: ಶ್ವೇತ ಆರಾಧ್ಯ

ಭತ್ತದ ಗದ್ದೆಯಲ್ಲಿ ಮೂಡಿಬಂದ 'ಡೀಮನ್ ಸ್ಲೇಯರ್ ತಂಜಿರೊ'

ಕೆಲ ವರ್ಷಗಳ ಹಿಂದೆ ಜಪಾನಿ ಸ್ನೇಹಿತೆಯನ್ನು ಭೇಟಿಯಾದಾಗ, ಆಕೆ ತನ್ನ ಊರಿನ ವಿಶೇಷತೆಗಳನ್ನು ಹಂಚಿಕೊಂಡಳು. 'ನಮ್ಮ ಊರಿನಲ್ಲಿ ಸಾಕಷ್ಟು ಪ್ರವಾಸಿ ತಾಣಗಳಿವೆ. ಅದರಲ್ಲೂ ಬೇಸಿಗೆಯ ಸಮಯದಲ್ಲಿ ಗ್ಯೋದಾ ನಗರದಲ್ಲಿ ನಡೆಯುವ 'ರೈಸ್ ಫೀಲ್ಡ್ ಆರ್ಟ್' ನಿಜಕ್ಕೂ ವಿಶಿಷ್ಟ. ವಿವಿಧ ಬಣ್ಣದ ಭತ್ತದ ತಳಿಗಳಿಂದ ಗದ್ದೆಯಲ್ಲಿ ಮೂಡುವ ಅದ್ಭುತವಾದ ಕಲೆಯನ್ನು ಒಮ್ಮೆ ನೋಡಲೇಬೇಕು' ಎಂದಳು. ಆಕೆಯ ಈ ಮಾತಿನ ಬಳಿಕ ಕಳೆದ ಮೂರು ವರ್ಷಗಳಿಂದ ತಪ್ಪದೇ ಈ ಭತ್ತದ ಕಲೆ ನೋಡಲು ಹೋಗುತ್ತಿದ್ದೇನೆ.

ಕಲೆಯ ಪ್ರಕ್ರಿಯೆಯನ್ನು ತಿಳಿದುಕೊಳ್ಳುವ ಆಸಕ್ತಿಯಿಂದ ಈ ಬಾರಿ ಸ್ವಯಂ ಸೇವಕಿಯಾಗಿ ಭಾಗವಹಿಸಿದ್ದೆ. ಬೆಳಿಗ್ಗೆ ಸ್ಥಳಕ್ಕೆ ತಲುಪಿದಾಗ, ಸಸಿ ನೆಡುವ ಜಾಗವನ್ನು ನಕ್ಷೆಯಲ್ಲಿ ಸಂಖ್ಯೆ ಮೂಲಕ ತೋರಿಸಿದ್ದರು. ಗದ್ದೆಯಲ್ಲಿ ಮರದ ಕಂಬ ಮತ್ತು ಹಗ್ಗದಿಂದ ಚೌಕಟ್ಟಿನಂತೆ ಜಾಲ ಹಾಕಲಾಗಿತ್ತು. ಅದು ದಿನಪತ್ರಿಕೆಗಳಲ್ಲಿ ಕಾಣುವ ಬಿಂದುಗಳನ್ನು ಜೋಡಿಸಿ ಎನ್ನುವ ಚಿತ್ರದ ರೂಪದಂತಿತ್ತು. ಆಯತಾಕಾರದ ಜಾಗವನ್ನು ಚಿಕ್ಕ ಚಿಕ್ಕ ಭಾಗಗಳಾಗಿ ವಿಭಜಿಸಿ, ಪ್ರತಿಯೊಬ್ಬರಿಗೂ ಒಂದು ಚಿಕ್ಕ ಚೌಕ ನೀಡಲಾಗಿತ್ತು. ನನ್ನ ಪಾಲಿನ ಚೌಕದಲ್ಲಿ ಕಪ್ಪು ಬಣ್ಣದ ಸಸಿಗಳನ್ನು ನೆಡಬೇಕಾಗಿ ಹೇಳಿದ್ದರು. ಪಕ್ಕದಲ್ಲಿದ್ದವರು ಗಾಢ ಹಸಿರು ಬಣ್ಣದ ಸಸಿಗಳನ್ನು ನೆಡುತ್ತಿದ್ದರು. ನಾವು ನೋಡುತ್ತಿದ್ದದ್ದು ಕೇವಲ ಚೌಕಟ್ಟಿನೊಳಗಿನ ನಮ್ಮ ಕೆಲಸ. ಎಲ್ಲರ ಕೆಲಸ ಒಂದಾಗಿ ಸೇರಿದಾಗ ಎಷ್ಟು ದೊಡ್ಡ ಚಿತ್ರ ಮೂಡುವುದೋ ಎಂಬ ಕುತೂಹಲ ಮನಸ್ಸಿನಲ್ಲಿ ಮೂಡಿತ್ತು. ಬಿತ್ತನೆ ಮುಗಿದ ನಂತರ, ಎಲ್ಲರಿಗೂ ಕಳೆದ ವರ್ಷದ ಅಕ್ಕಿಯಿಂದ ತಯಾರಿಸಿದ ಉಂಡೆಯನ್ನು (ಒನಿಗಿರಿ) ತಿಂಡಿಯಾಗಿ ಕೊಟ್ಟರು. ಕೊಯ್ಲಿನ ನಂತರ ಸ್ವಯಂಸೇವಕರಿಗೆ ಸ್ವಲ್ಪ ಅಕ್ಕಿಯನ್ನು ಅಂಚೆ ಮೂಲಕ ಕಳುಹಿಸುತ್ತಾರೆ ಎಂದು ತಿಳಿಯಿತು.

ಬಿತ್ತನೆ ಮಾಡಿದ ಎರಡು ತಿಂಗಳ ನಂತರ ಮತ್ತೆ ಅಲ್ಲಿಗೆ ಹೊರಟೆ. ಟೋಕಿಯೊದಿಂದ ಗ್ಯೋದಾಕ್ಕೆ ತಕಾಸಕಿ ರೈಲಿನಲ್ಲಿ ಸುಮಾರು ಒಂದು ಗಂಟೆಯಷ್ಟೇ. ಚಿತ್ರ ಹೇಗೆ ಮೂಡಿರಬಹುದೆಂಬ ಕುತೂಹಲ ಕ್ಷಣ ಕ್ಷಣಕ್ಕೂ ಹೆಚ್ಚುತ್ತಿತ್ತು. ಗ್ಯೋದಾದಿಂದ ಟ್ಯಾಕ್ಸಿ ಹಿಡಿದು ಹೊರಟೆ. ದೂರದಲ್ಲಿ ಟವರ್ ಕಾಣಿಸಿತು. ನೆಲಮಟ್ಟದಿಂದ ನೋಡಿದರೆ ಹೊಲದಲ್ಲಿ ಕೇವಲ ವಿವಿಧ ಬಣ್ಣಗಳ ಪೈರುಗಳಷ್ಟೇ ಕಾಣುತ್ತಿದ್ದವು. ಐವತ್ತು ಮೀಟರ್ ಎತ್ತರದ ಟವರ್ ಮೇಲಿಂದ ನೋಡಿದಾಗ ಮಾತ್ರ ಆ ಚಿತ್ರ ಅದ್ಭುತವಾಗಿ ಕಾಣಿಸುತ್ತದೆ.

ಕಲೆ ಸೃಷ್ಟಿಸಲು ಹೀಗೆ ಗದ್ದೆಗಿಳಿದು ನಿಗದಿತ ಚೌಕದೊಳಗೆ ಸಸಿಗಳನ್ನು ನೆಡಬೇಕು

20 ನಿಮಿಷಗಳಲ್ಲಿ 'ಕೊದೈ ಹಸು ನೋ ಸತೋ' ತಲುಪಿದೆವು. ಟ್ಯಾಕ್ಸಿ ಡ್ರೈವರ್, 'ಈ ವರ್ಷ ಅನಿಮೆ ಥೀಮ್ ಇರುವುದರಿಂದ ಜನ ಹೆಚ್ಚು ಬರುತ್ತಿದ್ದಾರೆ. ಮೊದಲು ಟವರ್‌ಗೆ ಟಿಕೆಟ್ ತಗೊಳ್ಳಿ, ಇಲ್ಲದಿದ್ದರೆ ತುಂಬಾ ಹೊತ್ತು ಸಾಲಿನಲ್ಲಿ ಕಾಯಬೇಕಾಗುತ್ತದೆ' ಎಂದು ಇಳಿಯುವಾಗ ಸಲಹೆ ನೀಡಿದರು. ಅವರ ಮಾತನ್ನು ಕೇಳಿ ನೇರವಾಗಿ ಮ್ಯೂಸಿಯಂಗೆ ಹೋಗಿ ಟಿಕೆಟ್ ತೆಗೆದುಕೊಂಡೆ. 'ಇನ್ನೂ ಒಂದು ಗಂಟೆಯಾಗಬಹುದು, ನಿಮ್ಮ ಟಿಕೆಟ್ ಸಂಖ್ಯೆಯನ್ನು ಧ್ವನಿವರ್ಧಕದ ಮೂಲಕ ಕರೆಯುತ್ತೇವೆ' ಎಂದರು.

ಕಮಲದ ಊರು!

ಇನ್ನೂ ಸಮಯವಿದ್ದ ಕಾರಣ ಹತ್ತಿರದ ಕಮಲದ ಕೊಳಕ್ಕೆ ಹೋದೆ. ಈ ಸ್ಥಳವು ಭತ್ತದ ಕಲೆಗಷ್ಟೇ ಅಲ್ಲ, ಕಮಲದ ಹೂಗಳಿಗೂ ಪ್ರಸಿದ್ಧ. ಭೂಮಿಯನ್ನು ಅಗೆಯುತ್ತಿದ್ದಾಗ ಸುಮಾರು 1,400 ರಿಂದ 3,000 ವರ್ಷಗಳ ಹಿಂದಿನ ಕಮಲದ ಬೀಜಗಳು ಪತ್ತೆಯಾಗಿ, ಅವನ್ನು ಇದೇ ಸ್ಥಳದಲ್ಲಿ ನೆಟ್ಟಿದ್ದಾರೆ. ಇಂದು 40ಕ್ಕೂ ಹೆಚ್ಚು ಬಗೆಯ ಕಮಲಗಳು ಅರಳಿ, ಪ್ರತಿ ಬೇಸಿಗೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತವೆ. ಈ ಕಾರಣದಿಂದಲೇ ಗ್ಯೋದಾ 'ಪ್ರಾಚೀನ ಕಮಲದ ಗ್ರಾಮ' ಎಂದು ಖ್ಯಾತಿ ಪಡೆದಿದೆ.

ಆ ದಿನ 38 ಡಿಗ್ರಿ ಸೆಲ್ಸಿಯಸ್ ಬಿಸಿಲಿತ್ತು. ಹೆಚ್ಚು ಹೊತ್ತು ಹೊರಗೆ ನಿಲ್ಲಲು ಆಗದೆ ಮ್ಯೂಸಿಯಂಗೆ ಮರಳಿದೆ. ಸರದಿಗೆ ಇನ್ನೂ ಸಮಯ ಇತ್ತು. ಒಳಗಡೆ ಹಿಂದಿನ ವರ್ಷಗಳ ರೈಸ್ ಫೀಲ್ಡ್ ಆರ್ಟ್ ಫೋಟೊಗಳನ್ನು ತೂಗು ಹಾಕಿದ್ದನ್ನು ನೋಡುತ್ತಾ ನಿಂತೆ. ಒಂದು ಬದಿಯಲ್ಲಿ ಭಾರತದ ಕಮಲದ ಹೂವಿನ ಮಾಹಿತಿ, ಇನ್ನೊಂದು ಕಡೆ ತಂಜಿರೊ ಪೋಸ್ಟರ್‌ಗಳು. ಪ್ರತೀ ವರ್ಷ ವಿಭಿನ್ನ ಥೀಮ್ ಆರಿಸಿ ಭತ್ತದ ಕಲೆಯನ್ನು ಮಾಡುತ್ತಾರೆ. ಕೆಲವೊಮ್ಮೆ ಯೋಧರು (ಸಮುರಾಯಿ), ಐತಿಹಾಸಿಕ ದೃಶ್ಯ, ಒಲಿಂಪಿಕ್ಸ್ ಹೀಗೆ ಭಿನ್ನ ಭಿನ್ನ ವಿಷಯಾಧಾರಿತ ಭತ್ತದ ಕಲೆ ಮಾಡುತ್ತಾರೆ. ಈ ವರ್ಷ 'ಡೀಮನ್ ಸ್ಲೇಯರ್' ಸಿನಿಮಾ ಬಿಡುಗಡೆಯಾದ ಕಾರಣ, ಅದರ ಪ್ರಚಾರಕ್ಕಾಗಿ 'ತಂಜಿರೊ'ನ ಭಾವಚಿತ್ರ. ಇದನ್ನು ನೋಡಲು ಜನಸಾಗರವೇ ಹರಿದು ಬಂದಿತ್ತು. ವಿಶೇಷವಾಗಿ, ಸಂಪೂರ್ಣ 'ತಂಜಿರೊ' ವೇಷದಲ್ಲಿ ಬಂದಿದ್ದ ಒಬ್ಬ ಹುಡುಗ ಎಲ್ಲರ ಗಮನ ಸೆಳೆಯುತ್ತಿದ್ದ. ಕೊನೆಗೂ, ಗೋಪುರ ಏರಲು ನನ್ನ ಸರದಿ ಬಂತು.

ಲಿಫ್ಟ್ ಮೂಲಕ ಟವರ್ ಮೇಲೆ ಹೋದಾಗ ವಿಹಂಗಮ ನೋಟ ತೆರೆದಿತ್ತು. ಗದ್ದೆಯ ಮಧ್ಯೆ ತಂಜಿರೊನ ಚಿತ್ರ. ಈ ಬಾರಿ ಒಂಬತ್ತು ವಿಧದ ಭತ್ತದ ತಳಿಗಳನ್ನು ಬಳಸಿ, ಸಾವಿರಕ್ಕೂ ಹೆಚ್ಚು ಜನರ ಪರಿಶ್ರಮದಿಂದ ಏಳು ಎಕರೆ ಗದ್ದೆಯನ್ನು ಕಲೆಯಾಗಿ ರೂಪಿಸಿದ್ದರು. ರೈತರು ಇಲ್ಲಿ ಗದ್ದೆಯನ್ನೇ ಕ್ಯಾನ್ವಾಸ್ ಆಗಿ ಬಳಸಿದ್ದಾರೆ. ತಂಜಿರೊನ ಮುಖದ ಬಣ್ಣಕ್ಕೆ ತಿಳಿ ಹಸಿರು–ಹಳದಿ, ಗಾಳಿಯಲ್ಲಿ ಹಾರುವಂತ ಕೂದಲಿಗೆ ಕಪ್ಪು–ಹಸಿರು, ಜಾಕೆಟಿಗೆ ಕಪ್ಪು- ಹಸಿರು ಬಣ್ಣದ ಚದುರಂಗದ ವಿನ್ಯಾಸ, ಕೈಯಲ್ಲಿದ್ದ ಕತ್ತಿಯ ತುದಿಗೆ ಬಿಳಿ–ಹಳದಿ ಬಳಸಿ ಹೊಳೆಯುವಂತೆ ತೋರಿಸಿದ್ದರು. ಮೇಲಿನಿಂದ ಒಂದು ಬದಿಯಲ್ಲಿ ಡೀಮನ್ ಸ್ಲೇಯರ್ ಆರ್ಟ್ ಇದ್ದರೆ, ಇನ್ನೊಂದು ಕಡೆ ಕಮಲದ ಕೊಳ, ಸುತ್ತಮುತ್ತ ಹಸಿರು ಗದ್ದೆ ನಿಜಕ್ಕೂ ಆ ಗೋಪುರದ ಮೇಲಿನಿಂದ ಕಾಣುವ ದೃಶ್ಯ ಮನಮೋಹಕ. ಜಪಾನಿನ ಮಕ್ಕಳು ಸಂತೋಷದಿಂದ 'ಸುಗೋಯ್' (ಅದ್ಭುತ) ಎಂದು ಕೂಗುತ್ತಿರುವುದು ಕೇಳಿಸಿತು. ಮಕ್ಕಳ ಎತ್ತರಕ್ಕೆ ಸರಿಯಾಗಿ ಸ್ಟೂಲ್ ಇಟ್ಟಿದ್ದು, ಸ್ಪಷ್ಟವಾಗಿ ಚಿತ್ರ ನೋಡಲು ದುರ್ಬೀನು ಸೌಲಭ್ಯ ಒದಗಿಸಿರುವುದು, ಜಪಾನಿಯರ ಕಾಳಜಿಯನ್ನು ತೋರಿಸಿತು. ಅಷ್ಟರಲ್ಲೇ ಹಿರಿಯರ ಗುಂಪೊಂದು ಬಂದು, 'ಈ ವರ್ಷ ಅಕ್ಷರಗಳೂ ತುಂಬಾ ಸ್ಪಷ್ಟವಾಗಿ ಮೂಡಿವೆ' ಎಂದು ಮಾತನಾಡಿಕೊಳ್ಳುತ್ತಿದ್ದರು.

ಗಿನ್ನಿಸ್ ದಾಖಲೆ

ಈ ಕಲೆಯು ಹುಟ್ಟಿದ್ದು ಆಮೊರಿ ಪ್ರಿಫೆಕ್ಚರ್‌ನ ಇನಕಾದತೆ ಗ್ರಾಮದಲ್ಲಿ. 1993ರಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಆರಂಭವಾದ ಈ ಪ್ರಯತ್ನ, ಮೊದಲು ಕೇವಲ ಮೂರು ಬಣ್ಣಗಳಿಂದ ಅಕ್ಷರಗಳನ್ನು ಬರೆಯುವ ಮಟ್ಟದಲ್ಲಿತ್ತು. ಕ್ರಮೇಣ ಹನ್ನೆರಡು ವಿಧದ ಭತ್ತದ ತಳಿಗಳನ್ನು ಬಳಸಿ ಗದ್ದೆಯಲ್ಲಿ ಚಿತ್ರಗಳನ್ನು ಮೂಡಿಸುವುದರ ಮೂಲಕ ರೈಸ್ ಆರ್ಟ್ ಹುಟ್ಟಿತು. 2015ರಲ್ಲಿ ಗ್ಯೋದಾ ವಿಶ್ವದ ಗಮನ ಸೆಳೆದದ್ದು 27,000 ಚದರ ಮೀಟರ್‌ಗಿಂತ ದೊಡ್ಡ ರೈಸ್ ಫೀಲ್ಡ್ ಆರ್ಟ್ ನಿರ್ಮಿಸಿ ಗಿನ್ನಿಸ್ ದಾಖಲೆ ಸೇರಿದಾಗ.

ನನ್ನ ಜಪಾನಿ ಸ್ನೇಹಿತೆಯ ಆಹ್ವಾನದಿಂದ ಪ್ರಾರಂಭವಾದ ಈ ಪಯಣ, ಇಂದಿಗೆ ನನ್ನ ಪ್ರತೀ ಬೇಸಿಗೆಯ ನಿರೀಕ್ಷೆಯ ಭಾಗವಾಗಿದೆ. ಗ್ಯೋದಾದ ರೈಸ್ ಫೀಲ್ಡ್ ಆರ್ಟ್ ಸ್ಥಳೀಯ ಸಮುದಾಯಕ್ಕೆ ಹೊಸ ಜೀವ ತುಂಬಿದೆ. ಪ್ರವಾಸಿಗರ ಆಗಮನದಿಂದ ಅಂಗಡಿಗಳು, ಹೋಟೆಲ್‌ಗಳು, ರೈತರಿಗೆ ಆರ್ಥಿಕ ಲಾಭವಾಗುವುದರ ಜೊತೆಗೆ, ಯುವಜನರಲ್ಲಿ ಕೃಷಿ ಬಗ್ಗೆ ಆಸಕ್ತಿ ಮೂಡಿಸುತ್ತಿದೆ. ❖



ರೈಸ್ ಫೀಲ್ಡ್ ಆರ್ಟ್ ನೋಡಲು ಈ ಗೋಪುರವೇರಬೇಕು...

ಯಾವ ಸಂದರ್ಭದಲ್ಲಿ ಭೇಟಿ ಸೂಕ್ತ

ಜೂನ್ - ಅಕ್ಟೋಬರ್‌ವರೆಗೆ. ವಿಶೇಷವಾಗಿ ಜುಲೈ–ಆಗಸ್ಟ್ ತಿಂಗಳು ಅತ್ಯುತ್ತಮ.

ಸ್ಥಳ: ಕೊದೈ ಹಸು ನೋ ಸತೋ (ಪ್ರಾಚೀನ ಕಮಲದ ಗ್ರಾಮ) ಗ್ಯೋದಾ ನಗರ, ಸೈತಾಮಾ

ಮಾರ್ಗ: ಟೋಕಿಯೊದಿಂದ ತಕಾಸಕಿ ರೈಲಿನಲ್ಲಿ ಗ್ಯೋದಾ ನಿಲ್ದಾಣಕ್ಕೆ ಒಂದು ಗಂಟೆ ಪ್ರಯಾಣ. ನಂತರ ಬಸ್ ಅಥವಾ ಟ್ಯಾಕ್ಸಿ ಹಿಡಿದು ಸುಲಭವಾಗಿ ಈ ಸ್ಥಳಕ್ಕೆ ತಲುಪಬಹುದು.

ವೀಕ್ಷಣಾ ಸ್ಥಳ: ಪಾರ್ಕ್‌ನ ವೀಕ್ಷಣಾ ಗೋಪುರದಿಂದ ಸಂಪೂರ್ಣ ಭತ್ತದ ಕಲೆ ನೋಡಬಹುದು.

ರೈಸ್ ಫೀಲ್ಡ್ ಆರ್ಟ್ ನೋಡುತ್ತಿರುವ ಪ್ರವಾಸಿಗರು

ADVERTORIAL

ಗ್ರೀಸ್ ಮತ್ತು ಸೈಪ್ರಸ್

ಪುರಾಣ, ಸಂಸ್ಕೃತಿ ಹಾಗೂ ನಿಸರ್ಗ ಸೊಬಗಿನ ಕಾಲಾತೀತ ಸಂಗಮ

ಸುನೀಲ ಪಾಟೀಲ್
Founder, CPO & CNO
Veena World
sunila@veenaworld.com

ದ್ವೀಪ ಪ್ರದೇಶಕ್ಕೆ ಏಪ್ರಿಲ್‌ನಲ್ಲಾ?– ಹೀಗೆ ಕೇಳುತ್ತಾ ನಮ್ಮ ಗ್ರೀಕ್ ಸಹಭಾಗಿ ನಿಕೊಲೆಟಾ ನಸುನಕ್ಕರು. ಕಣ್ಣುಗಳನ್ನು ಕುಗ್ಗಿಸಿಕೊಂಡು, "ಆ ಸಮಯದಲ್ಲಿ ಅಲ್ಲಿ ಮೇಕೆಗಳನ್ನು ಬಿಟ್ಟರೆ ಇನ್ನೇನೂ ಇರುವುದಿಲ್ಲ" ಎಂದೂ ಸೇರಿಸಿದರು. "ಆಗ ಅಲ್ಲಿ ಎಲ್ಲವೂ ಬಂದ್ ಆಗಿರುತ್ತದೆ. ಗ್ರೀಕ್ ದ್ವೀಪಗಳ ಭೇಟಿಗೆ, ಅದರಲ್ಲೂ ಪುಟ್ಟ ದ್ವೀಪಗಳ ಭೇಟಿಗೆ ಬೇಸಿಗೆ ಅವಧಿಯು ಅತ್ಯಂತ ಪ್ರಶಸ್ತ ಸಮಯ" ಎಂದರು.

ಅವರು ಹೀಗೆ ಹೇಳಿದ್ದು ನನ್ನ ತಲೆಯಲ್ಲಿ ಹೊಸ ಆಲೋಚನೆಯನ್ನು ಪ್ರಚೋದಿಸಿತು.— ಒಂದು ಬಾರಿ ಭೇಟಿ ನೀಡಿದ ಮಾತ್ರಕ್ಕೆ ಅದೇ ಕೊನೆಯಾಗಬೇಕೆ? ಅಲ್ಲಿಗೆ ಎರಡು ಅಥವಾ ಮೂರು ಸಲ ಏಕೆ ಪ್ರವಾಸ ಮಾಡಬಾರದು? ಹೌದು, ಬೇಸಿಗೆಯಲ್ಲಿ ಅಲ್ಲಿನ ದ್ವೀಪಗಳಿಗೆ ಭೇಟಿ ನೀಡಿದರೆ ಹೊಂಬಣ್ಣದ ಬೆಳಕಿನಲ್ಲಿ ಮೀಯಬಹುದು; ಚಳಿಗಾಲದಲ್ಲಿ ತೆರಳಿದರೆ ಉತ್ತರದ ಪ್ರಧಾನ ಭೂಭಾಗವನ್ನು ಅನ್ವೇಷಿಸಬಹುದು; ಇನ್ನು, ಮೂರನೇ ಸಲದ ಭೇಟಿಯಲ್ಲಿ ಪ್ರಾಚೀನ ಅವಶೇಷಗಳ ಮೂಲಕ ಪೌರಾಣಿಕ ಕತೆಗಳು ಹಾಗೂ ಇತಿಹಾಸವನ್ನು ಪಿಸುಗುಟ್ಟುವ ನೆರೆಯ ದೇಶಗಳಾದ ಈಜಿಪ್ಟ್ ಅಥವಾ ಸೈಪ್ರಸ್‌ಗೆ ಭೇಟಿ ನೀಡಬಹುದು. ಅಷ್ಟಕ್ಕೂ 5,000 ವರ್ಷಗಳಿಗೂ ಮೀರಿದ ನಾಗರಿಕತೆಯನ್ನು ಕೇವಲ ಒಂದೆರಡು ವಾರದಲ್ಲಿ ಗ್ರಹಿಸಲಾದೀತೆ?

ಬರೀ ಪ್ರೇಕ್ಷಣೀಯ ಸ್ಥಳವಲ್ಲ:

ಗ್ರೀಸ್ ಬರೀ ಭೌಗೋಳಿಕ ಪ್ರದೇಶವಷ್ಟೇ ಅಲ್ಲ; ಅದನ್ನೂ ಮೀರಿದ ಭಾವನೆ ಅದಾಗಿದೆ. ಒಮ್ಮೆ ಆಲೋಚಿಸಿ ನೋಡಿ: ಬಿಳಿ ಬಣ್ಣ ಲೇಪಿಸಿದ ಮನೆಗಳು, ಮನೆಯ ಮೇಲ್ಭಾಗದಲ್ಲಿ ನೀಲಿ ಗುಮ್ಮಟಗಳು, ಮೆಡಿಟರೇನಿಯನ್ ತಂಗಾಳಿ ಹೊತ್ತು ತರುವ ಲವಣ ಸಿಂಚನ, ಆಲಿವ್ ಎಣ್ಣೆಯಲ್ಲಿ ಅದ್ದಿದ ತಾಜಾ ಬ್ರೆಡ್, ತವರ್ನಾದಿಂದ ಹೊರಹೊಮ್ಮುವ ನಗೆಯ ಸದ್ದು ಹಾಗೂ ದಿಗಂತಕ್ಕೆ ಬಂಗಾರದ ಬಣ್ಣ ಬಳಿಯುವ ಮಿರುಗುವ ಸೂರ್ಯಾಸ್ತಗಳು.

ಗ್ರೀಸ್‌ನ ಮನೆಯ ತುಣುಕೊಂದನ್ನು ಕೂಡ ನಾನು ಕೊಂಡು ತಂದಿದ್ದೇನೆ– ಮರದ ಮೇಲೆ ಬಿಡಿಸಿದ ಸ್ಯಾಂಟೋರಿನಿ ವರ್ಣಚಿತ್ರವು ನನ್ನ ಬಾಲ್ಕನಿಯಲ್ಲಿ ಬೋಗನ್‌ವಿಲ್ಲಾ ಪಕ್ಕದಲ್ಲೇ ತೂಗಾಡುತ್ತಿದೆ. ಬೋಗನ್‌ವಿಲ್ಲಾದಲ್ಲಿ ಹೂವುಗಳು ಅರಳಿದಾಗ ಸುರುಳಿ ರಸ್ತೆಗಳು ಹಾಗೂ ಕಡುನೀಲಿ ಸಮುದ್ರ ಜಲರಾಶಿಗೆ ಹೆಸರಾದ ಗ್ರೀಸ್‌ಗೆ ಮರುಪ್ರಯಾಣಿಸಿದ ಭಾವ ನನ್ನಲ್ಲಿ ಮೂಡುತ್ತದೆ.

ದ್ವೀಪಗಳ ಆಯ್ಕೆ

ಗ್ರೀಸ್‌ನಲ್ಲಿ 6,000ಕ್ಕೂ ಹೆಚ್ಚು ದ್ವೀಪಗಳಿದ್ದು, ಈ ಪೈಕಿ 227ರಲ್ಲಿ ಮಾತ್ರ ಜನವಸತಿ ನೆಲೆಯಾಗಿದೆ. ಇವುಗಳಲ್ಲಿ ಕೆಲವನ್ನಷ್ಟೇ ಆಯ್ಕೆ ಮಾಡುವುದು ನಿಜಕ್ಕೂ ಪ್ರಯಾಸದಾಯಕವೇ. "ಹೆಚ್ಚಿನ ಪ್ರವಾಸಿಗರು ಭೇಟಿ ನೀಡುವ ಸ್ಯಾಂಟೋರಿನಿಗೆ ನಾನು ಹೋಗಬಯಸುವುದಿಲ್ಲ" ಎನ್ನುವವರೂ ಸಾಕಷ್ಟಿದ್ದಾರೆ. ಅದೇನೇ ಇರಲಿ, ಕ್ರಿ.ಪೂ.1600ರ ಸುಮಾರಿನಲ್ಲಿ ದೈತ್ಯ ಜ್ವಾಲಾಮುಖಿಯ ಸ್ಫೋಟದಿಂದ ರೂಪುಗೊಂಡ ಸ್ಯಾಂಟೋರಿನಿಯು ನೋಡುಗರನ್ನು ನಿಬ್ಬೆರಗಾಗಿಸುತ್ತದೆ. ಕೆಂಪು, ಕಪ್ಪು ಹಾಗೂ ಬಿಳಿ ಮರಳಿನ ಸಮುದ್ರ ದಂಡೆಗಳು, ಹುಬ್ಬೇರುವಂತೆ ಮಾಡುವ ಕಡಿದಾದ ಶೃಂಗಗಳು ಮತ್ತು ಸೂರ್ಯಾಸ್ತಮಾನದ ವೇಳೆಯ ನೋಟಗಳು ನೋಡುಗರ ಮೇಲೆ ಮೋಡಿ ಮಾಡಿಬಿಡುತ್ತವೆ.

ನಾಲ್ಕೂ ದಿಕ್ಕುಗಳಲ್ಲಿ ಕಡಲಿನಿಂದ ಆವೃತವಾದ ಈ ದ್ವೀಪದಲ್ಲಿ ನೈಸರ್ಗಿಕ ಜಲಮೂಲವೆಂಬುದೇ ಇಲ್ಲ. ಇಲ್ಲಿ ಬಳಸುವ ಪ್ರತಿಯೊಂದು ನೀರಹನಿಯೂ ಹಡಗಿನ ಮೂಲಕ ಆಮದಾಗಿ ಬಂದದ್ದೋ ಅಥವಾ ತಂತ್ರಜ್ಞಾನ ಬಳಸಿ ಲವಣ ಮುಕ್ತಗೊಳಿಸಿದ (ಡೀಸ್ಯಾಲಿನೇಟ್) ಸಮುದ್ರದ ನೀರೋ ಆಗಿರುತ್ತದೆ. ಹೀಗಾಗಿ, ಇಲ್ಲಿ ಸ್ನಾನಕ್ಕೆ ಬಳಸುವ ನೀರು ಕೂಡ ಒಂದಷ್ಟು ಉಪ್ಪಿನಂಶದಿಂದ ಕೂಡಿರುತ್ತದೆ. ಆದರೆ ಇದ್ಯಾವುದೂ ಡಿ ಸ್ಯಾಂಟೋರಿನಿಯ ಆಕರ್ಷಣೆಯನ್ನು ಕಡಿಮೆಗೊಳಿಸಿಲ್ಲ. ಇಯಾದಲ್ಲಿನ ನೀಲಿ ಗುಮ್ಮಟಗಳು, ಫಿರಾದ ಸುರುಳಿ ರಸ್ತೆಗಳು, ಅಜಿಯನ್‌ದಾದ್ಯಂತ ಜನರ ಬದುಕಿಗೆ ಸಂಪರ್ಕಸೇತುವಾಗಿರುವ ದೋಣಿ ಸವಾರಿಗಳು ಗಮನಸೆಳೆಯುತ್ತವೆ.

ದೋಣಿಗಳೇ ಆಸರೆ

ಗ್ರೀಸ್‌ಗೆ ಭೇಟಿ ನೀಡುವ ಮುನ್ನ ನನಗೆ ದೋಣಿಗಳೆಂದರೆ ಥಟ್ಟನೆ ಮನಸ್ಸಿಗೆ ಮೂಡುತ್ತಿದ್ದುದು 'ಮಾಮ್ಮಾ ಮಿಯಾ!' ಮತ್ತಿತರ ಕೆಲ ಸಿನಿಮಾಗಳಲ್ಲಿ ನೋಡಿದ್ದ ದೃಶ್ಯಗಳು– ಹಾಡುತ್ತಾ ಸಾಗುವ ಪ್ರಯಾಣಿಕರು, ಸಮುದ್ರದ ಮೇಲಿನಿಂದ ಬೀಸುವ ತಂಗಾಳಿ, ಪ್ರಣಯ ಸನ್ನಿವೇಶಗಳು ಹೀಗೆ. ವಾಸ್ತವ ಕೂಡ ಇದಕ್ಕಿಂತ ತುಂಬಾ ಭಿನ್ನವೇನೂ ಇರಲಿಲ್ಲ. ಗ್ರೀಕ್ ದೋಣಿಗಳು ದೊಡ್ಡದಾದವೂ ಗಟ್ಟಿಮುಟ್ಟಾದವೂ ಹಾಗೂ ಕ್ಷಮತೆಯಿಂದ ಕೂಡಿದವೂ ಆಗಿರುತ್ತವೆ. ಈ ದೋಣಿಗಳಲ್ಲಿ ಕಾರುಗಳನ್ನು ಕೂಡ ಕೊಂಡೊಯ್ಯಬಹುದು. ನಮ್ಮ ಸಾಮಾನು ಸರಂಜಾಮುಗಳನ್ನು ರ್‍ಯಾಕ್‌ನಲ್ಲಿರಿಸಿ, ಕಿಟಕಿ ಬದಿಯ ಆಸನಗಳನ್ನು ಹಿಡಿದು ಕಣ್ಣೋಟ ನಿಲುಕುವವರೆಗೂ ಅಜಿಯನ್ ಸಾಗರ ಜಲರಾಶಿಯನ್ನು ದಿಟ್ಟಿಸಿದೆವು. ಅಲ್ಲಲ್ಲೇ ಮುತ್ತು ಪೋಣಿಸಿದಂತಿರುವ ದ್ವೀಪಗಳನ್ನೂ ಕಂಡೆವು.

ಇಲ್ಲಿ ದೋಣಿಗಳಲ್ಲಿ ಪ್ರಯಾಣಿಸುವುದೊಂದು ವಿಶಿಷ್ಟ ಅನುಭವ. ಇವುಗಳ ಮೂಲಕ ಸ್ಥಳೀಯರು ದಿನಸಿ ಪದಾರ್ಥಗಳ ಸಾಗಣೆ ಮಾಡುವುದನ್ನು ನೋಡಿದಾಗ ಗ್ರೀಕರ ದಿನನಿತ್ಯದ ಬದುಕಿನ ಬಗ್ಗೆ ಇಣುಕುನೋಟ ದಕ್ಕುತ್ತದೆ. ಸರಳವಾದ, ಕ್ಷಮತೆಯಿಂದ ಕೂಡಿದ ಹಾಗೂ ಸಮುದ್ರದೊಂದಿಗೆ ಬೆಸೆದುಕೊಂಡ ಬದುಕು ಅವರದ್ದಾಗಿದೆ. ಈ ಮಧ್ಯೆ, ಪ್ರತಿಬಾರಿ ಹೊಸ ದ್ವೀಪವೊಂದಕ್ಕೆ ದೋಣಿಯಲ್ಲಿ ಪಯಣಿಸುವಾಗಲೂ, ಮುಂದಿನ ದ್ವೀಪದಲ್ಲಿ ಯಾವ ಹೊಸ ಕಥೆ ಹುದುಗಿರುತ್ತದೋ ಎಂಬ ಕುತೂಹಲಕರ ನಿರೀಕ್ಷೆಗೆ ಇಂಬು ನೀಡುವ ತಾಣಗಳು ಇವಾಗಿವೆ.

ಸೊಬಗಿನ ಹಳ್ಳಿಗಳು

ಒಂದೆಡೆ ಸೂರ್ಯಾಸ್ತಮಾನದ ವೇಳೆಯ ದೃಶ್ಯಗಳು ಪರವಶಗೊಳಿಸಿದರೆ, ಮತ್ತೊಂದೆಡೆ, ಹಳ್ಳಿಗಳು ನೋಡುಗರ ಹೃದಯವನ್ನು ಕೊಳ್ಳೆ ಹೊಡೆಯುತ್ತವೆ. ಜೊತೆಗೆ, ಸ್ಯಾಂಟೋರಿನಿಯಲ್ಲಿನ ಕಲಾಕೃತಿ ಮಳಿಗೆಗಳು, ಕಲ್ಲುಹಾಸಿನ ಬೀದಿಗಳು ಹಾಗೂ ಸಾಲುಸಾಲು ಆಭರಣ ಮಳಿಗೆಗಳು ಪ್ರವಾಸಿಗರನ್ನು ಆಪ್ತವಾಗಿ ಬರಮಾಡಿಕೊಳ್ಳುತ್ತವೆ. ರ್‍ಹೋಡ್ಸ್‌ನಿಂದ ಅನತಿ ದೂರ ದೋಣಿಯಲ್ಲಿ ಸಾಗಿದರೆ ತಲುಪಬಹುದಾದ ಸಿಮಿಯಂತೂ ಸರಿಸಾಟಿಯಿರದ ಚೆಲುವಿನ ತಾಣವಾಗಿ ಮಂತ್ರಮುಗ್ಧಗೊಳಿಸುತ್ತದೆ. 19ನೇ ಶತಮಾನದಲ್ಲಿ ಜಾರಿಗೊಂಡ ವನೀಷನ್ ಕಾನೂನಿನ ವಾಸ್ತುಶಿಲ್ಪದ ಪ್ರಕಾರ ನಿರ್ಮಿತವಾಗುವ ಅಲ್ಲಿನನಿವಾಸಗಳು ಚಿತ್ತಾಕರ್ಷಕ. ಒಂದೊಮ್ಮೆ ಸ್ಪಾಂಜ್ ಡೈವಿಂಗ್ ತಾಣವಾಗಿದ್ದ ಸಿಮಿಯು ಪವಾಡಸದೃಶ ಆಶೀರ್ವಾದಗಳನ್ನು ಕರುಣಿಸುವ ಪವಿತ್ರ ತಾಣವೆಂದು ಹೆಸರಾದ ಪನೋರ್ಮಿತಿಸ್ ಬೌದ್ಧವಿಹಾರದ ನೆಲೆಯೂ ಆಗಿದೆ.

ಇನ್ನು, ರ್‍ಹೋಡ್ಸ್‌ಗೆ ಕಾಲಿಡುತ್ತಿದ್ದಂತೆಯೇ 'ಕಾಲಕೋಶ'ಕ್ಕೆ ಹೊಕ್ಕಂತಾಗುತದ್ತ್'. ಅಲ್ಲಿರುವ, ಸೇಂಟ್ ಜಾನ್‌ನ ವೀರಯೋಧರಿಂದ ನಿರ್ಮಾಣಗೊಂಡ, ಯೂರೋಪಿನಲ್ಲೇ ಅತ್ಯಂತ ದೊಡ್ಡದೆನ್ನಲಾದ ಮಧ್ಯಕಾಲೀನ ಯುಗದ ಪಟ್ಟಣವು ಬೃಹತ್ ಗೋಡೆಗಳಿಂದ ಸುತ್ತುವರಿಯಲ್ಪಟ್ಟಿದೆ. ಕಲ್ಲುಹಾಸಿನ ಮೇಲೆ ಪ್ರಾಚೀನ ಗೋಪುರಗಳೆಡೆಗೆ ಕಣ್ಣುನೆಟ್ಟು ದ್ವಾರಮಾರ್ಗಗಳ ಮೂಲಕ ನಡೆದು ಸಾಗುವಾಗ ಇತಿಹಾಸದ ಗ್ರಂಥವನ್ನು ಓದುತ್ತಿರುವಂತೆ ಭಾಸವಾಗುತದ್ತ್'. ಒಂದೊಮ್ಮೆ ಪ್ರಪಂಚದ ಏಳು ಅದ್ಭುತಗಳಲ್ಲಿ ಒಂದಾಗಿದ್ದ ರ್‍ಹೋಡ್ಸ್‌ನಲ್ಲಿನ ಬೃಹತ್ ಕಂಚಿನ ಪ್ರತಿಮೆಯಿದ್ದ ಸ್ಥಳವು ಈಗಲೂ ಸ್ಫೂರ್ತಿ ತುಳುಕಿಸುತ್ತಾ ನೋಡುಗರಲ್ಲಿ ಬೆರಗು ಮೂಡಿಸುತದ್ತ್'.

ಗ್ರೀಸ್– ನಾಗರಿಕತೆಯ ತೊಟ್ಟಿಲು

ಗ್ರೀಸ್ ದೇಶವನ್ನು ಪಾಶ್ಚಿಮಾತ್ಯ ನಾಗರಿಕತೆಯ ತೊಟ್ಟಿಲು ಎಂದೆನ್ನಲು ನಿರ್ದಿಷ್ಟ ಕಾರಣಗಳಿವೆ. ಕ್ರಿ.ಪೂ.5ನೇ ಶತಮಾನದ ಸುಮಾರಿನಲ್ಲಿ ಅಥೆನ್ಸ್ ನಗರಿಯು ಪ್ರಜಾಪ್ರಭುತ್ವಕ್ಕೆ ಜನ್ಮ ನೀಡಿದ ಸ್ಥಳವಾಗಿದೆ. ಅಂದರೆ, ನಾಗರಿಕರೆಲ್ಲಾ ಸೇರಿ ಸಾರ್ವಜನಿಕ ನಿರ್ಧಾರಗಳನ್ನು ರೂಪಿಸುವ ಪದ್ಧತಿ ಇಲ್ಲಿ ಹುಟ್ಟು ಪಡೆಯಿತು. ಆ ಪದ್ಧತಿಯೇ ಪ್ರಸ್ತುತ ನಾವು ಅನುಸರಿಸುತ್ತಿರುವ ಆಡಳಿತ ವಿಧಾನಕ್ಕೆ ಪ್ರೇರಣೆ ಎಂಬುದು ಉಲ್ಲೇಖಾರ್ಹ.

ನೈತಿಕ ಮೌಲ್ಯಗಳು, ತರ್ಕ ಹಾಗೂ ಅಸ್ತಿತ್ವಕ್ಕೆ ಸಂಬಂಧಿಸಿದ ಹಲವು ಗಹನ ಪ್ರಶ್ನೆಗಳನ್ನು ಎತ್ತಿದ ಸಾಕ್ರಟೀಸ್, ಪ್ಲೇಟೊ, ಅರಿಸ್ಟಾಟಲ್ ಅವರಂತಹ ತತ್ವಜ್ಞಾನಿಗಳಿಗೆ ಜನ್ಮ ನೀಡಿದ ನಾಡು ಇದಾಗಿದೆ. ಅದೇ ರೀತಿಯಾಗಿ, ಇದು ಪ್ರಸಿದ್ಧ ದುಃಖಾಂತ್ಯ ಹಾಗೂ ಸುಖಾಂತ್ಯದ ನಾಟಕಗಳನ್ನು ಜಗತ್ತಿಗೆ ಕೊಡುಗೆ ನೀಡಿದ ಸೋಫೋಕ್ಲೆಸ್ ಮತ್ತು ಅರಿಸ್ಟೋಫೇನೆಸ್‌ನಂತಹ ನಾಟಕಕಾರರನ್ನು ಪೊರೆದ ನೆಲವೂ ಹೌದು. ಮನುಷ್ಯನ ಶಕ್ತಿ ಹಾಗೂ ಒಗ್ಗಟ್ಟಿನ ದ್ಯೋತಕವಾಗಿ ಗಮನಸೆಳೆದು ಇಂದಿಗೂ ಪ್ರಪಂಚದ ಉತ್ಕೃಷ್ಟ ಪರಂಪರೆಯಾಗಿ ಮುಂದುವರಿದಿರುವ ಒಲಿಂಪಿಕ್ ಕ್ರೀಡಾಕೂಟ ಕ್ರಿ.ಪೂ.776ರಲ್ಲಿ ಮೊತ್ತಮೊದಲಿಗೆ ನಡೆದದ್ದು ಕೂಡ ಇಲ್ಲಿಯೇ.

ತ್ರಿಕೋನಮಿತಿ ಶಾಸ್ತ್ರಕ್ಕೆ ಬುನಾದಿ ಹಾಕಿದ ಯೂಕ್ಲಿಡ್ ಮತ್ತು ಪೈಥಾಗೊರಸ್ ಎಂಬ ಮೇಧಾವಿ ಗಣಿತಜ್ಞರು ಜನ್ಮತಳೆದ ಭೂಮಿ ಇದಾಗಿದೆ; ಭೌತಶಾಸ್ತ್ರದಲ್ಲಿ ಕ್ರಾಂತಿಕಾರಕ ಪರಿಕಲ್ಪನೆಗಳನ್ನು ಪ್ರತಿಪಾದಿಸಿದ ಆರ್ಕಿಮಿಡಿಸ್‌ನ ತಾಯ್ನಾಡೂ ಹೌದು. ಪ್ರಮಾಣಬದ್ಧ ಅನುಪಾತಗಳ ಮೂಲಕ ಸುದೀರ್ಘ ಬಾಳಿಕೆಯ ವಾಸ್ತುಶಿಲ್ಪಕ್ಕೆ ಹೊಸ ಪ್ರಮಾಣೀಕರಣಗಳನ್ನು ಅನಾವರಣಗೊಳಿಸಿದ ಪಾರ್ಥೆನಾನ್ ದೇಗುಲವಿರುವ ನಾಡು ಇದಾಗಿದೆ. ಇಂದಿಗೂ ಜಗತ್ತಿನಾದ್ಯಂತ ಹೊಸ ಕತೆಗಳಿಗೆ ಪ್ರೇರಣಾದಾಯಿಯಾಗಿರುವ ಹೋಮರನ ಮಹಾಕಾವ್ಯಗಳಿಂದ ಹಿಡಿದು ಹಲವಾರು ದೇವದೇವತೆಗಳು, ಹೀರೋಗಳ ಕತೆಗಳು ಹೊರಹೊಮ್ಮಿದ ಭೂಭಾಗ ಇದಾಗಿದೆ.

ಅಥೆನ್ಸ್– ಗ್ರೀಸ್‌ನ ನಾಡಿಮಿಡಿತ

ಅಥೆನ್ಸ್ ನಗರವು ಸುದೀರ್ಘ ಚರಿತ್ರೆಯು ಜೀವಂತಿಕೆಯಿಂದ ಕೂಡಿರುವ ಸ್ಥಳವಾಗಿದೆ. ಇಲ್ಲಿ ಅಕ್ರಾಪಾಲಿಸ್‌ನ ತಪ್ಪಲಲ್ಲಿರುವ ಹಳೆಯ ಪ್ಲಾಕಾ ಜನವಸತಿ ಪ್ರದೇಶದಲ್ಲಿ ಕಾಲ್ನಡಿಗೆಯಲ್ಲಿ ಸಾಗಿದರೆ ಬೇರೊಂದು ಕಾಲಘಟ್ಟಕ್ಕೆ ಜಾರಿದಂತೆ ಭಾಸವಾಗುತ್ತದೆ. ಕಿರಿದಾದ ಬೀದಿಗಳು, ಹೂಗಳಿಂದ ಕಣ್ಸೆಳೆಯುವ ಬಾಲ್ಕನಿಗಳು, ಪಾದರಕ್ಷೆ, ಪಿಂಗಾಣಿ ಪರಿಕರ ಹಾಗೂ ಚಿನ್ನದ ಆಭರಣಗಳನ್ನು ಮಾರಾಟ ಮಾಡುವ ಅಂಗಡಿ ಮುಂಗಟ್ಟುಗಳು ಶತಮಾನಗಳ ಪರಂಪರೆಯನ್ನು ಉಲಿಯುತ್ತವೆ.

ಇನ್ನು ಗಿರಿಯ ಮೇಲೆ ಆಕ್ರಾಪಾಲಿಸ್ ನಿರ್ಮಿತಿ ವಿರಾಜಮಾನವಾಗಿದೆ. ಜ್ಞಾನ ದೇವತೆಯಾದ ಅಥೇನಾಗೆ ಕ್ರಿ.ಪೂ.447ರಿಂದ 438ರ ನಡುವಿನ ಅವಧಿಯಲ್ಲಿ ನಿರ್ಮಿಸಿ ಸಮರ್ಪಿಸಲಾದ ಪಾರ್ಥೆನಾನ್ ದೇವಾಲಯ ಇಲ್ಲಿದೆ. ಸಮುದ್ರ ದೇವತೆಯಾದ ಪೋಸೀಡಾನ್ ಉಪ್ಪುನೀರಿನ ಚಿಲುಮೆಯನ್ನು ಕರುಣಿಸಿದರೆ ಜ್ಞಾನದೇವತೆ ಅಥೇನಾ ಆಲಿವ್ ಗಿಡವನ್ನು ನೆಟ್ಟಳು ಎಂಬುದು ಇಲ್ಲಿನ ಪ್ರತೀತಿ. ಆಕೆ ನೀಡಿದ ಆಹಾರ, ಎಣ್ಣೆ, ಕಟ್ಟಿಗೆ ಹಾಗೂ ಶಾಂತಿಯನ್ನು ಆಯ್ಕೆ ಮಾಡಿಕೊಂಡ ಅಲ್ಲಿನ ಜನರು ಈ ನಗರಕ್ಕೆ ಕೃತಜ್ಞತಾಪೂರ್ವಕವಾಗಿ ಅಥೆನ್ಸ್ ಎಂದು ನಾಮಕರಣ ಮಾಡಿದರು. ಇಂದಿಗೂ ಎರೆಕ್‌ಥಿಯಾನ್ ದೇಗುಲದ ಸನಿಹದಲ್ಲಿರುವ ಆಲಿವ್ ಮರವು ಈ ಪ್ರತೀತಿಯನ್ನು ಧ್ವನಿಸುವಂತಿದೆ.

ಅಫ್ರೊಡೈಟ್ ನಾಡು ಸೈಪ್ರಸ್:

ಗ್ರೀಸ್‌ನಲ್ಲಿ ಅಲ್ಲಿನ ಅಧಿದೇವತೆ ಅಥೇನಾ ಬಗ್ಗೆ ಅರಿತಂತೆಯೇ ಸೈಪ್ರಸ್‌ನಲ್ಲಿ ಪ್ರೀತಿ ಹಾಗೂ ಸೌಂದರ್ಯ ದೇವತೆಯಾದ ಅಫ್ರೊಡೈಟ್ ಬಗ್ಗೆ ತಿಳಿದುಕೊಂಡೆವು. ಅಂದಂತೆ, ಈ ದೇವತೆಯು ಪ್ಯಾಫೋಸ್‌ನ ಪೆಟ್ರಾ ಟು ರೋಮಿಯೋದಲ್ಲಿ ಸಮುದ್ರದ ನೊರೆಯಲ್ಲಿ ಉದ್ಭವವಾದವಳು ಎಂಬುದು ಇಲ್ಲಿನ ಕಥೆಗಳಲ್ಲಿ ಜನಜನಿತವಾಗಿದೆ. ಇಲ್ಲಿ ಸಮುದ್ರ ದಂಡೆಯಲ್ಲಿ ಅಪ್ಪಳಿಸುವ ಅಲೆಗಳನ್ನು ನೋಡುತ್ತಾ ನಿಂತಾಗ ಪೌರಾಣಿಕ ಕಥಾಪ್ರಪಂಚವನ್ನು ಪ್ರವೇಶಿಸಿದಂತಾಗುತ್ತದೆ.

ಸೈಪ್ರಸ್‌ನಲ್ಲಿ ಇನ್ನೂ ಹಲವು ಅಚ್ಚರಿಗಳಿವೆ: ಕ್ಯುರಿಯನ್‌ನಲ್ಲಿನ ಗ್ರೀಕ್–ರೋಮನ್ ಶೈಲಿಯ ಬಯಲು ಸಭಾಂಗಣ, ರಾಜರ ಸಮಾಧಿಗಳ ಮೇಲಿನ ಮೊಸಾಯಿಕ್‌ಗಳು, ಮೋಡಾಚ್ಛಾದಿತ ಟ್ರೂಡೋಸ್ ಪರ್ವತದಲ್ಲಿರುವ ಕಿಕ್ಕೊಸ್ ಬೌದ್ಧವಿಹಾರ, ದ್ರಾಕ್ಷಾರಸ ಗ್ರಾಮವೆಂದೇ ಹೆಸರಾದ ಕಲ್ಲುಹಾಸಿನ ಒಮೊದಾಸ್, ದ್ರಾಕ್ಷಿತೋಟಗಳು ಹಾಗೂ ಸಿಪ್ರಿಯಾಟ್ ಆತಿಥ್ಯ ಇವೆಲ್ಲವೂ ಹೃದಯಕ್ಕೆ ಅತ್ಯಾಪ್ತವಾಗುತ್ತವೆ.

ಅಚ್ಚಳಿಯದ ಭಾವಗಳು:

ಗ್ರೀಸ್ ಮತ್ತು ಸೈಪ್ರಸ್‌ಗಳು ಕೇವಲ ಭೌಗೋಳಿಕ ಪ್ರದೇಶಗಳಲ್ಲ; ಅವು ನಮ್ಮೊಂದಿಗೆ ಚಿರಕಾಲ ನೆಲೆಯಾಗುವ ಭಾವಗಳು; ನಮ್ಮ ಇಂದ್ರಿಯಗಳು, ಚೈತನ್ಯ ಹಾಗೂ ಅಂತರಂಗವನ್ನು ಉದ್ದೀಪಿಸುವಂಥವು. ಇಲ್ಲಿ ಆಹಾರ, ಕಥಾನಕಗಳು, ಸಂಗೀತ ಹಾಗೂ ಜನ ಸಮುದಾಯ ಇವೆಲ್ಲವೂ ಸಂಯೋಜನೆಗೊಂಡು ಚಿರಂತನ ಹಸಿರಾಗಿ ಉಳಿಯುವಂತಹ ನೆನಪುಗಳ ಅಳಿಸಲಾಗದ ಮುದ್ರೆಯನ್ನು ಒತ್ತುತ್ತವೆ.

ಅಂದಂತೆ, ಇಷ್ಟೆಲ್ಲವನ್ನೂ ಒಂದೇ ಪ್ರವಾಸದಲ್ಲಿ ನೋಡಲಾಗದು ಎಂಬುದನ್ನು ನೀವೂ ಒಪ್ಪುತ್ತೀರಲ್ಲವೇ?

ಹೀಗಾಗಿ, ಒಮ್ಮೆ ಹೋದಾಗ ಅಲ್ಲಿ ಸೂರ್ಯಾಸ್ತಮಾನದ ವರ್ಣವೈಭವವನ್ನು ಕಣ್ತುಂಬಿಕೊಳ್ಳಿ. ಮತ್ತೊಮ್ಮೆ, ಅಲ್ಲಿನ ಹಳ್ಳಿಗಳ ಚೆಲುವಿಗೆ ಸಾಕ್ಷಿಯಾಗಿ. ಮಗದೊಮ್ಮೆ, ಅಲ್ಲಿನ ಕುತೂಹಲಕರ ಕಥನಗಳಿಗೆ ಕಿವಿಯಾಗಿ. ಅಲ್ಲಿನ ದ್ವೀಪಗಳು ನಿಮ್ಮನ್ನು ಆಹ್ವಾನಿಸುತ್ತಿವೆ; ಅಲ್ಲಿನ ದೇವದೇವತೆಯರು ನಿಮ್ಮ ಆಗಮನಕ್ಕೆ ಕಾಯುತ್ತಿದ್ದಾರೆ. ಕೊನೆಕಾಣದ ನೀಲ ಜಲರಾಶಿಯಾಚೆ ದೂರದಲ್ಲೆಲ್ಲೋ ಒಂದು ಬೋಗನ್‌ವಿಲ್ಲಾ ನಿಮಗಾಗಿಯೇ ತಂಗಾಳಿಯಲ್ಲಿ ತೂಗಾಡುತ್ತಿರುತ್ತದೆ.

Email: travel@veenaworld.com | ಪ್ರತಿವಾರವೂ ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುನೀಲಾ ಪಾಟೀಲ್, ವೀಣಾ ಪಾಟೀಲ್ ಮತ್ತು ನೀಲ್ ಪಾಟೀಲ್ ಅವರ ಲೇಖನಗಳನ್ನು ವೀಣಾ ವರ್ಲ್ಡ್ ವೆಬ್ಸೈಟ್ www.veenaworld.com ನಲ್ಲೂ ಓದಬಹುದು.

ಬನ್ನಿ, ನಿಮ್ಮ ಕಲ್ಪನೆಗೂ ಮೀರಿದ ಚೆಲುವಿನ ಯೂರೋಪ್‌ಅನ್ನು ಕಣ್ತುಂಬಿಕೊಳ್ಳಿ...

ಮೆಡಿಟರೇನಿಯನ್ ಜಲರಾಶಿ, ರೋಮನ್ನರ ಆಳ್ವಿಕೆಯ ನೆಲೆವೀಡು, ಹಲವು ನಾಗರಿಕತೆಗಳ ಸಂಗಮ, 22 ದೇಶಗಳು, 3000+ ದ್ವೀಪಗಳು ಹಾಗೂ ಪ್ರಪಂಚದ ಕೆಲ ಅತ್ಯಂತ ಪ್ರಾಚೀನ ನಗರಗಳು. ಯುನೆಸ್ಕೊ ಮಾನ್ಯತೆಗೆ ಪಾತ್ರವಾದ ಆಹಾರಕ್ರಮ, ದೀರ್ಘಾಯುಷ್ಯ ಮತ್ತು ಚೆಲುವಿಗೆ ಹೆಸರಾದ ಎರಡು ಅಪರೂಪದ ಬ್ಲೂ ಜೋನ್‌ಗಳು. ಸ್ಪೇನ್‌ನಿಂದ ಗ್ರೀಸ್‌ವರೆಗೆ, ಟ್ಯುನಿಸಿಯಾದಿಂದ ಮಾಲ್ಟಾವರೆಗೆ ಮೆಡಿಟರೇನಿಯನ್ ಯೂರೋಪ್‌ಅನ್ನು 'ವೀಣಾ ವರ್ಲ್ಡ್'ನೊಂದಿಗೆ ಅನ್ವೇಷಿಸಿ. ಒಂದೇ ದೇಶದ ಅಥವಾ ಹಲವು ದೇಶಗಳ ಎಂದೆಂದಿಗೂ ಮರೆಯಲಾಗದ ಪರ್ಯಟನೆಯಲ್ಲಿ ಭಾಗಿಯಾಗಿ.

ಬೆಸ್ಟ್ ಆಫ್ ಸ್ಪೇನ್ 10 Days - Mar 18 270000 - 280000	ಸ್ಪೇನ್ ಪೋರ್ಚುಗಲ್ 13 Days - Nov 11, Mar 24 315000 - 325000	ಸ್ಪೇನ್ ಪೋರ್ಚುಗಲ್ ಮೊರೊಕ್ಕೊ (16D) Nov 13 - 379000
ಅಥೆನ್ಸ್ ಸ್ಯಾಂಟೋರಿನಿ ರ್‍ಹೋಡ್ಸ್ 8 Days - Oct 19 270000 - 280000	ಗ್ರೀಸ್ ಸೈಪ್ರಸ್ 9 Days - Mar 14 295000 - 305000	ಬೆಸ್ಟ್ ಆಫ್ ಈಜಿಪ್ಟ್ 9 Days - Dec 9 200000 - 210000

T&C apply.

ಟ್ಯುನಿಸಿಯಾ ಮಾಲ್ಟಾ ಸಿಸಿಲಿ
₹335000
Ex-Bengaluru
8 Days - March 20
All-Inclusive

ವೀಣಾ ವರ್ಲ್ಡ್
ಮೆಡಿಟರೇನಿಯನ್ ಯೂರೋಪ್
ಚಲೋ, ಬ್ಯಾಗ್ ಭರೋ, ನಿಕಲ್ ಪಡೋ!

Email: travel@veenaworld.com | veenaworld.com
Toll-Free: 1800 313 5555 | 1800 22 7979
Veena World Bengaluru: Jayanagar 887 997 2217 | Indiranagar 887 997 9500

Book Online 365 days 24x7 Visit veenaworld.com

VEENA WORLD
Travel. Explore. Celebrate Life.

MARUTI SUZUKI

NEXA

CELEBRATIONS JUST GOT BIGGER.

WITH GST BENEFITS + *LIMITED PERIOD FESTIVE OFFERS

	PRICE REDUCTION OF UP TO*	NOW STARTING AT*	ADDITIONAL FESTIVE OFFERS OF UP TO**
FRONX	₹ 1 12 600	**₹ 6 84 900**	₹ 1 17 500
GRAND VITARA	₹ 1 07 000	**₹ 10 76 500**	₹ 1 54 100 + 5 Year Extended Warranty
BALENO	₹ 86 100	**₹ 5 98 900**	₹ 1 02 500
IGNIS	₹ 71 300	**₹ 5 35 100**	₹ 67 500
INVICTO	₹ 61 700	**₹ 24 97 400**	₹ 1 40 000
XL6	₹ 52 000	**₹ 11 52 300**	₹ 25 000
JIMNY	₹ 51 900	**₹ 12 31 500**	₹ 1 00 000

Prices applicable from 22nd September onwards.

SCAN TO CONNECT TO A SHOWROOM NEAR YOU

*FESTIVE OFFERS VALID TILL 30TH SEP ONLY

NEXA SAFETY SHIELD

UP TO 100% WAIVER ON CAR LOAN PROCESSING FEE (ONLY TILL 30TH SEP)##

E-BOOK TODAY @ WWW.NEXAEXPERIENCE.COM

Contact us at
1800-200-6392
1800-102-6392

For detailed T&C kindly visit your nearest dealership. Features and accessories shown may not be a part of the standard fitment. Black glass shade on the vehicle is due to the lighting effect. Images used are for illustration purposes only. All offers are brought to you by NEXA dealers only. Offers and features may vary subject to the model and variant purchased. **The mentioned offers include "Consumer Offer + Booking offer + Exchange Bonus + Rural offer", and may vary from city to city. Please contact nearby dealership for more details. Maruti Suzuki reserves the right to withdraw offers at any point in time without any advance notice. All offers are applicable till 30th September '25 or till stocks last. Maruti Suzuki Smart Finance is now available pan India. Maruti Suzuki Subscribe is available only in selected cities. ##Offers include consumer offer, exchange bonus and institutional or rural offers (wherever applicable) on select models/variants. Finance is at the sole discretion of the financer by selected finance partners.